ಯರಸಿ [ಯು] (ಗು) ತ್ರವದಾನದಲಿ ಭೂ-।
ಪುರರ ದಣಿಸುವುದೆಂದು ವೇದವ್ಯಾಸಮುನಿ ನುಡಿದ ॥೫॥

* * * *

ತರುಣಿ ನಿನ್ನಯ ಸುತರ ಕೈಯ್ಯಲಿ ।
ತರಿಸುವುದು ಮೃತ್ತಿಕೆಯ ಸುರ- ।
ಕರಿಯ ರಚಿಸಲಿ ನೋಂತು ಭೂಮೀದೇವಸಂತತಿಗೆ ॥
ಪರಿಪರಿಯ ದಾನಂಗಳ ಸ- ।
ತ್ಕರಿಸಿ ಸುಖಯಾ (ಗೆನುತ್ತಲಾ ಮುನಿ- ।
ಪರನು ತನ್ನಾಶ್ರಮಕೆ ಸರಿದನು ಬಾದ) ರಾಯಣನು ॥ ೮ ॥

* * * *

ಕರೆದುಕರೆದು ಸುವಾಸಿನಿಯರಿಗೆ ।
ಹರುಷದಿಂ ಬಾಯನವ ಕೊಟ್ಟಳು ।
ಧರಣಿಯಮರರ ದಣಿ(ಯಿ)ಸಿದಳು [ಗೋ] ಹಿರಣ್ಯದಾನದಲಿ ॥
ಸಿರಿಯುಮವದಲಿ ಕುಂತಿದೇವಿಯು ।
ಕರೆಸಮುಱಿತೆದಳು ಸುಬಲಸುತೆ ಸುರ ।
ಕರಿಯ ನೋಂತಳು ತಿರುಗಿದಳು ನಿಜರಾಜಮಂದಿರಕೆ ॥ ೧೭ ॥
ಸುರಪನೈರಾವತದ ನೋಹಿಗೆ ।
ಕ[ರಸಿದ] (ರೆಯಿಪ)ಳು ಗಾಂಧಾರಿಯೆಸುತ್ರವೆ ।
ಹರುಷದಿಂದಲಿ ಹೊರಗೆ ನೋಡುತ್ತಿರ್ದಳಾ ಕುಂತಿ ॥
ಹರೆದು ಬಹ ನೋಟಕ ಜನಂಗಳ ।
ಕರೆದು ಬೆಸಗೊಳಲೆಂದರಾಗಳೆ ।
ಯರಸಿ ನೋಂತಳು ತಿರುಗಿದಳು ನಿಜರಾಜಮಂದಿರಕೆ ॥ ೧೮ ॥
ಎಂದ ಮಾತನು ಕೇಳ ಮನದಲಿ ।
ನೊಂದು ಭರ ಬಿಸುಸುಯ್ದು ಸರಿಯ- ।
ಲ್ಕೆಂದು ನಮ್ಮನು ಕರೆಸದಾದಳು ದೇಪಿಗಾಂಧಾರಿ ॥
ಬಂದುದೀ ಬಡತನವು ರಾಯರ ।
ಹಿಂದೆ ಹೋಗದೆಯುಳದೆನಕಟಕ ।
ಟೆಂದು ದುಗುಡವ ತಾಳ ಮನೆಯಲಿ ಮಲಗಿದಳು ಕುಂತಿ ॥ ೧೯ ॥

* * * *

ಬಂದು ಫಲುಗುಣ ತಾಯ ಚರಣ- ।
ಕ್ಕಂದದಲಿ ತಾನೆಱಗಿ ದುಗುಡವು ।
ಬಂದ ಪರಿಯನು ಹೇಳು ನಿನ್ನಯ ಮನದ ಬಯಕೆಯನು ॥
ತಂದಪೆನು ಶಿವನೊಡನೆ ಕಾದಿಯೆ ।
ಹಿಂದುಗಳೆದರೆ ನಿನ್ನ ಬಸುರಲಿ ।
ಬಂದವನು ತಾನಲ್ಲ [ನಿಮ್ಮಾಣೆ] ಪಾಂಡುವಿನಾಣೆ ಹೇಳೆಂದ ॥ ೨೦ ॥

* * * *

ಪುತ್ರರುಗಳುಂಟೆಂದು ಮಣ್ಣನ ।
ಮೃತ್ತಿಕೆಯ ಬೆಟ್ಟವನು ಪೊಟ್ಟಲು ।
ಚಿತ್ರಿಕರು ರಚಿಸಿಪರೈರಾವತ್ರದ ಹೋಲಿಕೆಯ ॥
ಪೃಥ್ವಿನೆರೆನೋಡಿದುದು ರಾಯನ ।
ಮಿತ್ರನೋಂತಳು ಕರಸ[ಲೆ] (ದೆ)ಮ್ಮನು ।
ಪಾರ್ಥನಮ್ಮದು ಬದುಕೆ ಹೇಳೆಂದಳಳಲಿದಳು ಕುಂತಿ ॥ ೨೧ ॥

* * * *

ಮಂಡಲದೊಳಹ ರಾಯರಾಯರ ।
ತಂಡಸಹಿತವರುಗಳ ನೆರಹುವೆ ।
ಪುಂಡರೀಕೇಕ್ಷಣನ ಚರಣವ ನಿಮಗೆ ತೋರಿ[ಸುವೆ] (ಬೆನಾ-) ॥
ಖಂಡಲನ ಮದಗಜದ ಭಾರಿಯ ।
ಸೊಂಡಿಲನು ಹಿಡಿದೆಳೆದು ಭೂಮಿಗೆ ।
ತಂದುಕೊಡುವೆನು ತಾಯೆ ನೀ ನೋಡೆಂದನಾ ಪಾರ್ಥ ॥೩೫॥

Colophon :

ಪ್ರಥಮಸಂಧಿ (ಸಂಪೂರ್ಣ).

ವರಮುನಿಯ ಕರುಣದಲಿ ಕೌರವ-
ಜನನಿಯೈರಾವತವ ನೋಡಲು ।
ಮನದೊಳಗೆ ಖತಿಗೊಂಡ ಕುಂತಿಯ ಕಳುಹಿದನು ಪಾರ್ಥ ॥

ಸುರಕರಿಯ ಹೋಲಿಕೆಗೆ ಕಾರವ ।
ರೆಚಿತೆಯ ಮಣ್ಣಲಿ ಮಾಡಿ ನೋಂತರೆ ।
ಧರೆಯ ಬಹುಜನವೆಲ್ಲ ನೋಡಿದುದಾವ ಘನವೆಂದು ॥
ಸುರಪನೈರಾವತವನಾ ಸುರ ।
ತರುವನಾಸುರಧೇನುವನು ನಿ ।
ಮ್ಮರಮನೆಗೆ ತಹೆನೆನುತ ಕೊಂಡನು ಧನುವನಾ ಪಾರ್ಥ ॥

End :

ಭೂಮಿ ಕನ್ಯಾದಾನ ಫಲ(ಗಳು) ।
ಸೋಮ ದಿನಪಗ್ರಹಣಕಾಲದ ।
ಲಾ ಮಹಾ . . . . ಖಿಳವಿಪ್ರರಿಗೆ ॥
ಪ್ರೇಮದಿಂ ಶತ [ಸಹಸ್ರ] (ಕೋಟಿ) ಕಪಿಲೆಯ ।
(ಭಾಮ) ಸಹಿತ ಹಿರಣ್ಯಧಾರೆಯ ।
[ನೆರೆದ ಫಲವಹುದೀ ಮಹಾ] ಪ್ರೇಮದಿಂದೆ ಅದಫಲವೈರಾವತವ ಕೇಳ್ದರಿಗೆ ॥೭೧॥
ಗಂಗೆ ಗೋದಾವರಿಯ ನಿರ್ಮಲ ।
ತುಂಗಭದ್ರೆಯು ಎನೆವ ಸತಿ । (?)
ಹಿಂಗದೀ ಪಾತಕವ ಸುರವಾರಣಾಶಿಯಲಿ ॥
ತುಂಗವಿಕ್ರಮವೆನಿಪ ಕಾಶಿಯ ।
ಸಂಗತೀರ್ಥ ಸ್ನಾನವಹುದೀ ।

॥೭೮॥

ಮಂಗಳಸ್ತ್ರಕನೆನಿಸಿದೈರಾವತವ ಕೇಳ್ದರಿ(ಗೆ) . [ಗೋಲಿದು ನಿತ್ಯಾತುಮನ ಕರುಣದಲಿ]

Colophon :

ಅಂತು ಸಂಧಿ ೭ ರ ಪದ ೪೦೦ ಕ್ಕಂ ಮಂಗಳಂ ಶ್ರೀ.

(ವಿ-ವಿ.)—

ಸಮಗ್ರ. ಕಾಗದದ ಪ್ರತಿ. ಇದರೊಡನೆ ಆದಿತ್ಯಪುರಾಣ, ನಾಗರಾಜ ಅಥವಾ ಶೇಷನ ಮಹಿಮೆ ಯೆಂಬ ಪುಸ್ತಕಗಳೂ ಇವೆ.

ಇದು ಭಾಮಿನೀ ಷಟ್ಪದಿಯಲ್ಲಿ ಬರೆದಿದೆ. ಸಂಧಿ ೭. ಪದ್ಯಗಳು ೪೦೦. ಇದನ್ನು ಬರೆದವನು ಕುಮಾರವ್ಯಾಸನೆಂದೂ, ಇದರಲ್ಲಿ ೪ ಸಂಧಿ, ೪೪೧ ಪದ್ಯಗಳೂ ಇರುವುವೆಂದೂ ಕವಿ ಚರಿತ್ರೆ ೨ ನೆಯ ಸಂಪುಟದ ೬೮ ನೆಯ ಪುಟದಲಿ ಹೇಳಿದೆ. ಆದ ಕಾರಣ ಇದು ಪ್ರತ್ಯೇಕ ಗ್ರಂಥವೆಂದೇ ಕವಿ ಚರಿತ್ರಕಾರರ ಅಭಿ

ಪ್ರಾಯವಾಗುವುದು. ಮೈಸೂರು ಗ.ಓರಿಯಂಟಲ್ ಲೈಬ್ರರಿ (ಪ್ರಾಚ್ಯಕೋಶಾಲಯ) ಯವರು ಮುದ್ರಿಸಿರುವ ಭಾರತದಲ್ಲಿ ಈ ಐರಾವತ ಕಥೆಯು ಆದಿಪರ್ವದ ೨೦ ನೆಯ ಸಂಧಿಯಾಗಿದೆ. ಆ ಸಂಧಿಯಲ್ಲಿ ೧೪೪ ಪದ್ಯಗಳಲ್ಲಿ ಈ ಕಥೆಯು ಮುಗಿಯುವುದು. ಇದಕ್ಕಿಂತಲೂ ಹಿಂದೆ ಮುದ್ರಿತವಾದ ಭಾರತದಲ್ಲಿ ಈ ಕಥೆಯಿಲ್ಲ. ಈ ಕಥೆಯು ಹಿಂದೊಮ್ಮೆ ಪ್ರತ್ಯೇಕವಾಗಿ ಮುದ್ರಿತವಾಗಿದೆ. ಈಚೆಗೆ ಮಂಗಳೂರಿನಲ್ಲಿ ಈ ಏಳು ಸಂಧಿಯುಳ್ಳ ಕಥೆಯು ಪ್ರತ್ಯೇಕವಾಗಿ ಮುದ್ರಿತವಾಗಿರುವುದು. ಸಂಸ್ಕೃತ ಮಹಾಭಾರತದಲ್ಲಿ ಈ ಕಥೆಯಿಲ್ಲ. ಇಲ್ಲಿಯ ಡಿ. ನಂಬರು ೨೯ ರಲ್ಲಿ ವರ್ಣಿತವಾದ ಪುಸ್ತಕದಲ್ಲಿ ಈ ಕಥೆಯು ೨೧ ನೆಯ ಸಂಧಿಯಾಗುವುದು. ಅದರಲ್ಲಿ ೪೪ ಪದ್ಯಗಳಿರುವುವು. ಉಳಿದ ಭಾರತದ ಹಸ್ತಪ್ರತಿಗಳಲ್ಲಿ ಈ ಕಥೆಯಿಲ್ಲ.

ಕಥಾಗರ್ಭ :—ಗಾಂಧಾರಿಯು ಮಣ್ಣಿನಲ್ಲಿ ಆನೆಯನ್ನು ಮಾಡಿಸಿ ಗಜಗೌರೀವ್ರತವನ್ನು ಮಾಡಿದಾಗ ಓರಗಿತ್ತಿಯಾದ ತನ್ನನ್ನು ಕರೆಯಿಸಲಿಲ್ಲವೆಂದು ಕುಂತಿಯು ಖತಿಗೊಂಡಿರಲು ಅರ್ಜುನನು ತನ್ನ ಪರಾಕ್ರಮದಿಂದ ಇಂದ್ರನೈರಾವತವನ್ನೇ ಭೂಮಿಗೆ ತರಿಸಿ ತಾಯಿಯಿಂದ ವ್ರತವನ್ನು ಮಾಡಿಸಿ ಸರ್ವರನ್ನೂ ಬೆರಗುಗೊಳಿಸುವನು.—ಎಂಬುದು.

ಕುಮಾರವ್ಯಾಸನ ಕಾಲವು ಸು. ಕ್ರಿ.ಶ ೧೪೩೦ ಎಂದು ಕವಿ ಚರಿತ್ರಕಾರರು ಹೇಳಿದ್ದಾರೆ. ಈಚೆಗೆ ಮ-ರಾ-ಶ್ರೀ ರಾಜಪುರೋಹಿತರು ವಿಜಯನಗರದ ಕೃಷ್ಣದೇವರಾಯನ ಆಳಿಕೆಯ (ಕ್ರಿ.ಶ. ೧೫೦೯—೧೫೨೯) ಆದಿಭಾಗದಲ್ಲಿ ಕುಮಾರವ್ಯಾಸನು ಭಾರತ ದಶಪರ್ವಗಳನ್ನು ವಿರಚಿಸಿ ೧೫೨೦ ಸಮಾಧಿಸ್ಥನಾದಂತೆ ಹೇಳಿದ್ದಾರೆ (ಕ.ಸಾ.ಪ.ಪ. ಸಂಪುಟ ೧೯ ಸಂಚಿಕೆ ೧).

No. 876. ಐರಾವತ by ಕುಮಾರವ್ಯಾಸ.
AIRĀVATA BY KUMĀRAVYĀSA.

Substance, Palm-leaf. Size, 15¼ × 1⅜ inches. Pages, 32. Lines, 6 on a page. Extent, 400 granthas. Character, Kannada. Condition, slightly injured. Appearance, old. Mode of writing, good.

Begins on fol. 18-*a* of the Ms. described under No. 26 *ante*.

Complete in one sandhi containing 145 stanzas.

Same story as that described above. This forms the 20th sandhi of Ādiparva of Kumāravyāsa's Mahābhārata, published by the Government Library, Mysore.

(ವಿ-ವಿ.)—

ಇದರಲ್ಲಿ ಒಂದು ಸಂಧಿಯಿದೆ. ಪದ್ಯಗಳು ೧೪೫. ಇವುಗಳಲ್ಲಿ ಕತೆಯೆಲ್ಲ ಅಡಕವಾಗಿದೆ. ಇದರಲ್ಲಿರುವ ಆನುಪೂರ್ವಿಯಂತೆಯೇ ಪದ್ಯಗಳು ಮೈಸೂರು ಪ್ರಾಚ್ಯಕೋಶಾಲಯದಲ್ಲಿ ಮುದ್ರಿತವಾಗಿರುವ ಭಾರತದಲ್ಲಿಯೂ ಇದೆಯೆನ್ನಬಹುದು. ಈ ಪ್ರತಿ ಶಿಥಿಲವಾಗಿದೆ. ಇದರೊಡನೆ ಛಂದೋಂಬುಧಿ ಮುಂತಾಗಿ ಕೆಲವು ಪುಸ್ತಕಗಳಿವೆ. ಅವಾವುವೆಂಬುದನ್ನು ಡಿ. 26 ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದರ ಆದ್ಯಂತ ಭಾಗಗಳನ್ನು ಉದ್ಧರಿಸಿ ಬರೆಯುತ್ತೇವೆ.

Beginning :

ಗಜಮುಖನೆ ಮೆರೆವೇಕದಂತನೆ ।
ನಿಜಗುಣಾನ್ವಿತ ಪರಶುಧಾರನೆ ।
ರಜತಗಿರಿಗೊಡೆಯನ ಕುಮಾರನೆ ವಿಶ್ವವಾರಿಧಿಯೆ ॥
ಅಜನು ಹರಿರುದ್ರಾದಿಗಳು ನೆರೆ ।
ಭಜಿಸುತಿಹರನವರತ ನಿಮ್ಮನು ।
ತ್ರಿಜಗವಂದಿತ ಗಣಪ ಸಲಹುಗೆ ಮತಿಗೆ ಮಂಗಳವ ॥

ಸೂಚನೆ—

ಇಂದ್ರನೈರಾವತವ ಧರಣಿಗೆ ।
ತಂದು ನಿಜಮಾತೆಯನು ನೋನಿಸಿ ।
ಯಂದು ಫಲುಗುಣ ಕೀರ್ತಿವಡೆದನು ಮೂಱುಲೋಕದಲಿ ॥

ಕೇಳು ಜನಮೇಜಯ ಧರಿತ್ರೀ ।
ಪಾಳ ಹಸ್ತಿನಪುರಿಗೆ ಮುನಿಗಳ ।
ಮೇಳ ಬಿಜಯಂಗೆಯ್ದ ವೇದವ್ಯಾಸನೊಂದು ದಿನ ॥

End :

ಭೂತಳಾಧಿಪ ಧರ್ಮಸುತನನು ।
ಜಾತಗೆಂದನು ಮೂಱುಲೋಕದಿ ।
ಖ್ಯಾತಿಯಾಯಿತು ದಿವಿಜರನು ಗಜಸಹಿತ ಕಳುಹಿದನು ॥
ಭೂತಳದ ಸುರಪುರದ ದಾರಿಯು ।
ನೀ ತತುಕ್ಷಣ ಕಡಿದು ಬಸುಜನ ।
ಲಾತ ವಂದಿಸಿ ಕಳುಹಿದನು ಸುರಜನವ ಗಜಸಹಿತ ॥೧೪೩॥

ಬಿಲ್ಲನೇರಿಸಿ ಕವಲುಬಾಣದೊ-।
ಳಲ್ಲಿ ತಾ ಹರುಷದಲಿ ಸಾಹಸ-।
ಮಲ್ಲ ಬರಸೆಳೆದೆಚ್ಚನಾ ಶರಪಂಜರವ ನಲಿದು ॥
ನಿಲ್ಲದೆಯೆ ತರಿದೊಟ್ಟಿ ನಿಮಿಷದೊ ।
ಳೆಲ್ಲ ಬಯಲಾಯಿತ್ತು ಗೌರೀ-।
ವಲ್ಲಭನು ಮೆಚ್ಚಿದನು ಫಲುಗುಣ ಭಾಪುರೇಯೆನುತ ॥೧೪೪॥

ರಾಯ ಭೀಷ್ಮನು ಸಕಲಲೋಕದ ।
ರಾಯರನು ಉಚಿತದಲಿ ಕಳುಹಿದ ।
ರಾಯ ಪಾರ್ಥನ ಹೊಗಳುತವೆ ಹೊಕ್ಕರು ಪುರಾಂತರವ ।
ರಾಯ ಧರ್ಮಜ ತಮ್ಮದಿರು ಸಹ ।
ರಾಯ ಹರಕೆಯಲಿರ್ದ ಗದುಗಿನ ।
ರಾಯ ನಾರಾಯಣನ ಕೃಪೆಯಲಿ ರಾಯ ಕೇಳೆಂದ ॥೧೪೫॥

Colophon :

ಐರಾವತಂ ಸಂಪೂರ್ಣಂ

No. 877. ಐರಾವತ by ಕುಮಾರವ್ಯಾಸ.

AIRĀVATA BY KUMĀRAVYĀSA.

Substance, Śrītāla. Size, $9\frac{1}{4} \times 1\frac{1}{16}$ inches. Pages, 48. Lines, 7 on a page. Extent, 400 granthas. Character, Kannada. Condition, injured. Appearance, old. Mode of writing good.

Begins on fol. 10-*ā*. The other works herein are :—(1) *Śakuna* 1*a*, (2) *Bhāratakathāmañjari* (Rajanīti, Viduranīti, Sanatsujātanīti) 34*a*, (3) *Paṇḍavagīte* (Sanskrit) 66*a*, (4) *Bhāratasāvitri* (Sanskrit-Viṣṇupurāṇāntargata) 74*a*, (5) *Kṛṣṇāṣṭaka* (Sanskrit) 80*a*, (6) *Bhāratasāvitri* (Sanskrit—Āścaryaparva—Harivamśāntargata) 82*a*, (7) *Rāmānujastuti* and *Āḻvārstuti* (Telugu) 89*a*.

Complete in one sandhi with 144 stanzas.

Same work as that described above (No. 876).

(ವಿ-ವಿ)—

ಸಮಗ್ರ. ಸಂಧಿ ೧, ಪದ್ಯಗಳು ೧೪೪. ಶ್ರೀತಾಳ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಶಕುನಗಳು, ಭಾರತಕಥಾಮಂಜರಿ (ರಾಜನೀತಿ, ವಿದುರ ನೀತಿ, ಸನತ್ಸುಜಾತ ನೀತಿ ಸಂಧಿಗಳು), ಪಾಂಡವ ಗೀತೆ (ಸಂಸ್ಕೃತ), ಭಾರತಸಾವಿತ್ರಿ (ಸಂಸ್ಕೃತ-ವಿಷ್ಣು ಪುರಾಣಾಂತರ್ಗತ), ಕೃಷ್ಣಾಷ್ಟಕ (ಸಂಸ್ಕೃತ), ಭಾರತ ಸಾವಿತ್ರಿ (ಸಂಸ್ಕೃತ-ಭಾರತದ ಆಶ್ಚರ್ಯ ಪರ್ವದ ಹರಿವಂಶಾಂತರ್ಗತ), ರಾಮಾನುಜರು, ಆಳ್ವಾರರು ಇವರ ಸ್ತುತಿ (ತೆಲುಗು) ಇವೂ ಇವೆ.

ಇದು ಹಿಂದಣ ೮೭೬ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 878. ಐರಾವತ by ಕುಮಾರವ್ಯಾಸ.
AIRAVATA BY KUMĀRAVYĀSA.

Substance, Paper. Size, 10$\frac{1}{16}$ × 9$\frac{1}{4}$ inches. Pages, 14. Lines, 20 on a page. Extent, 310 granthas. Character, Kannada. Condition, good. Appearance, new.

Restored in 1933–34 from the Ms. described under No. 881.

Begins on page 12 of the II Part. The other works herein are :—(1) *Kālaphala* Page 1 of the I Part, (2) *Bhāratakathāmañjari* (Rājanītisandhi) Page 1 of the II Part, (3) *Torave Rāmāyaṇa* (Vibhiaṇa buddhisandhi, etc.) Page 26 of the II Part.

Complete in one sandhi with 122 stanzas.

Same work as that described under No. 876 *ante*.

(ವಿ-ವಿ.)—

ಸಮಗ್ರ. ಸಂಧಿ ೧, ಪದ್ಯ ೧೨೨. ಇದು ಮುಂದಣ ೮೮೧ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೃತಿಯಾಗಿದೆ. ಕಾಗದದ ಪ್ರತಿ. ಲಿಪಿ ಸಾಮಾನ್ಯ. ಇದರೊಡನೆ ಕಾಲಫಲ, ಭಾರತಕಥಾಮಂಜರಿ (ರಾಜನೀತಿ ಸಂಧಿ), ತೊರವೆ ರಾಮಾಯಣ (ವಿಭೀಷಣಬುದ್ಧಿಸಂಧಿ ಮುಂತಾದುವು) ಇವೂ ಇವೆ.

ಇದು ಹಿಂದೆ ೮೭೬ ನೆಯ ನಂಬರಿನಲ್ಲಿ ವರ್ಣಿತವಾದ ಗ್ರಂಥವೇ ಆಗಿದೆ.

No. 879. ಐರಾವತ by ಕುಮಾರವ್ಯಾಸ.
AIRĀVATA BY KUMĀRAVYĀSA.

Substance, Śritāla. Size, 25$\frac{1}{4}$ × 2 inches. Pages, 16. Lines, 8 on a page. Extent, 410 granthas. Character, Kannada. Condition, slightly injured. Appearance, old. Mode of writing, good.

Begins on fol. 261-*ā* of the Ms. described under No. 30 *ante*.

Complete in one sandhi with 145 stanzas.

Date of transcription :—8th day of the bright fortnight of the lunar month Mārgaśira in the year Āṅgīrasa.

Name of the scribe :—Venkaṭaramaṇayya.

Same work as that described under No. 876 *ante*.

(ವಿ-ವಿ.)—

ಇದರಲ್ಲಿ ಒಂದು ಸಂಧಿಯಿದೆ. ಇದರಲ್ಲಿ ಕಥೆಯು ಅಡಕವಾಗಿದೆ. ಪದ್ಯಗಳು ೧೪೫. ತಪ್ಪುಗಳು ಅಷ್ಟಾಗಿ ಇಲ್ಲವೆನ್ನಬಹುದು. ಸ್ವಲ್ಪಮಟ್ಟಿಗೆ ಶಿಥಿಲವಾಗಿದೆ. ಗ್ರಂಥ ಪಾತ್ರವಿಲ್ಲ. ಇದಕ್ಕೂ ಹಿಂದಿನ ಒಂದು ಸಂಧಿಯಿರುವ ಪ್ರತಿಗಳಿಗೂ ಪಾಠಭೇದವಿರುವುದು ಮಾತ್ರವಲ್ಲದೆ ಪದ್ಯಗಳೂ ಸ್ವಲ್ಪ ಹೆಚ್ಚು. ಕಡೆ

ಯಲ್ಲಿ ‘ ಆಂಗೀರಸ ಸಂವತ್ಸರದ ಮಾರ್ಗಶಿರ ಶು. ೪ ರಲ್ಲು ವೆಂಕಟರಮಣಯ್ಯ ಎಣಿಕೆ ಮಾಡಿದುದು. ಹೊರಹಳಿಯಲ್ಲಿ ಹಸೆಬಗುಳಿ ಬಳಿಯಲ್ಲಿ ಎಣಿಕೆ ಮಾಡಿದುದು. ಈ ಪುಸ್ತಕದಲ್ಲಿರುವ ಓಲೆ(ಗಳು) ೨೪೦, ಪರ್ವ(ಗಳು) ದಶಪರ್ವದ ಪುಸ್ತಕಕ್ಕೆ ಅನವರತ ಜಯಮಂಗಳ ಮಹಾಶ್ರೀ ’ ಎಂದಿದೆ. ಭಾರತಕಥಾ ಮಂಜರಿ. ಐರಾವತ ಇವೆರಡು ಪುಸ್ತಕಗಳ ಓಲೆಗಳು ೨೬೯. ಬಳಿಕ ಭಾರತದ ಕೆಲವು ಪದ್ಯಗಳುಳ್ಳ ಒಂದೋಲೆಯಿದೆ. ಒಟ್ಟು ಈಗಿರುವ ಓಲೆಗಳು ೨೭೦ ಮಾತ್ರವೆ.

ಇದು ಹಿಂದೆ ೪೭೬ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 880. ಐರಾವತ by ಕುಮಾರವ್ಯಾಸ.

AIRĀVATA BY KUMĀRAVYĀSA.

Substance, Śrītāla. Size, 14 × 2 inches. Pages, 22. Lines, 8 and 9 on a page. Extent, 390 granthas. Character, Kannada. Condition, much injured. Appearance, old. Mode of writing, good.

Begins on fol. 1-*a* of the Ms. described under No. 307 *ante*.

Complete in one sandhi with 141 stanzas.

Same work as that described under No. 876 *ante*.

(ವಿ.ವಿ.)—

ಇದರಲ್ಲಿ ಒಂದು ಸಂಧಿಯಿದೆ. ಇದರಲ್ಲಿ ಕತೆಯೆಲ್ಲ ಅಡಕವಾಗಿದೆ. ಪದ್ಯಗಳು ೧೪೧ ಕೊನೆಯ ಓಲೆಯು ಮುರಿದಿದೆ. ಆದಿಯಲ್ಲಿ ‘ ಇಂದ್ರನೈರಾವತವ ’ ಎಂಬ ಸೂಚನಾ ಪದ್ಯದಿಂದಲೇ ಆರಂಭವಾಗಿದೆ. ಕಡೆಯಲ್ಲಿ ‘ ಬಿಲ್ಲನೇರಿಸಿ ’ ಎಂಬ ಪದ್ಯವಾದ ಬಳಿಕ,—

‘ ಭೂತಳಾಧಿಪ ಧರ್ಮಸುತ ನಿಜ ।
ಮಾತೆಗೆಂದನು ಮೂಜಗಲೋಕಕೆ ।
ಖ್ಯಾತಿಯಾದವು ಯಿಂದ್ರನೈರಾವತವ ಕೆಳಗಿಹ . . . ॥
. . . ದೊಳ್ ಸತ್ಕೀರ್ತಿ ನಮಗಿಂ ।
ದೇತಕಿಂದಾಯ್ತೆನಲು ಗದುಗಿನ ।
. . . . . ವೀರನಾರಾಯಣನ ಕರುಣದಲಿ ॥ ’

ಎಂಬ ಪದ್ಯವಿದೆ. ಇಲ್ಲಿಗೆ ಸಂಧಿಯು ಮುಗಿಯುವುದು. ಇದು ಶ್ರೀತಾಳ ಪ್ರತಿ ಲಿಪಿ ಚೆನ್ನಾಗಿದೆ. ಈ ಪ್ರತಿಯೊಡನೆ ಇನ್ನೂ ಅನೇಕ ಪುಸ್ತಕಗಳವೆ. ಅವಾವುವೆಂಬುದನ್ನು ಡಿ. ನಂ. ೩೦೭ ರಲ್ಲಿ ನೋಡಿ ತಿಳಿಯುವುದು.

ಇದು ಹಿಂದೆ ೪೭೬ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 881. ಐರಾವತ by ಕುಮಾರವ್ಯಾಸ.

AIRĀVATA BY KUMĀRAVYASĀ.

Substance, Palm-leaf. Size, 13¼ × 1½ inches. Pages, 36. Lines, 5 on a page. Extent, 395 granthas. Character, Kannada. Condition, slightly injured. Appearance, old. Mode of writing, good.

Begins on fol. 16-*a* of the Ms. described under No. 288 *ante*.

Complete.

Contains one sandhi in 122 stanzas.

Date of transcription :—Tenth day of the dark fortnight of the lunar, month Aśvīja in the year Āṅgīrasa.

Name of the scribe :—*Puṭṭayya* of *Lakkur* copied for *Rudrayya*, son of *Murti-nāyaka*.

Same work as that described under No. 876 *ante*.

(ವಿ-ವಿ.)—

ಇದರಲ್ಲಿ ಒಂದು ಸಂಧಿಯಿದೆ. ಪದ್ಯಗಳು ೧೨೦. ಕತೆಯಲ್ಲಿ ಅಡಕವಾಗಿದೆ. ಪುಸ್ತಕವು ಸ್ವಲ್ಪ ಮಟ್ಟಿಗೆ ಶಿಥಿಲವಾಗಿದೆ. ಲಿಪಿ ಚೆನ್ನಾಗಿದೆ. ಕಡೆಯಲ್ಲಿ 'ಬಿಲ್ಲನೇರಿಸಿ' ಎಂಬ ಪದ್ಯವಾದ ಮೇಲೆ.

'ಭೂತಳಾಧಿಪ ಧರ್ಮಸುತ ನಿಜ-।
ಮಾತೆಗೆಂದನು 'ಭುವನದೊಳು ವಿ।
ಖ್ಯಾತಿಯಾಯಿತು ಇಂದ್ರನೈರಾವತವ ಕಳುಹಿದನು ॥
ಸೋಂತಿರ್ಯೈರಾವತವ ಗಂಗಾ-
ಜಾತ ಪತಿಕರಿಸಿದನು ಅತಿಶಯ
ಪ್ರೀತಿಯಿಂ ಸಲಹಿದನು ಗದುಗಿನ ವೀರನಾರಾಯಣ ॥'

ಎಂಬ ಪದ್ಯವಿದೆ. ಬಳಿಕ 'ಆಂಗೀರಸ ಸಂವತ್ಸರದ ಆಶ್ವೀಜ ಬ. ೧೦ ರಲ್ಲು ಶ್ರೀಮತು ಲಕೂರ ಪುಟ್ಟಯ್ಯನು ಮೂರ್ತಿನಾಯಕನ ಮಗ ರುದ್ರಯ್ಯಗೆ ಧನಕನಕ ವಸ್ತುವಾಹನ ದಿನದಿನಕೆ, ಪುತ್ರೋತ್ಸವವಾಗಲಿಯೆಂದು ಹರಸಿ ಬರೆದುಕೊಟ್ಟ ಐರಾವತ ಪುಸ್ತಕ. ಇದನು ಪ್ರತಿಯುದ್ದ ಹಾಗೆ ಬರೆದೆನು. ಓದು ಬಲ್ಲಂಥ ಹಿರಿಯರು ತಪ್ಪುಗಳ ತಿದ್ದಿಕೊಂಬುದು' ಎಂದಿದೆ. ಇದರೊಡನೆ ಕೆಲವು ಪುಸ್ತಕಗಳು ಸೇರಿಸಿವೆ. ಅವಾವುವೆಂಬುದನ್ನು ೮೮೮ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು. ಹಿಂದೆ ೮೭೮ ನೆಯ ನಂಬರಿನಲ್ಲಿ ವರ್ಣಿತವಾದ ಪುಸ್ತಕವು ಇದರ ಪ್ರತಿಕೆಯಾಗಿದೆ.

ಇದು ಹಿಂದೆ ೮೭೬ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಗ್ರಂಥವೇ ಆಗಿದೆ

No. 882. ಐರಾವತ by ಕುಮಾರವ್ಯಾಸ.

AIRĀVATA BY KUMĀRAVYĀSA.

Substance, Palm-leaf. Size, 13½ × 1½ inches. Pages, 34. Lines, 5 on a page. Extent, 300 granthas. Character, Kannada. Condition, injured. Appearance, old.

Complete in one sandhi with 113 stanzas. 17th folio is wanting.

Same work as that described under No. 876 *ante*, with different readings.

(ವಿ-ವಿ.)—

ಇದರಲ್ಲಿ ಒಂದು ಸಂಧಿಯಿದೆ. ಪದ್ಯಗಳು ೧೧೩. ಹದಿನೇಳನೆಯ ಓಲೆಯಿಲ್ಲ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಪಾಠಭೇದವಿದೆ. ಇದರ ಆದ್ಯಂತ ಭಾಗಗಳನ್ನು ಉದ್ಧರಿಸಿ ಬರೆಯುತ್ತೇವೆ—

Beginning :

ಭಾ. ಷ॥ ವರಮಣಿಗಳಿಂದೆಸೆವ ಮಕುಟದ।
ಸರಸಿಜಾರಿಯ ಕಿರಣಧೂಳಿಯ।
ವಿರಚಿತದ ಸಿಂಧೂರ ಭಾಳದಿ ಕುಣಿವಕುಂತಳದ॥
ಕರಿನಿಭಾಕೃತಿಯೆನಿಪ ವದನದ।
ಕರದ ಪಾಶ(ದ) ಮೋದಕದ ವಿ-।
ಸ್ತರದ ಗಣಪತಿ ಮಾಡೆಮಗೆ ನಿರ್ವಿಘ್ನದಾಯಕವ॥೧॥

ಸೂಚನೆ :—

ಇಂದ್ರನೈರಾವತವ ಧರಣಿಗೆ ।
ತಂದು ನಿಜಮಾತೆಯನು ನೋನಿಸ ।
ಲೆಂದು ಫಲುಗುಣ ಕೀರ್ತಿವಡೆದನು ಮೂಱುಲೋಕದಲಿ ॥
ಕೇಳು ಜನಮೇಜಯ ಧರಿತ್ರೀ-।
ಪಾಳ ವರಗಾಂಧಾರಿ ಸತಿಯರ ।
ಮೇಳ [ದಳಿಯೈ](ದೈ)ರಾವತವ ನೋಂತಳು ಹರುಷದುಬ್ಬಿನಲಿ ॥
ಆಲಯಕೆ ತಿರುಗಿದಳು ಪಾಂಡು ನೃ
ಪಾಳ ಸರಸಿಯ ಕರೆಸಲೊಲ್ಲದೆ ।
ಪೇಲು ಮದದಿಂದಿರಲು ಕೇಳ್ದಳು ಕುಂತಿ ಹರುಷದಲಿ ॥೧॥
ಸುರಪನೈರಾವತ[ಕೆ ತನ್ನನು] (ದ ನೋಂಪಿಗೆ) ।
ಕರೆಸುವಳು ಗಾಂಧಾರಿಯೆನುತವೆ ॥
ಹರುಷದಿಂದಲಿ ಹೊರಗೆ ನೋಡುತ್ತಿದ್ದಳಾ ಕುಂತಿ ॥

End :

(ಬಿಲ್ಲನೇರಿಸಿ ಕವಲುಬಾಣದೊ ।
ಳೆಲ್ಲಿತಾ ಹರುಷದಲಿ ಸಾಹಸ ।
ಮಲ್ಲ ಬರಸೆಳೆದೆಚ್ಚನಾ ಶರಪಂಜರದ ನಲಿದು ॥)
ನಿಲ್ಲದೆಯೆ ಕಡಿದೊಟ್ಟಿ ನಿಮಿಷದೊ-।
ಳೆಲ್ಲ ಬಯಲಾಯಿತ್ತು ಗೌರೀ-।
ವಲ್ಲಭನು ಮೆಚ್ಚಿದನು ಫಲುಗುಣ ಭಾಪುರೇಯೆಂದ ॥೧೧॥
ಭೂತಳಾಧಿಪ ಧರ್ಮಸುತ ನಿಜ-।
ಮಾತೆಗೆಂದನು ಮೂ(ಱುಲೋಕಕೆ ।
ಖ್ಯಾತಿ) ಯಾದೆವು ಯೆಂದ ನೈರಾವತವ ಕಳುಹಿದರೆ ॥
ನೋಂತೆನೈರಾವತವನಗಜಾ ।
ಪ್ರೀತಿ ಸಲಹುಗೆ ನಮ್ಮನವನು ಕೃಪೆ ।
ಯೇಸು ಭಕ್ತರ ಮೇಲೆ ಗದುಗಿನ ವೀರನಾ ॥ (?) ೧೧೩॥

Colophon :

ಅಂತು ಸಂಧಿ ಸಮಾಪ್ತಂ.

ಪುಸ್ತಕದಾದಿಯಲ್ಲಿ ' ಜಗಪುರದ ಚೆನ್ನಿಗರಾಯನ ಪಾದಾರವಿಂದವೇ ಗತಿ ' ಎಂದು ಬರೆದಿದೆ. ಇದರಿಂದ ಈ ಪ್ರತಿಯನ್ನು ಬರೆದವನು ತನ್ನ ಊರು, ಇಷ್ಟದೇವತೆಗಳನ್ನು ಏನಾದರೂ ಸೂಚಿಸಿರಬಹುದೋ ಎಂದು ಶಂಕಿಸಬಹುದಾಗಿದೆ. ಕಡೆಯಲ್ಲಿ ಗ್ರಂಥಾಕ್ಷರದಲ್ಲಿ ಒಂದು ಪದ್ಯವಿದೆ. ಅದನ್ನಿಲ್ಲಿ ಬರೆದಿದೆ.

" . . . . ಮೆಂದವನು ಸ್ವರ್ಗದ ।
ಕಾಮಿನೀಜನ ಕೊಡೆಯನೆಹ ರಘು ।
ರಾಮ ರಕ್ಷಿಸು ರಕ್ಷಿಸೆಂದವ ಕಮಲಭವನಹನು ॥
ರಾಮನಾಮಾಮೃತವ ನಾ . . . . . .
. . . . ಗೆ ಸರಿಯಹನು ಜಗದೊಳು ।
ರಾಮನಾಮಸ್ಮರಣೆಯನು ಬಣ್ಣಿಸುವ್ರೊಡಱಿದೆಂದ ॥ "

ಇದು ಹಿಂದೆ ೪೭೬ ನೆಯ ಸಂಖ್ಯೆಯಲ್ಲಿ ವರ್ಣಿತವಾಗಿರುವ ಕಥೆಯೇ ಆಗಿದೆ.

No. 883. ಐರಾವತ by ಕುಮಾರವ್ಯಾಸ.

AIRĀVATA BY KUMĀRAVYĀSA.

Substance, Palm-leaf. Size, 8¾ × 1 inches. Pages, 100. Lines, 4 on a page. Extent, 450 granthas. Character, Kannada. Condition, very much injured. Appearance, old. Mode of writing, good.

Complete in 2 sandhis with 177 stanzas.

Same work as that described under No. 876 *ante* ; but in this one sandhi is divided into two sandhis with some additions.

Date of transcription :—Monday, the second day of the bright fortnight of the lunar month Māgha in the year Vibhava.

(ವಿ-ವಿ.)—

ಸಮಗ್ರ. ಹಿಂದೆ ೮೭೬ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪುಸ್ತಕದಲ್ಲಿಯ ಒಂದು ಸಂಧಿಯನ್ನೇ ಎರಡು ಸಂಧಿಗಳಾಗಿ ವಿಭಾಗಮಾಡಿದೆ ಪದ್ಯಗಳು ೧೭೭. ೧ ಮತ್ತು ೪೦ ನೆಯ ಓಲೆಗಳ ಮುಂದಿನ ಒಂದೊಂದು ಓಲೆಯಲ್ಲಿ ಒಂದೇ ಕಡೆ ಬರೆದಿದೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಉತ್ತಮವು. ಕಡೆಯಲ್ಲಿ " ವಿಭವ ಸಂವತ್ಸರದ ಮಾಘ ಶುದ್ಧ ಬಿದಿಗೆ ಚಂದ್ರವಾರ ಇಂದ್ರನೈರಾವತ ಬರೆದನು. ಓಲೆಯಿಲ್ಲದರಿಂದ ಕೆಳಿದರಲ್ಲಿಯ ಮೂಲಪ್ರತಿಯಲ್ಲಿ ಇದ್ದಹಾಗೆ ಬರೆದನು. ತಪ್ಪು ಉಂಟಾದರೆ ಬಲ್ಲಂಥ ಹಿರಿಯರು ಅರಿಯದವ ಬರೆದನೆಂದು ತಿದ್ದಿಕೊಂಬುದು." ಎಂದಿದೆ. ಇದರ ಆದ್ಯಂತ ಭಾಗಗಳನ್ನು ಉದ್ಧರಿಸಿ ಬರೆಯುತ್ತೇವೆ.

Beginning :

ಸೂ ॥ ಇಂದ್ರನೈರಾವತವ (*) (*) ಮೂಱುಲೋಕದಲಿ ॥

* * * *

ತಂತ್ರಗಳು ನಿಮಗೇಕೆ ಸುರಪತಿ ।
ಅಂತರವ ನೀನಱಿಯೆ ಪಾರ್ಥನು ।
ಪಂತವುಳ್ಳವನಹುದು ಚಿಂತೆಗೆ ಚಿಂತೆಯುಳ್ಳವನು ॥
ಮಂತ್ರಧನುವನು ಕೊಂಡನಾದರೆ ।
ಕಂತುಪಿತನನು ಒಗೆಯದಾತನ ।
ಅಂತರವ ನೀನಱಿಯೆಯೆಂದನು ಮಂತ್ರಶಕ್ತಿಯಲಿ ॥೨೦॥

ಕಳುಹಿಸು ಪ್ರದೋಲೆಯನು ಪಾರ್ಥನ ।
ಬಲುಹುನುಡಿಗಳ ನುಡಿವುದಾತನ:
ಅಳವನಱಿದಟ್ಟುವುದು ನಾಕದೊಳುಳ್ಳವಸ್ತುವನು ॥
ಹಲವು ಮಾತೇಕೆಂದು ನಾರದ ।
ಕಳುಹಿದರೆ ಸುರನಾಥದೂತರ ।
ಕಳುಹಿಕರೆಸಲು ಬಂದ[ನಾ]ಖಚರ ಪ್ರಚಂಡನೆಂಬವನು ॥೨೧॥

ಅಂತು ಸಂಧಿ ೧ ಕ್ಕಂ ಪದನು ೨೧ ಕ್ಕಂ ಮಂಗಳ ಮಹಾಶ್ರೀ ।

ಸೂಚನೆ.—

ನಸುನಗುತ ದೇವೇಂದ್ರನರ್ಜುನ-।
ನೆಸಗಲಟ್ಟಿದ ಹದನ ಬ[ಲು](ಹಳ) ರ-।
ಭಸಗೊಳುತ ಬಿಳಿಯಾನೆ ಮಾಳಸಹಿತ ಕಳುಹಿದನು ॥ (?)

ಕೇಳು ಜನಮೇಜಯ ಧರಿತ್ರೀ-।
ಪಾಳ ಪುಣ್ಯಾಧನಂಜಯನ ಕೊಂ।
ಡಾಡಿ ಕುಂತಿಯ ಪುತ್ರನೇಳಗೆಯ ॥ (!)
ಮೇಲು ಲೋಕದ [ಅರಸು] (ರಾಜ) ನಿಂದ್ರನು ।
ಬಾಲೆಯರ ನಡುವಿರಲು ಮತ್ತಾ ।
ಕಾಲನೇಮಿಯ ನುಡಿಯನೆಂಬ ಖಚರನಿಂತೆಂದ ॥ (?) ೧ ॥

ಬಂದು ಖಚರನು ದಿವಿಜರಾಯನಿ ।
ಗಂದು ಮೆಯ್ಯಿಕ್ಕಿದನು ಕೈಮುಗಿ ।
ದಿಂದು ಬಿನ್ನಹವೇನು ಕಾರಣಯೆನ್ನ ಕರೆಸಿದಿರಿ ॥
ಅಂಧಕಾಸುರ ನಿರಲು ದಿವಿಜರಿ ।
ಗಂದು ಭಯವಿನಿತಿಲ್ಲ ಕುಂತೀ-।
ನಂದನನ ಭಯವಾಯ್ತು ಕರೆಸಿದೆನೆಂದನಮರೇಂದ್ರ ॥೨॥

ಎನಲು ಸುರಪನ ಮಾತಕೇಳುತ ।
ಮನದೊಳೇ ಖತಿಗೊಂಡು ಖಚರನು ।
. . . . ವ ಕೊಡಲು ಬಹುದಾ ಪಾರ್ಥನೆಂಬುವನ ॥
ತನುಸಹಿತ ಹಿಡಿದೆಳೆದು ತಹೆನು ।
ಕನಲಿದರೆ ಕಳ . . . . . ನ ।
ಮನೆಗೆನುತ ಖತಿಯಿಂದ ನುಡಿದನು ಯಿಂದ್ರನಿದಿರಿನಲಿ ॥೩॥

End:

ವೇದ ಪಾರಾಯಣದ ಫಲ ಗಂ ।
ಗಾದಿ ತೀರ್ಥಸ್ನಾನ ಫಲವಹು ।
ದಿದು ಕುಕ್ಷಾದಿ ತಪಸಿನ ಫಲ ಔತ್ರಿಷ ಸೋಮಯಾಗ ಫಲ ॥
ಮೇದಿನಿಯನೊಲಿದತ್ತ ಫಲ ಕ- ।
ನ್ಯಾದಾನ . । ವಸ್ತ್ರದಾನ ಪಲವಹು ।
ದೀ ಮಹಾ ಭಾರತ ಕಥಾಮೃತವ(ನ್ನು) [ಕೇಳ್ದರಿಗೆ] ನವಿದರಿಗೆ ॥ ೧೦೫ ॥
ಹೇಮಕ . . . ರಭ . . ರಣ ।

ಕಡೆಯ ಒಂದೋಲೆಯು ಮುರಿದೂ, ಅತಿಜೀರ್ಣವಾಗಿಯೂ ಇದೆ. ಇತರ ಪ್ರತಿಗಳಗೂ ಇದಕ್ಕೂ ಪದ್ಯಗಳ ಹೆಚ್ಚು ಕಡಿಮೆಯೂ ಪಾಠಭೇದಗಳೂ ಕಂಡುಬರುವುವು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿರುವುದು.

No. 884. ಕಂಠೀರವನರಸರಾಜವಿಜಯ by ಭಾರತಿನಂಜ-
KAṆṬHĪRAVANARASARĀJAVIJAYA BY BHĀRATINAÑJA.

Substance, Śrītāla. Size, 14 × 1¾ inches. **Pages**, 315. Lines, 6—8 on a page. **Extent**, 4,600 granthas. Character, Kannada. Condition, much injured. Appearance, old. Mode of writing, good.

Complete in 26 sandhis.

It is written in Sāngatya metre and gives an account of *Raṇadhīra Kaṇṭhīra Narasarāja* (1638—1659 A.D.) son of the younger brother of *Rājanṛpa* of Mysore royal family.

The Colophon at the end of this Ms. is not complete, but in the Colophon found in the printed edition published by the Oriental Library, Mysore, it is stated that one *Govinda Vaidya*, son of *Srinivāsapandita* is the author. According to the Karṇāṭakakavicaritre (Vol. II, Page 373) *Bhārati-Nanja* appears to be the author of this work.

Beginning :

ಕಂ ॥ ಶ್ರೀರಮಣಿ ಗೌರಿ ಶಾರದೆ ।
ನಾರಾಯಣ ರುದ್ರ ಬ್ರಹ್ಮ ಸಕಲಸುರೌಘಂ ॥
ಧಾರಿಣಿಗಧಿಪತಿ ವರ ಕಂ ।
ಠೀರವ ನೃಪಗೀಯುತೊಲಿದು ಗೆಲವಂ ಬಲವಂ ॥

ಸಾಂಗತ್ಯ ॥ ಶ್ರೀಮದಮರಗಣ ಮಕುಟ ರಂಜಿತ ದಿವ್ಯ- ।
ರಾಮಣೀಯಕ ಶುಭಚರಣ ॥
ಕಾಮಜನಕ ಕಾರುಣ್ಯ ಮೂರುತಿ ರಂಗ ।
ಧಾಮ ರಕ್ಷಿಸು ತ್ರಿಜಗವ(ನು) ॥ ೧ ॥

* * * *

ಅಧ್ಯಯನಾದಿ ಸಕಲ ಮಂತ್ರ ಶಾಸ್ತ್ರವ ।
ವೇದ್ಯವೆನಿಸಿಯೆನ್ನ ಮನಕೆ ॥
ಸದ್ಯದಿಂದಲಿ ಕರುಣಿಸಿ ರಾಜಿಸುತಿಹ ।
ವಿದ್ಯಾಗುರುವಿಗೆರಗುವೆನು ॥ ೧೧ ॥

ಆದಿ ಕಪೀಂದ್ರ ವಾಲ್ಮೀಕಿ ವ್ಯಾಸರು ಮೊದ ।
ಲಾದ ಸಕಲ ಸೂರಿಗಳ ॥
ಪಾದಾರವಿಂದವ ನೆನೆದೀಕೃತಿಯನು ।
ಮೇದಿನಿ ನಲಿಯೆ ಪೇಳುವೆನು ॥ ೧೨ ॥

ಛಂದಸ್ಸುಗಣ ಲಕ್ಷ್ಯಲಕ್ಷಣಗಳ ಮೊದ ।
ದಿಂದ ತಿಳಿದು ಶುಭದೊಳಗೆ ॥
ಇಂದುಧರನ ಕೃಪೆಯಲಿ ಪೇಳ್ದ ಕೃತಿಯಿದ ।
ಚಂದದಿ ಬುಧರು ಲಾಲಿಪುದು ॥ ೧೩ ॥

* * * *

ದೇವತಾಸ್ತುತಿಯಲ್ಲ ಕೇಳ್ವೊಡೆ ನರಸ್ತುತಿ ।
ಯಾವವೆಗ್ಗಳವೆನಬೇಡ ॥
ನಾವಿಷ್ಣುಃ ಪೃಥಿವೀಪತಿ ಯೆಂದು ವೇ ।
ದಾವಳಿಗಳು ಸಾರುತಿವೆಕೊ ॥ ೧೭ ॥

ಇನಿತಲ್ಲದಂದಿನ ನರಸಿಂಹ ಕಲಿಯುಗ ।
ದನುಜರ ಸಂಹರಿಸು[ವರೆ] (ವೊಡೆ) ॥
ಮನುಜಾವತಾರದೆ ಬಂದರಸನ ಕಥೆ ।
ವಿನುತ ವಿಜಯ ಕೇಳ್ವರಿಗೆ ॥ ೧೮ ॥

ಇದಕೆ ತಾರ್ಕಣೆ ಯಾವುದೆನೆ ನರಹರಿಯಂ ।
ದುದುಭವಿಸಿದ ಮಾಸತಿಥಿಯು ॥
ಪುದಿದತಿ ಶುಭವಾರ ಸಂಜೆಯೊಳುದಿಸಿದ ।
ಪದುಮಾಕ್ಷನಿವ ಶಾನ್ಯೆಸೆ ॥ ೧೯ ॥

* * * *

ತರುಣೀಜನನೇತ್ರೋಜ್ವಲ ಚಂದ್ರನ ।
ಸರಸವಿದ್ಯಾವಿಶಾರದನ ॥
ದೊರೆರಾಯ ನರಸರಾಜೇಂದ್ರನ ಚರಿತೆಯ ।
ನೊರೆದ ಭಾರತಿನಂಜನೊಲಿದು ॥ ೨೫ ॥

* * * *

ಪೊಡವಿಪ ದಳವಾಯಿ ನಂಜರಾಜೇಂದ್ರ ತ
ನ್ನೊಡೆಯನ ಶೌರ್ಯದೇಳಿಗೆಯ ॥
ಗಡಣವ ಚರಿತೆಯಾಗೊಲಿದು ಪೇಳಿಸಿದನು ।
ಕಡುಗಲಿಗಳು ಲಾಲಿಪುದು ॥ ೨೮ ॥

Colophon :

ಪೀಠಿಕಾ ಸಂಧಿ ಸಮಾಪ್ತ.

ಸೂಚನೆ : —

ವಸಧಿಕನಕಗಿರಿ ಭೂಭಾಗ ಮೊದಲಾದ ।
ಘನವರ್ಣನೆಯ ಪೇಳುವೆನು ॥

End :

ಅರಿನೃಪಗಜ ಕಂಠೀರವ ಮೈಸೂರ ।
ನರಸರಾಜೇಂದ್ರಚಂದ್ರಮನ ॥
ಚರಿತೆಯ ಲಾಲಿಸಿದರಿಗೆ ಶ್ರೀರಂಗೇಶ ।
ಕರುಣಿಸುತ್ತಿಹ ವರಗಳನು ॥ ೪೮ ॥

ಇದು ಸೋಮವಂಶವಾರಿಧಿ ಪೂರ್ಣಚಂದ್ರನ ।
ಚದುರ ಕಂಠೀರವೇಶ್ವರನ ॥
ಪುದಿದ ಪ್ರತಾಪ ಸಂಪದದೇಳಿಗೆಯ ಸಂಧಿ ।
ಮುದದ ಸುಧರ್ಮಾನುಬಂಧಿ ॥ ೪೯ ॥

Colophon :

ಅಂತು ಸಂಧಿ ೨೬ ಕ್ಕಂ ಪದನು ೨೮೫೫ ಕ್ಕಂ ಮಂಗಳಮಹಾಶ್ರೀ.

(ವಿ-ಸೂ.)—

ಸಮಗ್ರವಾಗಿದೆ. ಶ್ರೀತಾಳಪ್ರತಿ. ಅತ್ಯಂತ ಶಿಥಿಲವಾಗಿದೆ. ಲಿಪಿ ಉತ್ತಮವಾದುದು. ಕಡೆಯಲ್ಲಿ "ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ ೧೫೭೦ ಸಂದ ಸರ್ವಧಾರಿ ಸಂವತ್ಸರದ ಜ್ಯೇಷ್ಠ ಶುದ್ಧ ೧೧ ಚಂದ್ರವಾರದಲ್ಲು ಶ್ರೀಮನ್ಮಹಾದೇವದೇವೋತ್ತಮನಾದ ಶ್ರೀಲಕ್ಷ್ಮೀನರಸಿಂಹನು ಕಂಠೀರವನರಸರಾಜೇಂದ್ರನಿಗೆ ಆಯುರಾರೋಗ್ಯೈಶ್ವರ್ಯಾಭಿವೃದ್ಧಿ-ಅಷ್ಟಪುತ್ರ ಬಹುಧನವನು ಕೊಟ್ಟು ರಕ್ಷಿಸಲಿಯೆಂದು ರಂಗನಾಥಸ್ವಾಮಿಯ ಕೃಪೆಯಿಂದ ಶ್ರೀನಿವಾಸ ಪಂಡಿತರಮಗ ಗೋವಿಂದ ವೈದ್ಯನು ಕಂಠೀರವ ವಿಜ . . . . ಆಚಂ(ದ್ರಾರ್ಕವಾಗಿ) ಭೂಮಿ . . . . (ಮಂಗಳಂ) ಎಂದಿದೆ. ಹೋಗಿರುವ ಭಾಗದಲ್ಲಿ ಸುಮಾರು ೨೫ ಅಕ್ಷರಗಳಿರಬಹುದು.

ಇದು ಸಾಂಗತ್ಯದಲ್ಲಿ ಬರೆದಿದೆ. ಸಂಧಿಗಳು ೨೬. ಪದ್ಯಗಳು, ೨೮೫೫. ಆದಿಯಲ್ಲೊಂದು ಕಂದ ಪದ್ಯವಿದೆ. ಮೈಸೂರು ಮಹಾರಾಜವಂಶದ ರಾಜನೃಪನ ತಮ್ಮನ ಮಗನಾದ ರಣಧೀರಕಂಠೀರವನರಸರಾಜನ (ಕ್ರಿ.ಶ. ೧೬೩೮—೧೬೫೯) ಚರಿತೆಯು ಇದರಲ್ಲಿ ಉಕ್ತವಾಗಿದೆ. ಗ್ರಂಥದಾದಿಯಲ್ಲಿ ರಂಗಧಾಮ (ಪಶ್ಚಿಮ ರಂಗೇಶ) ಸ್ತುತಿಯಿದೆ. ಬಳಿಕ ಲಕ್ಷ್ಮೀನರಸಿಂಹ, ಲಕ್ಷ್ಮೀಕಾಂತ, ಮೈಸೂರ ತ್ರಿಣಯನ, ನಂಜುಂಡೇಶ್ವರ, ವಿಘ್ನೇಶ್ವರ, ವಾಣಿ, ಚಾಮುಂಡೇಶ್ವರಿ ಇವರುಗಳನ್ನು ಕವಿ ಕ್ರಮವಾಗಿ ನುತಿಸಿದ್ದಾನೆ.

ಈ ಗ್ರಂಥವು ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿ ಅಚ್ಚಾಗಿದೆ. ಇದನ್ನು ಗೋವಿಂದ ವೈದ್ಯನು ಬರೆದನೆಂದು ಅದರಲ್ಲಿರುವ "ಸ್ವಸ್ತಿ ಶ್ರೀವಿಜಯಾಭ್ಯುದಯ ಶಾಲಿವಾಹನ ಶಕ ೧೫೭೦ ಸಂದ ಸರ್ವಧಾರಿ ಸಂವತ್ಸರದ ಜ್ಯೇಷ್ಠ ಶುದ್ಧ ೧೧ ಚಂದ್ರವಾರದಲ್ಲು ಶ್ರೀಮನ್ಮಹಾದೇವ ದೇವೋತ್ತಮನಾದ ಶ್ರೀಲಕ್ಷ್ಮೀನರಸಿಂಹನು ಕಂಠೀರವನರಸರಾಜೇಂದ್ರನಿಗೆ ಆಯುರಾರೋಗ್ಯೈಶ್ವರ್ಯಾಭಿವೃದ್ಧ್ಯಷ್ಟಪುತ್ರ ಬಹುಧನವನು ಕೊಟ್ಟು ರಕ್ಷಿಸಲಿಯೆಂದು ರಂಗನಾಥಸ್ವಾಮಿಯ ಕೃಪೆಯಿಂದ ಶ್ರೀನಿವಾಸ ಪಂಡಿತರ ಮಗ ಗೋವಿಂದ ವೈದ್ಯನು ಕಂಠೀರವನರಸರಾಜವಿಜಯವನ್ನು ವಿರಚಿಸಿ ಆಚಂದ್ರಾರ್ಕವಾಗಿ ಭೂಮಿಯೊಳಿರಲಿಯೆಂದು ಭಾರತಿನಂಜನ ಮುಖದಿಂದ ವಾಚಿಸಿ ರಾಜಸ್ಥಾನದಲ್ಲಿ ವಿಸ್ತಾರಪಡಿಸಿದುದು" ಎಂಬೀ ಗದ್ಯದಿಂದ ತಿಳಿಯುತ್ತದೆ. ಅಚ್ಚಾದ ಪುಸ್ತಕದಲ್ಲಿ "ಅಬ್ಧಿಗಡಿಮಿತಿ" ಎಂದು ಆರಂಭವಾಗುವ ಪದ್ಯವೊಂದಿದೆ. ಅದು ಇದರಲ್ಲಿಲ್ಲ.

'ತರುಣಿನೇತ್ರೋಜ್ವಲ * * ನರಸರಾಜೇಂದ್ರನ ಚರಿತೆಯನೊರೆದ ಭಾರತಿನಂಜ ನೊಲಿದು' ಎಂಬ ಪೀಠಿಕಾಸಂಧಿಯ ಪದ್ಯದಿಂದ ಕವಿ ಭಾರತಿನಂಜನೆಂದು ಹೇಳಬಹುದಾಗಿದೆ. ಮೈಸೂರಿನಲ್ಲಿ ಮುದ್ರಿತವಾದ ಪುಸ್ತಕದಿಂದ ಗೋವಿಂದ ವೈದ್ಯನೆಂದು ಸ್ಪಷ್ಟವಾಗುವುದು. ಕವಿ ಚರಿತ್ರಕಾರರು ಕವಿ ಭಾರತಿನಂಜ (ಸ. ೧೬೪೮) ನೆಂದು ಹೇಳಿ ಈ ಗ್ರಂಥದ ಒಂದು ಪ್ರತಿಯಲ್ಲಿ 'ಸ್ವಸ್ತಿ ಶ್ರೀವಿಜಯಾಭ್ಯುದಯ * * ವಿಸ್ತಾರಪಡಿಸಿದುದು' ಎಂಬ ಮೇಲೆ ಕೊಟ್ಟಿರುವ ಗದ್ಯವಿದೆಯೆಂದು ಉದಾಹರಿಸಿ (ಕವಿಚರಿತ್ರೆ ಸಂಪುಟ ೨) ಅದರಿಂದ ಗ್ರಂಥವು ೧೬೪೮ ರಲ್ಲಿ ಹುಟ್ಟಿತೆಂದೂ ಗ್ರಂಥಕರ್ತನು ಗೋವಿಂದವೈದ್ಯನೆಂದೂ ವ್ಯಕ್ತವಾಗುತ್ತದೆ ಯೆಂದು ಹೇಳುತ್ತಾರೆ.

No. 885. ಕಂಠೀರವನರಸರಾಜ ವಿಜಯ by ಭಾರತಿನಂಜ.

KAṆṬHĪRAVANARASARĀJAVIJAYA BY BHĀRATINAÑJA.

Substance, Paper. Size, 10¼ × 9 1/16 inches. Pages, 609. Lines, 20 on a page. Extent, 4,600 granthas. Character, Kannaḍa. Condition, good. Appearance, new.

Restored in 1915–16 from the Ms. described above (No. 884).

Complete in 26 sandhis.

(ವಿ-ವಿ.)—

ಸಮಗ್ರವಾಗಿದೆ. ಕಾಗದದ ಪ್ರತಿ. ಇದು ಹಿಂದಣ ೮೮೪ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೃತಿಯಾಗಿದೆ. ಗ್ರಂಥಪಾತವುಂಟು.

No. 886. ಕಂಠೀರವನರಸರಾಜವಿಜಯ by ಭಾರತಿನಂಜ.

KAṆṬHĪRAVANARASARĀJAVIJAYA BY BHĀRATINAÑJA.

Substance, Palm-leaf. Size, 16½ × 1⅛ inches. Pages, 249. Lines, 6—8 on a page. Extent, 4,600 granthas. Character, Kannaḍa. Condition, much injured. Appearance, old. Mode of writing, good.

Complete in 26 sandhis. All the leaves are broken on one side.

Same work as that described above.

Date of transcription:—Friday, the tenth day of the dark fortnight of the lunar, month Śrāvaṇa of the year Khara in the Śaka year 1573 corresponding to 1651 A.D.

Name of the scribe :—*Padmanābha*, son of *Padumaṇayya* of *Kalaśatavādi*.

(ವಿ.ವಿ.) —

ಸಮಗ್ರವಾಗಿದೆ. ಓಲೆಗಳ ಒಂದು ಕೊನೆಯನ್ನು ಹುಳುತಿಂದಿದೆ. ಅಕ್ಷರಗಳು ಚೆನ್ನಾಗಿವೆ. ಆದಿಯಲ್ಲಿ ಸಂಧಿಗಳ ಹೆಸರು, ಓಲೆಗಳ ಸಂಖ್ಯೆಯನ್ನು ಸೂಚಿಸುವ ಓಲೆಯೊಂದಿದೆ. ಅಂತ್ಯದಲ್ಲಿ

“ ತಪ್ಪಂ ಬರೆದಾತಂ ಜಡ ।
ನಪ್ಪಂ ತಾನೆಂದು ಜರಿದು ಬಯ್ಯಲ್ವೇಡಿರ್ ॥
ತಪ್ಪಕ್ಕೆ ಶುದ್ಧಮಕ್ಕುಂ । (?)
ತಪ್ಪಿಲ್ಲದೆ ಪ್ರತಿಸಮಾನವಾಗಿಯು ಬರೆದೆಂ ॥

ಸ್ವಸ್ತಿ ಶ್ರೀವಿಜಯಾಭ್ಯುದಯ ಶಾಲಿವಾಹನ ಶಕ ವರ್ಷ ೧೫೭೩ ಸಂದ ಖರಸಂವತ್ಸರದ ಶ್ರಾವಣ ಬ ೧೦ ಶುಕ್ರವಾರದಲ್ಲು ಶ್ರೀಮನ್ಮಹಾದೇವದೇವೋತ್ತಮನಾದ ಶ್ರೀಲಕ್ಷ್ಮೀನರಸಿಂಹ . . . ಮೈಸೂರ ಕಂಠೀರವನರಸರಾ[ಜೊ] (ಜವ್ರೊ) ಡೆಯರವ(ರಿಗೆ) ಆಯುರಾರೋಗ್ಯೈಶ್ವರ್ಯಾಭಿವೃದ್ಧ್ಯಷ್ಟ ಪುತ್ರಬಹುಧನವನ್ನೂ ಅನೇಕ ರಾಜ್ಯಹನ್ನೂ ಕೊಟ್ಟು ರಕ್ಷಿಸಲಿಯೆಂದು ಶ್ರೀಮದಾಧೀ . . . ಪೆಯಿಂದ ಕಲಶತವಾಡಿಯ ಪದುಮಣಯ್ಯಗಳ ಮಗ ಪದ್ಮನಾಭನು ಬರೆದ ಕಂಠೀರವೇಂದ್ರನ ಚರಿತೆಯು ಆ ಚಂದ್ರಾರ್ಕವಾಗಿ ವರ್ತಿಸಲಿ. ಈ ಚರಿತೆಯನು ಆರೊಬ್ಬರೋದಿ . . . ಕೇಳುಸಿದರೂ ಆ ನರರೂಪಿ ನರಸಿಂಹಮೂರ್ತಿಯಾದ ಕಂಠೀರವ ನರಸರಾಜೇಂದ್ರ ಚಂದ್ರಮನು ಸಕಲಸೌಭಾಗ್ಯವನು ಕೊಟ್ಟು ರಕ್ಷಿಸುವನು. ಆತನಿಗೆ ಸಮಸ್ತ ಶತ್ರುಗಳೂ ಪಾದಾಕ್ರಾಂತರಹರು-ಯೆಂಬುದು . . . . . ” ಎಂದಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ

No. 887. ಕಂಠೀರವನರಸರಾಜವಿಜಯ by ಭಾರತಿ ನಂಜ-

KAṆṬHĪRAVANARASARĀJAVIJAYA BY BHĀRATI NAÑJA.

Substance, Palm-leaf. Size, 16¾ × 1¼ inches. Pages, 245. Lines, 5 to 7 on a page. Extent 3,200 granthas. Character, Kannada. Condition, very much injured. Appearance, old. Mode of writing, good.

Incomplete.

Same work as that described above.

(ವಿ.ವಿ.)—

ಅಸಮಗ್ರ. ಪೀಠಿಕಾ ಸಂಧಿಯಿಂದ ೪ ನೆಯ ಸಂಧಿಯ ೯೫ ನೆಯ ‘ ಭೀಮನ ಬಲದಿಂದ ’ ಎಂಬ ಪದ್ಯದ ವರೆಗೂ, ೯ ನೆಯ ಸಂಧಿಯಿಂದ ೨೨ ನೆಯ ಸಂಧಿಯ ೮೫ ನೆಯ “ ದೊರೆರಾಯ ನರಸರಾಜೇಂದ್ರ ” ಎಂಬ ಪದ್ಯದ ವರೆಗೂ ಇದೆ. ಓಲೆಗಳು ೧—೧೯, ೬೬—೧೬೯ ಇವೆ. ೧೪೧ ನೆಯ ಓಲೆಯಲ್ಲಿ ಒಂದೇ ಕಡೆ ಬರೆದಿದೆ. ಅತ್ಯಂತ ಶಿಥಿಲವಾದ ಪ್ರತಿ. ಗ್ರಂಥಪಾತವುಂಟು. ಲಿಪಿ ಉತ್ತಮವಾದುದು. ಓಲೆಗಳನ್ನು ಹೆಚ್ಚಾಗಿ ಹುಳು ತಿಂದಿದೆ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 888. ಕಂಠೀರವನರಸರಾಜವಿಜಯ by ಭಾರತಿ ನಂಜ-

KAṆṬHĪRAVANARASARĀJAVIJAYA BY BHĀRATI NAÑJA.

Substance, Palm-leaf. Size, 14 5/8 × 1¼ inches. Pages 244. Lines, 6 to 7 on a page: Extent, 4,150 granthas. Character, Kannada. Condition, very much injured. Appearance, old. Mode of writing, good.

Incomplete ; contains from the 28th stanza of the 4th sandhi.

Same work as that described above.

(ವಿ.ವಿ.)—

ಅಸಮಗ್ರ. ೪ ನೆಯ ಸಂಧಿಯ ೨೮ ನೆಯ ಪದ್ಯದಿಂದ ೨೬ ನೆಯ ಸಂಧಿಯ ೨ ನೆಯ ಪದ್ಯದ ವರೆಗಿದೆ. ನಡುವೆ ಐದಾರು ಓಲೆಗಳು ಹೋಗಿವೆ. ಇದರ ೪ ನೆಯ ಸಂಧಿಯ ೨೮ ನೆಯ ಪದ್ಯವು ಮುದ್ರಿತ ಪುಸ್ತಕದಲ್ಲಿ ೧೪ ನೆಯ ಪದ್ಯವಾಗಿದೆ. ಇದು ಅತ್ಯಂತ ಶಿಥಿಲವಾದ ಪ್ರತಿ. ಅನೇಕ ಓಲೆಗಳು ಮುರಿದಿವೆ; ಹುಳು ಕೊರೆದು ಜೀರ್ಣವಾಗಿವೆ.

ಇದು ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 889. ಕಪೋತವಾಕ್ಯ by ನಂಜ-
KAPŌTAVĀKYA BY NAÑJA.

Substance, Palm-leaf. Size, 9¼ × 1$\frac{11}{16}$ inches. Pages, 33. Lines, 6 to 7 on a page. Extent, 200 granthas. Character, Kannada. Condition, injured. Appearance, old. Mode of writing, fair .

Complete.

Describes the puranic story of the two doves (couples) sacrificing their lives for the sake of a hunter. In Kavicaritre it is stated that the author is one Nañja who lived in about 1700 A.D. and that he is different from Nañja the author of Kanṭhīravanarasarājavijaya and Nañja of Kapōtavākya Yakṣagāna.

Beginning :

ಸಾಂಗತ್ಯ ॥ ಗುರುವ ನೆನೆದು ಪರಶಿವನ ಕೊಂಡಾಡುವೆ ।
ಹರಶರಣರಿಗೆ ವಂದಿಸುವೆ ॥
ಪರಮ ಪಾವನಮೂರ್ತಿ ಗುರು ಸಿದ್ಧವೀರನ ।
ಚರಣವನಾ ಬಲಗೊಂಬೆ ॥ ೧ ॥

ಊರಿಗೆ ಪಾಯಸಗಾರಿಗೆ ಛತ್ರಗಳ ।
ಮೂರಾರಿ ಶರಣರಿಗಿತ್ತು ॥
ಈ ರಾಜ್ಯ ಶಿವರಾ . . ಸೂರೆಗೊಂಡಿ[ಯ] (ಹ) ನೊಬ್ಬ ।
ಕೋರಣ್ಯದಯ್ಯಗೆ ಶರಣು ॥ ೨ ॥

ಶರಣು ಶ್ರೀಗುರುವಿಗೆ ಶರಣು ಶ್ರೀಹರನಿಗೆ ॥
ಶರಣು ಶ್ರೀ ಬಸವ ರಾಜನಿಗೆ ॥
ಶರಣು ಮಡಿವಾಳನಿಗೆ ಶರಣು ಅಪ್ಪಣ್ಣನಿಗೆ ।
ಶರಣು ಶ್ರೀ ಪ್ರಭುರಾಯ ನಡಿಗೆ ॥ ೩ ॥

* * *

ಧರೆಯ ಮೇಲಿರುವಂಥ ತರುಗಳೆಲ್ಲವು ಬಂದು ।
ಪರಪುರುಷಾರ್ಥಕೆ . . . ಂದು ॥
ನರಜನ್ಮಕೆ ಬಂದು ನರಕಿಯಾಗದ ಮುನ್ನ ।
ಪರಪುರುಷಾರ್ಥ ಕಥೆಗೇಳು ॥ ೭ ॥

ಹರನ ಕೈಲಾಸದಿಂ ಧರೆಗಿಳಿದು ಕಪೋತ- ।
ಯುರವಮಾಲೆಯೆಂಬ ಪರ್ವತಕೆ ॥
ಸರವಾರ (ಸರೋವರ ?) ದೊಳಗಿಹ ಪಕ್ಷಿಜಾತವ ಕಂಡು ।
ಹರುಷದಿ ಕೂಡಿ ಮಾತಾಡಿ ॥ ೮ ॥

ಏನು ಕಾರಣ ನೀವೀ ಕಾನನಕೆ ಬಂದಿರಿ ।
ಯೇನು ಕಾರ್ಯವು ನಿಮಗಿಲ್ಲ ॥
ಊನವಿಲ್ಲದೆ ಬೇಗ ಹೇಳೆಂದು ಕೇಳಲು ಸು- ।
ಜ್ಞಾನದಿಂದಲಿ ಪಕ್ಷಿ ನುಡಿಯು ॥ ೯ ॥

ಬಲ್ಲತನದಿ ಬೇಗ ಬಂದೆವು ನಾವೀಗ ।
ಮಲ್ಲಿಕಾರ್ಜುನ ಕೃಪೆವಿಡಿದು ॥
ಇಲ್ಲಿ ಕಂಡೆವು ನಿಮ್ಮಯೆಲ್ಲರ ಸಂದೋಹ ।
ಎಲ್ಲಿ ನೋಡಲು ನೀರೆಯಾಸೆಯು ॥ ೧೦ ॥

ಯಾವ ದೇಶಗಳಿಂದ ಹವಣಿಸಿ ಬಂದಿರಿ
ಭಾವದಿ ಹೇಳೆಮಗೆನಲು ॥
ನಾವೀಗ ದೇವಲೋಕದಿಂದಯಿಳಿದೆವು ।
ಭೂವಳ(ಯ)ಗಳ ನೋಡಲಿಕ್ಕೆ ॥ ೧೧ ॥

ನಿಮ್ಮ ಲೋಕದೊಳಹ ಧರ್ಮವ ಪೇಳೆಂದು ।
ಉಮ್ಮಯುದಲ್ಲಿ ಬೆಸಗೊಳಲು ॥
ಒಮ್ಮನವಾಗಿ ಪೇಳಲು ಕಪೋತಕನು ।
ಗಮ್ಮನೆ ಶಿವನಿಹ ಸ್ಥಳವ ॥ ೧೨ ॥

ಹರನೆಡಬಲದಲಿ ಹರಿಯಜಮುನಿಗಳು
ಯಿರುವರು ಭರವಸದಿಂದ ॥
ಧುರಧೀರ ಮಡಿವಾಳ ಸುರರು ದಿಕ್ಪಾಲರು ।
ಯಿರುವರು ಶಿವನೆಡಬಲದಿ ॥ ೧೩ ॥

End :

ಪರಹಿತದಿಂದಲಿ ದೊರಕಿತು ಶಿವಲೋಕ ।
ಪರಪುರುಷಾರ್ಥವ ಮಾಡೆ ॥
ಕರೆದು ಕೊಡುವರಿಗಾ ಪರಮಸದ್ಗತಿಯನು
ವರಗುರುಮೂರ್ತಿ ಕರುಣದಲಿ ॥ ೧೮ ॥

ಈ ಕಥೆಯನು ಯೇಕಚಿತ್ತದಿಂದಲಿ ಕೇಳೆ ।
ಸಾಕಾರವಾಗುವ ಶಿವನು ।
ಬೇಕಾದ ಪದವಿಯನಿತ್ತು ರಕ್ಷಿಪ ಚಂದ್ರ ।
ಶೇಖರ ಶಿವಲಿಂಗಕೆ ಶರಣು ॥ ೧೯ ॥

Colophon :

ಕಪೋತಪಕ್ಷಿಯ [ಚರಿತ್ರೆಯು] ಕಥೆ ಸಂಪೂರ್ಣಂ.

॥ ಮಂಗಳಾರ್ತಿ ಪದ ॥

ಪುಲಿಚರ್ಮವನುಟ್ಟು ಪುರಹರಗೆ [ಒಲಿದು] ಭಕ್ತಗೆ ।
(ಬಲಿಯ) ಬಾಗಿಲ ಕಾಯಿದಗೆ ॥
ಅಲರುವಿಲ್ಲನ ಮಡದಿ ಬೂದಿಯನೆಸಗಿದಾ ।
ಲಲನೆಯ ಶಿರದೊಳಿಟ್ಟ ಶ್ರೀಧರಗೆ ॥ (?) ೧ ॥

ಶೋಭನವೇ ನಿತ್ಯಶೋಭನವೇ ॥

ಮಂಗಳ ಮಹಿಮಗೆ ಮಾನಿತಗೆ ।
ಮಂಗಳಮಿತ್ರನ ಪಟುರುಚಿಗೆ ॥
ತುಂಗಪರಮ ಶಿವಲಿಂಗೇಶ್ವರನಿಗೆ ।
ಪೊಂಗುವಲಾವಲಿವ ರಮಣನಿಗೆ ॥ ೧ ॥

ಶೋಭನವೇ ನಿತ್ಯ ಶೋಭನವೇ ॥

ಧರೆಯೊಳು . . ನ್ಕಾಲಗಿರಿವಾಸಗೆ ।
ಕರುಣಿಸಿ ಕಾಮಗ . . ತೋದ್ಧಾರಗೆ ॥ (?)
ಸ್ಥಿರ ಸಾಮ್ರಾಜ್ಯ ಸಂಪದವಿತ್ತು ಪೊರೆವ ।
ವರಚಂಪಕ ಸಿದ್ಧಲಿಂಗೇಶಗೆ ॥ ೨ ॥

ಶೋಭನವೋ ನಿತ್ಯ ಶೋಭನವೋ ॥

ಮಂಗಳಾರತಿ ಸಮಾಪ್ತಂ ॥

(ವಿ-ವಿ.)—

ಸಮಗ್ರ. ಶ್ರೀ ತಾಳೆ ಪ್ರತಿ. ಶಿಥಿಲವಾಗಿದೆ. ಲಿಪಿ ಚೆನ್ನಾಗಿದೆ. ಪುಸ್ತಕದ ಆದಿಯಲ್ಲಿ "ಕೊಟ್ಟದ ವೀರಭದ್ರಾಯ ನಮಃ" ಎಂದಿದೆ. ಈ "ಕೊಟ್ಟ" ಎಂಬುದು ಕೊಟ್ಟೂರಾಗಿರಬಹುದು.

ಇದು ಸಾಂಗತ್ಯದಲ್ಲಿ ಬರೆದಿದೆ. ಪದ್ಯಗಳು ೧೧೯. ದಂಪತಿಗಳಾದ ಎರಡು ಪಾರಿವಾಳ ಪಕ್ಷಿಗಳು ತಮಗೆ ಅಪಕಾರವಮಾಡಿದ ಒಬ್ಬ ಬೇಡನಿಗೆ ಉಪಕಾರವನ್ನೆಸಗುವ ಸಲುವಾಗಿ ತಮ್ಮ ಪ್ರಾಣಗಳನ್ನೇ ಅರ್ಪಿಸಿದ ವಿಚಿತ್ರ ಕಥೆಯು ಇದರಲ್ಲಿ ಉಕ್ತವಾಗಿದೆ. ಪಕ್ಷಿಸಾಮಾನ್ಯಗಳ ಈ ಕತೆಯಿಂದ ಲೋಕವು ಎಂತಹವಾದ ಉತ್ತಮವಾದ ಧರ್ಮನೀತಿಗಳನ್ನು ಕಲಿಯಬಹುದು ಎಂಬುದನ್ನು ಇದರಲ್ಲಿ ಮನಗಾಣಬಹುದಾಗಿದೆ. ಇದು ಭಾರತದಲ್ಲಿ ಹೇಳಲ್ಪಟ್ಟಿದೆ ಕವಿಯು ಅದನ್ನೇ ಸಾಂಗತ್ಯದಲ್ಲಿ ಕನ್ನಡ ಭಾಷೆಯಿಂದ ಬರೆದಂತೆ ತೋರುತ್ತದೆ.

ಗ್ರಂಥದಾದಿಯಲ್ಲಿ ಶಿವ, ಗುರು ಸಿದ್ಧವೀರ ಇವರ ಸ್ತುತಿಯಿದೆ. ತರುವಾಯ ಕವಿ ಕೋರಣ್ಯದಯ್ಯ, ಬಸವ, ಮಡಿವಳ, ಅಪ್ಪಣ್ಣ, ಪ್ರಭುರಾಜ, ಕೊಟ್ಟೂರ ವಿರೂಪಾಕ್ಷ, ಕಲ್ಯಾಣದಯ್ಯ, ಆರೆಮಲೆ ಸಿದ್ಧಮುನಿ ಇವರನ್ನು ಹೊಗಳಿ ಕಥೆಯನ್ನಾರಂಭಿಸಿದ್ದಾನೆ.

ಕವಿಚರಿತ್ರೆಯಲ್ಲಿ "ನಂಜ. ಸು 1700. ಈತನು ಕಪೋತವಾಕ್ಯವನ್ನು ಬರೆದಿದ್ದಾನೆ. ಇವನು ವೀರಶೈವ ಕವಿ. ಇವನ ಗುರು ಸಿದ್ಧವೀರ ಎಂದು ತೋರುತ್ತದೆ. ಗ್ರಂಥದ ಕೊನೆಯಲ್ಲಿ ಗುರುವರನಹ ಚಂಪಕ ಸಿದ್ಧಲಿಂಗೇಶನನ್ನು ಸ್ಮರಿಸಿದ್ದಾನೆ. ಕಂಠೀರವನರಸರಾಜವಿಜಯವನ್ನು ಬರೆದ ಭಾರತಿನಂಜನೇ ಈ ಗ್ರಂಥವನ್ನು ಬರೆದಿದ್ದಾನೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಭಾರತಿನಂಜನು ವೀರಶೈವ ಕವಿಯಲ್ಲವೆಂದು ತೋರುತ್ತದೆ ಯಕ್ಷಗಾನರೂಪವಾದ ಕಪೋತವಾಕ್ಯವನ್ನು ಬರೆದಿರುವ ನಂಜಯ್ಯನೂ ವೀರಶೈವ ಕವಿಯಂತೆ ಕಾಣುವುದಿಲ್ಲ. ಪ್ರಕೃತ ಕವಿ ತತ್ವವಿದ್ಯೆಯಭಿಜ್ಞನೆಂದು ತೋರುತ್ತದೆ. ಇವನ ಕಾಲವು ಸುಮಾರು 1700 ಆಗಿರಬಹುದು" ಎಂದಿದೆ.

No. 890. ಕಾವ್ಯಸಾರ by ಅಭಿನವವಾದಿ ವಿದ್ಯಾನಂದ-
KĀVYASĀRA BY ABHINAVAVĀDI VIDYĀNANDA.

Substance, Sritāla. Size $9\frac{1}{16} \times 1\frac{1}{4}$ inches. Pages, 158. Lines, 7 to 8 on a page. **Extent**, 1,800 granthas. Character, Kannada. Condition, very much injured. Appearance, old. Mode of writing, good.

Begins on fol. 5a. The other works herein are :—

(1) *Ausadha* 1a, (2) *Sobagina sōne* 83a, (3) *Saundarapurāṇa* 90a.

Incomplete.

Contains up to the "Kumārōdyavarṇana". It illustrates the eighteen principle characteristics of a Mahākāvya and the several Bhāvās and **vibhāvās**. The author has taken appropriate stanzas from various other works. It is **stated in** the Karṇāṭakakavicaritre that the author lived in the 16th century.

Beginning :

(ಕಾವ್ಯಕ್ಕೆ ಅಂಗಗಳಾದ)

॥ ಮತ್ತೇಭವಿಕ್ರೀಡಿತ ॥

ಪುರವಾರಾಸಿನಗರರ್ತು ಚಂದ್ರತಪನೋದ್ಯಾನಾಂಬುಕೇಳೀಸುರಾ- ।
ಸುರತಕ್ರೀಡನ ವಿಪ್ರಲಂಭಲಲನಾಕಲ್ಯಾಣಪುತ್ರೋದಯಾ- ॥
ಸ್ಫುರಿತಾಳೋಚನಮಂತ್ರದೂತಗಮನಾಜಿಸ್ತ್ರೀಸುಖವ್ಯಾಪ್ತಿಗ- ।
ಳ್ದೊರೆಕೊಳ್ಗುಂ ಕವಿವರ್ಣನಕ್ಕೆ ಪದಿನೆಂಟಂಗಂ ಮಹಾಕಾವ್ಯದೊಳ್ ॥

॥ ದೇವತಾಸ್ತುತಿ ॥

॥ ಸ್ರಗ್ಧರೆ ॥

ಎನ್ನೀ ಕಾವ್ಯಕ್ಕೆ ನಿರ್ವಿಘ್ನದಿನತುಳನವೀನಾರ್ಥ ವಾಕ್ಯಪ್ರಸನ್ನೀ- ।
ತ್ಪನ್ನಾಲಂಕಾರವಂ ಮಾಡುಗೆ ವಿಪುಳಕಪೋಳಸ್ಥಳಾಂತಸ್ಥಳೀಸಂ ॥
ಭಿನ್ನೋದ್ಯದ್ದಾನಧಾರಾ ಪ್ರಬಳಪರಿಮಳಾಸಕ್ತ ಭೃಂಗಾವಳೀ ಸಂ ।
ಪನ್ನ ಪ್ರೋದ್ಘಾತ ಝುಂಕಾರಿತರವಮುದಿತಾನಂದದೀಶಂಗಣೇಶಂ ॥ ೧ ॥

ಮತ್ತೇಭ ವಿಕ್ರೀಡಿತ.

ಅರಿರೌದ್ರಂ ಕರದೀರ್ಘಮುಲ್ಲಸದಹೀನಾಲಂಕೃತಂ ಮೂರ್ತಿಸಾ- ।
ಕ್ಷರಸೇವ್ಯಂ ನಿಜವಿದ್ಯೆ ವಿಶ್ವವಿನುತಂ ಪಾದಂ ಸದಾಳಿಪ್ರಿಯಂ ॥
ವರದಾನೋನ್ನತ ಭದ್ರಲಕ್ಷಣಗುಣಂ [ಪ] (ಶಾ)ದಾನು ಷಂಗಿತ್ವಮಾ- ।
ಗಿರೆ ಪೆಂಪಚ್ಚರಿಯಾದ ದೇವಗಣಪಂ ರಕ್ಷಿಕ್ಕೆ ಭೂತಕ್ರಮಂ ॥ ೨ ॥
ಕೆಸಱಿನೊಳ್ ಪುಟ್ಟಿದುದಂತುಮಲ್ಲದೆ ರಜಸ್ಸಂಲೀಢಮೆಂದುಂ ಜಡಾ- ।
ವಸಥಂ ಚೀ ಮಧುಪಪ್ರಸಂಗಿ ಖರದಂಡಂ ಮತ್ತಮುತ್ತಬ್ಜಮುಂ ॥
ಬಿಸುಟ [ತ್ಯಂತೋತ್ಕೃಷ್ಟಮೆಂದು] (ತ್ಯಾತ್ರಮಮಿಂತುಟೆಂದು) ಪಿರಿದುಂ ಸಂತೋಷದಿಂ ವಾ
[ಣಿಮುಂ ।
ದು ಸಮಂತ್ರಿರ್ಕೆ ನವೀನ ಸೌರಭದವೋಲ್ ಜಿಹ್ವಾಗ್ರದೊಳ್ ರುದ್ರನಾ ॥ ೩ ॥

ಕಂದ ॥ ಚತುರ ಚತುರ್ಮುಖನೆಲ್ಲಾ ।
ಕೃತಿಗಳನೊಲವಿಂದೆ ಕಲ್ಪಭಿನವವಿವಾಹೋ- ॥
ನ್ನತಿಯೊ ಕೃತಿಯೆಂದೆನೆ ಭಾ- ।
ರತಿಯೆನಗನು ಕೂಲೆಯಾಗದಿರಲಮ್ಮುವಳೀ ॥ ೪ ॥

॥ ಶಾರ್ದೂಲ ವಿಕ್ರೀಡಿತ ॥

ಶ್ರೀರಾಮಾನಚಿ ಕೌಸ್ತುಭದ್ಯುತಿಕರತ್ಪುಷ್ಪಾಂಜಲಿಕ್ಷೇಪವ ।
ಕ್ಷೋರಂಗ ಸ್ಥಿತಿಯಾದ ಪಾದನಖರೋಚಿರ್ಗಂಗೆ ಪೃಥ್ವೀಶಕೋ ॥
ಟೀರವ್ಯಾಪ್ತಿಗೆ ಸಂದ ಚಕ್ರರವಿ ದೈತ್ಯಧ್ವಾಂತಮಂ ಗೆಲ್ದ ಭೂ- ।
ಭಾರಚ್ಛೇದವಿನೋದಿ ಕೃಷ್ಣನೆಮಗೀಗಾನಂದ ಸಂದೋಹಮಂ ॥ ೫ ॥

॥ ಉತ್ಪಲಮಾಲೆ ॥

ಏ ದೊರೆ ಪೆಂಪು ಲಕ್ಷ್ಮಿನಿಜವಲ್ಲಭೆ ಜಾಹ್ನವಿ ತನ್ನ ಪಾದಪ- ।
ದ್ಮೋದಕಮಿಂದ್ರಮುಖ್ಯದಿವಿಜರ್ ಸಪರಿಗ್ರಹರಬ್ಜಜಂ ಸ್ವಕೀ- ॥
ಯೋದರ ಪದ್ಮಯೋನಿ ಭವನಾತ್ಮತನೂಭವ [ನತನುವೆ] (ನೆ) ನಿಪ್ಪದು-
ಗ್ರೋದಧಿತಲ್ಪನಂ ಪರರಭಿಸ್ತುತಿಗೆಯ್ವುದು ಧಾರ್ಷ್ಟ್ಯಮಲ್ಲವೇ ॥ ೬ ॥

॥ ಸ್ರಗ್ಧರೆ ॥

ಗೌರೀಪಾದಾಂಗುಲೀ ಕೋರಕಮೆಸೆವಕರಂ ಪಲ್ಲವಂ ಪುಷ್ಪ (ವೃಂತಾ- ।
ಕಾರಂ) ಮಂದಸ್ಮಿ(ತಂ) ಶಾಖೆಗಳಮರ್ದ ಭುಜಾನೀಕಮಾಸ್ಯಂ (ಫಲಂ ಶ್ರೀ) ॥
ಸಾರಂ ತಾನಾದ ಪಂಪಾಪುರದರಸ ವಿರೂಪಾಕ್ಷಕಲ್ಪಾಂಘ್ರಿಪಂ ವಿ- ।
ಸ್ತಾರಂಬೆತ್ತೀಗೆ ಸದ್ಭಕ್ತಿಯುಸೆಪುಗವೃತ ಪ್ರಾಯೆಯುಂ ಪ್ರೀತಿಯಿಂದಂ ॥ ೭ ॥

ಶ್ರೀಮಚ್ಛೈಲೇಂದ್ರ ಪುತ್ರೀಗುರುತರಸುರತಕ್ಷೀರ ವಾರಾಶಿಚಂದ್ರಂ ।
ವ್ಯೋಮಕೇಶೇಂದು ಕ್ಷಮಾತ್ಮಾನಲಜಲಪವಮಾನಾಷ್ಟ ಮೂರ್ತಿಪ್ರಸಿದ್ಧಂ ॥
ಪ್ರೇಮಂಬೆತ್ತೀಗೆ ಸದ್ಭಕ್ತಿಯುಮೆಮಗಮರಾನೀಕ ಮಾಣಿಕ್ಯಮೌಳಿ- ॥
ಸ್ತೋಮಾಂಘ್ರಿಜ್ಯೋತಿ ಪಂಪಾಪುರದರಸ ವಿರೂಪಾಕ್ಷನಾನಂದದಿಂದಂ ॥ ೮ ॥

ಚಂ॥ ಘನಕವಿತಾವಿಲಾಸದೊಳ್ ಸಂದ ಮಯೂರನ ರೇಖೆ ಕಾಳಿದಾ- ।
ಸನ ರಸವೃತ್ತಿ ಬಾಣನ ಮೃದೂಕ್ತಿ ಹಲಾಯುಧನಾಶು ಕೇಶಿರಾ- ।
ಜನ ಬಗೆಯುದ್ಭಟಯ್ಯನ ಗಭೀರತೆ ಮಲ್ಲಣಸೇಳ್ಗೆ ಭೋಜರಾ- ।
ಜನ ಘನವೆನ್ನ ಕಾವ್ಯ [ದೊಳ್] (ಕೃತಿಯೊಳ್) ನೆಲಸಿಂ ನೆಲಸಿಕೆ ಸಂತತಂ ॥

End :

ಕಂದ ॥ ಅಪ್ಪಪ್ಪೆಂದೊಡೆ ಬಂದವ-
ನಪ್ಪುವ ಚುಂಬಿಸಿದೊಡೊಡನೆ ಚುಂಬಿಸುವ ಪೊದ- ॥
ಳ್ದೊಪ್ಪ ನುಡಿಯುಡಗ ಮಾಣದೆ ।
ತಪ್ಪುವ ಕಡುಮುದ್ದು ಪೆರ್ಗೆ ಪಡೆದುದು ಮುದಮಂ ॥ ೨೮ ॥

। ಚಂಪಕಮಾಲೆ ॥

ಪರಮಸುಖಾರ್ದ್ರಲೋಚನದಿ ನೀಕ್ಷಿಸಿ ನಂದನನಂ ಸರೋರುಹೋ ।
ದರನನಿದಾರ ಮಾಣಿಕವಿದಾರ ನಿಧಾನವಿದಾರ ಮುದ್ದಿದಾ- ।
ರರಸನಿದಾರ ಬಲ್ಲಹನಿದಾರ ಕರೀಂದ್ರನಿದಾರ ಸಿಂಹಮೆಂ ।
ದಿರದಮರ್ದಪ್ಪಿದಳ್ ಸದೆಪಿನಿಂ ಮೊಲೆವಾಲ್ ತೊಟಿದೆಚ್ಚು ಪಾಯ್ವಿನಂ ॥ ೨೯ ॥

ಘನಕುಚೆಗೋಪಿ ಪಾಲ್ಗಡೆಯುತುಂ ಮನೆವಾಟಿತ್ತಿಗೆ ಪೋಗೆ ಗೆಜ್ಜೆಯಿಂ ।
ದನಿ ನಸು ಪೋರ್ದಂತು ಪರಿತಂದೆಡಗೆಯ್ಯೊಳ್ ತೋಡಿ ಬೆಣ್ಣೆಯುಂ ॥
ತಿನುತಿರೆ ಗೋಪಿ ಕಂಡಲೆಲಿ ಕಳ್ಳತನಂಗಳನಣ್ಣ ಕಂಡೆವಾ-।
ವೆನೆ ಕಡೆವಾಯ ಬೆಣ್ಣೆವೆರಸೊಯ್ಯನೆ ಪಿಂಗುವ ಕೃಷ್ಣನೊಪ್ಪಿದಂ ॥ ೩೦ ॥

॥ ಉತ್ಪಲಮಾಲೆ ॥

ಬಿಂಬಫಲೋಪಮಾನರದನಚ್ಛದಮಂ ನಸುಗಚ್ಚಿದಾದಿ ಮ- ।
ಣ್ದಿಂಬನನಳ್ಕಟಿಂ . . . . . . ಹೂಂಕೃತತರ್ಜನಿಯುಂ ನೊಸಲ್ಗೆತಂ ॥
ದಿಂಬಡದ [ಪ್ಪಿ] (ಪ್ಪಕುಂ ಸಲೆ) ಮುಗುಳ್ನಗೆ ನಕ್ಕು ಗೋಪಿಯುಂ ।
ದಿಂಬಿಸಿ ಸಾರ್ಚಿ [ಸಿ] ಚುಂಬಿಸುವ ಕೃಷ್ಣನ ಮುದ್ದುಕರಂ ಮನೋಹರಂ ॥ ೩೧ ॥

॥ ಚಂಪಕಮಾಲೆ ॥

ಅಳಕದಿ ಮತ್ತಿ(ತ್ತಾ)ಯುಪ್ಪಳಿಯುಗುರ್ನಿಗಳಂ ಕಿರುಗೆಜ್ಜೆ ಬಂದಿಕಂ ।
ಗೊಳಸುವೆಯಂಕೆ ಸಂಕೊಲೆ ಘಳಿಲ್ಲಗದೊಪ್ಪುವ ಘಂಟಿನೇ ವುರಂ ॥
ಪೊಳಪಳವಕ್ತು ತೀರ್ಪ ಕುರಿಯುಣ್ಣೆಯು ಪೆಂಡರವೆಂಬ ಪ್ರೊಂದಿನಾಂ । (?)
ದೊಳಸು[ತ್ತಿರ](ತ) ಬಾಳವಂದದ ತೆರಳ್ಕೆಯಿನಚ್ಯುತನೆಡ್ಡವೊಪ್ಪಿದಂ ॥ ೩೦ ॥

Colophon :

ಇಂತ್ತೀ ಕುಮಾರೋದಯ ವರ್ಣನಂ ಸಮಾಪ್ತಂ ॥

(ವಿ.ವಿ.)—

ಅಸಮಗ್ರ. ಪೀಠಿಕೆಯಿಂದ ಕುಮಾರೋದಯ ವರ್ಣನೆಯ ವರೆಗಿದೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಅಸ್ಪಷ್ಟವಾಗಿದೆ. ಇದರೊಡನೆ ಔಷಧವಿಷಯ, ಸೊಬಗಿನ ಸೋನೆ (ಅಸಮಗ್ರ), ಸೌಂದರಪುರಾಣ (ಅಸಮಗ್ರ)ಗಳೂ ಇವೆ. ಈ ಪುಸ್ತಕವು ಹುಳು ತಿಂದು ಅತಿ ಜೀರ್ಣವಾಗಿದೆ. ಮುಂದಣ ನಂಬರಿನಲ್ಲಿ ವರ್ಣಿತವಾದ ಪುಸ್ತಕವು ಇದರ ಪ್ರತಿಕೃತಿಯಾಗಿದೆ.

ಇದು ಅನೇಕ ಹಳಗನ್ನಡ ಗ್ರಂಥಗಳಿಂದ ವರ್ಣನಾ ಭಾಗಗಳನ್ನು ಶೇಖರಿಸಿ ಬರೆದ ಗ್ರಂಥವು. ಮಹಾಕಾವ್ಯದಲ್ಲಿರಬೇಕಾದ ೧೮ ಅಂಗಗಳೂ ಇದರಲ್ಲಿರುವುದಾಗಿ ಗೊತ್ತಾಗುತ್ತದೆ. ಗ್ರಂಥದಾದಿಯಲ್ಲಿರಬೇಕಾದ ದೇವತಾಸ್ತುತಿ ಮುಂತಾದುವುಗಳೂ ಇದರಲ್ಲಿ ಇತರ ಗ್ರಂಥಗಳಿಂದ ಸಂಗ್ರಹೀತವಾದುವುಗಳೇ ಆಗಿವೆ.

ಇದರಲ್ಲಿ ಕವಿಯ ಹೆಸರನ್ನು ಹೇಳಿಲ್ಲ. ಈ ಗ್ರಂಥವು ಮೈಸೂರು ಕಾವ್ಯಮಂಜರೀ ಗ್ರಂಥಮಾಲೆಯಲ್ಲಿ "ಅಭಿನವವಾದಿ ವಿದ್ಯಾನಂದ ಸಂಕಲಿತಂ ಕಾವ್ಯಸಾರಂ" ಎಂಬ ಹೆಸರಿನಿಂದ ಅಚ್ಚಾಗಿದೆ. ಅಭಿನವವಾದಿ ವಿದ್ಯಾನಂದನು ಜೈನಕವಿ ೧೫೩೩ ರಲ್ಲಿದ್ದವನು. ಭಲ್ಲಾತಕಿಯೆಂಬ ಅಪರನಾಮಧೇಯವುಳ್ಳ ಗೇರುಸೊಪ್ಪೆಯು ಈತನ ಸ್ಥಳವಾಗಿರಬಹುದು. ಎಂದು ಕವಿಚರಿತ್ರಕಾರರು ಹೇಳುತ್ತಾರೆ. ಅಚ್ಚು ಪುಸ್ತಕದಲ್ಲಿ ಈತನು ಜೈನನೆಂದೂ ೧೫ ನೆಯ ಶತಮಾನದ ಆದಿಭಾಗದಲ್ಲಿದ್ದ ಮಧುರನಿಗಿಂತ ಈಚಿನವನೆಂದೂ ಹೇಳಿದೆ. ಕವಿಚರಿತ್ರೆ ಮತ್ತು ಅಚ್ಚು ಪುಸ್ತಕಗಳಲ್ಲಿ ಈ ಗ್ರಂಥವು ೪೫ ಅಧ್ಯಾಯಗಳನ್ನೂ ೧೧೪೩ ಪದ್ಯಗಳನ್ನೂ ಉಳ್ಳುದೆಂದು ಹೇಳಿದೆ. ಇದರಲ್ಲಿ ಹೀಗಿದ್ದಂತೆ ತೋರುವುದಿಲ್ಲ. ಮುದ್ರಿತ ಪುಸ್ತಕವನ್ನೂ ಇದನ್ನೂ ಹೋಲಿಸಿ ನೋಡಿದರೆ ಅದಕ್ಕಿಂತಲೂ ಇದರಲ್ಲಿ ಕೆಲವೆಡೆ ವರ್ಣನೆಗಳಲ್ಲಿ ಹೆಚ್ಚು ಪದ್ಯಗಳು ಇರುವುವು. ಮತ್ತು ಇದರಲ್ಲಿಲ್ಲದಂತಹ ಕೆಲವು ಪದ್ಯಗಳನ್ನು ಅದರಲ್ಲಿಯೂ ಕಾಣಬಹುದು. ೧೦—೧೪ ಶತಮಾನಗಳ ವರೆಗಿದ್ದ ಆದರ್ಶ ಕವಿಗಳ ಗ್ರಂಥಗಳಲ್ಲಿರುವ ಪದ್ಯಗಳು ಇದರಲ್ಲಿ ಸಂಕಲಿತವಾಗಿವೆ ಯೆನ್ನಬಹುದು.

No. 891. ಕಾವ್ಯಸಾರ by ಅಭಿನವವಾದಿ ವಿದ್ಯಾನಂದ- KĀVYASĀRA BY ABHINAVAVĀDIVIDYĀNANDA.

Substance, Paper. Size $10\frac{1}{4} \times 9\frac{1}{8}$ inches. Pages, 124. Lines, 20 on a page. **Extent,** 1,800 granthas. Character, Kannaḍa. Condition, fair. Appearance, new.

Restored in 1932-33 from the Ms. described above (No. 890).

Begins on page 1. The other works herein are :—

(1) *Sobagina sōne* 127—140, (2) *Soundarapurāṇa* 124—127 ***and*** 140—146 (3) *Auṣadha* 147 and 148.

Incomplete.

(ವಿ.ವಿ.)—

ಅಸಮಗ್ರ. ಇದು ಹಿಂದಣ ೪೯೦ ನೆಯ ನಂಬರಿನ ಪ್ರತಿಯ ಪ್ರತಿಕೃತಿಯಾಗಿದೆ. ಇದರೊಡನೆ ಸೊಬಗಿನಸೋನೆ, ಸೌಂದರಪುರಾಣ, ಔಷಧ ಇವ್ರೂ ಇವೆ.

No. 892. ಕುಮಾರರಾಮನ ಕಥೆ by ನಂಜುಂಡ-
KUMĀRARĀMANA KATHE BY NAÑJUṆḌA.

Substance, Śritāla. **Size** 13 $\frac{3}{16}$ × 1 $\frac{11}{16}$ inches. **Pages,** 559. **Lines,** 8-10 on a page. **Extent,** 9,500 granthas. **Character,** Kannada. **Condition,** slightly injured. **Appearance,** old. **Mode of writing**, good.

Complete in 12 Āśvāsas with 47 sandhis. Written in Sāṅgatya metre, describes the story of Kumārarāma, son of *Kampanṛpa* or *Kampilarāya,* king of Karṇātaka. The story in brief is as follows :—

While Kumārarāma was playing with a ball, it fell into the palace of his step mother *Ratnāji* ; and when he went into the palace to take the ball, Ratnāji fell in love with him. But as he would not yield to her, she made false reports against him to the king. The king blindly believed her and ordered Kumārarāma to be killed. But the minister who knew the real facts concealed Kumārarāma in an underground cell and spread the news that he was killed. On hearing this, the neighbouring Mahammadan kings, attacked Kampanṛpa. Kumārarāma was then set free and in the battle he meets with his end.

The author *Nañjuṇda* is the son of *Mādhava,* grandson of Vijayanṛpāla and he lived in the early part of the 16th century.

Date of transcription—Fifth day of the bright fortnight of the lunar month Jyēṣṭha of the year Dundubhi.

Name of the scribe—*Dëvayya* of *Kelasūru.*

Beginning :

ಸಾ ॥ ಶ್ರೀಗಿರಿಜಾವಕ್ತ್ರಾಂಬುಜದಿನನಾಯಕ ।
ಭೋಗಿ ಭೂಷಣ ಭಾಳನೇತ್ರ ॥
ಭಾಗೀರಥೀಧರ ಭವರೋಗ ವೈದ್ಯ ನೀ ।
ನಾಗು ಶಂಕರ ಶರಣೆಂಬೆ ॥ ೧ ॥

ಗಂಗಾ ತುಂಗತರಂಗಾವಳಿತ ಪಿ-।
ಶಂಗಜಟಾಜೂಟ ಭಾರ ॥
ಮಂಗಳಾತ್ಮಕ ಮದನಾಂಗ ದಹನ ಭ-।
ಸ್ತಾಂಗ ಕೊಡೆನಗೆ ಮತಿಯನು ॥ ೨ ॥

*　　*　　*　　*　　*

ರಸದಿಂದ ಪೃಚ್ಛಿಸಿ ಭಾವದಿಂ ಬಲಿಯಾಗಿ ।
ಹೊಸಬಗೆಯುತ್ತ ಮೊಲ್ಲದಿಂದು ॥
ಎಸಕದಿಂ ಬಳಯಿಸಿ ಕೃತಿಯನಿಸುವೆನಿದ ।
ರಸಿಕರು ಮೆಚ್ಚುವಂದದಲಿ ॥ ೨೫ ॥

ಆರೇನ ಬರಸಿ ಬೇಡಿದೊಡದ ನೊಲಿದು ವಿ-।
ಚಾರತೆಯಿಂ[ದಗ್ಗಿ] (ದಾಗಿ) ಸುವ ॥
ನಾರಣವದನ ವಾರಣದಾನವಾರಿ ಕು-।
ಮಾರ ಕೊಡೆನ[ಗೆ] (ಗ) ವಿಷ್ಣತೆಯು ॥ ೨೭ ॥

ಧರಣಿಯ ತೂಕದ ಮೆಯ್ಯನಿಳಿಯ ಮೇ-।
ಲಿರಿಸಿ ಲೋಕವನೆಲ್ಲವನು ॥
ಚರಿಸುವ ಗಣಪ ಕೊಡೆನಗಿಷ್ಟ ಸಿದ್ಧಿಯ ।
ನಿರದೆ ನಿನ್ನಂಘ್ರಿಗೆಱಗುವೆನು ॥ ೧೮ ॥

ಕನ್ನಡಕವಿತೆಗೆ ಮೊದಲಿ[ಗಂ] (ಗನೆಂ) ದೆಂ ।
ಬುನ್ನತಕೀರ್ತಿ ಕಾಮಿನಿಯ ॥
ಬೆನ್ನಬಿಡದೆ ತೊಳ[ಲು] (ಗು)ವ ಪಂಪರಾಜನ ।
ಚೆನ್ನಡಿಗಳಿಗೆಱಗುವೆನು ॥ ೧೯ ॥

ಕಾದಂಬರಿಯನು ನುಡಿಸಿ ಲೀಲಾವತಿ-।
ಗಾದರದಿಂ ಕಪ್ಪನಿಟ್ಟ ॥
ಮೋಹನಿಯನು ಮೆಚ್ಚಿಸಿದ ನೇಮಿ ಚಂದ್ರನ ।
ಪಾದಗಳನು ಬಲಗೊಂಬೆ ॥ ೨೦ ॥

ಬಲ್ಲಿದ ಕರ್ಣಾಟಕ ಕವಿ [ತೆಯ ಇಳೆಗೆಲ್ಲರ ಗೆಲ್ದ] (ಗಳೆಲ್ಲರಗೆಲ್ದ) ।
ಬಲ್ಲಾಳ ಭೂಮೀಶ್ವರನ ॥
ನಿಲ್ಲದೆ ಮೇದಿನಿಯುಡ ಜನ್ನನ ಪಾದ-।
ಪಲ್ಲವಗಳಿಗೆರಗುವೆನು ॥ ೨೧ ॥

ಇಂಪುವಡೆದ ಕವಿತಾರಸ [ವನು] (ಮಧುವಿನ) ।
ಸೊಂಪಿನಿಂ ವಾದಿಗಳೆದೆಗೆ ॥
ಕಂಪನವನು ಪುಗಿಸುವ ಗುಣನಂದಿಯ ।
ನಾಂ ಪೊಗಳ ಬಲಗೊಂಬೆ ॥ ೨೨ ॥

ಗಜಗನ ಗುಣವರ್ಮನ ನಾಗಚಂದ್ರನ ।
ಸುಜನೋತ್ತಂಸನಸಗನ ॥
ಸುಜನ ರನ್ನನ ಶಾಂತಿವರ್ಮನ ಪದಸರ-।
ಸಿಜಗಳಗೊಲಿದೆಱಗುವೆನು ॥ ೨೩ ॥

ರಗಳೆಯ ಕವಿಯೆಂದು ತೆಗಳ್ ವಾದಿಗಳುರೆ ।
ನೊಗಸೊಗುವಂತೆ ವಸ್ತುಕವ ॥
ನೆಗಳ್ದ ಹಂಪೆಯ ಹರಿಯಣ್ಣನ ಪಾದ-।
ಯುಗಳಕೆಱಗುವೆನಚ್ಚೆಯಿಂದ ॥ ೨೪ ॥

ಹಿಂದಣವರ ಸವಿಮಾತುಗಳಿಗೆ ಸರಿ-।
ಬಂದಿವೆ ಮೆಲ್ನುಡಿ ನಿನ್ನ ॥
ಎಂದು ಕೊಂಡಾಡಿಸಿ ಕೊಂಡು ಮಧುರನನಾ ।
ನಂದದಿಂ ಬಲಗೊಂಬೆನೊಲಿದು ॥ ೨೫ ॥

ಸರಸತಿವಾಣಿ ಶಬ್ದಕದಂತೆ । (?)
ಇರವ ಪುಟ್ಟಿಸಿ ಜಾಣನೆಂದು ॥
ಕರೆಯಿಸಿಕೊಂಡಳೆಂದಿರ್ಪ[ಜಾ] (ಪಟಾ)ಣನ ।
ಚರಣಕಾನೊಲಿದೆಱಗುವೆನು ॥ ೨೬ ॥

ಕಾಳಿದಾಸನು ಕವಿತಾರಸವೆನಗೇ ।
ಳೇಳು ಜನ್ಮದೊಳೆ [ಕಂ] (ಕ್ಕೆಯೆಂ)ದು ॥
ಕೇಳ ಸುಕವಿಗ[ಳು] (ಳೊಳ್[6]) ಭೋಜನೆಂದೆನಿಸಿದ ।
ಕಾಳಿದಾಸನ ಬಲಗೊಂಬೆ ॥ ೩೭ ॥

* * * *

ಇದು ದೋಷ ಇದುಗುಣವೆಂಬ ಭೇದವನೊದ ।
[ವಿ] (ವ) ದ ಮುನ್ನ ಕಂಡ ದೋಷವನು ॥
ಎದೆಯೊಳಗಿಟ್ಟು ಗುಣವನೆ ಕೊಂಡಾಡುವ ।
ಮೃದುಹೃದಯರಿಗೆಱಗುವೆನು ॥ ೩೯ ॥

* * *

ಏಮಾತೊ ನಿನ್ನ ಮೆಲ್ನುಡಿಯ ಸವಿಗೆ ಸೋಲ್ತು ।
ಕಾಮಿನಿಯರ ರತಿ ಸುಖದ ॥
ಸೀಮೆಯ ಮರೆದರೆನಲು ಕಾಮಿಗಳು ನಿನ್ನ ।
ಕೋಕಿಲವಚನದಿಂಬೆಂತೊ ॥ ೫೮ ॥

ಎಂದೆನ್ನನೊಲಿದು ಕೊಂಡಾಡಿ ಕೋವಿದರು ಪೇ ।
ಳೆನ್ನಲವರ ನುಡಿಯನ್ನು ॥
ಪಿಂದುಗಳೆಯಲಮ್ಮದೆ ರಾಮನಾಥನ ।
ಸಂದ ಕಥೆಯನುಸುರಿದೆನು ॥ ೫೯ ॥

* * * *

ಯದುಕುಲಾಮಾತ್ಯರಿಂತೆಂಬ ವಂಶಾಗತ-।
ವಿದಿತಬಿರುದನಾಂತೆಸೆವ ॥
ಚದುರ ಮಾಧವನಾತ್ಮಜ ನಂಜುಂಡನಾ-।
ನೊದವಿ ಪೇಳದೆನೀ ಕೃತಿಯ ॥ ೬೫ ॥

* * *

(೨೦ ನೆಯ ಓಲೆಯಿಂದ.—ಆಶ್ವಾಸಾಂತ್ಯ.)

ಚಾಗಕ್ಕೆ ನೆರೆಯರು ಯಾಚಕರುರುಗುಣ-।
ಪೂಗನುತಿಗೆ ಕವಿವರರು ॥
ವಾಗಾಡಂಬರ ಸಾಲದೆಂಬೀ ಕೀರ್ತಿ
ಗಾಗರವಾದ (ನು) ನೃಪತಿ ॥ ೫೩ ॥

ಮಾಸದ ಮನುಜರ ಕಂಡವರಿಗೆ ಬಹ ।
ಳ್ಕೆಸಿರಿಯುಂಟೆಂದು ಬಗೆದು ॥
ಓಸರಿಸದೆ [ಕೆಡಿಸುವ] ಪೊರ್ದಿದರ ಕೆಡಿಸದೆ ನೃಪ ।
ಭಾಸಕಂಪಿಲನೊಪ್ಪಿಹನು ॥ ೫೪ ॥

ಅಂತು ಸಂಧಿ ೫ ಕ್ಕಂ ಪದನು ೪೯೭ ಕ್ಕಂ ಮಂಗಳ ಮಹಾಶ್ರೀ.

॥ ವಾರ್ಧಿಕ ಷಟ್ಪದಿ ॥

ಇದು ಯದುಕುಲಾಮಾತ್ಯವಂಶದೊಳಗುದಯಿಸಿದ ।
ಸದಮಲ ಯಶೋವಿರಾಜಿತ್ರ ವಿಧಿಯ ನೃಪತನು [ತ] (ಜ) ।
ವಿದಿತವಿತರಣ ವಿನಯ ವಿಕ್ರಮವಿಭಾಸಿಯೆಂದೆನಿಪ ಮಾಧವನಾಮ ನಾ ॥
ಉದರಾಬ್ಧಿಭವಚಂದ್ರ ನಂಜುಂಡನೊಲಿದೊರೆದ ।
ಕದನಕಲಿಕಾಲ ಕಪಿಕೇತು ಕಲಿಕುಚಿ ರಾಮ ।
ಸುದಿತ್ರ ಕೃತಿ ಬಂಧದೊಳ್ ಮೃದುಪದನ್ಯಾಸದೊಳಗಾಶ್ವಾಸವೊಂದನೆಯದು ॥

End :

॥ ಸಾಂಗತ್ಯ ॥

ದೇವರ ದೇವ ದೇವಾಸುರ ಮಕುಟಸಂ-।
ಭಾವಿತಪದ ಪದ್ಮಯುಗಳ ॥
ಕೈವಲ್ಯದೊಳ್ಕೈಲಾಸದೊಳ್ ಭಕ್ತರ ।
ಭಾವದೊಳೊಪ್ಪಿ ಮೆಱೆದನು ॥ ೧೦೫ ॥

ವ್ಯಕ್ತನಮಲನನುಪಮನಪ್ರಮೇಯನ-।
ವ್ಯ(ಕ್ತ)ನಜ್ಞೇಯನಮಿತನು ॥
ಶ[ಕ್ತಿ] (ಕ್ತ) ನ ಪ್ರತಿಮನಭವನಗಜಾರ್ಧ-।
ಶಕ್ತಶರೀರನೊಪ್ಪಿದನು ॥ ೧೦೬ ॥

ಗಂಗಾ[ತುಂಗಸಂಗಾತ] (ಸಂಗತ ತುಂಗ) ತರಂಗಾ-।
ಲಿಂಗಿತ ಲಸದುತ್ತಮಾಂಗ ॥
ಅಂಗಜ ಗಜ ಮಾತಂಗ ಮರ್ದನ ನಹು-।
ಲಾಂಗನಭವನೊಪ್ಪಿದನು ॥ ೧೦೭ ॥

Colophon :

॥ ಗದ್ಯ ॥

ಇದು ಸಮಸ್ತಸುರಾಸುರಮೌಳಿ ಮಾಲಾಕೀಲಿತ ನೂತ್ನರತ್ನಪ್ರಭಾಪುಂಜರಂಜಿತಚಂದ್ರ [ಪ್ರಭ] (ಚೂಡ) ಚರಣಾರವಿಂದ ಮಾದೂಳ (?) ಮಧುಕರಾಯಮಾನ-ಮಾಧವ ಸೂನು-ಕವಿತಾವಿಶಾರದ-ನಂಜುಂಡ ವಿರಚಿತಮಪ್ಪ ಕುಮಾರರಾಮ ಚರಿತ ಮಹಾ ಪ್ರಬಂಧದೊಳ್ ಈಶ್ವರ ಸಭಾವರ್ಣನಂ ದ್ವಾದಶಾಶ್ವಾಸಂ ॥

ಇದು ದೇವೇಂದ್ರೋಪೇಂದ್ರವಾಣೀಂದ್ರ ದನುಜೇಂದ್ರ ಮನುಜೇಂದ್ರ ಫಣೀಂದ್ರ ಯಕ್ಷರಾಕ್ಷಸ ಗರುಡ ಗಂಧರ್ವ ಕಿನ್ನರಕಿಂಪುರುಷ ಸಿದ್ಧ ವಿದ್ಯಾಧರಾದ್ಯನೇಕ ದೇವಜಾತಿ ಕಿರೀಟ ಕೋಟಿಕೀಲಿತ ನವೀನ ನಾನಾ ದಿವ್ಯ ರತ್ನ ದೇದೀಪ್ಯಮಾನ ಪ್ರಭಾಜಾಲಪಯಃ ಪ್ರವಾಹ ಮಧ್ಯಗತ ವಿಮಲ ಕಮಲ[ಯ] ಮಾಲಾ[ಯ] ವಿಭೂಷಿತವಾಗ್ವೈಖರೀವಲ್ಲಭ ಕವಿತಾವನಿತಾ ವಶೀಕರಣ ವಶ್ಯಮಂತ್ರ ಸಿದ್ಧ-ಪ್ರಭುಕುಲಾಗ್ರಗಣ್ಯ ವಿಜಯ ನೃಪಾಲ ಪುತ್ರ ಮಾಧವಾತ್ಮಜ-ನಂಜುಂಡವಿರಚಿತ[ರುಚಿ] ಶೂರಶಿರೋಮಣಿ ಕರ್ಣಾಟ ದೇಶಾಧೀಶ್ವರ ಕುಮಾರರಾಮ ಚರಿತ ಮಹಾ ಪ್ರಬಂಧದೊಳ್ ನಿಶ್ರೇಯಸ ಫಲ ಪ್ರದಾಯಕ-ನಿರಾಕೃತ ದೇವ ತಾಪಾಯಕ ಭಸ್ಮಸಾದ್ವಿಹಿತ ಪಂಚಸಾಯಕ - ಭವಾನೀ ಪ್ರಾಣನಾಯಕ - ಅನುಗತಶರಣಜನಾಭಿಪ್ರಾಯಕ - ಅಚಲಿತಕಂಬಲಾಶ್ವತರ ಗಾಯಕ-ಲೀಲಾ ಪ್ರೇರಣ ವಿಶ್ವಭುವನ ವಿಧಾಯಕ-ಲಾಲಿತ ವೀರಭದ್ರ ಗುಹ ವಿನಾಯಕ-ತ್ರಿಶೂಲಮಹಾ ಕೌಕ್ಷೇಯಕ-ತ್ರಿಪುರದಹನಾಧ್ಯವಸಾಯಕ - ನಿಗಮ ನಿಚಯ ಕೌಲೇಯಕ-ನಿಖಿಲಾಸು[ರು] (ರ) [ತ] ತವ್ಯವಸಾಯಕ - ನಿಯಮಿತೇಂದ್ರಿಯ ಹೃದಯ ವಿನಾಯಕ-ನಿಷ್ಕಳ ತತ್ವ ಸಂಪ್ರದಾಯಕ-ವೇದೋಪನಿಷದ ಪ್ರಮೇಯಕ-ನಾರಣಾಸುರವಾರಿದಪ್ರಾಲೇಯಕ-[ವೇ] (ವೀ) ತಪಾಪ-ಪದ್ಮಾಸ್ತ್ರತೋಷಿತ ಮಧ್ಯಕಾಂತೇ

ಯುಕ-ಅಗಜಾರ್ಧದೇಹ ಸಂದಾಯುಕ ಜಿಹ್ಮಗಾಧೀಶ್ವರಗ್ರೈವೇಯುಕ-ಜನಾರ್ದನ ಪ್ರಿಯುಜಾಯುಕ-ಜಾಹ್ನವೀ[ಜಾ] (ಜ) ಲಾಲವಾಲಭೂತ ಜಟಾಜೂಟ[ಖರ]ಶೇಖರಾಯುಮಾನ ॥ ಶಶಿ [ಕಾ] (ಕ) ಲಾಭೃನ್ಮಹೇಶ್ವರ ಪ್ರತ್ಯಕ್ಷೀಕರಣಂ, ತತ್ಸಭಾವರ್ಣನಂ, ತತ್ಕೃಪಾಲಬ್ಧ ಸುರೇಂದ್ರಾತ್ಮಜ ಗಹನಗಂಭೀರ ಗಣಪದವೀಯು ಪರಮ ಲಾಭವಿವರಣಂ ದ್ವಾದಶಾಶ್ವಾಸಂ ॥

॥ ಪರಿವರ್ಧಿನಿ ಷಟ್ಪದಿ ॥

ಅಂಡದ ಜಲ್ಲಿಯು ನಾಸೆಯು ನಿಗಳಕೆ ।
ಕಂಡರಿಸಿದ ಮಾವಣ್ಣದ ಬೊಂಬೆಯು ।
ಕಂಡು ಮನ ದೊಳುಱಿ ಮಚ್ಚರಿಸುವ ಮಾಱಾಂತ[ಕ]ರಾವೃತರ ॥
ಗಂಡನೆನಿಪ ಮಾಧವ ಸಾತ್ಮಜನಂ-।
ಜುಂಡ[ವಿ]ರಚಿತ ರಾಮನ ಕೃತಿರವಿಶಶಿ-।
ಮಂಡಲಮುಳ್ಳನ್ನೆವರಂ[ಸ್ಥಿರಸ್ಥರ] (ಸುಸ್ಥಿರ) ಮಿರ್ಕೆ ಜಗದೊಳಗೆ ॥
ಕೃತಿಯಿದ ನರಿಯದರೋದಿ ಬರೆದು ಸಂ-।
ಗತಿಯಂ ಕೆಡಿಸಿದೊಡಾನರಿಯಂ ಕೃತಿ-।
ಯುತಿಮಾತ್ರ[ಸ್ರ] (ಸ್ವರ) ಸಾನ್ವಯುಸಂಧಿಸಮಾಸ ವಿಭಕ್ತಿಗಳ ॥
ಸ್ಥಿತಿಕರ್ತೃಕ್ರಿಯೆ ಕಾರಕಗಳ ಸ ।
ಮ್ಮತ ಸಂಬಂಧದಿರವು ಕನ್ನಡ ಸಂ ।
ಸ್ಕೃತಮೆಂಬಿವರೊಳ್ ತೊಡಕೆಳ್ಳನಿತಿಲ್ಲದೆ ನಾಂ ಪೇಳದೆನು ॥

॥ ವಾರ್ಧಿಕ ಷಟ್ಪದಿ ॥

ಈ ಕೃತಿ(ಯ)ನಜ್ಞರಿರದೋದಿ ಬರೆದಲ್ಲಲ್ಲಿ ।
ಕಾಕುಮಾಡಿದೊಡಱಿಯೆನಮಲ ಮೃದುತರ ಪದಮ-।
ನೇಕವಾಚ್ಯವ್ಯಂಗ್ಯಲಕ್ಷ್ಯಾರ್ಥಲಿಂಗ ಮಾತ್ರ ಪ್ರಾಯ ಸತಿಸಮಾನಂ ॥
ಪ್ರಾಕರಣಿಕ ಪ್ರಸಂಗೋ[ಕ್ತ] (ಕ್ತಿ)ರಸರೀತಿ ಭಾ-।
ವಾಕಲಿತಲಸದಲಂಕೃತಿ ಸಂದ ಬಂಧ ಕ್ರಿ-।
ಯಾಕಾರಕ ಪ್ರಯೋಗಪ್ರೌಢಿ ಕವಿ ಸಮಯಮೆಂಬಿವು ವಿರಾಜಿಸಲ್ಕಾಂ ಪೇಳ್ದೆನು ॥

ಶ್ರೀಕಾಂತನೇತ್ರಾಂಬುಜಾ[ತ] ಕಲಿತಪದ ಪುಂಡ-।
ರೀಕಾಭಿರಾಮ ಧೃತರಾಕಾಧಿನಾಥ ಮಿಮ-।
ಲಾಕಾರ ಒಸುದಂಡ ಶೂಕಾಪೃಕಾಂಗ ಸತ್ಸನಾಕಾಲಯುಸುರೌಘ ॥
ಲೋಕಾಪಜಯ ಜಾಗರೂಕದನುಜಾಂತಕ ನಿ-।
ಶಾಕಾಂತಸೂರ್ಯ ಶಿಖಭೂ[ಕಮಲ] (ವಲಯ) ಮಾರುತಾ-।
ತ್ಮಾಕಾಶಸಾ[ಕ್ಷಧನಿ] (ಹ್ಲಾದನೀ) ಕಾಷ್ಟಮೂರ್ತಿ ಗಿರಿಜಾಕಾಂ[ಕ್ಷ] (ತ) ಸಲಹೆಮ್ಮನು ॥
ಅಂತು ಸಂಧಿ [೪೬] (೪೭) ಕ್ಕಂ ಪದನು ೫೫೨೬ ಕ್ಕಂ ಮಂಗಳ ಮಹಾಶ್ರೀ.

(ವಿ-ವಿ.)—

ಸಮಗ್ರ. ಸ್ವಲ್ಪಮಟ್ಟಿಗೆ ಶಿಥಿಲವಾಗಿದೆ. ಇದರಲ್ಲಿ ಒಟ್ಟು ಓಲೆಗಳು ೨೪೦. ಓಲೆಗಳ ಸಂಖ್ಯೆಯು ೧ ರಿಂದ ಪ್ರಾರಂಭಿಸಿ ೨೪೩ ರಲ್ಲಿ ಮುಗಿಸಿದೆ. ೪೪, ೧೪೫, ೨೪೭ ಎಂಬ ಸಂಖ್ಯೆಗಳನ್ನು ಗುರುತಿಸುವುದಕ್ಕೆ ಲೇಖಕನು ಅನವಧಾನದಿಂದ ಬಿಟ್ಟಿರುವುದೇ ಈ ತಪ್ಪಿಗೆ ಕಾರಣ. ೨೩೦, ೨೩೩, ೨೪೦ ಓಲೆಗಳು ಮುರಿದಿವೆ. ಇದರಿಂದ ೪೪, ೪೬, ೪೭ ಈ ಸಂಧಿಗಳಲ್ಲಿ ಸ್ವಲ್ಪಮಟ್ಟಿಗೆ ಗ್ರಂಥವಿಚ್ಛೇದವು ಸಂಭವಿಸಿದೆ. ಲಿಪಿ ಚೆನ್ನಾಗಿದೆ, ತಪ್ಪುಗಳುಂಟು. ಪುಸ್ತಕದ ಕೊನೆಯಲ್ಲಿ "ದುಂದುಭಿ ಸಂವತ್ಸರದ ಜ್ಯೇಷ್ಠ ಶು. ೫ ಸುಧಿ (ವಾರ) ರಾಮನ ಸಾಂಗತ್ಯವನ್ನು ಕೆಲಸೂರ ದೇವಯ್ಯನು ಪ್ರತಿ ಸಮಾನವಾಗಿ ಬರೆದನು" ಎಂದಿದೆ.

ಈ ಗ್ರಂಥವು ಸಾಂಗತ್ಯದಲ್ಲಿ ಬರೆದಿದೆ. ಆಶ್ವಾಸಗಳು ೧೨. ಸಂಧಿಗಳು ೪೭. ಪದ್ಯಗಳು ೫೫೦೬ ಗ್ರಂಥದ ಕಡೆಯಲ್ಲಿ ಕೆಲವು ಷಟ್ಪದಿಗಳವೆ.

ಕವಿ ನಂಜುಂಡನೆಂಬುವನು. ಈತನು ಶೈವಕವಿಯೆಂದು ತೋರುತ್ತದೆ. ಈತನ ತಂದೆಯು 'ಅಂಡದ ಜಲ್ಲಿಯನಾನೆಯ ನಿಗಳಕೆ। ಕಂಡರಿಸಿದ ಮಾವಣ್ಣದ ಬೊಂಬೆಯ। ಕಂಡು ಮನದೊಳುಱೆ ಮೆಚ್ಚರಿಸುವ ಮಾರಾಂತರಾವುತರ ಗಂಡನೆನಿಪ' ಮಾಧವನು ; ಇವನ ಪಿತಾಮಹನು ಪ್ರಭುಕುಲಾಗ್ರಗಣ್ಯ ವಿಜಯನೃಪಾಲನು ; ಚಿಕ್ಕಪ್ಪ ವಿಜಯನೆಂಬುವನು. ಈ ವಿಜಯನು ತನ್ನಾಣ್ಮನಾದ ನಂಜರಾಜನೆದುರಿಗೆ ಯುದ್ಧದಲ್ಲಿ ಮಡಿದನೆಂದು ಕವಿಹೇಳುತ್ತಾನೆ. ಆದುದರಿಂದ ಈ ನಂಜರಾಜನನ್ನು ಕ್ರಿ.ಶ. ೧೫೦೨ ರಿಂದ ೧೫೩೩ ರ ವರೆಗೆ ಆಳಿದ ಚಂಗಾಳ್ವನಂಜರಾಜನಾಗಿರಬಹುದೆಂದು ಹೇಳಿ, ಈತನ ಕಾಲವು ಸುಮಾರು ೧೫೨೫ ಆಗಿರಬೇಕೆಂದು ಕವಿಚರಿತ್ರೆಕಾರರು ಬರೆಯುತ್ತಾರೆ. ಅಲ್ಲದೆ ಈತನ ಜಯನೃಪಕಾವ್ಯವೇ ಮೊದಲಾದುವನ್ನು ಬರೆದ ಮಂಗರಸ (೧೫೦೮) ನ ಸಹೋದರನ ಮಗನೆಂದೂ। ಜೈನಮತವನ್ನು ಬಿಟ್ಟು ಶೈವಮತವನ್ನವಲಂಬಿಸಿರ ಬೇಕೆಂದೂ ಬರೆಯುತ್ತಾರೆ. ಹೇಗಾದರೂ ಇರಲಿ, ಈತನು ಆದಿಯಲ್ಲಿ ಶಿವಮುಂತಾದವರನ್ನು ಸ್ತುತಿಸಿರುವುದರಿಂದಲೂ ಈತನ ಹೆಸರಿನಿಂದಲೂ ಇವನನ್ನು ಶೈವಕವಿಯೆಂದು ನಿಸ್ಸಂದೇಹವಾಗಿ ಹೇಳಬಹುದು.

ಈ ಗ್ರಂಥದಲ್ಲಿ ಕರ್ಣಾಟದೇಶಾಧೀಶ್ವರ-ಕಂಪನೃಪತಿಯ ಮಗನಾದ ಕುಮಾರರಾಮನ ಚರಿತ್ರೆಯು ವರ್ಣಿತವಾಗಿರುವುದು. ಈ ಕತೆಯನ್ನು ಸಂಗ್ರಹವಾಗಿ ಕವಿ ಹೀಗೆ ಹೇಳಿದ್ದಾನೆ.

(ಸಂಧಿ ೧.)

'ಕಂದುಕ ಬೀಳಲರಮನೆಗದನಿರದೆತ್ತಿ।
ತಂದವನೆಂದು ಕಂಪಿಲನ ॥
ನಂದನನೆಯ್ದಲವನ ರೂಪಿಗೆ ಸೋಲುತ್ತ।
ಬಂದು ಪಿಡಿದಳು ರತ್ನಾಜಿ ॥ ೭೯ ॥

ಪಿಡಿಯೆ ಬಿಡಿಸಿಕೊಂಡು ಬರಲವನವಳಂದು।
ಕಡುನೊಂದು ಕೆಯ್ಯ ಬಳೆಗಳ ॥
ನೊಡೆದು ತೋಳ್ತೊಡಿಗಳೆಡೆಗಳ ಕೆಡಿಸಿಕೊಂಡು।
ಬಿಡದೆ ಹೇಳಿದಳು ಕಂಪಿಲಗೆ ॥ ೮೦ ॥

ನೆಲೆಯಱಿಯದೆಯುವ ಕೊಲಿಸು ರಾಮನನೆಂದು।
ಬಲಿದು ಮಂತ್ರಿಗೆ ಪೇಳಲವನು ॥
ನೆಲೆವಾಳಗೆಯೊಳಟ್ಟವನ ಕೊಲಿಸಿದೆನೆಂದು।
ನೆಲೆಮಾಡಲಾಸುದ್ದಿಯನು ॥ ೮೧ ॥

ಕೇಳಿ ತುರುಕರ ದಂಡುದಾಳಿಬರಲು ಮಂತ್ರಿ।
ಲೀಲೆಯಿಂ ತಂದಾ ಬಲವ ॥
ಕೋಲಾಹಲವ ಮಾಡಿಸಿದನೆಂದು ಕಥನವ।
ಮೂಲವಿದನು ನಾನೊಲಿದು ॥ ೮೨ ॥

ರಸದಿಂದ ಪುಟ್ಟಿಸಿ ಭಾವದಿಂ ಬಲಿಯಿಸಿ।
ಪೊಸೆಬಗೆವೆತ್ತಲಂ ಕೃತಿಯ ॥
ಎಸಕದಿಂ ಬಳೆಯಿಸಿ ಕೃತಿಯೆನಿಸುವೆನಿದ।
ರಸಿಕರು ಮೆಚ್ಚುವಂದದಲಿ ॥ ೮೩ ॥

ಈ ಗ್ರಂಥದಲ್ಲಿರುವ ಸಂಧಿಗಳ ಹೆಸರುಗಳು :—

ಆಶ್ವಾಸ ೧

೧. ಪೀಠಿಕಾಸಂಧಿ.
೨. ಪುರವರ್ಣನೆಯ ಸಂಧಿ.
೩. ಪಂಪಾಕ್ಷೇತ್ರವರ್ಣನೆ.
೪. ಹೊಸಮಲೆ ಶೃಂಗಾರವರ್ಣನೆ.
೫. ಕಂಪಿಲನ ದಿಗ್ವಿಜಯ.

ಆಶ್ವಾಸ ೨

೬. ವಿಶ್ವೇಶ್ವರನೊಡ್ಡೋಲಗ.
೭. ಹರಿಹರದೇವಿಯ ಶೃಂಗಾರ.
೮. ಕುಮಾರರಾಮನು ಹುಟ್ಟಿದುದು.
೯. ಕುಮಾರರಾಮನಿಗೆ ಬೊಲ್ಲನೆಂಬ ಕುದುರೆ ಸಿಕ್ಕಿದುದು.

ಆಶ್ವಾಸ ೩

೧೦. ಕುಮಾರರಾಮನು ಬಲ್ಲಾಳನಿಗೆ ಸೇರಿದ ಹುಳಿಹೇರೆಂಬ ಅಗ್ರಹಾರವನಿರಿದುದು.
೧೧. ಬಲ್ಲಾಳನ ಮೇಲೆ ಯುದ್ಧಕ್ಕೆ ಹೊರಟುದು.
೧೨. ಬಲ್ಲಾಳನೊಡನೆ ಯುದ್ಧ.
೧೩. ಬಲ್ಲಾಳನನ್ನು ರಾಮನುಗೆದ್ದುದು.

ಆಶ್ವಾಸ ೪

೧೪. ಪ್ರತಾಪರುದ್ರನೊಡನೆ ಕಾಳೆಗ (ರಾಮನ ಪ್ರಶಸ್ತಿ.)
೧೫ ಪ್ರತಾಪರುದ್ರನನ್ನುಗೆದ್ದುದು.
೧೬. ಗಜಪತಿಯೊಡನೆ ಕಾಳೆಗ.

ಆಶ್ವಾಸ ೫.

೧೭. ದಿಲ್ಲಿಸುಲ್ತಾನನು ಮಗಳನ್ನು ಕೊಡುತ್ತೇನೆಂದುದು.
೧೮. ಕಂಪಿಲನು ಸುಲ್ತಾನನಿಗೆ ಕಪ್ಪವನ್ನು ಕೊಟ್ಟುದು. (ಬಾದುರಖಾನನು ಕಂಪಿಲನನು ಮರೆಹೊಕ್ಕುದು).
೧೯. ನೇಮಿ ದಂಡೆತ್ತಿ ಬಂದುದು.
೨೦. ರಾಮನು ನೇಮಿಮಲ್ಲುಕರನ್ನು ಗೆದ್ದು ಓಡಿಸಿದುದು.

ಆಶ್ವಾಸ ೬

೨೧. ಕೋಲದ ಹಬ್ಬ (ಕುಮ್ಮಟದಲ್ಲಿ).
೨೨. ರತ್ನಿ ರಾಮನನ್ನು ಕಂಡುದು.
೨೩. ರತ್ನಿಯ ವಿರಹ.
೨೪. ಸವಿನುಡಿ (ಸಂಧಿ.)

ಆಶ್ವಾಸ ೭

೨೫. ಮೆಲ್ನುಡಿ (ಸಂಧಿ.)
೨೬. ಚಿತ್ರಪಟದ (ಸಂಧಿ.)
೨೭. ಕಂಪಿಲನು ಬೇಟೆಗೆ ಹೋದುದು.
೨೮. ವೇಶ್ಯಾವಾಟ (ಚಂದ್ರಿಕಾ) ವಿಹಾರ.

ಆಶ್ವಾಸ ೮

೨೯. ರತ್ನಿಸ್ವಪ್ನದಲ್ಲಿ ರಾಮನನ್ನು ಕಂಡುದು.
೩೦ ರಾಜನೀತಿ (ರಾಮನು ತಾಯಿಯಾದ ಹರಿಹರದೇವಿಯನ್ನು ಚೆಂಡು ಕೇಳಿದುದು.)
೩೧. ಚೆಂಡಾಟ.
೩೨. ರತ್ನಿಯು ಮನೆಗೆ ಚೆಂಡು ಬೀಳಲು ರಾಮನು ಹೋಗಿ ಕೇಳಿದುದು.

ಆಶ್ವಾಸ ೯

೩೩. ರತ್ನಿಯ ವಿಪರೀತ ಕೃತ್ಯವು.
೩೪. ಕಂಪಿಲನು ಬೇಟೆಯಿಂಬಂದುದು.
೩೫. ಕಂಪಿಲನು ರಾಮನನ್ನು ಕೊಲಲು ಹೇಳಿದುದು.
೩೬. ಇಂದ್ರಜಾಲ (ಬೈಚಪ್ಪನು ರಾಮನನ್ನುನೆಲಮಾಳಿಗೆಯಲ್ಲಿರಿಸಿದುದು).

ಆಶ್ವಾಸ ೧೦

೩೭. ರಾಮನು ಸತ್ತಸುದ್ದಿಯನ್ನು ಕೇಳಿಸುಲ್ತಾನನು ಬಂದುದು. (ರತ್ನಿಯ ಪಶ್ಚಾತ್ತಾಪ).
೩೮. ನೇಮಿದಂಡಿನಲ್ಲಿ ಕಗ್ಗೊಲೆ.
೩೯. ರಾಮನು ನೆಲಮಾಳಿಗೆಯಿಂದ ಹೊರಟುದು.
೪೦. ರಾಮನು ನೇಮಿಯನ್ನು ಮುರಿಯಲಿರಿದುದು (ರತ್ನಿಯಾಗಿ ಬಂದ ಊರ್ವಶಿಯು ಸುರಲೋಕಗಮನ).

ಆಶ್ವಾಸ ೧೧

೪೧. ಸುಲ್ತಾನನು ಮಾತಂಗಿಯನ್ನು ಕಳುಹಿದುದು.
೪೨. ಮಾತಂಗಿಯ ಪಾಳೆಯದಲ್ಲಿ ಕಗ್ಗೊಲೆ.
೪೩. ರಾಮನಾಥನು ಯುದ್ಧದಲ್ಲಿ ಮಾತಂಗಿಯ ದಂಡನ್ನು ವಿಶೇಷವಾಗಿ ಕೊಂದುದು
೪೪. ರಾಮನಾಥನ ಯುದ್ಧ.
೪೫. ಬಾದುರಖಾನನ ಯುದ್ಧ.
೪೬. ರಾಮನು ಗೂಟೆಗಲ್ಲಿನ ಮೇಲೆ ಕುಳಿತುಯೋಗಧ್ಯಾನದಲ್ಲಿದ್ದುದು.
೪೭. ರಾಮನಾಥನಿಗೆ ರಜತಾದ್ರಿಕಂಡುದು.

No. 893. ಕುಮಾರರಾಮನ ಕಥೆ by ನಂಜುಂಡ-
KUMĀRARĀMANA KATHE BY NAÑJUṆḌA.

Substance, palm-leaf. Size, $9\frac{7}{16} \times 1\frac{3}{8}$ inches. Pages, 113. Lines, 5—7 on a page. Extent, 850 granthas. Character, Kannada. Condition, much injured. Appearance, old. Mode of writing, not bad.

Contains sandhis 1—5 complete and 6th incomplete.

Same work as that described above.

(ವಿ-ವಿ.)—

ಅಸಮಗ್ರ. ಮೊದಲಿಂದ ಆರು ಸಂಧಿಗಳಿವೆ. ಆರನೆಯದು ೧೦೨ ನೆಯ ಪದ್ಯದ ವರೆಗಿದೆ. ಓಲೆಗಳು ೫೮ ಇವೆ. ೩೫ ನೆಯ ಓಲೆಯು ಮುರಿದಿದೆ. ೨೫, ೪೬, ೪೭ ನೆಯ ಓಲೆಗಳ ಒಂದೇ ಪುಟದಲ್ಲಿ ಬರೆದಿದೆ. ಅತ್ಯಂತ ಶಿಥಿಲವಾದ ಪ್ರತಿ. ಗ್ರಂಥಪಾತವುಂಟು. ಲಿಪಿ ಸಾಮಾನ್ಯವಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 894. ಕುಮಾರರಾಮನ ಕಥೆ by ನಂಜುಂಡ-
KUMĀRARĀMANA KATHE BY NAÑJUṆḌA.

Substance, Palm-leaf. Size, $15\frac{1}{4} \times 1\frac{1}{4}$ inches. Pages, 189. Lines, 6 on a page. Extent, 2850 granthas. Character, Kannaḍa. Condition, slightly injured. Appearance, old. Mode of writing, good.

Begins on fol. 1*a*. The other works herein are (1) *Mahimnastōtra* (Sanskrit) 96 *a*, (2) *Malhaṇastuti* (Sanskrit) 99*a*, (3) Vināyakavratakalpa (Sanskrit) 102*a*, (4) Hāḍugaḷu 106*a*.

Incomplete; contains Sandhis 1, 21—26, 27, 28, 29—31 complete and 32nd incomplete.

Same work as that described above.

(ವಿ-ವಿ.)—

ಅಸಮಗ್ರ. ಪೀಠಿಕಾಸಂಧಿ, ಶೂಲದಸಂಧಿ, ರತ್ನಿರಾಮನನ್ನು ಕಂಡಸಂಧಿ, ರತ್ನಿವಿರಹದಸಂಧಿ, ಸವಿನುಡಿಯ ಸಂಧಿ, ಮೆಲ್ನುಡಿಯ ಸಂಧಿ, ಚಿತ್ರಪಟದ ಸಂಧಿ, ಚಂದ್ರಿಕಾವಿಹರಣ ಸಂಧಿ, ಕಂಪಿಲನು **ಬೇಟೆಗೆ** ಹೋದಸಂಧಿ, ರಾಜನೀತಿಯ ಸಂಧಿ, ಚೆಂಡಾಟದ ಸಂಧಿ, ಚೆಂಡುಬಿದ್ದ ಸಂಧಿ, ರಾಮನು ಚೆಂಡು ಕೇಳಲು ರತ್ನಿಯುಮನೆಗೆ ಹೋದಸಂಧಿ ಎಂಬ ಪರಿವಿಡಿಯಿಂದಿವೆ. ಇವು ಹಿಂದಣ ೮೯೦ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಸಂಪೂರ್ಣಪ್ರತಿಯಲ್ಲಿ ಕ್ರಮವಾಗಿ ಪೀಠಿಕಾ ಮತ್ತು ೨೧—೨೬, ೨೮, ೨೭, ೨೯—೩೧ ನೆಯ ಸಂಧಿಗಳಾಗಿರುವುವು. ಇದರಲ್ಲಿರುವ ಚೆಂಡಾಟದ ಸಂಧಿ ಮತ್ತು ಚೆಂಡು ಬಿದ್ದ ಸಂಧಿಗಳ ಭಾಗವು ಅದರ ೩೧ ನೆಯ ಒಂದೇ ಸಂಧಿಯಲ್ಲಿ ಅಡಕವಾಗಿರುವುವು. ರಾಮನು ಚೆಂಡು ಕೇಳಲು ರತ್ನಿಯ ಮನೆಗೆ ಹೋದ ಸಂಧಿಯು ಅಸಮಗ್ರವಾಗಿ ಎಂದರೆ ೮೪ ಪದ್ಯಗಳ ವರೆಗಿದೆ. ಚಂದ್ರಿಕಾವಿಹರಣದ ಸಂಧಿಯು (೨೮ ನೆಯದು) ಕಂಪಿಲನು ಬೇಟೆಗೆ ಹೋದ ಸಂಧಿಯ (೨೭ ನೆಯದು) ನಂತರದ ಶೇಷಭಾಗವಾಗಿದೆ. ಈ ಪ್ರತಿಯು ಸ್ವಲ್ಪ ಮಟ್ಟಿಗೆ ಶಿಥಿಲವಾಗಿದೆ. ಇದರ ಲಿಪಿ ಉತ್ತಮವು. ಇದರೊಡನೆ ಮಹಿಮ್ನಃಸ್ತೋತ್ರ (ಸಂಸ್ಕೃತ), ಮಲ್ಹಣಸ್ತುತಿ, (ಸಂಸ್ಕೃತ), ವಿನಾಯಕ ವ್ರತಕಲ್ಪ (ಸಂಸ್ಕೃತ), ಹಾಡುಗಳು ಇವೂ ಇವೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೆಯಾಗಿದೆ.

No. 895. ಕುಮಾರ ರಾಮನ ಕಥೆ by ನಂಜುಂಡ-
KUMĀRĀRAMANA KATHE BY NAÑJUṆḌA.

Substance, Paper. Size, 14¼ × 8⅝ inches. Pages, 68. Lines, 37–42 on a page. Extent, 2,900 granthas. Character, Kannada. Condition, slightly injured. Appearance, old. Mode of writing, not bad.

Begins on page 18. The other works herein are :—

(1) *Cōlarājasāṅgatya*, PP. 1, 2, 129, (2) *Siddhanīti* 14, (3) *Kālajñāna* (by Sarvajña) 86, (4) *Kālajñāna* (by Prabhudēva) 101, (5) *Prabhudēvara sambōdhaneya Kālajñanada Vacana* 104, (6) *Cikkadēvarājavamśāvali* 106, (7) *Apratimavīracarite* 131.

Incomplete.

Same work as that described above.

(ವಿ-ವಿ.)—

ಅಸಮಗ್ರ. (ಮೊದಲನೆಯಾಶ್ವಾಸದ ೪ ನೆಯ ಸಂಧಿಯ ೬೨ ನೆಯ ಪದ್ಯದಿಂದ ೨ ನೆಯ ಆಶ್ವಾಸವು ಪೂರ್ಣವಾಗಿಯೂ ಐದರ ೩, ೪ ನೆಯ ಸಂಧಿಗಳೂ, ಆರರ ೧—೩ ಸಂಧಿಗಳೂ, ಏಳರ ೧—೪ ಸಂಧಿಗಳೂ ಎಂಟರ ಸ್ವಲ್ಪ ಭಾಗವೂ ಇವೆ.) ಶಿಥಿಲವಾಗಿದೆ. ಬರೆವಣಿಗೆ ಸಾಮಾನ್ಯ. ಇದರೊಡನೆ ಚೋಳರಾಜಸಾಂಗತ್ಯ, ಸಿದ್ಧನೀತಿ, ಕಾಲಜ್ಞಾನ (ಸರ್ವಜ್ಞಕೃತ), ಕಾಲಜ್ಞಾನ (ಪ್ರಭುದೇವಕೃತ), ಪ್ರಭುದೇವರ ಸಂಬೋಧನೆಯ ಕಾಲಜ್ಞಾನದ ವಚನ, ಚಿಕ್ಕದೇವರಾಜವಂಶಾವಳಿ, ಅಪ್ರತಿಮವೀರಚರಿತೆಗಳೂ ಇವೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 896. ಕುಮಾರ ರಾಮನ ಕಥೆ by ನಂಜುಂಡ-
KUMĀRARĀMANA KATHE BY NAÑJUṆḌA.

Substance, Palm-leaf. Size, 15 × 1¾—15¼ × 1¾ inches. Pages, 441. Lines, 6—8 on a page. Extent, 6400 granthas. Character, Kannada. Condition, much injured. Appearance, old. Mode of writing, good.

Incomplete.

Same work as that described above.

(ವಿ-ವಿ)—

ಇದರಲ್ಲಿ ೫—೩೧, ೩೬—೪೩ ಸಂಧಿಗಳಿರುವುವು. ೧—೨೨, ೯೨—೯೯, ೧೩೮, ೧೩೯, ೧೪೫—೧೪೭, ೧೮೨—೧೮೪, ೨೧೩—೨೧೫ ಈ ಓಲೆಗಳಿಲ್ಲ. ೨೩ ನೆಯ ಓಲೆಯು ಒಂದೇ ಪುಟದಲ್ಲಿ ಬರೆದಿದೆ. ೩೬ ರಿಂದ ೪೩ ಸಂಧಿಗಳವರೆಗಿರುವ ೪೭ ಓಲೆಗಳಿಗೆ ಸಂಖ್ಯೆಯನ್ನು ಬರೆದಿಲ್ಲ. ಈ ಸಂಧಿಗಳ ಹೆಸರುಗಳನ್ನು ಹಿಂದೆ ವರ್ಣಿತವಾಗಿರುವ ೮೯೨ ನೆಯ ನಂಬರಿನಲ್ಲಿ ಬರೆದಿದೆ. ಈ ಪ್ರತಿ ಅತಿಶಿಥಿಲವಾದುದು ಲಿಪಿ ಉತ್ತಮವಾಗಿದೆ.

ಇದು ಹಿಂದೆ ವರ್ಣಿಸಿರುವ ಗ್ರಂಥವೇ ಆಗಿದೆ.

No. 897. ಕುಮಾರ ರಾಮನ ಕಥೆ by ನಂಜುಂಡ-
KUMĀRARĀMANA KATHE BY NAÑJUṆḌA.

Substance, Palm-leaf. Size, 20 × 1¾ inches. Pages, 106. Lines, 10 to 11 on a page. Extent, 4,500 granthas. Character, Kannada, Condition, very much injured. Appearance, very old. Mode of writing, good.

Incomplete.

Same work as that described above.

(ವಿ-ವಿ.)—

ಅಸಮಗ್ರ. ಈ ಪ್ರತಿಯನ್ನು ಹಿಂದಣ ೮೯೨ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪುಸ್ತಕದೊಡನೆ ಹೋಲಿಸಿ ನೋಡಿದಾಗ ಕಂಡುಬಂದ ವ್ಯತ್ಯಾಸಗಳು :—

ಇದರಲ್ಲಿರುವ ಸಂಧಿಗಳು :—			ಹಿಂದಣ ಪುಸ್ತಕದ ಸಂಧಿಗಳು.	
೩, ೪	ಕ್ಕೆ	ಸರಿಯಾಗಿರುವವು.	೭, ೮	ಸಂಧಿಗಳು.
೫	,,	,,	೯, ೧೦	,,
೬	,,	,,	೧೧, ೧೨, ೧೩	,,
೭	,,	,,	೧೪, ೧೫	,,
೮	,,	,,	೧೭, ೧೮	,,
೯	,,	,,	೧೯	,,
೧೦	,,	,,	೨೧	,,
೧೧	,,	,,	೨೨	,,
೧೩	,,	,,	೨೩	,,
೧೪	,,	,,	೨೪, ೨೫	,,
೧೫	,,	,,	೨೬	,,
೧೬	,,	,,	೨೭	,,
೧೭	,,	,,	೨೮	,,
೧೮	,,	,,	೨೯	,,
೧೯	,,	,,	೩೦	,,
೨೦	,,	,,	೩೪	,,
೨೧	,,	,,	೩೫	,,
೨೨	,,	,,	೩೬	,,
೨೩	,,	,,	(ಇನ್ನೊಂದು) ೩೬, ೩೭, ೩೮	,,
೨೪	,,	,,	೩೯	,,

ಹಿಂದಣ ಪ್ರತಿಯಲ್ಲಿರುವ ಕಥಾ ಭಾಗದ ಪದ್ಯಗಳನ್ನು ಮುಖ್ಯವಾಗಿ ಆರಿಸಿಕೊಂಡು ಇದರಲ್ಲಿ ಸಂಧಿಯನ್ನು ವಿಂಗಡಿಸಿದ್ದಾನೆ. ೧೯ ನೆಯ ಸಂಧಿಯ ಕೊನೆಯ ಭಾಗವಿಲ್ಲ. ೨೦ ರ ಆದಿಯಲ್ಲಿ ಕೆಲವು ಪದ್ಯಗಳು ಲುಪ್ತವಾಗಿವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 898. ಕುಮಾರ ರಾಮನ ಕಥೆ by ನಂಜುಂಡ-
KUMĀRARĀMANA KATHE BY NAÑJUṆDA.

Substance, Sritala. Size, 14 1/16 × 2 inches. Pages, 154. Lines, 8 to 9 on a page. Extent, 2,800 granthas. Character, Kannada. Condition, much injured. Appearance, old. Mode of writing , good.

Incomplete ; contains from the beginning of the 6th Āśvāsa to the end of 2nd sandhi of the 9th Āśvāsa.

Same work as that described above.

(ವಿ-ವಿ.)—

ಅಸಮಗ್ರ. ಮೊದಲು ೭೬ ಓಲೆಗಳಿಲ್ಲ. ನಂತರ ೧೫೪ ನೆಯ ಓಲೆಯ ವರೆಗೆ ಇದೆ. ಅಂತೂ ಇದರಲ್ಲಿರುವ ಒಟ್ಟು ಓಲೆಗಳು ೭೮. ೧೯ ನೆಯ ಓಲೆಯ ಮತ್ತು ಕೊನೆಯ ಓಲೆಯ ಒಂದೇ ಪುಟದಲ್ಲಿ ಬರೆದಿದೆ. ಆರನೆಯಾಶ್ವಾಸದ ಮೊದಲಿಂದ ಒಂಭತ್ತನೆಯಾಶ್ವಾಸದ ೨ ನೆಯ ಸಂಧಿಯ ಕಡೆಯವರೆಗಿದೆ. ಆರನೆಯಾಶ್ವಾಸದ ನಾಲ್ಕನೆಯ ಸಂಧಿಯ ಕಡೆಯಲ್ಲಿ ಕೆಲವು ಪದ್ಯಗಳೂ ಏಳನೆಯಾಶ್ವಾಸದ ಮೊದಲಲ್ಲಿ ನಾಲ್ಕು ಪದ್ಯಗಳೂ ಇಲ್ಲ. ಅತ್ಯಂತ ಶಿಥಿಲವಾದ ಪ್ರತಿ. ಪಾಠವು ಶುದ್ಧವಾಗಿದೆ ಯೆನ್ನಬಹುದು. ಲಿಪಿ ಉತ್ತಮವು.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 899. ಕುಮಾರ ರಾಮನ ಕಥೆ by ನಂಜುಂಡ-
KUMĀRARĀMANA KATHE BY NAÑJUṆḌA.

Substance, palm-leaf. Size, 14 × 1¼ to 15 × 1¼ inches. Pages, 302 Lines, 4 to 5 on a page, Extent, 3,000 granthas. Character, Kannada. Condition, slightly injured. Appearance, old. Mode of writing, good and free from mistakes.

Contains the sandhis 21 (ಶೂಲದ ಸಂಧಿ) to 34 (ಕಂಪಿಲಬೇಟೆಯಿಂದ ಬಂದ ಸಂಧಿ) wants last stanza at the end of 34th sandhi.

Same work as that described above.

(ವಿ-ವಿ.)—

ಅಸಮಗ್ರ. ೨೧—೩೪ (ಶೂಲದ ಸಂಧಿಯಿಂದ ಕಂಪಿಲನು ಬೇಟೆಯಿಂದ ಬಂದ ಸಂಧಿಯು ವರೆಗಿನ) ಸಂಧಿಗಳಿವೆ. ೩೪ ನೆಯ ಸಂಧಿಯ ಕೊನೆಯ ಪದ್ಯವಿಲ್ಲ. ಹೆಚ್ಚಿನ ಮಟ್ಟಿಗೂ ಶುದ್ಧವಾದ ಪಾಠವನುಳ್ಳುದು. ಸ್ವಲ್ಪಮಟ್ಟಿಗೆ ಶಿಥಿಲವಾಗಿದೆ. ಲಿಪಿ ಉತ್ತಮವು

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 900. ಕುಮಾರ ರಾಮನ ಕಥೆ by ನಂಜುಂಡ-
KUMĀRARĀMANA KATHE BY NAÑJUṆḌA.

Substance, Palm-leaf. Size, 14⅜ × 1¼ inches. Pages, 145. Lines, 5 on a page. Extent, 1,500 granthas. Character, Kannada. Condition, injured. Appearance, old. Mode of writing, good.

Begins on fol. 1*a*. The other work herein is :—

(1) *Nītiśāstrasamuccaya* (Sanskrit ślōkās with Kannada Tīkā) 76*a*.

Incomplete ; contains sandhis 21 to 26, 30 and 31 complete.

Date of transcription—First day of the bright fortnight of the lunar month Śrāvaṇa in the year Paridhāvi.

Name of the scribe :—*Lingayya*, son of *Appājayya* of *Narihaḻḻi*.

Same work as that described above.

(ವಿ-ವಿ.)—

ಇದರಲ್ಲಿ ಶೂಲದ ಸಂಧಿ, ರತ್ನಿ ರಾಮನನ್ನು ಕಂಡಸಂಧಿ, ರತ್ನಿಯ ವಿರಹದಸಂಧಿ, ಸವಿನುಡಿಯಸಂಧಿ, ಮೆಲ್ನುಡಿಯಸಂಧಿ, ಚಿತ್ರಪಟದ ಸಂಧಿ, ರಾಜನೀತಿಯ ಸಂಧಿ, ಚೆಂಡಾಟದ ಸಂಧಿ ಈ ಯೆಂಟು ಸಂಧಿಗಳಿರುವುವು. ಇವುಗಳಿಗೆ ಈ ಪುಸ್ತಕದಲ್ಲಿ ಕ್ರಮವಾಗಿ ೧ ರಿಂದ ೮ ರ ವರೆಗೆ ಸಂಖ್ಯೆಯನ್ನು ಕೊಟ್ಟಿದೆ. ಹಿಂದೆ ೮೯೨ ನೆಯ ನಂಬರಿನಲ್ಲಿ ವರ್ಣಿಸಿರುವ ಸಂಪೂರ್ಣ ಪ್ರತಿಯೊಡನೆ ಇದನ್ನು ಹೋಲಿಸಿದರೆ ಇದರಲ್ಲಿರುವ ಸಂಧಿಗಳು ಅದರಲ್ಲಿ ಕ್ರಮವಾಗಿ ೨೧ ರಿಂದ ೨೬ ಮತ್ತು ೩೦, ೩೧ ನೆಯ ಸಂಧಿಗಳಾಗುವುವು. ಇದರಲ್ಲಿ ೧೨ ಮತ್ತು ೨೬ ನೆಯ ಓಲೆಗಳಿಲ್ಲ. ಈ ಪ್ರತಿಯನ್ನು ಬರೆದವನು ತೆರಕಣಾಂಬಿಯಲ್ಲಿರುವ ದೇವರನ್ನುಸ್ತುತಿಸಿದ್ದಾನೆ. ಆ ಊರು ಮೈಸೂರು ಡಿಸ್ಟ್ರಿಕ್ಟಿನ ಗುಂಡ್ಲುಪೇಟೆ ತಾಲೂಕಿಗೆ ಸೇರಿದೆ. ಪುಸ್ತಕದ ಕಡೆಯಲ್ಲಿ 'ಪರಿಧಾವಿ ಸಂವತ್ಸರದ ಶ್ರಾವಣ ಶುದ್ಧ ೧ ಆರಭ್ಯದಲ್ಲಿ ನರಿಹಳ್ಳಿ ಅಪ್ಪಾಜಯ್ಯನವರ ಮಗ ಲಿಂಗಯ್ಯನು ಬರೆದ ರಾಮನ ಸಾಂಗತ್ಯಕ್ಕೆ ಶುಭಮಸ್ತು' ಎಂದಿದೆ. ಇದರೊಡನೆ ಕರ್ಣಾಟಕ ಟೀಕಾಸಹಿತವಾದ ನೀತಿಶ್ಲೋಕಗಳಿವೆ. ಅದರ ಕಡೆಯಲ್ಲಿ 'ಚಾಣಾಕ್ಯ ಸಮಾಪ್ತ' ವೆಂದು ಬರೆದಿದೆ. ಶಿಥಿಲವಾದಪ್ರತಿ. ಲಿಪಿ ಉತ್ತಮವಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 901. ಕುಮಾರ ರಾಮನ ಕಥೆ by ನಂಜುಂಡ-
KUMĀRARĀMANA KATHE BY NAÑJUṆDA.

Substance, Palm-leaf. Size, 13¼ × 1¼ inches. Pages, 142. Lines, 5 to 6 on a page. Extent 1,650 granthas. Character, Kannaḍa. Condition, much injured. Appearance, old. Mode of writing, not good.

Incomplete.

Contains the 20th sandhi incomplete and 3rd and 4th Āśvāsas complete.

Same work as that described above.

(ವಿ.ವಿ.)—

ಅಸಮಗ್ರ. ಮೊದಲು ೨೦ ನೆಯ ಸಂಧಿಯಿದೆ (ನೇಮಿಖಾನನಿಗೂ ಕುಮಾರರಾಮನಿಗೂ ಕಾಳಗವಾಗುವ ಸಂದರ್ಭ). ಬಳಿಕ ೩ ನೆಯಾಶ್ವಾಸವು ಪೂರ್ಣವಾಗಿಯೂ ೪ ನೆಯದರಲ್ಲಿ ೧—೩ ಸಂಧಿಗಳೂ ಇವೆ. ೪೯೨ ನೆಯ ನಂಬರಿನಲ್ಲಿ ವರ್ಣಿಸಿದ ಪ್ರಕಾರ ೪ ನೆಯಾಶ್ವಾಸವೂ ಸಂಪೂರ್ಣವಾಗಿದೆಯೆಂದು ಹೇಳಬಹುದು. ಕಡೆಯಲ್ಲಿ ನಾಲ್ಕು ಪದ್ಯಗಳುಳ್ಳ "ನೆನೆಯಿಂ ಹರಿಹರ ಜಗನ್ನಾಥ ಕಾಶಿಯ ಪತಿಯ" ಎಂದು ಆರಂಭವಾಗುವ ಧನ್ಯಾಸೀರಾಗದ ಒಂದು ಹಾಡಿದೆ. ಅತಿ ಶಿಥಿಲವಾದ ಪ್ರತಿ. ಎರಡನೆಯ ಓಲೆಯಿಲ್ಲ. ಒಂದನೆಯ ಓಲೆಯೂ, ನಂತರ ಅಲ್ಲಲ್ಲಿ ಕೆಲವು ಓಲೆಗಳೂ ಮುರಿದಿವೆ. ಲಿಪಿ ಉತ್ತಮವಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ

No. 902. ಕುಮಾರ ರಾಮನ ಕಥೆ by ನಂಜುಂಡ-
KUMĀRARĀMANA KATHE BY NAÑJUṆDA.

Substance, Palm-leaf. Size, 11⅞ × 1⅜ inches. Pages, 162. Lines, 6 on a page. Extent, 2,000 granthas. Character, Kannaḍa. Condition, very much injured. Appearance, old. Mode of writing, good.

Incomplete.

Same work as that described above.

(ವಿ.ವಿ.)—

ಅಸಮಗ್ರ. ಆರನೆಯಾಶ್ವಾಸದ ಆದಿಭಾಗವಿಲ್ಲ. ಮುಂದೆ ಒಂಭತ್ತನೆಯಾಶ್ವಾಸದ ೨ ನೆಯ ಸಂಧಿಯ ಕೊನೆಯ ವರೆಗೂ ಸಂಧಿಗಳು (೨೧—೨೪) ಇವೆ. ಗ್ರಂಥಪಾತವುಂಟು. ಅತ್ಯಂತ ಶಿಥಿಲವಾದ ಪ್ರತಿ. ಮಧ್ಯದಲ್ಲಿ ಅನೇಕ ಓಲೆಗಳು ಹೋಗಿವೆ. ಕೆಲವು ಓಲೆಗಳು ಮುರಿದಿವೆ. ಲಿಪಿ ಚೆನ್ನಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 903. ಕುಮಾರ ರಾಮನ ಕಥೆ by ನಂಜುಂಡ-
KUMĀRARĀMANA KATHE BY NAÑJUṆDA.

Substance, Palm-leaf. Size, 14 $\frac{5}{16}$ × 1¼ inches. Pages, 368. Lines, 6 on a page. Extent, 4,500 granthas. Character, Kannada. Condition, much injured. Appearance, old, Mode of writing, not bad.

Incomplete, contains from the 47th stanza of the 22nd sandhi to the 37th Stanza of the 41st sandhi.

Same work as that described above.

(ವಿ ವಿ.)—

ಇವರಲ್ಲಿ ೨೦ ನೆಯ (ರತ್ನಿ ರಾಮನನ್ನು ಕಂಡ ಸಂಧಿ) ಸಂಧಿಯಿಂದ ೪೧ ನೆಯ (ಸುಲ್ತಾನನು ಮಾತ್ತಂಗಿಯನ್ನು ಕಳುಹಿಸಿದ ಸಂಧಿ) ಸಂಧಿಯ ವರೆಗಿದೆ. ೨೦ ನೆಯ ಸಂಧಿಯಲ್ಲಿ ೫೩ ನೆಯ ಪದ್ಯದ ವರೆಗಣ ಭಾಗವೂ, ೪೧ ನೆಯ ಸಂಧಿಯಲ್ಲಿ ೩೩ ನೆಯ ಪದ್ಯದಿಂದ ಮುಂದಿನ ಭಾಗವೂ ಇಲ್ಲ. ೨೫ ನೆಯ ಮೆಲ್ನಾಡಿಯ ಸಂಧಿಯಲ್ಲಿ ೧೦೭—೧೧೮ ಪದ್ಯಗಳಿರುವ ಓಲೆಯಿಲ್ಲ. ಇದು ಅತ್ಯಂತ ಶಿಥಿಲವಾದ ಪ್ರತಿ. ಬರೆವಣಿಗೆ ಸಾಮಾನ್ಯವಾದುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 904. ಕುಮಾರರಾಮನ ಕಥೆ by ನಂಜುಂಡ.

KUMĀRARĀMANA KATHE BY NAÑJUṆḌA.

Substance, Sritāla. Size, 12¼ × 1¾ inches. Pages, 160. Lines, 1 to 9 on a page. Extent, 2,800 granthas. Character, Kannada. Condition, much injured. Appearance, old. Mode of writing, fair.

Incomplete.

Same work as that described above.

(ವಿ-ವಿ.)—

ಇವರಲ್ಲಿ ರತ್ನಿವಿರಹದ ಸಂಧಿ, ಸವಿನುಡಿಯ ಸಂಧಿ, ಮೆಲ್ನಾಡಿಯ ಸಂಧಿ ಚಿತ್ರ ಪಟದ ಸಂಧಿ (ರತ್ನಿ ಕುಟಿಲದೇವತೆಗಳ ನೊಸಿಸಿದ ಸಂಧಿ), ರಾಜನೀತಿಯ (ರಾಮನು ತಾಯನ್ನು ಚೆಂಡು ಕೇಳಿದ) ಸಂಧಿ, ರಾಮನು ರತ್ನಿಯ ಮನೆಗೆ ಹೋಗಿ ಚೆಂಡು ಕೇಳಿದ ಸಂಧಿ, ವೇಶ್ಯಾವಾಕ್ (ಚಂದ್ರಿಕಾ ವಿಹರಣ) ವಸಂಧಿ, ಕೂಲದ ಸಂಧಿ, ರಾಮನು ಸತ್ತ ಸುದ್ದಿಯನ್ನು ಸುಲ್ತಾನನು ಬಂದ (ರತ್ನಿಯ ಪಶ್ಚಾತ್ತಾಪದ) ಸಂಧಿ, ಕಂಪಿಲನು ಬೇಟೆಗೆ ಹೋದ ಸಂಧಿ, ಕಂಪಿಲನು ಬೈಚಪ್ಪನೊಡನೆ ರಾಮನಾಥನನ್ನು ಕೊಲ್ಲಲು ಹೇಳಿದ ಸಂಧಿ, ಇಂದ್ರಜಾಲದ ಸಂಧಿ, ರಾಮನನ್ನು ನೆಲಮಾಳಿಗೆಯಲ್ಲಿ ಬಚ್ಚಿಟ್ಟ ಸಂಧಿ, ರತ್ನಿ ರಾಮನನ್ನು ಸ್ವಪ್ನದಲ್ಲಿ ಕಂಡು ಕೊಂಡಾಡುವ ಸಂಧಿ, ರಾಮನು ನೆಲಮಾಳಿಗೆಯಿಂದ ಹೊರಟ ಸಂಧಿ ಇವು ಕ್ರಮದಿಂದಿವೆ. ಇವು ೮೭೨ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಸಂಪೂರ್ಣ ಪ್ರತಿಯಲ್ಲಿ ಕಮವಾಗಿ ೨೩-೨೬, ೩೦, ೩೨, ೨೮, ೨೯, ೩೫, ೨೫, ೩೪, ೩೬, ೨೭, ೩೭ (೧೪ ಸಂಧಿಗಳು) ನೆಯ ಸಂಧಿಗಳಾಗುವುವು. ಹೀಗೆ ಸಂಧಿಗಳನ್ನು ಅಸ್ತವ್ಯಸ್ತವಾಗಿ ಬರೆದು ಓಲೆಗಳ ಸಂಖ್ಯೆಗಳು ಮಾತ್ರ ೭೮ ರ ವರೆಗೆ ಕ್ರಮವಾಗಿ ಗುರುತಿಸಲ್ಪಟ್ಟಿವೆ. ೧, ೫-೭, ೨೬-೨೭, ೩೧, ೩೪-೩೫, ೪೦, ೪೧, ೪೪ ನೆಯ ಓಲೆಗಳಿಲ್ಲ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಉತ್ತಮವಾಗಿದೆ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 905. ಕುಮಾರರಾಮನ ಕಥೆ by ನಂಜುಂಡ.

KUMĀRARĀMANA KATHE BY NAÑJUṆḌA.

Substance, Palm-leaf. Size, 15¼ and 15¾ × $1\frac{5}{16}$ inches. Pages, 88. Lines, 4-6 on a page Extent, 900 granthas. Character, Kannada. Condition, much injured. Appearance, old. Mode of writing, good.

Incomplete.

Same work as that described above.

(ವಿ-ವಿ.)—

ಅಸಮಗ್ರ ಚಿತ್ರಪಟದ ಸಂಧಿ, ಕುಮಾರರಾಮನ ಚೆಂಡಾಟದ ಸಂಧಿ, ಕುಮಾರರಾಮನು ರತ್ನಾಜಿಯನ್ನು ಚೆಂಡು ಕೇಳ್ದ ಸಂಧಿ ಈ ಕೆಲವಿವೆ. ಓಲೆಗಳು ಬಹಳವಾಗಿ ಮುರಿದಿವೆ. ಅಲ್ಲಲ್ಲಿ ಕೆಲವು ಓಲೆಗಳು ಹೋಗಿವೆ ಅತಿಶಿಥಿಲವಾದ ಪ್ರತಿ. ಲಿಪಿ ಉತ್ತಮವಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 906. ಕುಮಾರರಾಮನ ಕಥೆ by ನಂಜುಂಡ.

KUMĀRARĀMANA KATHE BY NAÑJUNḌA.

Substance, palm-leaf. Size, 14 × 1 1/8 inches. Pages, 72, Lines, 5 on a page. Extent, 675 granthas. Character, Kannada. Condition, very much injured. Appearance, old. Mode of writing, good.

Incomplete.

Same work as that described above.

(ವಿ-ವಿ.)—

ಅಸಮಗ್ರ. ರತ್ನಿ ಶೃಂಗಾರವಮಾಡಿದ ಸಂಧಿ, ರಾಜನೀತಿಯ ಸಂಧಿ, ಕುಮಾರರಾಮನು ಚೆಂಡಾಡಿದ ಸಂಧಿ, ರಾಮನು ರತ್ನಿಯ ಮನೆಗೆ ಹೋಗಿ ಚೆಂಡು ಬೇಡಿದ ಸಂಧಿ ಈ ಕೆಲವು ಸಂಧಿಗಳವೆ. ಅತ್ಯಂತ ಶಿಥಿಲವಾಗಿದೆ. ಓಲೆಗಳು ಮುರಿದಿವೆ. ಗ್ರಂಥಪಾತವು ಹೆಚ್ಚಾಗಿದೆ ಲಿಪಿ ಚೆನ್ನಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ.

No. 907. ಕುಮಾರರಾಮನ ಕಥೆ by ನಂಜುಂಡ.

KUMĀRARĀMANA KATHE BY NAÑJUNḌA.

Substance, plam-leaf. Size, 12 × 1¼ inches. Pages, 241. Lines, 5 on a page. Extent, 2,600 granthas. Character, Kannada. Condition, injured. Appearance, old. Mode of writing, very good.

Incomplete ; contains Āśvāsas 8-10 complete.

Same work as that described above.

Date of transcription—First day of the bright fortnight of the lunar month Phālguṇa in the year Vyaya.

Name of the scribe—Subbayya, son of Subbayya of Cikkanāyakana haḻḻi.

(ವಿ-ವಿ.)—

ಅಸಮಗ್ರ ೮ ನೆಯ ಆಶ್ವಾಸದಿಂದ ೧೦ ನೆಯಾಶ್ವಾಸದ ಕೊನೆಯ ವರೆಗೆ ಎಂದರೆ "ರತ್ನಿಯ ಸ್ವಪ್ನದ ಸಂಧಿ" ಯಿಂದ "ರತ್ನಿಯಾಗಿ ಹುಟ್ಟಿದ ಊರ್ವಶಿಯ ಸುರಲೋಕ ಗಮನ ಸಂಧಿ" ಯ ಪರ್ಯಂತವಾದ ೧೨ ಸಂಧಿಗಳು ಪೂರ್ಣವಾಗಿವೆ. ಈ ಸಂಧಿಗಳಿಗೆ ಸಂಖ್ಯೆಯು ಕ್ರಮವಾಗಿ ೧ ರಿಂದ ೧೨ ರ ವರೆಗೆ ಕೊಟ್ಟಿದೆ. ಆದಿಯಲ್ಲಿ ವರ್ಣಿತವಾಗಿರುವ ಪ್ರತಿಯನ್ನೂ ಇದನ್ನೂ ಹೋಲಿಸಿ ನೋಡುವಲ್ಲಿ, ಅಲ್ಲಲ್ಲಿ ಒಂದೆರಡು ಪದ್ಯಗಳು ಹೆಚ್ಚು ಕಡಿಮೆಯಾಗಿ ಕಂಡು ಬರುವುವು. ಅತ್ಯಂತ ಶಿಥಿಲವಾಗಿದೆ. ಮಧ್ಯದಲ್ಲಿ ನಾಲ್ಕೈದು ಓಲೆಗಳಿಲ್ಲ. ಕೆಲವು ಓಲೆಗಳು ಮುರಿದಿವೆ. ಬರವಣಿಗೆ ಉತ್ತಮವು. ಪುಸ್ತಕದಾದಿಯಲ್ಲಿ 'ಕಲ್ಲಾಹಳ (ಕಲ್ಲಹಳ್ಳಿ) ಯ ಪ್ರತಿ ಹೊಸರಾಮನ ಸಾಂಗತ್ಯದಲ್ಲಿ ಕುಮಾರರಾಮನ ಪ್ರಸಂಗ' ಎಂದೂ, ಪುಸ್ತಕದ ಕೊನೆಯಲ್ಲಿ 'ವ್ಯಯ ಸಂವತ್ಸರದ ಫಾಲ್ಗುಣ ಶು. ೧ ಲು ಬರೆದ ಹೊಸರಾಮನ ಸಾಂಗತ್ಯಕೆ ಚಿಕ್ಕನಾಯಕನ ಹಳ್ಳಿಯ ಸುಬ್ಬಯ್ಯನವರ ಮಗ ಸುಬ್ಬಯ್ಯ ಬರೆದ ಪುಸ್ತಕಕ್ಕೆ ಶ್ರೀ' ಎಂದಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ.

No. 908. ಕುಮಾರರಾಮನ ಕಥೆ by ನಂಜುಂಡ-

KUMĀRARĀMANA KATHE BY NAÑJUṆḌA.

Substance, Sritāla. **Size**, 14 11/16 × 16 13/16 inches. **Pages**, 184. **Lines**, 9 on a page. **Extent**, 3,000 granthas. **Character**, Kannada. **Condition**, much injured. **Appearance**, old. **Mode of writing**, not bad.

Begins on fol. 1*a*. The other work herein is (1) Vaidyaviṡaya 93*a*.

Incomplete ; contains the sandhis from 31 to 42 complete.

Date of transcription:—Friday, the second day of the bright fortnight of the lunar month Phālguna of Saumya in the Śaka year 1591 corresponding to 1669 A.D.

Name of the scribe :—*Ādappayya* of *Maleyūru*.

Same work as that described above.

(ವಿ.ವಿ.)—

ಅಸಮಗ್ರ. ಇದರಲ್ಲಿ ಎಂಟನೆಯಾಶ್ವಾಸದ ಮೂರನೆಯ ಸಂಧಿಯಿಂದ (೩೧ ನೆಯ ಸಂಧಿಯಿಂದ) ಆರಂಭವಾಗಿ ಹನ್ನೊಂದನೆಯಾಶ್ವಾಸದ ಎರಡನೆಯ ಸಂಧ್ಯಂತದ (೪೨ ನೆಯ ಸಂಧ್ಯಂತದ) ವರೆಗೂ ಇದೆ. ಈ ಪ್ರತಿಯಲ್ಲಿ ಆಶ್ವಾಸ ಸಂಖ್ಯೆ ಮುಂತಾದುವುಗಳನ್ನು ತಪ್ಪಾಗಿ ಬರೆದಿದೆ. ಆದ ಕಾರಣ ಇದನ್ನು ೭೯೨ ನೆಯ ನಂಬರಿನಲ್ಲಿ ವರ್ಣಿತವಾದ ಸಂಪೂರ್ಣ ಪ್ರತಿಯೊಡನೆ ಹೋಲಿಸುವಾಗ ಆಶ್ವಾಸ, ಸಂಧಿಗಳೆಣಿಕೆಯು ಮೇಲೆ ಸೂಚಿಸಿರುವಂತಿದೆ. ಈ ಪುಸ್ತಕದಲ್ಲಿರುವ ಸಂಧಿಗಳ ಹೆಸರುಗಳು ಕ್ರಮವಾಗಿ ಹೀಗಿವೆ. ೩೧. ಚೆಂಡಿನಾಟದ ಸಂಧಿ, ೩೨. ಚೆಂಡು ಬಿದ್ದ ಸಂಧಿ (ರಾಮ ರತ್ನಿಯ ಮನೆಗೆ ಚೆಂಡು ಕೇಳದ ಸಂಧಿ), ೩೩. ಪುಸಿಯ ಸಕದ ಸಂಧಿ (ರತ್ನಿಯ ವಿಪರೀತಕೃತ್ಯದ ಸಂಧಿ), ೩೪. ಕಂಪಿಲನು ಬೇಟೆಯಿಂದ ಹಿಂದಿರುಗಿದ ಸಂಧಿ, ೩೫. ಕಂಪಿಲನು ರಾಮನಾಥನನ್ನು ಕೊಲ್ಲುವಂತೆ ಬೈಚಪ್ಪನಿಗೆ ಹೇಳದ ಸಂಧಿ, ೩೬. ಇಂದ್ರಜಾಲದ ಸಂಧಿ, ೩೭. ರಾಮ ಸತ್ತ ಸುದ್ದಿಕೇಳ ಸುಲ್ತಾನ ಬಂದ ಸಂಧಿ, ೩೮. ನೇಮಕುಮ್ಮಟದೊತ್ತಿನಲ್ಲಿ ಬೀಡು ಬಿಟ್ಟಿರಲು ಕಂಪಿಲನು ಕಗ್ಗೊಲೆಗೆ ಕಳುಹಿದ ಸಂಧಿ, ೪೦. ರಾಮನಾಥನು ನೇಮಿಯನ್ನು ಮುರಿಯಲಿರಿದ ಸಂಧಿ (ರತ್ನಿಯಾಗಿದ್ದ ಊರ್ವಶಿಯ ಸುರಲೋಕ ಗಮನದ ಸಂಧಿ), ೪೧. ಸುಲ್ತಾನನು ಮಾತಂಗಿಯನ್ನು ಕಳುಹಿದ ಸಂಧಿ, ೪೨. ರಾಮನಾಥನು ಕಾಟಣ್ಣನನ್ನು ಮಾತಂಗಿಯ ಪಾಳಯಕೆ ಕಗ್ಗೊಲೆಗೆ ಕಳುಹಿದ ಸಂಧಿ.

ಈ ಪ್ರತಿ ಅತ್ಯಂತ ಶಿಥಿಲವಾಗಿದೆ. ಇದರಲ್ಲಿ ೨, ೯೨ ಈ ಎರಡು ಓಲೆಗಳಿಲ್ಲ. ಕೊನೆಯ ಓಲೆಯಲ್ಲಿ ಕಾಣಿಸಿದ ಸಂಖ್ಯೆ ೯೪. ನಂತರ ಮೂರು ಓಲೆಗಳಲ್ಲಿ ವೈದ್ಯ ವಿಷಯವಿದೆ. ಲಿಪಿ ಸಾಮಾನ್ಯವಾದುದು. ಪುಸ್ತಕದ ಕೊನೆಯಲ್ಲಿ "ಶ್ರೀಶಕಾಬ್ದ ೧೫೯೧ ನೆಯ ಸೌಮ್ಯ ಸಂವತ್ಸರದ ಫಾಲ್ಗುಣ ಶು. ೨ ಶುಕ್ರವಾರ ಬರೆದೆನು. ಮಲೆಯೂರ ಆದಪ್ಪಯ್ಯ ತನಗೆ ಬರೆದಂಥ ರಾಮನ ಸಾಂಗತ್ಯಕ್ಕೆ ಮಂಗಳಂ" ಎಂದಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 909. ಕುಮಾರರಾಮನ ಕಥೆ by ನಂಜುಂಡ-

KUMĀRARĀMANA KATHE BY NAÑJUṆḌA.

Substance, palm-leaf. **Size**, 19¾ × 1⅜ inches. **Pages**, 10. **Lines**, 9 on a page. **Extent**, 280 granthas. **Character**, Kannada. **Condition**, extremely injured. **Appearance**, old. **Mode writing**, good.

Begins on fol. 69*a*. The other work herein is *Sobagina sōne* 1a.

Incomplete ; contains the first two sandhis complete and the third incomplete.

Same work as that described above.

(ವಿ.ವಿ.)—

ಅಸಮಗ್ರ. ಮೊದಲಿನ ಎರಡು ಸಂಧಿಗಳು ಪೂರ್ಣವಾಗಿಯೂ ಮೂರನೆಯದರಲ್ಲಿ ಮೊದಲಿಂದ ಅರುವತ್ತೆರಡು ಪದ್ಯಗಳೂ ಇವೆ. ಅತ್ಯಂತ ಶಿಥಿಲವಾದ ಪ್ರತಿ. ಓಲೆಗಳು ಅತ್ಯಂತ ಜೀರ್ಣವಾಗಿವೆ. ಲಿಪಿ ಉತ್ತಮ. ಇದರೊಡನೆ ಸೊಬಗಿನ ಸೋನೆಯೆಂಬ ಪುಸ್ತಕವೂ ಇದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 910. ಕುಮಾರರಾಮನ ಕಥೆ by ನಂಜುಂಡ.

KUMĀRARĀMANA KATHE BY NAÑJUṆḌA.

Substance, palm-leaf. Size, 12½ × 1-1/16 inches. Pages, 120. Lines, 4 on a page. Extent, 600 granthas. Character, Kannada. Condition, injured. Appearance, old. Mode of writing, good.

Incomplete, contains some stanzas of the sandhis from 24 to 28.

Same work as that described above.

(ವಿ.ವಿ.)—

ಅಸಮಗ್ರ. ಓಲೆಗಳು ನಡುವೆ ಅಲ್ಲಲ್ಲಿ ಹೋಗಿವೆ. ಮೊದಲಿನ ಓಲೆಯು ೬೩ ಎಂಬ ಸಂಖ್ಯೆಯಿಂದ ಅಂಕಿತವಾಗಿದೆ. ಕೊನೆಯ ಓಲೆಯಲ್ಲಿ ಕಾಣಿಸಿದ ಸಂಖ್ಯೆ ೧೨೯. ಇದರಲ್ಲಿ ೨೪ ನೆಯ ಸಂಧಿ (ನವಿನುಡಿಯ ಸಂಧಿ) ಯಿಂದ ೨೮ ನೆಯ ಸಂಧಿಯ ವರೆಗಿನ ಐದು ಸಂಧಿಗಳ ಕೆಲವು ಪದ್ಯಗಳಿವೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 911. ಕುಮಾರರಾಮನ ಕಥೆ by ಗಂಗಯ್ಯ.

KUMĀRARĀMANA KATHE BY GAṄGAYYA.

Substance, palm-leaf. Size, 13-11/16 × 1-3/16 inches. Pages, 490. Lines, 4 to 5 on a page. Extent, 3,400 granthas. Character, Kannada. Condition, much injured. Appearance, old. Mode of writing, fair.

Complete in 11 Sandhis.

The main story is the same as that described under No. 892 ante, although there are a few differences in some minor details. For particulars see extracts below. The author is *Pañcaḷada Gaṅgayya.* He makes salutations Gaṇēśa worshipped at *Tagadūru* and *Nanjuṇḍēśvara* worshipped *Nañjangode* in Mysore state. It is therefore presumed that the author belonged to Tagaḍūru in Nañjangode Taluk. His date is about 1650 A.D.

Beginning :

ಸಾಂ ॥ ಶ್ರೀಗಿರಿಜಾಸ್ಯಾಂಬುಜ ದಿನನಾಯಕ ।
ನಾಗಭೂಷಣ ಭಾಳನೇತ್ರ ॥
ಭಾಗೀರಥೀಧರ ಭವರೋಗ ವೈದ್ಯನೆ ।
ನಾಗಶಂಕರ ಬಲಗೊಂಬೆ ॥ ೧ ॥
ಶ್ರೀಲಕ್ಷ್ಮೀವಲ್ಲಭ ಶ್ರೀಕೃಷ್ಣರಾಯನೆ ।
ಮೂಲೋಕ ವಂದ್ಯ ಪಾಲಕನೆ ॥ (?)
ಲೀಲ ಚಿಂತಾಮಣಿ ಗೋಪಿಯರರಸನೆ ।
ಪಾಲಿಸುವ(ವ ನೆ ತ್ರಿಜಗವ ॥ ೨ ॥

ಸರಸ್ವತಿಯನು ಕೇಳ ಫಲವಿಲ್ಲವೆನುತಲಿ ।
ಜರಿದೆ ಸಂದೇ[ಹ] (ಯ) ಮಾಡಬೇಡ ॥
ಪರನಾರಿಯರ ಸೋದರ ರಾಮನಾಥನ ।
ಚರಿತೆ ಕೇಳಲು ಮುಕ್ತಿಯಹುದು ॥ ೮ ॥
ಕನ್ನಡದೇಶಕ ರನ್ನದ ಪದಜಾತ ।
ಮುನ್ನ ಮುನ್ನಿನ ಪಂಚಾಸ್ಯ ॥
ಚೆನ್ನ ಭುಜಂಗೇಶನ ಭೃತ್ಯ ಗಂಗಯ್ಯ ಸಂ ।
ಪನ್ನ ಹೇಳದನೀ ಕೃತಿಯ ॥ ೯ ॥
ಜಗದೊಳ . . . . ಹವಣಿಸಬೇಕೆಂದು
ಅಗಜೆಯರರಸನ ನೆನೆದು ॥
ತಗಡೂರ ಕಟ್ಟೆಯಲಿ ನೆಲಸಿ ವರವನೀವ ॥
ಮಿಗೆ ರೂಪಿಗೆ ವಿಷ್ಣುರಾಜ ॥ ೧೦ ॥
ರಾಮಜಜಂಗಿಯ ದೇವರ ಪಿಂಡವ ।
ರಾಮನ ಕಥೆಯ ಪೇಳುವೆನು ॥
ಸೋಮನ ಸೂಡಿದ ಪರಮಾಧಿಕಾರನೆ ।
[ಹೇ] (ಹೈ) ಮವತಿಯರ ವಲ್ಲಭನೆ ॥ ೧೧ ॥
ಭೂಮಿಯೊಳೆನ್ನ ರಕ್ಷಿಸುವ ಜಜಂಗಿಯ ।
ರಾಮಯ್ಯನ ಕೃಪೆಯಿಂದ ॥
ರಾಮನ ಕೃತಿಯನು ಹವಣಿಸಿ ಪೇಳುವೆ ।
ಪ್ರೇಮದಿಂ ಕೇಳ್ಗೆ ಸಜ್ಜನರು ॥ ೧೨ ॥
ಸಕ್ಕರೆಸವಿಯಂತೆ ಮಧುರಮಾವಿನ ಪಣ್ಣಿಂ ॥
ದುಕ್ಕುವ ತನಿರಸದಂತೆ ॥
ಚಿಕ್ಕಮಕ್ಕಳ ನಸುನಗೆಯಂತೆ ಗಂಗ (ನ) ಕೃತಿ ।
ಸತ್ಕವಿಗಳು ಲಾಲಿಪುದು ॥ ೧೩ ॥

* * *

ಹರಿಹರ ಬಾಣ ಮಯೂರ ಮಲುಹಣ ದೇವ ।
ವರರುಚಿ ಕಾಳಿದಾಸನಿಗೆ ॥
ಭರದಿಂದಲೆರಗಿ ಪೇಳುವೆನೀ ಕೃತಿಯನು ।
ಕರುಣಿಸಿ ತಿದ್ದಿ ಬಲ್ಲವರು ॥ ೧೮ ॥
ಇಂತಪ್ಪ ಕೃತಿಯ ಅಂತಸ್ಥವನೆತ್ತುವೆ ।
ಸಂತತ [ಪಲ್ಲಿ] (ಮಲ್ಲಿ) ಪಲ್ಲಿದೇಶ ॥
ತಿಂತಿಣಿಯಲಿ ಸರ್ವದಾಯಾದ್ಯರೊಡ ಗೂಡಿ ।
ಪಂತದಲಿ ಹ ಸಿಂಗನಾಯಕ ॥ ೧೯ ॥

* * *

ಹೆಗದು ಸಂತೋಷದಿ ರಾಮದೇವರಾಯನು ।
ಅಗಣಿತ ಸಂತೋಷದಿರಲು ॥ (?)

ಬಗೆಬಗೆಯಲಿ ವರ್ಣಿಸಿ ಪೇಳುವೆನು ।
ಮುಗಿದು ದಿಲ್ಲಿಗೆಯೊಂದು ಸಂಧಿ ॥ ೧೦೦ ॥

Colophon:

ಅಂತು ಸಂಧಿ ೧ ಕ್ಕಂ ಪದನು ೧೦೦ ಕ್ಕಂ ಮಂಗಳಂ
ಕೆಂಜೆಡೆಗಳ ಕೆಂಪು ರಂಜಿಸುತಿರ್ಪ್ಪವು ।
ಕುಂಜರಚರ್ಮಾಂಬರನೆ ॥
ಕಂಜಭವನ ಶಿರವನರಿದ ನಂಜನಗೂಡು ।
ನಂಜುಂಡೇಶಗೆ ಶರಣೆಂಬೆ ॥ ೧ ॥
ಸುರಿತಾಳ ಡಿಲ್ಲಿಯಿಂದ ದೇವಗಿರಿಗೆ ಬಂದು ।
ಸೆರೆಸೂರೆ ಹಿಡಿಯೆ ರಾಯರನಾ ॥
ಧುರಧೀರ ಸಿಂಗನು ಮಲ್ಲಿಪಲ್ಲಿಯ ದೇಶಕ್ಕೆ ।
ಬರುವಂತಹ ಚರಿತೆಯನು ಕೇಳ ॥ ೨ ॥
ದೇಶಾಧಿಪತಿ ರಾಮನಾಥನ ತಲೆಯನು ।
ಕಾಶಿಯ ಪಟ್ಟಣಕ್ಕೊಯ್ದು ॥
[ವಿಶ್ವನಾಥಗೊಪ್ಪಿಸು ಯೆಂಮ ಯೆನುತಲಿ]
(ಈಶ ವಿಶ್ವನಾಥಗೊಪ್ಪಿಸೆಂದೆನುತಲಿ)
ಆ ಸಮಯದಿ ಕಳುಹಿದನು ॥ ೩೪ ॥
ರಾಮನ ಚರಿತೆಯ ಕೇಳದರೆ ಪಾಪವು ॥
ನಾಶನವಹುದು ನಿಮಿಷದಲಿ ॥
ಲೇಸಾಗಿಕೊಡುವ ಕೈಲಾಸದ ಪದವಿಯ ।
ಭೂತೇಶನೊಲಿದು ಕರುಣದಲಿ ॥ ೩೪೦ ॥
ರಾಮನ ಚರಿತೆಯ ಕೇಳದ ಜನರಿಗೆ ।
ಭೂಮಿದಾನವನಿತ್ತ ಫಲವು ॥
ಪ್ರೇಮದಿ ಸಕಲೈಶ್ವರ್ಯವು ದೊರೆವುದು ।
[ಯೀಶ್ವರನೊ] (ರಾಮೇಶನೊ) ಲಿದು ರಕ್ಷಿಸುವ ॥ ೩೪೩ ॥
ಸಂಗ್ರಾಮಧೀರ ರಾಮಯ್ಯನ ಚರಿತೆಯ ಕೇಳೆ ।
. . . . ದೇಳು ಸಂತಾನಗಳು ।
ಬಂಗಾರ ರಾಜ್ಯವು ಸಿರಿಯು ಟಂಕಂಗಿಯು ।
ಲಿಂಗನ ಕೃಪೆಯಿಂದಲಹುದು ॥ ೩೪೪ ॥
ಕಂದರ್ಪರೂಪ ರಾಮಯ್ಯನ ಚರಿತೆಯ ।
ಚಂದದಿ ಕೇಳದವರಿಗೆ ॥
ಬಂಧನ ಪರಿದು ಸಂತೋಷವು ಬರಲೆಂದು ।
ಸಂಧಿಯಿಲ್ಲಿಗೆ ಪೂರಾಯ ।

Colophon:

ಅಂತು ಸಂಧಿ ೧೧ ಕ್ಕೆ ಪದನು ೨೧೪೦ ಕ್ಕೆ ಮಂಗಳಮಹಾಶ್ರೀ.

(ವಿ.ವಿ.)—

ಸಮಗ್ರ. ಅತಿಶಿಥಿಲ. ಲಿಪಿ ಸಾಮಾನ್ಯ. ಪುಸ್ತಕದಾದಿಯಲ್ಲಿ ‘ವಿಶ್ವಾವಸುನಾಮ ಸಂವತ್ಸರದ ಶ್ರಾವಣ ಭಾದ್ರಪದ (?) ಬ ೩ ಸೋಮವಾರದಲ್ಲು ದೇವಸಮುದ್ರ ಪುರುತ್ತ ಹಳೆಶ್ಯಾನುಭೋಗ ಕೃಷ್ಣಪ್ಪನ ಪುತ್ರ [ಯೆ] (ಯೋಗೇಂದ್ರಯ್ಯನ ಕುಮಾರ ನಾರಾಯಣಪ್ಪನು (ಬರೆದ) ಕುಮಾರರಾಮನ ಪುಸ್ತಕವನ್ನು

ಬರೆಯುವುದಕ್ಕೆ ಶುಭಮಸ್ತು.' ಎಂದೂ ಪುಸ್ತಕದಂತ್ಯದಲ್ಲಿ 'ವಿಶ್ವಾವಸುನಾಮ ಸಂವತ್ಸರದ ಆಶ್ವಯುಜ ಬ. ೩ ಗುರುವಾರದಲ್ಲು ಕುಮಾರರಾಮನ ಪುಸ್ತಕ ಸಂಪೂರ್ಣವು. ಈ ಸಾಂಗತ್ಯವ ಬರೆದಾತ ದೇವಸಮುದ್ರ) ವುರಾತಹಾಳು ಶ್ಯಾನಭೋಗ [ಯೋ] (ಯೋ)ಗೆಂದ್ರಯ್ಯನ ಕುಮಾರ ನಾರಾಯಣಪ್ಪನು ಅರಿಯದವನು ಬರೆದು ಇದ್ದಾನು.' ಎಂದಿದೆ. ಈ ಪುಸ್ತಕದಲ್ಲಿ ಕೆಲವು ಓಲೆಗಳು ಮುರಿದಿವೆ. ಮಧ್ಯದಲ್ಲಿ ೨೪, ೨೫, ೭೪, ೭೫, ೯೪, ೯೫ ಓಲೆಗಳಿಲ್ಲ. ೧೧೧, ೧೧೨, ೧೧೩ ಸಂಖ್ಯೆಗಳು ಎರಡು ಬಾರಿ ಬರೆದಿವೆ. ಆದರೆ ಅವುಗಳಲ್ಲಿ ಗ್ರಂಥಭಾಗವು ದ್ವಿರುಕ್ತವಾಗಿಲ್ಲ.

ಇದು ಸಾಂಗತ್ಯದಲ್ಲಿ ಬರೆದಿದೆ. ಇದರಲ್ಲಿ ೧೧ ಸಂಧಿಗಳಿವೆ. ೧. ಪೀಠಿಕಾ ಸಂಧಿ (೧೦೦ ಪದ್ಯಗಳು), ೨. ಸುಲ್ತಾನನು ದೇವಗಿರಿ ಮುಂತಾದುವನ್ನು ಹಿಡಿದ ಸಂಧಿ (೯೫ ಪದ್ಯಗಳು), ೩. ಕುಮಾರರಾಮನು ಹುಟ್ಟಿದ ಸಂಧಿ (೧೦೪ ಪದ್ಯಗಳು), ೪ ಕುಮಾರರಾಮನು ಗುತ್ತಿಯ ಜಗದಾಪಿಯನ್ನು ಗೆದ್ದ ಸಂಧಿ (೯೦ ಪದ್ಯಗಳು), ೫. ಓರುಗಲ್ಲಿನಲ್ಲಿ ಎಪ್ಪತ್ತು ರಾಜರ ಬೋಲ್ಲನೊಡನೆ ರಾಮನು ಕಾದಾಡಿದ ಸಂಧಿ (೧೪೬ ಪದ್ಯಗಳು), ೬. ಲಿಂಗಬಂಡ ಸಂಧಿ (೧೩೧ ಪದ್ಯಗಳು), ೭. ಕೂಲದ ಹಬ್ಬದ ಸಂಧಿ (೧೦೩ ಪದ್ಯಗಳು), ೮. ಕಂಪಿಲನು ಬೇಟೆಗೆ ಹೋದುದು, ರಾಮನು ನೀರಾಟವಾಡಿದುದು, ರಾಮನು ಚೆಂಡಾಡಿದುದು (೪೪೮ ಪದ್ಯಗಳು), ೯. ನೆಲ ಮಾಳಗೆಯ ಸಂಧಿ (೨೮೧ ಪದ್ಯಗಳು), ೧೦. ನೇಮಿಬಂದ ಸಂಧಿ (೪೧೪ ಪದ್ಯಗಳು), ೧೧. ಸುಲ್ತಾನನು ಬಂದ ಸಂಧಿ (ಕುಮಾರರಾಮನ ನಿರ್ವಾಣ) (೩೪೫ ಪದ್ಯಗಳು). ಈ ಮೇಲೆ ಹೇಳಿರುವ ಸಂಧಿಗಳ ಪದ್ಯಗಳನ್ನು ಒಟ್ಟು ಸೇರಿಸಿದರೆ ೨೨೫೭ ಆಗುತ್ತವೆ. ಪುಸ್ತಕದಂತ್ಯದಲ್ಲಿ ಪದ್ಯಗಳು ೨೫೦೦ ಎಂದು ಮಾತ್ರ ಹೇಳಿದೆ.

ಗ್ರಂಥದಾದಿಯಲ್ಲಿ ಶಿವಸ್ತುತಿಯಿದೆ. ಬಳಿಕ ಕವಿ ಲಕ್ಷ್ಮೀಪತಿ, ಕೃಷ್ಣ (ಉಡುಪಿಯ ಕೃಷ್ಣನಿರಬಹುದೆ ? ಪ್ರತಿಯನ್ನು ನೋಡುವುದು.) ಶ್ರೀರಾಮ, ಬ್ರಹ್ಮ, ಗಣಪತಿ, ಸರಸ್ವತಿ, ಜಟಂಗಿರಾಮ ಇವರನ್ನು ನುತಿಸಿ, "ಸಕ್ಕರೆ ಸವಿಯಂತೆ . . . ।" ಎಂದೀ ಪ್ರಕಾರ ಕೃತಿಯನ್ನು ಹೊಗಳಿ, ಆ ಮೇಲೆ ವಿರೂಪಾಕ್ಷ, ಶಂಭು, ಶಂಕರದೇವ, ಕಿನ್ನರೇಶ್ವರ ಇವರುಗಳನ್ನು ಸ್ತುತಿಸಿದ್ದಾನೆ. ಪೂರ್ವ ಕವಿಗಳಲ್ಲಿ ಹರಿಹರ, ಬಾಣ, ಮಯೂರ, ಮಲುಹಣ, ವರರುಚಿ, ಕಾಳಿದಾಸ ಇವರುಗಳನ್ನು ಹೊಗಳಿ ಕತೆಯನ್ನು ಆರಂಭಿಸಿದ್ದಾನೆ. ಎರಡನೆಯ ಸಂಧಿಯಾದಿಯಲ್ಲಿ ನಂಜನಗೂಡು ನಂಜುಂಡೇಶ್ವರನ ಸ್ತುತಿಯಿದೆ.

ಕಥಾಗರ್ಭ :—ಮಲ್ಲಿಪಲ್ಲಿ ದೇಶದಲ್ಲಿ ಮುಮ್ಮಡಿಸಿಂಗನೆಂಬುವನಿದ್ದನು. ಅವನು ದಾಯಾದ್ಯರ ಹಿಂಸೆಯನ್ನು ತಾಳಲಾರದೆ ಆ ದೇಶವನ್ನು ಬಿಟ್ಟು ದೇವಗಿರಿಯ ರಾಮದೇವರಾಯ ನನ್ನಾಶ್ರಯಿಸಿದನು. ಡಿಳ್ಳಿಯ ಸುಲ್ತಾನನು ರಾಮದೇವರಾಯನನ್ನುಯುದ್ಧದಲ್ಲಿ ಕೊಲ್ಲಲು ಸಿಂಗನು ರಾಯದುರ್ಗಕ್ಕೆ ಹೋಗಿ ಆಹವಮಲ್ಲನನ್ನಾಶ್ರಯಿಸಿದನು. ಆಹವಮಲ್ಲನು ಸ್ವರ್ಗಸ್ಥನಾದ ಬಳಿಕ ಅವನಳಿಯನಾದ ಮಲ್ಲನೆಂಬುವನನ್ನು ಅಟ್ಟಿಬಿಟ್ಟು ಆ ರಾಜ್ಯವನ್ನು ಸಿಂಗನು ಆಕ್ರಮಿಸಿ, ಅಲ್ಲಿ ಮಂತ್ರಿಯಾಗಿದ್ದ ಬೈಚಪ್ಪ ನೆಂಬುವನನ್ನೆ ತನ್ನ ಮಂತ್ರಿಯನ್ನಾಗಿ ನಿಯಮಿಸಿಕೊಂಡನು. ಸಿಂಗನ ಮಗನು ಕಂಪಿಲರಾಯನೆಂಬುವನು. ಕಂಪಿಲರಾಯನಿಗೆ ಹರಿಯಮ್ಮ ಅಥವಾ ಹರಿಯಲದೇವಿ ಮತ್ತು ರತ್ನಿ ಅಥವಾ ರತ್ನಾಜಿಯೆಂಬ ಇಬ್ಬರು ಹೆಂಡತಿಯರು. ಹರಿಯಮ್ಮನ ಮಗನೇ ಈ ಕಥಾನಾಯಕನಾದ ಕುಮಾರರಾಮನು. ಅವನು ಬಹು ಪರಾಕ್ರಮಿ. ತನ್ನ ಹದಿನಾರನೆಯ ವಯಸ್ಸಿನೊಳಗಾಗಿಯೆ ತಮ್ಮ ಪಟ್ಟಣವಾದ ಕಂಪ್ಲಿಯನ್ನು ಹಿಡಿಯಲು ಬಂದ ಡಿಳ್ಳಿಯ ಸುಲ್ತಾನನ ದಂಡಿನೊಡನೆ ಯುದ್ಧಮಾಡಿ ಅವನ್ನು ಸೋಲಿಸಿ ಓಡಿಸಿದನಲ್ಲದೆ ಇನ್ನೂ ಜಗದಾಪಿ ಮುಂತಾದ ಅನೇಕ ರಾಜರನ್ನೂ ಗೆದ್ದನು. ಹೀಗೆ ಪ್ರತಾಪಶಾಲಿಯಾದ ರಾಮನು ರೂಪವಂತನೂ ಆಗಿದ್ದುದರಿಂದ ಅವನ ಮಲತಾಯಿಯಾದ ರತ್ನಾಜಿಯು ಅವನಲ್ಲಿ ಮೋಹಗೊಂಡಳು. ರಾಜನಾದ ಕಂಪಿಲನು ಬೇಟೆಗೆ ಹೋಗಿರುವಾಗ ಕುಮಾರರಾಮನು ತನ್ನ ಗೆಳೆಯರೊಡನೆ ಚೆಂಡಾಡುತ್ತಿರಲು ಅದು ರತ್ನಿಯ ಮನೆಗೆ ಹೋಗಿ ಬಿದ್ದಿತು. ಚೆಂಡನ್ನು ಕೇಳಲು ರಾಮನು ಚಿಕ್ಕಮ್ಮನ ಮನೆಗೆ ಹೋದಾಗ ರತ್ನಿಯು ಅವನನ್ನು ಹಿಡಿದುಕೊಂಡು ತನ್ನಿರವನ್ನು ಸೂಚಿಸಲು ಧರ್ಮತತ್ಪರನಾದ ರಾಮನು ಸಮ್ಮತಿಸದೆ ಹೊರಟು ಬಂದನು. ಬೇಟೆಯಿಂದ ಹಿಂದಿರುಗಿದ ರಾಜ

ನೊಡನೆ ರತ್ನಿಯು ರಾಮನ ಮೇಲೆ ಅಪವಾದವನ್ನು ಹೇಳಲಾಗಿ ಕಂಪಿಲನು ಕೇಳಿ ಕೋಪಗೊಂಡು ಮಗನನ್ನು ಕೊಲ್ಲುವಂತೆ ಬೈಚಪ್ಪಗೆ ಅಪ್ಪಣೆಮಾಡಿದನು. ಮಂತ್ರಿಯು ಯಾರೂ ಅರಿಯದಂತೆ, ಅವನನ್ನು ನೆಲಮಾಳಿಗೆಯಲ್ಲಿರಿಸಿ, ಕೊಲ್ಲಿಸಿದೆನೆಂದು ರಾಜನೊಡನೆ ಹೇಳಿಬಿಟ್ಟನು.

ದಿಳ್ಳಿಯ ಸುಲ್ತಾನನು ಪರಾಕ್ರಮಶಾಲಿಯಾದ ಕುಮಾರ ರಾಮನು ಸತ್ತನೆಂದು ಭಾವಿಸಿ ಅವನ ರಾಜ್ಯದ ಮೇಲೆ ದಂಡನ್ನು ಕಳುಹಿಸಲು, ಕಂಪಿಲನಿಗೆ ಆ ದಂಡನ್ನಿದಿರಿಸುವುದು ಅಶಕ್ಯವೆಂದರಿತು ಕುಮಾರ ರಾಮನು ಯುದ್ಧಕ್ಕೆ ಹೋಗಿ ಅದನ್ನು ಸೋಲಿಸಿದನು. ರಾಮನು ಬದುಕಿರುವುದನ್ನು ತಿಳಿದು ರತ್ನಿಯು ಪ್ರಾಣತ್ಯಾಗ ಮಾಡಿಕೊಂಡಳು. ಆ ಮೇಲೆ ಪುನಃ ಸುಲ್ತಾನನಾಜ್ಞೆಯಿಂದ ಮಾತಂಗಿ ಯೆಂಬುವಳು ದಂಡಿನೊಡನೆ ಬಂದಿರಲು ರಾಮನಾಥನವಳನ್ನೂ ಸೋಲಿಸಿ ಓಡಿಸಿದನು. ಆಗ ರಾಮನ ಕಡೆಯವರಾದ ತೆಲುಗ ಮನ್ನೆಯರು 'ನವಲಕ್ಷ ತೆಲುಂಗರ ಗಂಡನೆಂದೆಂಬ ಕಂಡೆಯವನಿಕ್ಕ ಬಹುದೆ ಕಾಲೊಳಗೆ' ಎಂದು ರೇಗಿ ರಾಮನಾಥನನ್ನು ಕೊಲ್ಲಿಸಬೇಕೆಂದು ಒಳಸಂಚು ನಡೆಯಿಸಿ ಮಾತಂಗಿಯನ್ನು ಹಿಂದಿರುಗಿ ಬರುವಂತೆ ಮಾಡಿದರು. ಧರ್ಮಯುದ್ಧವನ್ನೆಸಗುವ ಕುಮಾರರಾಮನು ಕೈಗೆ ಸಿಕ್ಕಿದ ಮಾತಂಗಿಯನ್ನು ಹೆಂಗುಸೆಂದು ಬಿಡಲಾಗಿ ಧರ್ಮಬಾಹಿರಳಾದಾಕೆಯು ಕುಮಾರರಾಮನನ್ನು ವಂಚನೆಯಿಂದ ಕೊಂದುಬಿಟ್ಟಳು. ಸುಲ್ತಾನನು ರಾಮನಾಥನ ತಲೆಯನ್ನು ತನ್ನ ಪಟ್ಟಣದ ಬಾಗಿಲಿನಲ್ಲಿ ಕಟ್ಟಿಸಲಾಗಿ, ಅವರ ಆರ್ಭಟದಿಂದ ಊರಿನಲ್ಲಿ ಜನಕ್ಷಯವಾಗುತ್ತಿರಲು, ಅದನ್ನು ಕುಮ್ಮಟದುರ್ಗಕ್ಕೆ ಕಳುಹಿಸಿಕೊಟ್ಟನು. ಆ ತಲೆಯನ್ನು ಕಂಡು ಕಂಪಿಲರಾಯ ಮುಂತಾಗಿ ಎಲ್ಲರೂ ದುಃಖಿಸಿ ಕಾಶೀವಿಶ್ವನಾಥನ ಸನ್ನಿಧಿಗಳನ್ನು ಕಳುಹಿಸಿದರು.

ಕವಿ ಪಂಚಾಳದ ಗಂಗಯ್ಯನೆಂಬುವನು. ಇವನು ತಗಡೂರು ಕಟ್ಟೆಯಲ್ಲಿರುವ ಗಣೇಶನನ್ನು ಸ್ಮರಿಸಿದ್ದಾನೆ. ಅಲ್ಲದೆ ಎರಡನೆಯ ಸಂಧಿಯಾದಿಯಲ್ಲಿ ನಂಜನಗೂಡು ನಂಜುಂಡೇಶ್ವರನನ್ನು ಸ್ತುತಿಸಿದ್ದಾನೆ. ಆದುದರಿಂದ ಮೈಸೂರು ದೇಶದ ನಂಜನಗೂಡು ತಾಲೂಕಿಗೆ ಸೇರಿರುವ ತಗಡೂರು ಕವಿಯ ಸ್ಥಳವಾಗಿರಬಹುದೆಂದು ಊಹಿಸಬಹುದು. ಇವನ ಗ್ರಂಥದಲ್ಲಿ ಜಟಂಗಿ ರಾಮೇಶ್ವರನ ಅಂಕಿತವು ಅಲ್ಲಲ್ಲಿ ದೊರೆಯುತ್ತದೆ. ಕವಿಚರಿತ್ರಕಾರರು ಕವಿಯ ಕಾಲವು ಕ್ರಿ.ಶ.ಸು. ೧೬೫೦ ಎಂದೂ, ಈ ಗ್ರಂಥದ ಹೆಸರನ್ನು ಕುಮಟಿರಾಮನ ಕಥೆಯೆಂದೂ ಬರೆಯುತ್ತಾರೆ.

No. 912. ಕುಮಾರರಾಮನ ಕಥೆ by ಗಂಗಯ್ಯ.

KUMĀRARĀMANA KATHE BY GAṄGAYYA.

Substance, paper. Size, $12\frac{1}{4} \times 7\frac{3}{8}$ inches. Pages, 258. Lines, 20–22 on a page. Extent, 3,100 granthas. Character, Kannada. Condition, fair. Appearance, new. Mode of writing, good.

Complete in 12 sandhis.

Same work as that described above with different readings.

(ವಿ-ವಿ.)—

ಸಮಗ್ರ. ೧೨ ಸಂಧಿಗಳಿವೆ. ಹಿಂದೆ ವರ್ಣಿತವಾಗಿರುವ ೯೧೧ ನೆಯ ನಂಬರಿನ ಪುಸ್ತಕದಲ್ಲಿರುವ ೧೧ ನೆಯ ಸಂಧಿಯನ್ನೇ ಇದರಲ್ಲಿ ಎರಡು ಸಂಧಿಗಳಾಗಿ ವಿಂಗಡಿಸಿದೆ. ಉತ್ತಮವಾದ ಕಾಗದದ ಪ್ರತಿ. ಬರೆವಣಿಗೆ ಚೆನ್ನಾಗಿದೆ. ಈ ಪುಸ್ತಕದಲ್ಲಿ ಪದ್ಯ ಸಂಖ್ಯೆ ೨೦೦೦. ಇದರ ಕೊನೆಯಲ್ಲಿ ಕವಿನಾಮ— "ಪಂಚಾಳದ ಗಂಗಯ್ಯ" ನೆಂದು ಬರೆದಿದೆ. ಈ ಪ್ರತಿಯಲ್ಲಿ ಹಿಂದಣ ಪುಸ್ತಕದಲ್ಲಿಲ್ಲದ ಕೆಲವು ಪದ್ಯಗಳೂ ಪಾಠಭೇದಗಳೂ ಕಂಡುಬರುತ್ತವೆ. ಉದಾಹರಣೆಗಾಗಿ ಈ ಕೆಳಗೆ ಮೂರು ಪದ್ಯಗಳು ಉದ್ಧರಿಸಿ ಬರೆಯಲ್ಪಟ್ಟಿವೆ.

ಇಕ್ಷುಚಾಪನ ಗೆದ್ದ ಚಕ್ಷುಮೂರುಳ್ಳನೆ ।
ಆ ಕ್ಷಣದಲ್ಲಿ ವರ ಜೀವನೆ ।

ಕುಕ್ಷಿಯೊಳೀರೇಳು ಭುವನ ಪೊತ್ತಿಹ ದೇವ ।
ರಕ್ಷಿಸು ವಿರುಪಾಕ್ಷ ಲಿಂಗ ॥ ೧ ॥
ಜಂಬೂನಾಥನ ಸೋಮೇಶ್ವರದೇವರ ।
ಅಂಬಿಕೆ ವಾಣೀಪತಿ ಭದ್ರಿ ॥
ಶಂಭು ಶಂಕರ ಕಿನ್ನರೇಶ್ವರ ದೇವರ ।
ಯಿಂದು ನಾನೆನೆದು ಪೇಳುವೆನು ॥ ೨ ॥

*　　*　　*　　*　　*

ಇಂತಪ್ಪ ಕೃತಿ [ಯಾನಾ] (ಯಿದ) ದ್ಯಂತವೆಂತೆನೆ ।
ಕಾಂತಾರಮಲೆ ಪ್ರಾಂತದೇಶ ॥
ತಿಂತಿಣಿಯಲಿ ಸರ್ವದಾಯಾದ್ಯರೊಡಗೂಡಿ ।
ಪಂಥದಲ್ಲಿಹ ಸಿಂಗಿನಾಯಕನು ॥ ೬ ॥

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 913. ಕುಮಾರರಾಮನ ಕಥೆ by ಗಂಗಯ್ಯ.

KUMĀRARĀMANA KATHE BY GAṄGAYYA.

Substance, paper. Size, 8⅞ × 3⅞ inches. Pages, 346. Lines, 9 on a page. Extent, 3,000 granthas. Character, Kannada. Condition, much injured. Appearance, old. Mode of writing, good.

Wants 1 to 3 and 65th foll. Otherwise complete.

Same work as that described above.

(ವಿ-ವಿ.)—

ಇದರಲ್ಲಿ ಮೊದಲ ಮೂರು ಪತ್ರಗಳೂ ೬೫ ನೆಯ ಪತ್ರವೂ ಹೋಗಿವೆ. ಪದ್ಯ ಸಂಖ್ಯೆ ೨೦೦೦. ಹನ್ನೆರಡು ಸಂಧಿಗಳಾಗಿ ವಿಭಾಗವಾಗಿದೆ. ಪತ್ರಗಳು ಅಸ್ತವ್ಯಸ್ತವಾಗಿ, ಎಂದರೆ, ೪-೭, ೧೫-೩೨, ೮-೧೪, ೩೩-೫೪, ೧೨೩-೬೬, ೬೪-೫೫, ೧೨೪-೧೭೭ ಈ ಕ್ರಮದಲ್ಲಿ ಜೋಡಿಸಿ ಬೈಂಡಾಗಿವೆ. ಗ್ರಂಥಪಾತವೂ ಪಾಠಭೇದವೂ ಉಂಟು. ಪದ್ಯ ಸಂಖ್ಯೆಯಲ್ಲಿ ಹಿಂದಣ ೯೧೧ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಗಿಂತ ಕಮ್ಮಿಯಾಗಿದೆ. ಮತ್ತು ಆ ಪ್ರತಿಯಲ್ಲಿ ಕಂಡುಬಾರದ ಪದ್ಯಗಳು ಕೆಲವು ಇದರಲ್ಲಿ ಅಲ್ಲಲ್ಲಿವೆ. ಅತ್ಯಂತ ಶಿಥಿಲವಾದ ಮತ್ತು ಹಳೆಯ ಕಾಗದದ ಪ್ರತಿಯಾಗಿದೆ. ಲಿಪಿ ಉತ್ತಮವು.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 914. ಕುಮಾರರಾಮನ ಕಥೆ by ಗಂಗಯ್ಯ.

KUMĀRARĀMANA KATHE BY GAṄGAYYA.

Substance, paper. Size 8¼ × 6¾ inches. Pages, 95. Lines, 23 to 25 on a page. Extent, 1,600 granthas. Character, Kannada. Condition, injured. Appearance, old.

Contains four sandis complete and 5th sandi incomplete.

Same work as that described above.

(ವಿ-ವಿ.)—

ಅಸಮಗ್ರ. ಕಂಪಿಲನು ಬೇಟೆಗೆ ಹೋದ ಸಂಧಿ (೫೭ ಪದ್ಯಗಳು), ಚೆಂಡನಾಡಿದ ಸಂಧಿ (೩೫೭ ಪದ್ಯಗಳು), ಕುಮಾರರಾಮನನ್ನು ನೆಲಮಾಳಿಗೆಯಲ್ಲಿಟ್ಟ ಸಂಧಿ (೧೪೭ ಪದ್ಯಗಳು), ಕುಮಾರರಾಮನನ್ನು ನೆಲ

ಮಾಳಗೆಯಿಂದ ತೆಗೆವ ಸಂಧಿ (೨೩೧ ಪದ್ಯಗಳು), ನೇಮಿಯು ಕಾಳಗದ ಸಂಧಿ (೧೩೯ ಪದ್ಯಗಳು), ಕುಮಾರ ರಾಮನ ತಲೆಹೋಪ ಸಂಧಿ (ಅಸಮಗ್ರ—೧೧೭ ಪದ್ಯಗಳು ಮಾತ್ರ) ಇವುಗಳವೆ. ಹಿಂದೆ ೯೧೧ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪುಸ್ತಕಕ್ಕೂ ಇದಕ್ಕೂ ವ್ಯತ್ಯಾಸಗಳು ಕಂಡುಬರುವುವು. ಒಂದನೆಯದು—ಸಂಧಿಗಳ ಪದ್ಯ ಸಂಖ್ಯೆಯು ಇದರಲ್ಲಿ ಕಡಿಮೆಯಾಗಿದೆ. ಎರಡನೆಯದು—ಈ ಪ್ರತಿಯ ಮೊದಲ ಎರಡು ಸಂಧಿಗಳು ಸೇರಿ ಅದರ ಎಂಟನೆಯ ಸಂಧಿಯಾಗುವುದು. ಇದರ ಕೊನೆಯ ಎರಡು ಸಂಧಿಗಳು ಸೇರಿದ ಭಾಗವು ಅದರಲ್ಲಿ ಕೊನೆಯ ಅಥವಾ ಹನ್ನೊಂದನೆಯ ಸಂಧಿ. ಮೂರನೆಯದು—ಕೆಲವು ಪದ್ಯಗಳಲ್ಲಿ ಪದಭೇದವೂ, ಕೆಲವು ಹೊಸ ಪದ್ಯಗಳೂ ಕಾಣಿಸುತ್ತವೆ ಈ ಮುಂತಾದುವು. ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾದುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 915. ಕುಮಾರರಾಮನ ಕಥೆ by ಗಂಗಯ್ಯ.

KUMĀRARĀMANA KATHE BY GAṄGAYYA.

Substance, palm-leaf. Size, $12\frac{3}{4} \times 1\frac{3}{8}$ inches. Pages, 306. Lines, 4 to 5 on a page. Extent, 1,700 granthas. Character, Kannada. Condition, much injured. Appearance, old. Mode of writing, good.

Begins on fol. 1*a*. The other work herein is *Kumararāmana kathe* **154*a*.**

Incomplete.

Contains 4 sandhis only.

Same work as that described above.

Date of transcription :—Begun on 2nd day of the dark fortnight of the lunar month Āśvayuja and completed on 8th day of the same month in the year Vyaya.

(ವಿ-ವಿ.)—

ಇದರಲ್ಲಿ ನಾಲ್ಕು ಸಂಧಿಗಳಿವೆ. ಕುಮಾರರಾಮನು ಚೆಂಡಾಡುವುದು ಮೊದಲ್ಗೊಂಡು ಕೊನೆಯ ವರೆಗೂ ಕಥೆಯಿದೆ. ಇದರ ಸಂಧಿಗಳು ೯೧೧ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ೮-೧೧ ಸಂಧಿಗಳಿಗೆ ಸರಿಹೋಗುವುವು. ಆದರೆ ಪದ್ಯಗಳಲ್ಲಿಯೂ ಪದ್ಯ ಸಂಖ್ಯೆಯಲ್ಲಿಯೂ ಅಲ್ಪಸ್ವಲ್ಪ ವ್ಯತ್ಯಾಸ ವುಂಟು. ಇದರಲ್ಲಿರುವ ಸಂಧಿಗಳಲ್ಲಿ ಕ್ರಮವಾಗಿ ೩೪೯, ೧೮೬, ೨೬೮, ೩೦೧ ಪದ್ಯಗಳಿರುವುವು. ಪುಸ್ತಕ ದಾದಿಯಲ್ಲಿ ವ್ಯಯನಾಮ ಸಂವತ್ಸರದ ಆಶ್ವಯುಜ ಬ. ೨ ಲ್ಲು ಕುಮಾರರಾಮನ ಚರಿತೆ ಬರೆಯುವುದಕ್ಕೆ ಶುಭಮಸ್ತು ಎಂದೂ, ಅಂತ್ಯದಲ್ಲಿ "ಆಶ್ವಯುಜ ಬ. ೮ ಯಲ್ಲಿಗೆ ಕುಮಾರರಾಮನ ಚರಿತೆ ಮುಗಿಯಿತು ಸಮಾಪ್ತಂ" ಎಂದೂ, ವಿರೋಧಿನಾಮ ಸಂವತ್ಸರದ . . . ಬುಧವಾರದಲ್ಲು ಬಳ್ಳಾರಿ ಮಠದ ಮುತ್ತಿನ . ಡದ ರಾಜೋಟಿದೇವ . . . ವಿರುಪಾಕ್ಷ ದೇವರ ಶಿಷ್ಯರಾದಂಥ ಬೋಗನ ಹಳ್ಳಿ ಮಠದ ಮರುಳು ಸಿದ್ದಯ್ಯನವರು ತಮ್ಮ ಕಾರುಣ್ಯ ಪ್ರಿಯಭಕ್ತರಾದಂಥ ಕಡಲೆಬಾಳು ಗ್ರಾಮದ ಮುದ್ದಲಿಂಗಪ್ಪ ನ ಕುಮಾರ ವೃಷಭಪ್ಪನ ಕುಮಾರ ಸಿಕರಪ್ಪಗೆ [ಶಂಕರಪ್ಪ (?)] ಪುತ್ರಪೌತ್ರ ಅಷ್ಟೈಶ್ವರ್ಯ ಧನಧಾನ್ಯ ಸಂಪದ ಹೆಚ್ಚಲೆಂದು ಹರಸಿ ಬರೆ (ದು) ಕೊಟ್ಟ ಕುಮಾರರಾಮನ ಪುಸ್ತಕ ಬರೆದು ಯಿದ್ದೇವು. ಎಂದಿದೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಉತ್ತಮವು. ಈ ಪುಸ್ತಕದೊಡನೆ ಕುಮಾರರಾಮನ ಕಥಾ ಪೂರ್ವಭಾಗ ವೊಂದಿದೆ. ಅದು ೯೨೦ ನೆಯ ನಂಬರಿನಲ್ಲಿ ವರ್ಣಿತವಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 916. ಕುಮಾರರಾಮನ ಕಥೆ by ಗಂಗಯ್ಯ.

KUMĀRARĀMANA KATHE BY GAṄGAYYA.

Substance, palm-leaf. Size, 13 × 1⅝ inches. Pages, 174. Lines, 5 on a page. Extent, 1,540 granthas. Character, Kannada. Condition, much injured. Appearance, old.

Begins on fol. 1*a*. The other work herein is :—

(1) *Kumārarāmana kathe* 88*a*.

Contains 1-5 sandhis. The story herein begins from playing with the ball by Kumārarāma described in the 8th sandhi in the Ms. No. 911 and ends with his death.

Same work as that described above.

(ವಿ-ವಿ.)—

ಇವರಲ್ಲಿ ಐದು ಸಂಧಿಗಳಿವೆ. ಸಂಧಿಗಳ ಸಂಖ್ಯೆಯು ಕ್ರಮವಾಗಿ ಒಂದರಿಂದ ಐದರ ವರೆಗೆ ಗುರ್ತಿಸಿದೆ. ಸಂಪೂರ್ಣವೂ ಹಿಂದೆ ವರ್ಣಿತವೂ ಆದ ೯೧೧ ನೆಯ ನಂಬರಿನ ಪ್ರತಿಯೊಡನೆ ಇದನ್ನು ಹೋಲಿಸುವಾಗ ಇದರ ಒಂದು, ಎರಡು, ಮೂರನೆಯ ಸಂಧಿಗಳು ಅದರ ಎಂಟು, ಒಂಭತ್ತು, ಹತ್ತನೆಯ ಸಂಧಿಗಳಿಗೂ, ಇದರ ನಾಲ್ಕೈದನೆಯ ಸಂಧಿಗಳು ಅದರ ಕಡೆಯ ಅಥವಾ ಹನ್ನೊಂದನೆಯ ಸಂಧಿಗೂ ಸರಿಯಾಗುವುವು. ಆದಕಾರಣ ಈ ಪುಸ್ತಕದಲ್ಲಿ ಕತೆಯನ್ನು ಎಂಟನೆಯ ಸಂಧಿಯಿಂದಾರಂಭಿಸಿ ಸಂಧಿ ಸಂಖ್ಯೆಯನ್ನು ಒಂದು ಎರಡು ಮುಂತಾಗಿ ಬರೆದಿದ್ದಾನೆಂದು ಗೊತ್ತಾಗುತ್ತದೆ. ಈ ಐದು ಸಂಧಿಗಳಲ್ಲಿ ಕ್ರಮವಾಗಿ ೩೧೧, ೧೭೯, ೭೩೧, ೧೩೯, ೧೧೯ ಪದ್ಯಗಳಿರುವುವು. ಈ ಪ್ರತಿ ಅತಿ ಶಿಥಿಲವಾದುದು. ಪುಸ್ತಕದ ಕೊನೆಯಲ್ಲಿ ' ನಂಜನಗೂಡು ನಂಜುಂಡೇಶ್ವರನ ಪಾದವೇ ಗತಿ. ರಾಮನ ಸಾಂಗತ್ಯ ಬರೆವವಳು ಓದಿಸುವ ಗುರುಬಸವಪ್ಪದೇವರ ಮಗಳು ಸಿಂಗಮ್ಮ [ನ ಬರೆಹ] ' ಎಂದಿದೆ. ಇದರೊಡನೆ ಕುಮಾರರಾಮನ ಕಥಾ ಭಾಗವೊಂದಿರುವುದು. ಅದು ಇದರ ಮುಂದಿನ ನಂಬರಿನಲ್ಲಿ ವರ್ಣಿತವಾಗಿರುವುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 917. ಕುಮಾರರಾಮನ ಕಥೆ by ಗಂಗಯ್ಯ.

KUMĀRARĀMANA KATHE BY GAṄGAYYA.

Substance, palm-leaf. Size, 13 × 1⅝ inches. Pages, 162. Lines, 6 on a page. Extent, 1,680 granthas. Character, Kannada. Condition, much injured. Appearance, old.

Begins on fol. 88*a* of the Ms. described above (No. 916).

Incomplete.

Same work as that described above.

(ವಿ-ವಿ.)—

ಇವರಲ್ಲಿ ಐದು ಸಂಧಿಗಳಿವೆ. ಐದನೆಯದು ಪೂರ್ಣವಾಗಿಲ್ಲ. ಸಂಧಿಗಳ ಸಂಖ್ಯೆಯನ್ನು ಕ್ರಮವಾಗಿ ಒಂದರಿಂದ ಐದರ ವರೆಗೆ ಗುರ್ತಿಸಿದೆ. ಸಂಪೂರ್ಣ ಪ್ರತಿಯೂ ಹಿಂದೆ ವರ್ಣಿತವೂ ಆಗಿರುವ ೯೧೧ ನೆಯ ನಂಬರಿನ ಪುಸ್ತಕದ ಎಂಟನೆಯಧ್ಯಾಯದಿಂದ ಹನ್ನೊಂದನೆಯಧ್ಯಾಯದ ವರೆಗಿನ ಕಥಾಭಾಗವು ಇದರಲ್ಲಿದೆ. ಲೇಖಕನು ಸಂಧಿಗಳ ವಿಭಾಗವನ್ನು ತನ್ನಿಷ್ಟದಂತೆ ಮಾಡಿಕೊಂಡಿರುವನು. ಪದ್ಯಗಳ ಸಂಖ್ಯೆಯಲ್ಲಿ ಈ ಎರಡು ಪ್ರತಿಗಳಿಗೂ ವ್ಯತ್ಯಾಸವಿದೆ. ಅಲ್ಲದೆ ಪಾಠಭೇದವೂ ಉಂಟು. ಇದರೊಡನೆ ಕುಮಾರರಾಮನ ಕಥಾಭಾಗವೊಂದಿರುವುದು. ಅದು ಹಿಂದಿನ ನಂಬರಿನಲ್ಲಿ ವರ್ಣಿತವಾಗಿದೆ. ಈ ಪ್ರತಿ ಅತಿಶಿಥಿಲವಾದುದು.

ಇದು ಹಿಂದೆ ವರ್ಣಿಸಿರುವ ಗ್ರಂಥವೇ ಆಗಿದೆ.

No. 918. ಕುಮಾರರಾಮನ ಕಥೆ by ಗಂಗಯ್ಯ-

KUMĀRARĀMANA KATHE BY GAṄGAYYA.

Substance, palm-leaf. Size, 15⅛ × 1-7/16 inches. Pages, 114. Lines, 6 on a page. Extent, 1,100 granthas. Character, Kannada. Condition, much injured. Appearance, old. Mode of writing, good.

Incomplete.

Same work as that described above.

Beginning :

. . . . ।
ಕಡೆಗೆ ಮನ್ನೆಯರು ಸಹ ಬಂದು ॥
ಗಿಡಿ ಬಿಡಿ ಕೊಳ್ಳಲು ತಮ್ಮಟವಾದ್ಯರವದೊಳು ।
ಗಡಣದಿಂ ಪೊಕ್ಕು ಪಟ್ಟಣವ ॥ ೪೮ ॥

* * * *

(ಐದನೆಯ ಸಂಧಿಯ ಆದಿ.)

ಶ್ರೀಕಾಂತನ ಕೃಪೆವುಳ್ಳ ಚೆನ್ನಿಗರಾಮ ।
ಲೋಕದೊಳಗೆ ಕೀರ್ತಿವಡೆದ ॥
ಈ ಕೃತಿಯನು ಪೇಳ್ದ ಗಂಗಯ್ಯನ-।
ನೇಕ ಸಜ್ಜನರು ಲಾಲಿಪುದು ॥

End :

ಹರನೆ ಶಂಕರನೆ ಗಿರಿಜೆಯ ರಮಣನೆ ।
ಉರಗ ಕಂಕಣವ ಕಟ್ಟಿದನೆ ॥
ಪರಿಹರಿಸೆಂದು ರಾಮಯ್ಯನು ನುಡಿಯಲು ।
ಸರಿ ಬಿದ್ದವು ಬೀಗ ಕಡೆಗೆ ॥ ೧೫೫ ॥
ಬಲ್ಲಿದ ರಾಮಯ್ಯ ನಡೆತರೆ ಮುಂದಿರ್ದ ।
ಬೆಳ್ಳಿಯಗಸೆಯಿಕ್ಕಿರಲು ॥
ಅಲ್ಲಿಬಲು ಬೀಗವ ಕಂಡು ರಾಮಯ್ಯ ।
ನಿಲ್ಲದೆ ಹ . . . . ॥

(ವಿ-ವಿ.)—

ಅಸಮಗ್ರ. ೧ ನೆಯ ಸಂಧಿಯ ೪೮ ನೆಯ ಪದ್ಯದಿಂದ ೭ ನೆಯ ಸಂಧಿಯ "೧೫೫" ನೆಯ ಪದ್ಯಗಳು ಇವೆ. ಪಾಠಭೇದಗಳು ಹೆಚ್ಚಾಗಿವೆ.

ಇದು ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 919. ಕುಮಾರರಾಮನ ಕಥೆ by ಗಂಗಯ್ಯ-

KUMĀRARĀMANA KATHE BY GAṄGAYYA.

Substance, palm-leaf. Size, 13¾ × 1¼ inches. Pages, 3. Lines, 4 on a page. Character, Kannada. Condition, much injured. Appearance, old. Mode of writing, not bad.

Begins on fol. 151*a*. The other works herein are :—

(1) *Sobaginasōne* 1*a*, (2) Nāmalingānuśāsana (Sanskrit) 153*a*.

Incomplete ; contains ten stanzas only in the Pīthikāsandhi.

Same work as that described above.

(ವಿ-ವಿ.)—

ಅಸಮಗ್ರ. ಆದಿ ಪದ್ಯವು "ಶ್ರೀಗಿರಿಜಾಸ್ಯಾಂಬುಜದಿನನಾಯಕ" ಎಂಬುದೂ, ಅಂತ್ಯದ ಪದ್ಯವು "ಜನನ ಜರಾ" ಎಂಬುದೂ ಆಗಿವೆ. ಪೀಠಿಕಾಧ್ಯಾಯದ ಮೊದಲ ಹತ್ತು ಪದ್ಯಗಳಿವೆ. ಇದರೊಡನೆ ಸೊಬಗಿನ ಸೋನೆ, ನಾಮಲಿಂಗಾನುಶಾಸನ (ಸಂಸ್ಕೃತ) ಗಳಿವೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 920. ಕುಮಾರರಾಮನ ಕಥೆ.
KUMĀRARĀMANA KATHE.

Substance, palm-leaf. Size, $12\frac{3}{4} \times 1\frac{3}{8}$ inches. Pages, 68. Lines, 5 to 6 on a page. Extent, 450 granthas. Character, Kannada. Condition, much injured. Appearance, old. Mode of writing, good.

Begins on fol. 154*a* of the Ms. described under No. 915 *ante*.

Incomplete ; contains 1–3 sandhis only.

The main story is the same as that described above ; but as the readings and plot in several places differ, it is not possible to determine the authorship of this work.

(ವಿ.ವಿ.)—

ಇದರಲ್ಲಿ ಮೊದಲಿನ ೩ ಸಂಧಿಗಳಿವೆ. ಒಂದನೆಯದರಲ್ಲಿ ಕಥೆಯು :—ಪಾರ್ವತಿಯು ಅಭಿಮತದಂತೆ ಅರ್ಜುನನು ಭೂಮಿಯಲ್ಲಿ ಕಂಪಿಲ ಹರಿಯಲ ದೇವಿಯರಿಗೆ ಮಗನಾಗಿ ಕುಮಾರರಾಮನೆಂಬ ಹೆಸರಿನಿಂದ ಜನಿಸುವನು. ದೇವದಾಸಿಯಾದ ರಂಭೆ ಸಾಲುಗಂದಿ ಮುಕುಂದಿಯ ಪೀಳುಚಂದನಗಂಧಿ ಯಲ್ಲಮ್ಮನ ಉದರದಲ್ಲಿ ಉದಯಿಸುವಳು. ಅವಳೇ ರತ್ನಾಜಿ. ಬೇಟೆಗೆ ಬಂದಿದ್ದ ಕಂಪಿಲನು ಅವಳನ್ನುನೋಡಿ ಮೋಹಗೊಂಡು, ಅವಳ ತಾಯ್ತಂದೆಗಳನ್ನೊಪ್ಪಿಸಿ, ಆಕೆಯನ್ನು ಲಗ್ನವಾಗಿ ಪಟ್ಟಣಕ್ಕೆ ಕರೆ ತರುವನು. ಕಂಪಿಲನು ಬೇಡರ ಕುಲದವನು ರತ್ನಾಜಿ ರೆಡ್ಡಿ ಜಾತಿಯವಳು. ಗುತ್ತಿಯ ಜಗದಾಪಿಯು ಅಥವಾ ಜಗದಪ್ಪರಾಯನು ದಂಡೆತ್ತಿ ಬಂದು ಕಂಪಿಲನನ್ನು ಕಪ್ಪವನ್ನು ಕೇಳಲು, ಕುಮಾರ ರಾಮನು ಜಗದಾಪಿಯೊಡನೆ ಯುದ್ಧಮಾಡಿ ಅವನನ್ನು ಸೋಲಿಸುವನು.

ಎರಡನೆಯದರಲ್ಲಿ :—ಕುಮಾರ ರಾಮನು ಓರುಗಲ್ಲಿಗೆ ಹೋಗಿ ಎಪ್ಪತ್ತು ರಾಜ[ನ] (ರ) ಬೊಲ್ಲನೆಂಬ ಕುದುರೆಯನ್ನು ಕುಮ್ಮಟಕ್ಕೆ ತರುವನು.

ಮೂರನೆಯದರಲ್ಲಿ :—ಉಳಯೇರ (ಹುಳಯೇರ) ಮಾರಗೊಂಡ ಭೂಪನು ಕುಮಾರ ರಾಮನೊಡನೆ ಯುದ್ಧಕ್ಕೆ ಬರಲು, ರಾಮನು ಅವನನ್ನು ಗೆದ್ದು ಕಪ್ಪವನ್ನೂ, ಪಂಜರದ ಅರಗಿಳಿಯನ್ನೂ ತೆಗೆದುಕೊಳ್ಳುವನು. ಡಿಲ್ಲಿಯ ಸುಲ್ತಾನನಿಗೆ ಬಾಮರ ಖಾನನನ್ನೊಪ್ಪಿಸದೆ, ಸುಲ್ತಾನನ ಅಳಿಯನನ್ನೂ ನೇಮಿಖಾನನನ್ನೂ ಯುದ್ಧದಲ್ಲಿ ಹೊಡೆದೋಡಿಸುವನು. ಇನ್ನೂ ಅನೇಕ ರಾಜರನ್ನು ಗೆಲ್ಲುವನು. ಅದನ್ನು ಕಂಡು ಕಂಪಿಲ ಹರಿಯಲದೇವಿಯರು ಸಂತಸಪಡೆವರು.

ಇದರಲ್ಲಿ ಜಟಂಗಿ ರಾಮೇಶ್ವರನ ಅಂಕಿತವಿರುವುದಾದರೂ ಹಿಂದೆ ವರ್ಣಿತವಾಗಿರುವ ೯೧೧ ನೆಯ ನಂಬರಿನದಾದ ಗಂಗಯ್ಯ ವಿರಚಿತವಾದ ಗ್ರಂಥದ ಪದ್ಯಗಳಿಗೂ ಇದಕ್ಕೂ ಹೋಲಿಕೆಯೇ ಇಲ್ಲ. ಅಲ್ಲದೆ ಕಥೆಯಲ್ಲಿಯೂ ಗಂಗಯ್ಯ ನಂಜುಂಡ ಕವಿಗಳ ಗ್ರಂಥಗಳಿಗೆ ಇದು ಸ್ವಲ್ಪಮಟ್ಟಿಗೆ ವ್ಯತ್ಯಾಸವಾಗಿದೆ ಯನ್ನಬಹುದು. ಗಂಗಯ್ಯ ಮತ್ತು ನಂಜುಂಡ ಕವಿಗಳ ಗ್ರಂಥಗಳಿಗೆ ಸ್ವಲ್ಪ ಮಟ್ಟಿಗೆ ಭಿನ್ನವೆಂದೆನಿಸಿಕೊಂಡಿರುವ ಮುಂದೆ ೯೨೨ ನೆಯ ನಂಬರಿನಲ್ಲಿ ವರ್ಣಿತವಾಗುವ ಪುಸ್ತಕದಲ್ಲಿ ಪೂರ್ವ ಭಾಗದ ಕಥಾಂಶ ವಿರುತ್ತಿದ್ದರೆ ಅದರೊಂದಿಗೆ ಇದನ್ನು ಹೋಲಿಸಬಹುದಿದ್ದಿತು. ಈಗ ಅದಕ್ಕೂ ಆಸ್ಪದ ವಿಲ್ಲ. ಆದುದರಿಂದ ಇದು ತದ್ಭಿನ್ನವೆಂದು ಗ್ರಹಿಸಿ ಇದರ ಆದ್ಯಂತ ಭಾಗಗಳನ್ನು ಈ ಕೆಳಗೆ ಉದಾಹರಿಸಿದ್ದೇವೆ. ಮೊದಲು ೧೧೫ ಪದ್ಯಗಳು ಹೋಗಿವೆ.

. . . . ಬರಲು ।
ವಾರಣಾವತಿಯೆಂಬ ಕೃಷ್ಣಾನದಿಯ ದಾಂಟಿ ।
ಕೋರೆಗಲ್ಲ ಬದಾವಿಗಿಳಿದು ॥
ಸಾರಿ ಕುಮ್ಮಟ ತುಂಗಭದ್ರಾ ನದಿಯ ದಾಂಟಿ ।
ಧೀರ ಕಂಪಿಲನಿದ್ದೆಡೆಗೆ ॥ ೧೬ ॥
ಧಾರಿಣಿಯೊಳು ಕಂಪಿಲಗೆ ತನ್ನಯ ಕು-।
ಮಾರಿಯೊರ್ವಳನು ಕಾಣಿಕೆಯ ॥
ವಾರಣದಲಿ ಯಿತ್ತು ಕಂಡೆನರಸನು ಭೂ-।
ಚರಮನೆಂಬ ಆರೆಯನು ॥ ೧೭ ॥
ಕಾಣಿಕೆಯಿತ್ತು ಆರೆಯ ಚರವಾಂಕಗೆ ।
ನಾಣ್ಯಬಂಗಾರ ವಸ್ತ್ರವನು ॥
ಉಂನ್ಯ (?) (ಊಣ್ಯ) ವಿಲ್ಲದೆ ಯಿತ್ತು ಹೆಡೆಗಿಂಬಿಗೆ ।
ಪಾಣಿ (ಡು) ವಣ ರಾಜ್ಯ ಕಂಪಿಲನು ॥ ೧೮ ॥
ಪ [ಣು] (ಡು) ವಣ ರಾಜ್ಯವನಿತ್ತನು ಕಂಪಿಲ ।
ತಡೆದನು ಆರೆಯ ದೊರೆಯ ॥
ಸಡಗರದಿಂದಲಿ ಕಂಪಿಲರಾಯನು ।
ನಡೆವಳಯುಂಟಾಗಿಹನು ॥ ೧೯ ॥
ಬಂದ ಆರೆಯರಾಯನಿಂದ ಬಲ್ಲಿದನಾಗಿ ।
ನಿಂದನು ಅರಸು ಕಂಪಿಲನು ॥
ಚಂದ್ರವದನೆ ಹರಿಯಲ ದೇವಿಯು ಖಲು ।
ಚಂದದಿಂದಲಿಯಿರುತಿಹರು ॥ ೨೦ ॥
ಸತಿ ಪುರುಷರು ಯಿಪ್ಪರಿಯಲಿಯಿರುತಿರೆ ।
ಅತಿಶಯ ಕೈಲಾಸ ದೊಳಗೆ ॥
ಪೃಥಿವಿಗೀಶ್ವರನವ್ರೋಲಗನೆರೆದಿರೆ ಗಣ ।
ಶ್ರುತಿಯುಮಾದೇವಿಯರೊಲಿದು ॥ ೨೧ ॥

*   *   *   *   *

ಇಂದ್ರಮುಕುಂದನಂದನ ಪಂಚ ಬಾಣನು ।
ಚಂದ್ರಾದಿತ್ಯಕಲ್ಪಪರು ॥
ಕಂದುಗೊರಳನ ವ್ರೋಲಗದೆಡ ಬಲದಲಿ ।
ನಿಂದರು ಹರಿಬ್ರಹ್ಮ ಸಹಿತ ॥ ೨೩ ॥

*   *   *   *   *

ಜಡೆಯುನಡೆರಲು ಜೊನ್ನಲಿಯು ಭೋರ್ವೋರೆವುತ । (?)
ಬಿಡನಡೆರಲು ಗೌರಿ ತೊಡೆಯ ॥
ನಡೆಯುಲು ಗಣಸ್ತೋಮವೆದ್ದು ನಿಂದಿರಲುವೆ ।
ಜಡಿದು ನೋಡಿದಳಷ್ಟದಿಕ್ಕ ॥ ೨೮ ॥
ಎಂಟು ದಿಕ್ಕುಗಳ ನೋಡುತ ತವೆಯಾಟದಿ ।
ಗಂಟಿಕ್ಕಿ ಮೊಗವ ನೋಡಿದಳು ॥
ಎಂಟು ದ್ವಾಪರರಾಯ ರೊಳೈವರು ಕೃಷ್ಣ ।
ನಂಟನ[illegible]ಉಪದೇಶ ॥ (?) ೨೯ ॥

ದೇವ ಜಯ ಜಯ ಹರಿ ಬ್ರಹ್ಮ ವಾಸವರೆದ್ದು ।
ಭಾವಜನಮಿತ್ರರು ಸಹಿತ ॥
ದೇವಿಯು ಕಾಣಲೊಡನೆಯೆದ್ದು ಕೆಯ್ಮುಗಿ ।
ದಾವನ ಪರಬ್ರಹ್ಮರೊಡನೆ ॥ (?) ೩೦ ॥
ಇವಗಿಷ್ಟು ಗರ್ವಿಕೆಯೇಕೆ ವಾಸವಗೆಂದು ।
ಭುವನೇಶನರ್ಧಾಂಗಿ ನುಡಿಯೆ ॥
ದಿವಿಜರಿಗಿಂತ ವೆಗ್ಗಳ ಕಾಣೆ ಪಾರ್ವತಿ ।
ಅವನರ್ಜುನ ಪರಸತಿಗೆ ॥ ೩೧ ॥
ಎರಗಲೆರಗನು ಯಾ [ಳ] (ರ) ನು ದೃಷ್ಟಿಸಿ ನೋಡನು ।
ಪರಬಲಾಂತಕ ಪರ ಸ್ತ್ರೀಯ ॥
ಪರಮಾತ್ಮ ಪರಬ್ರಹ್ಮನ ದೃಷ್ಟಿಯುಳ್ಳವ ।
ನರನಾರಾಯಣನವನು ॥ ೩೨ ॥

* * * *

ಇದು ಪರನಾರಿಸೋದರ ರಾಮನಾಥನ ।
ಪದಕೃತಿಯೊಳಗೆ ರಾಮಯ್ಯನು ।
ಕದನ ವಿಜಯ ಜಗದಪ್ಪರಾಯನ ಗೆಲಿದ ।
ಮೊದಲ ಸಂಧಿಯು ಸಂಪೂರ್ಣ ॥

Colophon :

ಪ್ರಥಮ ಸಂಧಿ ಸಂಪೂರ್ಣಂ—

ಹರಿಯ ಸೂಡಿದ (ದೇ) ವ ಹರಿಯ ಕುಂಡಲ ಧರ ।
ಹರಿಯ ಭೂಷಣ ಚಂದ್ರ ಧರನೆ ॥
ಗಿರಿಜೆಗರ್ಧಾಂಗ ಕೋಮಲ ಕಲ್ಲೆರೆಯನೆ ॥ (?)
ಹರ ನಿಮಗೆರಗಿ ವಂದಿಸುವೆ ॥

End :

ಕಳುಹಿದನೆಪ್ಪತ್ತೇಳು ಮನ್ನೆಯರನು ।
ಕಳುಹಿದನಾಗ ಹರಿಯಮ್ಮನ ॥
ಕಳುಹಿದನೆಲ್ಲರ ತನ್ನರ ಮನೆ ಹೊಕ್ಕು ।
ಲಲನೆ ರಾಮಲದೇವಿ ಸಹಿತ ॥ ೭೯ ॥
ಒಲಿದರಮನೆಯ ಹೋಗಲು ರಾಮನಾಥನು ।
ಚೆಲುವ ಬಿರುದಿನ ಮನ್ನೆಯರು ॥
ಗೆಲುವಿಂದ ತಂತಮ್ಮ ಮನೆಗಳನೆಲ್ಲರು ।
ನಲಿದು ಪೊಕ್ಕರು ಅರ್ಥಿಯಲಿ ॥ ೪೦ ॥
ಇದು ಪರನಾರಿಸೋದರ ರಾಮನಾಥನ ।
ಪದಕೃತಿಯೊಳಗೆ ಮೂರನೆಯ ॥
ಮುದದಿ ವಿಶ್ವಾಸದ ಪದಕೃತಿಯೊಳು ಮೂರ ।
ಚದುರ ಭೂಪನ ಗೆಲ್ದ ಸಂಧಿ ॥ ೪೧ ॥

ಅಂತು ಸಂಧಿ ೩ ಕ್ಕಂ ಪದನು ೩೫೩ ಕ್ಕಂ ಮಂಗಳ ಮಹಾ ಶ್ರೀ.—ಪದ್ಯಗಳಲ್ಲಿ ವಿಶೇಷವಾಗಿ ತಪ್ಪುಗಳಿವೆ. ಮೊದಲ ಸಂಧಿಯಲ್ಲಿ ೧೧೩, ೨ ನೆಯದರಲ್ಲಿ ೧೫೪, ೩ ನೆಯದರಲ್ಲಿ ೪೧ ಪದ್ಯಗಳಿರುವುವು. ಅತ್ಯಂತ ಶಿಥಿಲವಾದ ಪ್ರತಿ. ಅಕ್ಷರಗಳು ಉತ್ತಮವೆನ್ನಬಹುದು. ಇದರೊಡನೆ ಕುಮಾರರಾಮನ ಕಥೆಯ ಉತ್ತರಭಾಗವೊಂದಿದೆ. ಅದು ೯೧೫ ನೆಯ ನಂಬರಿನಲ್ಲಿ ವರ್ಣಿತವಾಗಿದೆ.

No. 921. ಕುಮಾರರಾಮನ ಕಥೆ.

KUMĀRARĀMANA KATHE.

Substance, palm-leaf. Size, 13 × 1¼ inches. Pages, 146. Lines, 5 on a page. Extent, 1,095 granthas. Character, Kannada. Condition, much injured. Appearance, old. Mode of writing, not bad.

Incomplete.

Similar to that described above.

(ವಿ-ವಿ.)—

ರಾಮನನ್ನು ಕಂಡು ರತ್ನಿ ವಿರಹಾರ್ತೆಯಾದ ಭಾಗದಿಂದ ಬೈಚಪ್ಪ ಮಂತ್ರಿಯು ರಾಮನನ್ನು ನೆಲಮಾಳಿಗೆಯಲ್ಲಿರಿಸಿ ಹರಿಯಲದೇವಿಯನ್ನು ಸಂತೈಸುವ ವರೆಗಿರುವ ಕಥಾಂಶವು ಐದು ಸಂಧಿಗಳಲ್ಲಿ ಹೇಳಿದೆ. ಹಿಂದೆ ವರ್ಣಿತವಾಗಿರುವ ಪ್ರತಿಗಳಿಗಿಂತ ಪದ್ಯಭಾಗದಲ್ಲಿ ಇದು ಹೆಚ್ಚು ಬದಲಾವಣೆಯುಳ್ಳುದಾಗಿದೆ. ಕೆಲವು ಕಡೆ ಅದೇ ಪದ್ಯಗಳೂ, ಕೆಲವು ಕಡೆ ಅಲ್ಲಿನ ಪದ್ಯಗಳ ಅರ್ಥಾನುವಾದರೂಪವಾದ ಪದ್ಯಗಳೂ, ಇನ್ನೂ ಕೆಲವೆಡೆಗಳಲ್ಲಿ ತದ್ಭಿನ್ನ ಪದ್ಯಗಳೂ ಇವೆ. ಪ್ರಥಮ ಸಂಧಿಯ ೬ ಮತ್ತು ೯ ನೆಯ ಪದ್ಯಗಳಲ್ಲಿ ಗಂಗಯ್ಯನ ಅಂಕಿತವಿದ್ದರೂ ಈ ಉಕ್ತಕಾರಣಗಳಿಂದ ಇದರ ಕವಿಯು ಗಂಗಯ್ಯನೆಂದು ನಿಶ್ಚಿತವಾಗಿ ಹೇಳಬರುವುದಿಲ್ಲ.

Beginning :

ಸಾಂ ॥ ಶ್ರೀಗಿರಿಸುತೆಯರಸನೆ ಭಸ್ಮಭೂಷಣೆ ।
ನಾಗಕುಂಡಲವಿಟ್ಟ ದಿಟ್ಟ ॥
ಬೇಗ ಕೊಡೆನಗೆ ವರವ ಕಲ್ಮಕಲುಷವ ।
ನೀಗು ಶಂಕರ ದ [ಯಾವಾಗ] (ಯೆಮಾಡು) ॥ ೧ ॥
ಕಾಮದಹನ ಕಾಮಿತಫಲವೀವನೆ ।
ವ್ಯೋಮಕೇಶನೆ ಸೋಮಧರನೆ ॥
ಕಾಮಿನಿಗರೆಮೆಯ್ಯನಿತ್ತ ಜಟಂಗಿಯ ।
ರಾಮೇಶ್ವರ ಕೊಡು ವರವ ॥ ೨ ॥
ಗಜಮುಖ ತ್ರಿಜಗವಂದಿತನಗಜೆಯ ಪುತ್ರ ।
ಅಜಮುಖ ಯೋಗಸಂಹರನೆ ॥ (?)
ನಿಜದೋರು ತಗಡೂರ ಕಟ್ಟೆಯೊಳಿರ್ದನೆ ।
ಭುಜಗಬಂಧನೆ ವಿಘ್ನರಾಜ ॥ ೩ ॥
ಸೊಲ್ಲು ಸೊಲ್ಲಿಗೆ ಪೊಸ ಸೊಲ್ಲೆನಿಸುವ ಕೃತಿ ।
ಯಲ್ಲಿ ಪಲ್ಲೈಸುವಂದದಲಿ ॥
ಉಲ್ಲಾಸದಿಂ ಮತಿಯಿತ್ತು ಪಾಲಿ [ಪ] (ಸು) ಜಗ ।
[ದೊ] (ವ)ಲ್ಲಭೆ ಸಾರದೆಯೆನಗೆ । ೪ ॥
ಭಾಗುರಿ ಮಾಘನಗ್ಗಳಿಯ ಹಲಾಯುಧ ।
ನಾಗವರ್ಮನು ವಾಲ್ಮೀಕಿ ॥
ರಾಘವಾಂಕನು ಮೊದಲಾದ ಕವೀಶರ್ಗೆ ।
ಬೇಗದಿಂ ನಾನೆಱಗುವೆನು ॥ ೫ ॥
ಕನ್ನಡಕವಿ ಸಂಪನ್ನ ಸುಗುಣರನ್ನ ।
ಯಿನ್ನು ಮುನ್ನಿನಲಿ ಪಂಚಾಳ ॥
ಚೆನ್ನಭುಜಂಗನ ಭೃತ್ಯನು ಗಂಗುಸಂ ।
ಪನ್ನ ಪೇಳಿದನೀ ಕೃತಿಯ ॥ ೬ ॥

* * * *

ಧುರಧೀರ ರಾಮನು ಚೆಂಡ ಪಿಡಿದು ಬೇಗ ।
ಅರಮನೆಯನು ಪೊರಮಟ್ಟು ॥
ಬರುತಿರೆ ವಾಯಸ ತಡೆಯೆ ಕಾಣುತ ಬೇಗ ।
ಕರೆ [ಕರೆ] (ಯೆಂದ) ಶಾಸ್ತ್ರಕೋವಿದರ ॥ ೧೫೬ ॥
ಕರೆಯೆನೆ ಮುನ್ನವೆ ಚರರೆಯ್ದಿದರಾಗ ।
ಭರದಿ ಬಂದಗು ಜೋಯಿಸರೆಡೆಗೆ ।
ಬರಹೇಳದ ರಾಮನೆನೆ ಪಂಚಾಂಗವ ॥
ಹರುಷದಿ ಪಿಡಿದೆಯ್ದಿದರು ॥ ೧೫೭ ॥
ಬಂದರು ಶಾಸ್ತ್ರಕೋವಿದರಾಗ ಬೇಗದಿ ।
ನಿಂದರಾಶೀರ್ವಾದ ಮಾಡಿ ॥
ಚೆಂದದಿಂ ಪಂಚಾಂಗವನು ಪೇಳುದರಾಗ ।
ಯಿಂದಿನ ಸ್ಥಿತಿಗತಿಗಳನು ॥ ೧೫೮ ॥
ಸ್ವಸ್ತಿ ಸಮಸ್ತದೊರೆಗಳ ಹಿಂಡೆಲ್ಲವು ।
ಹಸ್ತಿಸಾಹಸ ಗಜಸಿಂಹ ॥
ಮಸ್ತಕಶೂಲ ಭೇರುಂಡನೆ ಜಯವೆಂದು ।
ವಿಸ್ತರಿಸಿಯೆ ಬಿನ್ನೈಸಿದರು ॥ ೧೫೯ ॥

*　　　*　　　*　　　*

ವೈಶಾಖ ಶುದ್ಧಾಷ್ಟಮಿ ಯಿನಿವಾರದಿ ವಿ । (?)
ಲಾಸದಿಂದಾಡಲು ನಿಮಗೆ ॥
ಮೋಸದಿಂ ಕಂಟಕ ಬರುತದೆಯಾ ಮೇಲೆ ।
ಲೇಸಾಡಿತೆಂದು ಹೇಳದರು ॥ ೧೬೧ ॥
ಹರುಷದಿಯೇಕ ಜಾವದೊಳಾಡೆ ವೇದನೆ ।
ಯೆರಡನೆ ಜಾವದೊಳಾಡೆ ಮರಣ ॥
ಸರಸದಿಂ ತೃತೀಯ ಜಾವದೊಳಾಡೆ ಲೇಸೆಂದು ।
ಧುರಧೀರನೊಡನೆ ಪೇಳಿದರು ॥ ೧೬೨ ॥
ಪರನಾರಿಯರ ಸಹೋದರ ಚೆನ್ನರಾಮನು
ಧುರವಲ್ಲಿಯೇಕಾಂಗವೀರ ॥
ಹರುಷದಿಂ ಕೇಳುತಿರೆ ರಾಜನೀತಿಯ ಸಂಧಿ ।
ವೃದುಪದಚಯ ಸಂಬಂಧಿ ॥ ೧೬೩ ॥
ಇದು ಪರದಾರಸೋದರ ರಾಮನಾಥನ ।
ಪದಕೃತಿಯೊಳಗಾಱನೆಯ ॥
ವಿದಿತಾಶ್ವಾಸದೊಳದು ಪ್ರೊಂದನೆಯ ಸಂಧಿ ।
ವೃದುಪದಚಯ ಸಂಬಂಧಿ ॥ (?)

Colophon :

ಪ್ರಥಮ ಸಂಧಿ ಸಮಾಪ್ತಂ—

ಶ್ರೀಗಿರಿಜಾಸ್ಯಾಂಬುಜ . . . ನಾಗು ಶಂಕರ ಶರಣೆಂಬೆ ॥ ೧ ॥
ಗಂಗಾತುಂಗತರಂಗ . . . ಚಕ್ರಿಯನು ॥ ೨ ॥
ಕಾಯುವೆ ಮೂಱು ಕಾಲಾರು ಮಸ್ತಕ ನವ ।
ಬಾಯೊಂಬತ್ತು ಬಾಲವೆರಡು ॥

ಕೆಯ್ಗಳು ನಾಲ್ಕು ಕಣ್ಗಳು ಹದಿನೆಂಟು ।
ಳ್ಳಯ್ಯನೆ ಸಾನೆಱಗುವೆನು ॥ ೩ ॥
ಕರೆಕರೆದೊರೆಗಳ ಮಕ್ಕಳೆನೆಲ್ಲರ ।
ಬರಹೇಳು ಮಂತ್ರಿಯು ಮಗನ ॥
ಕರೆಬೇಗದಿಂದ ಪಟ್ಟಣವ ಸಿಂಗರಿಸೆಂದು ।
ಧುರಧೀರ ರಾಮ ನುಡಿದನು ॥ ೪ ॥
ಎಂದ ಮಾತನು ಕೇಳ ಕಾಟಣ್ಣ ತಾ ಬೇಗ ।
ದಿಂದಲಿ ಸಿಂಗರಿಸಿದನು ॥
ಇಂದು ಚೆಂಡಾಟಕೆ ರಾಮ ಬರುತಿಹ ।
ನೆಂದು ಸಕಲರ ಕರೆಯಿಸಿದ ॥ ೫ ॥

End :

ಹರಿಹರ ದೇವಿಯು ದುಃಖವ ಮನ್ನಿಸಿ ।
ಯಿರದೆ ಮಕ್ಕಳನು ಸಂತೈಸಿ ॥
ಭರದಿಂದ ಕಳುಹಿಸಿಕೊಂಡು ಬೈಚಪ್ಪನು ।
ತೆರಳಿದ ತನ್ನರಮನೆಗೆ ॥ ೧೦೭ ॥
ಅಲ್ಲಲ್ಲಿ ಪೆಣ್ಗಳು ನೆರೆದು ದುಃಖದ ಮಾಡಿ ।
ಯಲ್ಲಲ್ಲಿ ಮನೆಮನೆಯೊಳಗೆ ॥
ಬಲ್ಲಿದ ರಾಮ ಮಡಿದ ಮುಂದೆ ಕದನವೆಂ ।
ಬಲ್ಲಿಗೆ ಸಂಧಿ ಪೂರಾಯು ॥ ೧೦೮ ॥
ಇದು ಪರದಾರ ಸೋದರ ಚೆನ್ನರಾಮನ ।
ಪದಕೃತಿಯೊಳಗಾಱನೆಯ ॥
ವಿದಿತಾಶ್ವಾಸದೊಳ್ಳೈದನೆಯದು ಸಂಧಿ ।
ಮೃದುಪದಚಯ ಸಂಬಂಧಿ ॥ ೧೦೯ ॥

ಅಂತು ಸಂಧಿ ೫ ಕ್ಕಂ ಪದನು ೭೪೬ ಕ್ಕಂ ಮಂಗಳ ಮಹಾಶ್ರೀ. ಇದು ಅತ್ಯಂತ ಶಿಥಿಲವಾದ ಪ್ರತಿ. ಅಕ್ಷರಗಳು ಚೆನ್ನಾಗಿವೆ. ಈ ಪುಸ್ತಕದ ಕಡೆಯ ಓಲೆಗಳಲ್ಲಿ ಕೆಲವು ಹಾಡುಗಳವೆ.

No. 922. ಕುಮಾರರಾಮನ ಕಥೆ.

KUMĀRARĀMANA KATHE.

Substance, palm-leaf. Size, $13\frac{1}{4} \times 1\frac{3}{8}$ inches. Pages, 194. Lines, 5 to 7 on a page. Extent, 2,700 granthas. Character, Kannada. Condition, much injured. Appearance, old. Mode of writing, not bad.

Almost complete.

Similar to that described above. The name of the author is not clear from this. The plot and verses are different in some places from those found in the works of Nañjuṇḍa and Gaṅgayya.

(ವಿ.ವಿ.)—

ಇದರಲ್ಲಿ :—೧. ರಾಮನಾಥನ ನೀರಾಟದ ಸಂಧಿ, ೨. ಚೆಂಡು ಬೇಡಿದ ಸಂಧಿ, ೩. ಎರೆಯ ಹಂಚಿದ ಸಂಧಿ, ೪. ರತ್ನಿ ಸತ್ತಿಗೆಯವರ ಕೇಳ ರಾಮನ ಕಂಡ ಸಂಧಿ, ೫. ರತ್ನಿಯ ವಿರಹದ ಸಂಧಿ, ೬. ಚೆಂಡಾಟದ ಸಂಧಿ (ಈ ಸಂಧಿಯಾದಿಯಲ್ಲಿ ಕವಿಯ ಹೆಸರುಳ್ಳ ಒಂದು ಪದ್ಯವಿದೆ), ೭. ರಾಮನು ರತ್ನಿಯ ಮನೆಗೆ ಹೋಗಿ ಚೆಂಡು ಕೇಳದ ಸಂಧಿ, ೮. ರತ್ನಿಯ ವಿಪರೀತ ಕೃತ್ಯದ ಸಂಧಿ, ೯. ಸೆಲ ಮಾಳಿಗೆಯ ಸಂಧಿ, ೧೦.

ಶೋಕದ ಸಂಧಿ, ೧೧. ನೇಮಿಯು ಕಾಳಗದ ಸಂಧಿ, ೧೨. ರಾಮನನ್ನು ನೆಲಮಾಳಿಗೆಯಿಂದ ತೆಗೆಯಿಸಿದ ಸಂಧಿ, ೧೩. ಮಾತಂಗಿಯು ಕಾಳಗದ ಸಂಧಿ, ೧೪. ರಾಮನಾಥನ ಕಡೆಯ ಕಾಳಗದ ಸಂಧಿ ಎಂದು ೧೪ ಸಂಧಿಗಳಿವೆ. ಹದಿಮೂರನೆಯ ಸಂಧಿ ಹೊರತು ಈ ಸಂಧಿಗಳಲ್ಲಿ ಕ್ರಮವಾಗಿ ೭೫, ೭೮, ೮೫, ೭೧, ೮೬, ೯೨, ೮೫, ೭೩, ೧೫೭, ೬೦, ೧೦೦, ೨೭೧, ೨೨೦ ಪದ್ಯಗಳಿರುವುವು. ಮೂರನೆಯ ಸಂಧಿಯಲ್ಲಿ ೪೫ ರಿಂದ ೬೦ ರ ವರಗಿನ ಪದ್ಯಗಳ ಒಂದು ಓಲೆಯು ನಷ್ಟವಾಗಿದೆ. ೫ ನೆಯ ಸಂಧಿಯಲ್ಲಿ ೧೪ ರಿಂದ ೩೦ ರ ವರೆಗಿನ ಪದ್ಯಗಳ ಒಂದು ಓಲೆಯು ಕಾಣುವುದಿಲ್ಲ. ಎಂಟನೆಯ ಸಂಧಿಯಲ್ಲಿ ೯ ರಿಂದ ೨೦ ರ ವರೆಗೆ ಪದ್ಯಗಳನ್ನು ಬರೆಯದೆ ಓಲೆಯು ಹಾಗೆಯೆ ಬಿಟ್ಟಿದೆ. ಹನ್ನೆರಡನೆಯ ಸಂಧಿಯಲ್ಲಿ ೧೭೪ ರಿಂದ ೨೦೮ ನೆಯ ಪದ್ಯದ ವರೆಗಿರುವ ೩ ಓಲೆಗಳು ಕಾಣಿಸುವುದಿಲ್ಲ. ೧೩ ನೆಯ ಸಂಧಿಯ ೧೪೫ ರಿಂದ ಹದಿನಾಲ್ಕನೆಯ ಸಂಧಿಯ ೭ ನೆಯ ಪದ್ಯದವರೆಗಿರುವ ಓಲೆಗಳು ಹೋಗಿವೆ. ಇದು ಅತ್ಯಂತ ಶಿಥಿಲವಾದ ಪ್ರತಿ. ಇದರ ಲಿಪಿ ಸಾಮಾನ್ಯವಾದುದು. ಇದರಲ್ಲಿ ಕವಿಯನ್ನು ಗಂಗಯ್ಯನೆಂದು ಹೇಳಿದೆ.

ಈ ಪ್ರತಿಯನ್ನು D.C. 911 ನೆಯ ನಂಬರಿನ ಪ್ರತಿಯೊಡನೆ ಹೋಲಿಸಿ ನೋಡಿದರೆ ಕಥಾ ಭಾಗದಲ್ಲಿ ಇದರ ಮೊದಲ ಎಂಟು ಸಂಧಿಗಳು ಅದರ ಎಂಟನೆಯ ಸಂಧಿಗೂ, ಇದರ ಒಂಭತ್ತು, ಹತ್ತನೆಯ ಸಂಧಿಗಳು ಅದೂರ ಆದರ ಒಂಭತ್ತನೆಯ ಸಂಧಿಗೂ, ಇದರ ಹನ್ನೊಂದು ಹನ್ನೆರಡನೆಯವು ಅದರ ಹತ್ತನೆಯ ಸಂಧಿಗೂ, ಇದರ ಹದಿಮೂರು ಹದಿನಾಲ್ಕನೆಯವು ಅದರ ಕಡೆಯದು ಅಥವಾ ಹನ್ನೊಂದನೆಯ ಸಂಧಿಗೂ, ಸರಿಹೋಗುವುವೆಂದು ಸ್ಥೂಲವಾಗಿ ಹೇಳಬಹುದು. ಆದರೆ ಇವೆರಡಕ್ಕೆ ವ್ಯತ್ಯಾಸವೂ ಉಂಟು. ಇದರಲ್ಲಿ, i ಆ ಪ್ರತಿಯಲ್ಲಿ ಕಾಣದ ಎಷ್ಟೋ ಪದ್ಯಗಳಿರುವುವು. ii ಇವೆರಡರ ಪದ್ಯಗಳಿಗೆ ಮೊದಲನೆಯ ಕೆಲವು ಸಂಧಿಗಳಲ್ಲಿ ಸಾಮ್ಯವು ಸಾಮಾನ್ಯವಾಗಿದ್ದು ಅನಂತರ ಕಡಿಮೆಯಾಗುತ್ತ ಕೊನೆಯ ಸಂಧಿಯಲ್ಲಿ ಸುತರಾಂ ಇಲ್ಲವಾಗಿದೆ. iii ಇದರಲ್ಲಿ ಕವಿಯ ಹೆಸರು ಗಂಗಯ್ಯನೆಂದು ಬರೆದಿರುವುದಾದರೂ ಗಂಗಯ್ಯ ವಿರಚಿತವಾದುದೆಂದು ಹಿಂದೆ ವರ್ಣಿಸಿರುವ ಪ್ರತಿಗಿಂತ ಕಥಾ ಶರೀರದಲ್ಲಿಯೂ ಸ್ವಲ್ಪ ವ್ಯತ್ಯಾಸವಿದೆ ಯೆನ್ನಬಹುದು. ನಂಜುಂಡ ಕವಿಕೃತವಾದ ಕಥೆಯಂತೂ ಇವೆರಡಕ್ಕೂ ಭಿನ್ನವಾದುದು. ಅದರಲ್ಲಿ, ರಾಮನಾಥನ ತಲೆಯನ್ನು ಕುಮ್ಮಟ ದುರ್ಗಕ್ಕೆ ತಂದ ಮೇಲೆ ಅದು ಅಲ್ಲಿ ಲಿಂಗಾಕೃತಿಯನ್ನು ತಾಳಿದಂತೆಯೂ, ಅದನ್ನು ಇಂದ್ರನು ಶಿವನೊಡನೆ ತಿಳಿಯಿಸಿದಂತೆಯೂ, ಪರಶಿವನು ಸಭೆಯಲ್ಲಿ ರಾಮನಾಥನ ಗುಣಶ್ಲಾಘನವನ್ನು ಮಾಡಿ ಆತನಿಗೆ ಗಣಪದವಿಯನ್ನು ಕೊಟ್ಟಂತೆಯೂ, ಹೇಳಿದೆ. ಗಂಗಯ್ಯ ಕವಿಯ ಗ್ರಂಥದಲ್ಲಿ ಕಂಪಿಲನು ರಾಮನಾಥನ ತಲೆಯನ್ನು ಕಾಶೀ ವಿಶ್ವೇಶ್ವರ ಸನ್ನಿಧಿಗೆ ಕಳುಹಿಸಿದಂತೆ ಬರೆದಿದೆ. ಗಂಗಯ್ಯ ಕವಿಕೃತವೆಂದು ಬರೆದಿರುವ ಇದರಲ್ಲಿ, ರಾಮನಾಥನ ತಲೆಯು ಕುಮ್ಮಟದಲ್ಲಿ ಬೇಡರಿಂದ ಕುಲದೈವವಾಗಿ ಪೂಜಿಸಿಕೊಂಡಂತೆ ತಿಳಿಯುವುದು. ಅಲ್ಲದೆ ಹೀಗೆಯೆ ಇನ್ನೂ ಕೆಲವು ಚಿಕ್ಕ ಪುಟ್ಟ ವ್ಯತ್ಯಾಸಗಳು ಅಲ್ಲಲ್ಲಿ ಕಂಡುಬರುವುವು. ಅವನ್ನೆಲ್ಲಾ ಇಲ್ಲಿ ಕೊಡುವುದಾದರೆ ಬರೆವಣಿಗೆಯು ತುಂಬಾ ಉದ್ದವಾಗುವುದೆಂಬ ಭೀತಿಯಿಂದ ನಿಲ್ಲಿಸಬೇಕಾಗಿದೆ. ಈ ಮೂರು ಪ್ರತಿಗಳನ್ನು ಹೋಲಿಸಿ ನೋಡುವಾಗ ವಾಚಕರಿಗೆ ಇವುಗಳ ವ್ಯತ್ಯಾಸವು ತಾನಾಗಿಯೇ ವ್ಯಕ್ತವಾಗುವುದು. ಹೀಗೆ ಸಂಧಿವಿಭಾಗ, ಕಥಾ ಶರೀರ ವರ್ಣನಗಳಲ್ಲಿ ಒಬ್ಬ ಕವಿಯಲ್ಲಿಯೇ ಭಿನ್ನಾಭಿಪ್ರಾಯವುಂಟಾಗಿರುವುದು ಸಂಗತವಾಗಿ ತೋರುವುದಿಲ್ಲ. ಒಂದು ವೇಳೆ ಬೇರೆ ಯಾವನಾದರೂ ಕಥೆಯನ್ನೋದುವಾಗ ತನಗೆ ರುಚಿಸದಿರಲು ತನ್ನ ಮನಸ್ಸಿಗೆ ತಕ್ಕಂತೆ ಹೀಗೆ ಅಲ್ಲಲ್ಲಿ ಮಾರ್ಪಡಿಸಿ ಬರೆದಿಟ್ಟುಕೊಂಡಿದ್ದುದು ಕಾಲಾನಂತರದಲ್ಲಿ ಪ್ರಚಾರಕ್ಕೆ ಬಂದಿದ್ದರೂ ಇರಬಹುದು.

ಈ ಪ್ರತಿಯನ್ನು ಬರೆದಿರುವವನು ಸಂಧಿಗಳಾದಿಯಲ್ಲಿ ಮಂಗಳಾರ್ಥವಾಗಿ ಉದ್ಯೋಗಪುರ ಅಥವಾ ಕೆಲಸೂರು, ತಮ್ಮಡಹಳ್ಳಿ ಕನಕಪುರ (ಹೊಸ್ನೂರು) ಗಳಲ್ಲಿರುವ ದೇವರುಗಳನ್ನು ನೆನೆಸಿದ್ದಾನೆ. ಈ ಊರುಗಳು ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದುವುಗಳಾಗಿವೆ. ಈ ಪ್ರತಿಯಿಂದ ಕೆಲವು ಭಾಗಗಳನ್ನು ವಾಚಕರ ಅವಗಾಹನೆಕ್ಕಾಗಿ ಉದಾಹರಿಸುತ್ತೇವೆ :—

Beginning :

ಶ್ರೀಗಿರಿ ಜಾಸ್ಯಾಂಬುಜ ದಿನನಾಯಕ ।
ಭೋಗಿಭೂಷಣ ಫಾಳನೇತ್ರ ॥

ಭಾಗೀರಥೀಧರ ಭವರೋಗ ವೈದ್ಯ ನೀ ।
ನಾಗು ಶಂಕರ ಶರಣೆಂಬೆ ॥ ೧ ॥
ಜಗದೊಳಗೀ ಕೃತಿಯನು ಪೇಳಬೇಕೆಂದು ।
ಅಗಜೆಯರರಸನ ನೆನೆದು ॥
ತ್ರಗಡೂರ ಕಟ್ಟೆಯೊಳ್ನೆಲಸಿವರವ ನೀವ ।
ಮಿಗಿಲು ರೂಪಿನ ವಿಘ್ನರಾಜ ॥ ೨ ॥

* * * *

ನರಕೃತಿಯನು ಕೇಳೆ ಫಲವಿಲ್ಲ ವೆನುತಲಿ ।
ಬರಿದೆ ಸಂದೆಯ ಮಾಡಬೇಡ ॥
ಪರನಾರಿಯ ಸಹೋದರ ವೀರರಾಮನ ।
ಚರಿತೆಯ ಕೇಳ ಸಜ್ಜನರು ॥ ೮ ॥
ಕನ್ನಡ ಕವಿಜಾಣರನ್ನನು ಪದಜಾತಿ । (?)
ಯಿನ್ನು ಮುನ್ನವೆ ಪಂಚಾಲ ॥
ಚೆನ್ನಭುಜಂಗಧರನ ಭೃತ್ಯ ಗಂಗ ಸಂ ।
ಪನ್ನ ಪೇಳದನೀ ಕೃತಿಯ ॥ ೯ ॥
ಮುತ್ತಿನ ಚೆಂಡನಾಡಲು ರಾಮನಾಥಗೆ ।
ಮಿತ್ರಾದಳು ಪಾಪೆ ರತ್ನಿ ॥
ಮತ್ತೆ ಪ್ರಧಾನಿಗಳರಸ ಕೊಲದೆ ಕಾಯ್ದ ॥
ಚಿತ್ರದ ಕತೆಯ ಹೇಳುವೆನು ॥ ೧೦ ॥
ಸೂಳೆಯರಂತೆ ಸಿಂಗರಿಸಿ ರಣಾಗ್ರದಿ ।
ಯಾಳ ಕಂಡಂಜಿ ಜಣಾಗುವ ॥
ಬಾಳುವ ಸುರಿತಾಳನ ಕಂಡನೆಂಬೊಂದು ।
ಕಾಲಪೆಂಡೆಯವ ನಿಟ್ಟೆಹನು ॥ ೧೧ ॥
ಪನ್ನೀರು ಜಳಕ ಮಜ್ಜನವಮಾಡಿ ರಾಮಯ್ಯ ।
ತನ್ನ ವಲ್ಲಭೆಯ ಮೇಳದಲಿ ॥
ರನ್ನದ ತೂಗು ಮಂಚದಿ ನಿದ್ದೆ ಗೆಯ್ದುದ್ದು ।
ವೃನ್ನಿಸಿದನು ಮನದೊಳಗೆ ॥ ೧೨ ॥

* * * *

ಮಂದಿ ಕುದುರೆಯ ಮುಂಬಾಗಿಲೊಳಗೆ ಬಿಟ್ಟು ।
ಬಂದು ಹೊಕ್ಕನು ಅರಮನೆಯ ॥
ಇಂದುವದನೆ ಹರಿಯಮ್ಮನ ಚರಣಾರ ।
ವಿಂದಕ್ಕೆ ನಮಿಸೊಂದು ಸಂಧಿ ॥ ೩೪ ॥
ಶರಣೆಂದ ಪುತ್ರನ ಹರಸುತ್ತ ಹರಿಯಮ್ಮ ।
ಶಿರವ ತಕ್ಕೈಸಿ ಮುಂಡಾಡಿ ॥
ಹರನ ಜಟಂಗಿ ರಾಮೇಶನ ಕೃಪೆಯಿಂದ ।
ಸ್ಥಿರಬಾಳೊ ವೈರಿ ಮಾರ್ತಾಂಡ ॥ (?) ೧ ॥

* * * *

(ಬಿಟ್ಟು ಬಂದಿಪೆ ಸುರಹೊನ್ನೆಯ) ಯ ಮರದಿಂದ ।
ಕೊಟ್ಟು ಕಳುಹಿರೊ ಕುಮ್ಮಟಕೆ ॥

ಪಟ್ಟಣವೆಲ್ಲ ಸಂಭ್ರಮಿಸಿ ಯಾರತಿ ಯೆತ್ತಿ ।
[ಚೆನ್ನ] (ದಿಟ್ಟ) ರಾಮನ ಬಲಗೊಂಡು ॥
ಪರಿಮಳ ಲೇಪಿಸಿ ಕುಸುಮವ ಸೂಡಿ (ಸಿ) ।
ಕರವ ಮು . . . . ॥
(ಪುರಜನ) ಬೆದರಿ ಪೂಜಿಸಿ ಕೆಯ್ಮುಗಿದರು ।
ಸುರಿತಾಳ ಕಪ್ಪವ ತೆತ್ತು ॥
ಧೀರ ವೀರನೆ ರಾಮ ಜಯವೆಂದು ಕರ್ಪೂರ ।
ದಾರತಿಯೆತ್ತಿ ಸಾರಿಯರು ॥
ಪೂರೈಸಿ ನೋಡುತೆ ಮನದಣಿಯದೆ ಬೀಬಿ ।
ಮಾರ . . . . ॥

End :

ನೋ . . . . ಸುರಿತಾಳನು ಮಗಳನು ।
ಪಾಡರಿದನು ಚಿಂತೆಯಲಿ ॥
ಬೇಡ ಮಗಳೆ ಕೂಡಿದ ಜನರೊಂದೊಂದ ।
ನಾಡಿಕೊಂಬರು ಹಾಸ್ಯವನು ॥
ನಿನ್ನ ನಿಸ್ನಾಲು (?) ಪುದಕೆಯೇಕೆ ದನಿಯುಂಟು ।
ಯೆನ್ನೊಳು ನು . . . . . . ॥
. . . . . . ಮಗಳೆ ಯೀತಲೆಯ ಹಂಬಲಬಿಡು ।
ಯೆನ್ನುತ . . . . ॥

. . . ಡವಿಯೊಳಗೆ ಬಲುಚಿತ್ರ ॥ ತಮ . . . ನಾಡು ಬೀಡು ದೇಶವೆಲ್ಲವ ನೋಡಿ
. . . . ಇರುಳೊಳು ಕಾಲಮೃತ್ಯು . . . . . ರಿಷ್ಟವರವ ಬೇಡಿದರು ॥ ಕೊಟ್ಟ
. . . ನೀಯದೆ ಕುಂದದೆ ತನ್ನನು [ಕೊ] (ಬ)ಲ ಗೊಂಡ . . . . . ನೆಯ ಪರಿಯ
ತೋರಿದ ಲೋಕದಲಿ . . . (ಸ)ಜ್ಜನ ಕಾವ್ಯ ॥ ಅಂತು ಸಂಧಿ . . . (ಕಾಳಾಯು)ಕ್ತ
ಸಂವತ್ಸರದ ನಿಜ ಆಶ್ವಯುಜ ಶುದ್ಧ ೧ . . . ದು ಮುಗಿಯಿತು.
ಮಂಗಳ ಮಹಾಶ್ರೀ.

No. 923. ಕುಮಾರ ರಾಮನ ಕಥೆ.

KUMĀRARĀMANA KATHE.

Contains the last sandhi in which the prince Kumārarāma gives up his life for his country and is complete in 201 stanzas. The verses and the plot are entirely different from those found in the works of Nanjuṇḍa and Gaṅgayya. The name of the author is not mentioned in this.

Similar to that described above.

Beginning :

ಶ್ರೀಗಿರಿಜಾಸ್ಯಾಂಬು ಜದಿನ ನಾಯಕ ।
(ಭೋಗಿ) ಭೂಷಣ ಭಾಳನೇತ್ರ ॥
ಭಾಗೀರಥೀಧರ ಭವರೋಗ ವೈದ್ಯನೀ ।
ನಾಗು ಶಂಕರ ಶರಣೆಂಬೆ ॥ 1 ॥
ಕಡೆಯ ಕಾಳಗದೊಳು ರಾಮನಿಗೆ ಧುರದ । (?)

ಕೆಡೆಯಿಲ್ಲದ ಖಾನರನ್ನು ॥
ಕಡಿದು . . . ದಿಗ್ಬಲಿಗೊಟ್ಟು ರಾಮನು ।
ಮಡಿದ ಪ್ರತಾಪ ವಿನ್ನೆಂತೋ ॥ ೨ ॥
ಪಾಳೆಯದೊಳಗೆ . . . ಹೊಯ್ದಂತೆ ।
ಕಾಳಗವನು ನೆನೆನೆನೆದು ॥
ಗೋಳಿಟ್ಟು ಸಾಯುಲಿ ಆಳೆಲ್ಲ ರವು . . . । (?)
ಹೇಳಲಮ್ಮರು ಹೆಸರುಗಳ ॥ ೩ ॥
ಬಲ್ಲಿದಳೆಂದು ನಿನ್ನೊಡನೆ ಬಂದಷೆ . . . ।
ಕೊಲ್ಲದ ಕೋಲೆಯು ಕೊಲ್ಲಿಸಿದೆ ॥
ನಿಲ್ಲದೋಡುವ ಚಲವುಳ್ಳಡೆ ಕಾದೆಂದು ।
ಜಲ್ಲರಿಖಾನ ನುಡಿವನು ॥ ೪ ॥

End :

ಗಡಬಡಿಸುತೆ ಸುರಿತಾಳನು ತಲೆಯನು ।
ತಡವಾಡದೆ ಕುಮ್ಮಟಕ್ಕೆ ॥
ಗಡಿಯು . . . ಗಂಜೆಯನಿಕ್ಕಿ ಕಳುಹಿದ ।
ಕಡುಬೇಗದಿಂದ ಕುಮ್ಮಟಕೆ ॥ ೧೯೫ ॥
ತಂದಶ . . . . ಕುಮ್ಮಟದೊಳು ಪೂಜಿಸಿ ।
ನಿಂದು ಕೈಮುಗಿದು ತುರುಕರು ॥
ಎಂದೆಂದಿಗೂ ಮಕ್ಕಳ ನಮ್ಮ ತಲೆಗಾಯೊ ।
ಎಂದು ಕೈಮುಗಿದು ತಿರುಗಿದರು ॥ ೧೯೬ ॥
ನಾಡು [ದೇಶವೆ] (ಗಳೊಳಗೆ) ಲ್ಲ ನೋಡಿ ನಗುತಕೊಂ ।
ಡಾಡಿ ಪೂಜಿಸಿ ಕೆಯ್ಮುಗಿದು ॥
ಬೇಡಿವ ವರವ ಕೊಟ್ಟನು ಬೇಡರು ಪೂಜೆಯು ।
ಮಾಡಿತು ಕುಲದೈವವಾಗಿ ॥ ೧೯೭ ॥
ಆಲುತ ಆತ್ರೆ ಆದಿತ್ಯವಾರದಿರುಳೊಳು । (?)
ಕಾಲಮೃತ್ಯು (ಪ್ರೋ) (ವ) ಕರೆವಂತೆ ॥
ಭೂಲೋಕಕೆಲ್ಲಕೆ ದೆಸೆವರಿಯ ಲುದ್ದಿಕ ।
ಕೇಳದವರು ವಿಸ್ತರಿಸೆ ॥ ೧೯೮ ॥
ಸೃಷ್ಟಿಯು ಬೇಡರ ಹೊನ್ನು ಹೆಣ್ಣು ಮಣ್ಣು ಮೂರು ।
ಯಿಟ್ಟು ಮೂ . . . ಬೇಡದದನು ॥
ಕೊಟ್ಟನು ತನ್ನನು ಬಲಗೊಂಡವರಿಗೆ ।
ಹುಟ್ಟು ಬ[ರಡೆ] (ಂಜೆ)ಗೆ ಮಕ್ಕಳನು ॥ ೧೯೯ ॥
ಮುಂದಣ ಮೂರ್ತಿ ಪದವನೊಂದ ತಪಿಸಿ ಮ ।
ತ್ತೊಂದ ಬೇಡಿದುದ ಹುಸಿಯದೆ ॥
ಚೆಂದದೆ ತನ್ನನು ಬಲಗೊಂಡವರಿಗೆ ।
ಬಂದ ವಿಗ್ರಹವ ಕ(ಳೆ) ಯಿಪಸು ॥ ೨೦೦ ॥
ತುರುಕರು ಕಾದಿ ತಿರುಗಿದರು ಕಂಪಿಲ ।
ನಿರುತಿರ್ದ ಹೊಸಮಲೆ ಯೊಳಗೆ ।
ಧುರಧೀರ ರಾಮನು ನರರಿಗೆ ತನ್ನಯ ।

ಪರಿಯ ತೋರಿಸಿದನು ಲೋಕದಲಿ ॥ ೨೦೧ ॥
ಈ ಕತೆಯನು ಮನವರಿದು ಕೇಳ್ದವರಿಗೆ ।
ಲೋಕಪುಣ್ಯವು ಧನಧಾನ್ಯ ॥
ಲೋಕೈಕ ಪೂಜ್ಯರಪ್ಪರು ಕುಲಸಮುದ್ರವು ।
ಆ ಕತೆ ಸಜ್ಜನ ಕಾವ್ಯ ॥

Colophon :

ರಾಮನಾಥನ ಕಡೆ(ಯ) ಕಾಳಗ ೨೦೧ (ಪದ್ಯಗಳು) ಕ್ಕೆ ಸಂಧಿ ಸಮಾಪ್ತ, ಮಂಗಳ ಮಹಾಶ್ರೀ.

(ವಿ.ವಿ.)—

ರಾಮನಾಥನ ಕಡೆಯ ಕಾಳಗದ ಸಂಧಿ ಸಂಪೂರ್ಣವಾಗಿದೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಉತ್ತಮವಲ್ಲ. ತಪ್ಪುಗಳುಂಟು.

ಇದರಲ್ಲಿ ಹಿಂದೆ ೯೨೨ ನೆಯ ನಂಬರಿನಲ್ಲಿ ವರ್ಣಿತವಾದ ಗ್ರಂಥದ ಕಡೆಯ ಸಂಧಿಯು ಮಾತ್ರ ಇದೆ. ಅದರಲ್ಲಿ ಈ ಕಡೆಯ ಸಂಧಿಯ ಓಲೆಗಳು ಅರ್ಧಕ್ಕಿಂತ ಹೆಚ್ಚು ಮುರಿದುಹೋಗಿ ಆದ್ಯಂತಭಾಗಗಳು ಇಲ್ಲದಿರುವ ಕಾರಣ ಇದರಲ್ಲಿ ಅವನ್ನು ಉದಾಹರಿಸಿದೆ. ಕೆಲವೆಡೆ ಪದ್ಯಗಳ ಓಟವು ಸರಿಯಾಗಿಲ್ಲ. ಪದ್ಯಗಳು ೨೦೧. ಇದರಲ್ಲಿ ರಾಮನಾಥನು ತುರುಕರೊಡನೆ ಕಾದಿ ಅಸುವಳಿದ ಕಥಾಭಾಗವಿರುವುದು. ಹಿಂದೆ ವಿವರಿಸಿರುವ ನಂಜುಂಡ ಮತ್ತು ಗಂಗಯ್ಯ ಕವಿಗಳ ಗ್ರಂಥಗಳಲ್ಲಿರುವ ಪದ್ಯಗಳಿಗೂ ಇದರಲ್ಲಿರುವ ಪದ್ಯಗಳಿಗೂ ಸಂಬಂಧವೇ ಇರುವುದಿಲ್ಲ. ಕಥಾಶರೀರದಲ್ಲಿರುವ ವ್ಯತ್ಯಾಸವನ್ನು ಹಿಂದಣ 922 ನೆಯ ನಂಬರಿನಲ್ಲಿ ನೋಡಿ ತಿಳಿಯುವುದು. ಈ ಕಾರಣಗಳಿಂದ ಇದು ಆ ಯೆರಡು ಗ್ರಂಥಗಳಿಂದಲೂ ಭಿನ್ನವಾದುದು ಎಂಬ ಊಹೆಗೆ ಅವಕಾಶವಿದೆ. ಕವಿ ವಿಷಯಕವಾದ ಪದ್ಯಗಳಾವುವೂ ಇದರಲ್ಲಿಲ್ಲ.

No. 924. ಕೃಷ್ಣ ಕಥೆ.

KṚṢṆA KATHE.

Substance, palm-leaf. Size, 16¼ × 1⅜ inches. Pages, 194. Lines, 6 to 8 on a page. Extent, 2,981 Granthas. Character, Kannada. Condition, much injured. Appearance, old. Mode of writing, good.

Begins on fol. 37a. The other work herein is—

Līlāvati of Nēmicandra 1*a*.

Incomplete.

Written in Vārdhaka Ṣaṭpadi metre; describes the story of the incarnation of Viṣṇu as Śrīkṛṣṇa, at the request of Brahma. The name of the author and date are not known from the existing portion. In the Lives of Kannada poets, Vol II, the date of the work is fixed as 1700 A.D.

Beginning :

ವಾ ॥ ಷ ॥ . . . . ಸುತ್ತಿಂ ತಡಿಗೆ ।
ಕದುಗಿ ಕವಿದಪೆನೆಂದು ಪಾಯ್ವ ಬೆಳ್ದಿಂಗಳೋ ಇಂಗಡಲೊ ಎನಲೆ ಸೆದುದು ॥ ೨ ॥
ಇದು ದುಗ್ಧನಿಧಿಯಲ್ತು ವಿಷ್ಣುಪದದಿಂ ಜಗುಳ್ದ ।
ಸದಮಲಾವನಿಯಲ್ಲಿ ಬಿಳ್ದ ವಜ್ರದ ಕಡೆಯ ।
ಮಿದು ತರಂಗ ಸಮೂಹಮಲ್ತು ತತ್ಕಾಂತಿಗಳ್ ಪಸರಿಸುತೆ ಮುಂಬರಿವುವು ॥
ಇದು ತೇಲ್ವಶೈವಾಲ ಮಲ್ತು ನೀಲಂಗಳಂ ।
ಪುದುಗಿ . . . ಪುವಲ್ಲಿಗಲ್ಲಿಗೆ ಮಕರಮತ್ಸ್ಯ!
ಮದಗಜಾಹಿಗಳಲ್ತು ಚಿತ್ರಿತ ಚಮತ್ಕೃತಿಯ ತಚ್ಚಿಹ್ನವೆನಲೆಸೆದುದು ॥ ೩ ॥

ಖಳರಬಹುಭಾರದಿಂ ನೊಂದು ತದಾಭ್ಬರವಮಂ ।
ಕಳೆಯಲ್ಕಮಳ ದುಕೂಲದ ಸಿಂಬಿಯಂ ಸುತ್ತಿ ।
ಜಳಕದಿಂದಂ ತಲೆಯೊಳಾಂತಿರಲ್ ವಿಷ್ಣುವೆ ಮಹದಾಭ್ಬರಸುಂ ॥
ಇಳಪಿ ರಕ್ಷಿಸು ರಕ್ಷಿಸೂ ನಿನ್ನ ಪದಮನಾಂ ।
ಖಳಕವಿಾ ಸಿಂಬಿಯೊಳ್ ತಾಳ್ವೆನೆಂದಾಂತಿರಲ್ ।
ಪೊಳೆವುದೋ ಎನೆ ಧರಾವನಿತೆಯ ಶಿರೋಭಾಗದೊಳ್ ದುಗ್ಧನಿಧಿ ರಾಜಿಕುಂ ॥ ೬೪ ॥
ಬಸವಳದು ಖಳರ ಭಾರಾಕ್ರಾಂತಿಯಿಂದ ಮಾ ।
ವಸುಧೆ ಮರೆವುಗುವೆನಾಂ ವಿಷ್ಣುಪದಮನೆನುತ್ತು ।
ಮಸದೃಶಮಹಾ ವಜ್ರಮಯ ಚಕ್ರವೊಂದಂ ವಿನೂತ್ನಮಿದೆನಲ್ ನಿರ್ಮಿಸಿ ॥
ಎಸೆವ ತನ್ನ ಶಿರಸ್ಸಿನೊಳಗಾಂತು ಕಾಣ್ಕೆಗುಡ ।
ಲೊಸಗೆಯಿಂ ತೆರೆತೆರೆಗಳಾಗಿ ತತ್ಕಾಂತಿಗಳ್ ।
ಪಸರಿಸುತ್ತುಮಿರೆ ತತ್ಖಳರ ಮೇಲೆ ಮೊರೆವುದೆನೆ ದುಗ್ಧಾಂಬುನಿಧಿ ಮೊರೆದುದು ॥ ೬೫ ॥

* * * * *

ಖಳರ ಭಾರದೊಳವನಿ ಬಸವಳದು ಬ್ರಹ್ಮಂಗೆ ।
ತಿಳಪಲತಿ ಕರುಣದಿಂ ಸುರರೊಡನೆ ದುಗ್ಧಾಬ್ಧಿ ।
ಗುಳಯದೆಯ್ತಂದು ಹರಿಯಂ ನುತಿಸುತ ಶರೀರ ವಾಕ್ಯವಂ ಕೇಳ್ದನಲಿದು ॥
ಇಳೆಯೊಳುದಯಿಪ್ರದು ನೀ ವಿರದೆ ವೆಂಕಟಶೌರಿ ।
ಯುಳಪುವಂ ಧರೆಯ ಭಾರವಮನೆಂದು ಸುರರೊಡನೆ ।
ಜಳಜಪಂ ಬೇಟ್ದುದಂ ಶುಕನಱಿವೆ ರಾಜರಿಸಿ ಕೇಳ್ದು ಮುದದಿಂದೊಪ್ಪಿದಂ ॥ ೪೮

Colophon :

ಉಭಯಸಂಧಿ ೨ ಕ್ಕಂ ಪದನು ೭೦ ಕ್ಕಂ ಮಂಗಳ ಮಹಾ ಶ್ರೀ.

ಸೂಚನೆ :—ಅಶರೀರ ವಾಕ್ಯಮಂ ಕೇಳ್ದುಕಂಸಂ ಭೀತಿ ।
ವಶದೆ ವಸುದೇವದೇವಕಿಯರಂ ನಿಗ್ರಹಿಸಿ ।
ಶಿಶುಗಳಂ ಸಂಹರಿಸಿದಂ ರಮಾಧವನವತರಿಸಿದನಾ ದೇವಕಿಯೊಳ್ ॥
ಅವಧರಿಸು ಭರತಕುಲ ತಿಲಕನೆ ಸರೋಜಜಂ ।
ವಿವರಿಸಿದ ತೆರದೊಳಾ ದೇವತೆಗಳೆಲ್ಲರುದು ।
ಭವಿಸಿದರ್ ಯದುವಂಶದೊಳ್ ರಮಾರಮಣನವತರಿಸಿದಂ ವಸುದೇವನಿಂ ॥
ಅವನಿಯಂ ರಕ್ಷಿಸಲ್ಕೆನೆ ನೃಪಂ ಬೆಸಗೊಂಡ ।
ನವಿರಳಾಂಬುಧಿಯಂತೆ ಮೆರೆವ ಯದುಕುಲದ ಜನ ।
ನವನಚ್ಯುತಾವತಾರದ ಕಥೆಯನೆನಗೆ ಬಿತ್ತರಮಾಗಿ ವಿವರಿಸೆಂದಂ ॥ ೧ ॥

End :

ದೇವಕೀನಂದನನ ಸೌಂದರ್ಯ ಸುಗುಣ ಸ್ವ-।
ಭಾವವೀರ್ಯೌದಾರ್ಯ ಮಾಧುರ್ಯ ಮೃದುವಚನ ।
ಕೋವಿದತ್ವಂಗಳಂ ಕವಿವರ್ಯರತಿಶಯದೆ ರಚನೆಗೆಯ್ವಾ ಮಹಿಮೆಯಂ ॥
ದೇವಿತಾಂ ಬಲ್ಲೊಡಂ ಗಾಯಕರ ಮುಖದಿಂದ ।
ಮಾವಗಂ ಕೇಳುತ್ತುಮಿರ್ದ ನರಲೀಲೆಗಳ ।
ನೇ ಮಹಿಸುತಾ ಕೃಷ್ಣನಡಿಗೆ ಸೋಲ್ದಳುತ್ತೆ ವಿರಹದಿಂದಂ ಬಳಲ್ದಳ್ ॥ ೧೩ ॥
ಆ ರುಕ್ಮಿಣಿಯ ರೂಪಗುಣಶೀಲ ವಿವಿಧಕ್ಕಂ ॥
ಗಾರಂಗಳಂ ಬಹುಮುಖದೆ ಕೇಳ್ದು ಸಂತೋಷ ।

ವಾರಿಧಿಯೊಳಾಳ್ದು ಮೋಹಿಸಿ ಕೂಡುವಾಸೆಯಿಂ ನರನಂತೆ ಚಿಂತೆಗೆಯ್ದಂ ॥
ಶ್ರೀರಮಣನುಂ ರುಕ್ಮಿಣಿಯುಮಿಂತು ಚಿಂತಿಸಲ ।
ಘೋರಮಹಿಮೆಗಳುಳ್ಳ ಕೃಷ್ಣನೇ ರಮಣನೀ ।
ನಾರೀಮಣಿಗೆನುತ್ತೆ ಭೀಷ್ಮಕಂ ನಿಶ್ಚೈಸಲಾ ಬಂಧುಗಳು ಮೊಪ್ಪಿದರ್ ॥ ೧೪ ॥
ಹರಿಗೆ ತಂಗಿಯನೀವುದನೆ ದೃಢೀಕರಿಸಿದಾ ।
ಪರಿಯನಾ ರುಕ್ಮಿ ಕೇಳುತ್ತೆ ಪಿತನಂ ಬಂಧು ।
ವರರುಮಂ ಧಿಕ್ಕರಿಸಿ ಶಿಶುಪಾಲಧರಣಿಪಂಗೀವುದನೆ ನಿಶ್ಚೈಸಿದಂ ॥
ನಿರುಪಮಮುಹೂರ್ತಮಿಾ ಮೂರನೆಯ ದಿವಸದೊಳ್ ।
: ರಮಮಂಗಳ (ಮಾ) ದಮಿರ್ಪುದೀ ತಂಗಿಯಂ ।
ಪರಸಿಮುದವಳಗೆಯಂ ಮಾಳ್ಪುದೆಂದಱಿಪಿದಂ ದುರ್ಬುದ್ಧಿಯಿಂದಮಾಗಳ್ ॥ ೧೫ ॥
ವೈರಿಯಾಗಿರ್ಪನೀ ಶಿಶುಪಾಲಭೂಪಂಗೆ ।
ಶೌರಿಯುವನೆಯ್ತಂದು ಮಾಳ್ಪಂ ವಿಘಾತಮಂ ।
ಸೌರವೈವಾಹಕ್ಕೆನುತ್ತೆ ರಕ್ಷಣೆಗೆ ನೃಪಕಟಕಮಂ ಬರಿಸಿ ಮುದದಿಂ ॥
ಚಾರುಮಂಗಳವಸ್ತುನಿಚಯಮಂ ತರಿಸಿ ಶೃಂ ।
ಗಾರಮಂ ಮಾಡಿಸಿದನಾನ . . . . ।

(ವಿ.ವಿ.)—

ಅಸಮಗ್ರ. ಸಂಧಿಗಳು ೨-೪೬ ಇರುವಂತೆ ಆದ್ಯಂತಗಳಿಂದ ಗೊತ್ತಾಗುವುದು. ಆದರೆ ಮಧ್ಯದಲ್ಲಿ ಕೆಲವುಸಂಧಿಗಳುಹೋಗಿವೆ. ಅಲ್ಲದೆ ಕೆಲವು ಅಪೂರ್ಣವಾಗಿವೆ. ಆದಿಯಲ್ಲಿ ೧೦ ನೆಯ ಓಲೆಯಿದೆ. ಇವುಗಳ ಮಧ್ಯದಲ್ಲಿ ೧೯—೬೩, ೬೫—೭೩, ೧೧೪—೧೨೧, ೧೪೬—೧೬೩, ೧೭೧—೨೫೫, ೨೫೭—೨೬೦, ೨೬೨—೨೬೪, ೨೭೦, ೨೭೫—೨೭೭, ೨೭೯—೨೮೫ ಎಂದರೆ ೧೯೩ ಓಲೆಗಳು ಹೋಗಿವೆ. ೧೫, ೧೭೫ ನೆಯ ಸಂಖ್ಯೆಗಳುಳ್ಳ ಓಲೆಗಳು ಎರಡೆರಡಿವೆ. ಆದರೆ ಅವುಗಳ ವಿಷಯವು ಮಾತ್ರ ಬೇರೆಯಾಗಿದೆ. ಪುಸ್ತಕವು ಅತ್ಯಂತ ಶಿಥಿಲವಾಗಿದೆ. ಪಾಠವು ಶುದ್ಧವಾಗಿದೆ. ಲಿಪಿ ಚೆನ್ನಾಗಿದೆ. ಆದಿಯಲ್ಲಿ ಇದರೊಡನೆ ನೇಮಿಚಂದ್ರನ ಲೀಲಾವತಿಯ ಅಸಮಗ್ರ ಪ್ರತಿಯೊಂದಿದೆ. ಅದನ್ನು ೧೧೪೯ ನೆಯ ನಂಬರಿನಲ್ಲಿ ನೋಡುವುದು.

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ. ಗ್ರಂಥದ ಆದಿಮಧ್ಯಾಂತ ಭಾಗಗಳು ಹೆಚ್ಚಾಗಿ ಹೋಗಿವೆ. ಇದರಲ್ಲಿ ಉತ್ತವಾಗಿರುವ ವಿಷಯವು ‘ ಖಳರ ಭಾರದೊಳವನಿ . . . . ಮುದದಿಂದೊಪ್ಪಿದಂ ’ ಎಂಬ ಪದ್ಯದಲ್ಲಿ ಹೇಳಿದೆ. ಈ ಅಸಮಗ್ರ ಪ್ರತಿಯಲ್ಲಿ ಕಥಾ ಭಾಗವು ಎಲ್ಲಿಯವರೆಗಿದೆಯೆಂಬುದನ್ನು ಉದಾಹೃತಭಾಗಗಳಿಂದ ತಿಳಿಯಬಹುದು. ಈ ಕಾವ್ಯವು ಪ್ರೌಢವಾಗಿಯೂ ಮನೋಹರವಾಗಿಯೂ ಇದೆ. ಪ್ರತಿಯೊಂದು ಸಂಧಿಯಕೊನೆಯಲ್ಲಿಯೂ ‘ ವೇಂಕಟಶೌರಿ ’ ಎಂಬ ಅಂಕಿತವು ಕಂಡುಬರುತ್ತದೆ. ಕವಿಯ ದೇಶ, ಕಾಲ ಮುಂತಾದ ವಿಷಯಗಳುಳ್ಳ ಪದ್ಯಭಾಗವು ಹೋಗಿದೆ. ಆದಕಾರಣ ಅವನ್ನು ನಿರ್ಣಯಿಸುವುದು ಕಷ್ಟವಾಗಿದೆ. ಕವಿಚರಿತ್ರಕಾರರು ಇದರ ಕಾಲವು ಸು. ೧೭೦೦ ಎಂದು ಬರೆಯುತ್ತಾರೆ (ಸಂಪುಟ ೩, ಪುಟ ೩೧೦.)

No. 925. ಗೌರಮ್ಮನ ತ್ರಿವಿಧಿ-

GOURAMMANA TRIVIDHI.

Substance, palm-leaf. Size, 13⅜ × 1¼ inches. Pages, 8. Lines, 5 on a page. Extent, 50 Granthas. Character, Kannada. Condition, much injured. Appearance, old. Mode of writing, fair.

Begins on fol. 80a of the Ms. described under No. 6990 of the Descriptive Catalogue of Sanskrit Mss.

Incomplete.

A poem in Trividhi metre having three feet in it, describing the charm and beauty of limbs of Gauramma in every song with suitable illustrations from nature.

Beginning :

. . . . ಯುಬ್ಬರದನಿಚೆಂದ ॥
ಉಬ್ಬಿದ್ದು ಹರಿವ ಹೊಳೆಚಂದ। ಉಬ್ಬಿದ್ದು
ಹರಿವ ಹೊಳೆ ಚೆಂದ ಗೌರಮ್ಮನ। ಹುಬ್ಬಿನ ಭಾವ ಮಿಗೆ ಚಂದ ॥ ೬ ॥

ರವಿಗೆ ರಥವು ಚಂದ ಹವಿಗೆ ಧೂಪವು ಚಂದ:
ಕಿವಿಗಳಿಗೆ ಮುತ್ತಿಯು ಮಿಗೆ ಚಂದ। ಗೌರಮ್ಮನ।
ಕಿವಿಯ ಭಾವಗಳು ಮಿಗೆ ಚಂದ ॥ ೭ ॥

ಅನ್ನವಿಕ್ಕುವ ಚಂದ। ಕನ್ನೆಯು ನುಡಿಚಂದ।
ಹೊನ್ನುದಾವರೆಯು ಹೂ ಚಂದ।
ಹೊನ್ನತಾವರೆಯೂ ಹೂ ಚಂದ ಗೌರಮ್ಮನ।
ಕೆನ್ನೆಯ ಭಾವಮಿಗೆ ಚಂದ ॥ ೮ ॥

End :

ತೂಗುಮಂಡೆವು ಚಂದ ಪಾಗು ಮಂಡೆಗೆ ಚಂದ।
ಸಾಗರದಾ ತೆರೆಯು ಮಿಗೆ ಚಂದ ॥
ಸಾಗರದಾ ತೆರೆಯು ಮಿಗೆ ಚಂದ ಗೌರಮ್ಮನ।
ಮೇಗಲ ಭಾವ ಮಿಗೆ ಚಂದ ॥ ೩೫ ॥

ಸಾದಿನ ಕಪ್ಪುಚಂದ ಪಾದರಿಯ ಹೂ ಚಂದ।
ಸೋದಿಸಿದಾ ಸುಣ್ಣ ಮಿಗೆ ಚಂದ ॥
ಸೋದಿಸಿದಾ ಸುಣ್ಣ ಮಿಗೆ ಚಂದ ಗೌರಮ್ಮನ।
ಪಾದದ ಭಾವ ಕರ ಚಂದ ॥ ೩೬ ॥
ಉರ್ವಿಗೆ ದೊರೆ ಚಂದ ಪೂರ್ವರ ಮನೆ ಚಂದ।

ಸರ್ವರಿಗೆ ಶರಣು ಮಿಗೆ ಚಂದ ॥
ಸರ್ವರಿಗೆ ಶರಣು ಮಿಗೆ ಚಂದ ಗೌರಮ್ಮನ।
ಸರ್ವಾಂಗವೆಲ್ಲಮಿಗೆ ಚಂದ ॥ ೩೭ ॥

Colophon :

ಗೌರಮ್ಮನ ತ್ರಿವಿಧಿ ಸಮಾಪ್ತ. ಮಂಗಳ ಮಹಾಶ್ರೀ.

(ವಿ-ವಿ.)—

ಆದಿಯಲ್ಲಿ ಐದು ಪದ್ಯಗಳಿಲ್ಲ. ೬ ನೆಯ ಪದ್ಯದಿಂದ ೩೭ ನೆಯ ಪದ್ಯದ ವರೆಗಿನ ಅಂಶವಿದೆ. ಎರಡನೆಯ ಓಲೆಯ ಒಂದು ತುಂಡು ಮಾತ್ರ ಇದೆ. ಆದ್ದರಿಂದ ಮಧ್ಯದಲ್ಲಿ ೧೪ ರಿಂದ ೨೪ ನೆಯ ವರೆಗಿನ ಪದ್ಯಗಳು ನಷ್ಟವಾಗಿವೆ.

ಗೌರಮ್ಮನ ಭಾವವನ್ನು ವರ್ಣಿಸುವ ಈ ಪದ್ಯಗಳನ್ನು ಶೃಂಗಾರದ ಹಾಡುಗಳ ಗುಂಪಿಗೆ ಸೇರಿಸಬಹುದಾಗಿದೆ.

No. 926. ಗಂಗಾಧರನ ಅಷ್ಟಕ.
GAṄGĀDHARANA AṢṬAKA.

Substance, palm-leaf. Size, $13\frac{1}{4} \times 1\frac{3}{8}$ inches. Pages, 4. Lines, 4 to 5 on a page. Extent, 20 Granthas. Character, Kannada. Condition, injured. Appearance, old. Mode of writing, good.

Begins on fol. 49 *b* of the Ms. described under No. 6990 of the Descriptive Catalogue of the Sanskrit Mss.

Complete.

A love song in eight stanzas in caupadi metre addressed to God Śiva named Gaṅgādhara worshipped at *Kakudgiri* by a young harlot.

Beginning :

ಗಂಗಾಧರನ ಅಷ್ಟಕ.

ಚಿಕ್ಕಪ್ರಾಯದಿ ನಿನ್ನರೂಪಿಗೆ ಸಿಕ್ಕಿದಕ್ಕದ ನಾರಿಯೂ ॥
ತಕ್ಕಯೊಳಗಿಂದಗಲಿ ಹೋಹರೆ ದಕ್ಕುಪಾರಿಯು ನೀರೆಯೂ ।
ಅಕ್ಕರಿಂದಲಿ ಕರೆದು ಮನ್ನಿಸೊ ಅಧಿಕರ್ತ್ರಿವೈಯಾರಿಯೂ ।
ಮಕ್ಕಳಾಟಿಕೆ ಬೇಡವೋ ನಿನ್ನದೈಯಿಕೊ ಶ್ರೀ ಗಂಗಾಧರ ॥ ೧ ॥

End :

ಹರುಷದಿಂದಲಿ ನಿನ್ನ ಮಾತಿನ ಪಣ್ಯನಾರಿ ಸುಲತಾಂಗಿಯೂ ।
ಕರೆದು ಪ್ರಿಯದಿ ಮಮಕರವ ಪಿಡಿದು ಶುಭಾಂಗಿಯು ॥
ಪರಿಮಳದ ಹೂಹಾಸುಮಂಚದಿ ನೆರೆದೆಯ್ಯುಮೋಹನಾಂಗಿಯು ॥
ಹೊರೆವ ಭಕ್ತನು ನೀ ಸಲಹೊ ಕಕುದ್ಗಿರಿಯ ಗಂಗಾಧರ ॥ ೮ ॥

(ಪಿ.ಪಿ.)—

ಸಮಗ್ರ. ಶೃಂಗಾರ ಸಮಯಗಳಾದ ಎಂಟು ಪದ್ಯಗಳು ಚೌಪದಿ ವೃತ್ತದಲ್ಲಿ ಇವೆ. ಇವುಗಳು ಕಕುದ್ಗಿರಿಯೆಂಬಲ್ಲಿರುವ ಗಂಗಾಧರ ದೇವರ ಮೇಲೆ ಮೋಹಿತಳಾದ ಮತ್ತು ಭಕ್ತೆಯಾದ ಸೂಳೆಯೊಬ್ಬಳಿಂದ ಹೇಳಲ್ಪಟ್ಟವುಗಳಾಗಿ ಕಡೆಗಣ ಪದ್ಯದಿಂದ ತಿಳಿಯುತ್ತದೆ.

No. 927. ಚಿಕ್ಕಯ್ಯನ ಸಾಂಗತ್ಯ by ಬಸವ.
CIKKAYYANA SĀṄGATYA BY BASAVA.

Substance, Sritāla. Size, 8-13/16 × 1-9/16 inches. Pages, 70. Lines, 9 to 10 on a page. Extent, 750 Granthas. Character, Kannada. Condition, extremely injured. Appearance, old. Mode of writing, good.

Incomplete. Begins in the 61st folio and ends with the 118th folio. Some leaves are missing in the middle.

This work describes the story of Cikkayya, who was a leader of robbers at first, and made efforts to kill Basava, the defied teacher of Jaṅgamas and afterwards turned to the way of devotees by the guidance of him. The date of the author is about 1550 A.D.

Beginning :

(೬೧ ನೆಯ ಓಲೆಯಿಂದ.)

ಚೆನ್ನಬೆಳ್ಳಿಯ ತಾಮ್ರ ರುದ್ರಾಕ್ಷಿ ಕಬ್ಬುನ ।
ವರ್ಣವರ್ಣದ ಕಂ . . ಯಿಂದ ।
ಪನ್ನಗಧರರೆಂದೆನಿಪ ಲ . . ಂಗದ ತೊಟ್ಟು ।

ಇನ್ನವರೆಯ್ದುತಿರಲು ॥
ಲಕ್ಷದ ಮೇಲೆ ತೊಂಬತ್ತಾರು ಸಾವಿರ-।
ದೀಕ್ಷೆಕರೆಯ್ದುತಿರಲು ॥
ಅಕ್ಷಯಾನಂದದಿಂದದರೊಳು ಚಿಕ್ಕಯ್ಯ ।
ದೀಕ್ಷೆಯಿಲ್ಲದೆ ನಡೆತಂದ ॥

(೯೦ ನೆಯ ಓಲೆಯ b ಯಿಂದ)

ಎಂದು ಮೃಗಾಕ್ಷಿಗರುಪಿ ರಾಮ ಪೊರವಂಟು ।
ಮುಂದಿರದ್ವಾರವಟ್ಟವನು ॥
ಕುಂದದವನು ಪೊಗಲು ಕಂಡು ಮಹದೇವಿ ।
ಒಂದು ನೂರಾಗಿ ಮೆಚ್ಚಿದಳು ॥ ೬೯ ॥
ಸೂರ್ಯನಳಿದ ಚಕೋರನುತ್ಸವದಂತೆ ।
ವಾರಿಧಿ ಚಂದ್ರೋದಯಕೆ ॥
ಮೀರುವಂದದೆ ಮೆಚ್ಚಿ ಹಾರಿದ ಹರಕೆ ಕೈ- ।
ಸೇರಿತ್ತೆಂದಳು ಮನದೊಳಗೆ ॥ ೭೦ ॥

End :

. . . . . ಬಸವ ಜ್ಞಾನ ।
ದರ್ಪಣ ಶ್ರೀ ಗುರುರಾಯ ॥
ಕುಪ್ಪಸಕಂತೆಯ ವೀರಲೋಕಾರಾಧ್ಯ ।
. . . (ಭಕ್ತಿ) . . ತವ ।
ಈ ಕೃತಿ ಮೋಹನಸಾರ ವಿದರೊಳ ।
ಗೇಕಾಕ್ಷರವ ಕೇಳ್ದರಿಗೆ ॥
ಮಾ . . . . ವರ-।
ವೇಕೋದೇವ ಮನ್ನಿಸುವ ॥
ಶಿವಭಕ್ತರೊಲಿದು ಲಾಲಿಸಿದ ಕಥೆಯ ।
. . . . ದು ॥
ಪವಣಿಗೆ ಮಾಳ್ದನ ಹಂಕಾರವಿಲ್ಲೆನ್ನ ।
ಕವಿತೆಯ ಸಲಹೊ ಶರಣಾರ್ತಿ ॥

Colophon :

. . . . ಪದನು ೪೩೦ ಕ್ಕಂ ಮಂಗಳ ಮಹಾ ಶ್ರೀ.

(ವಿ-ವಿ.)—

ಮೊದಲು ಕಳ್ಳನಾಗಿದ್ದು ವೀರಶೈವ ಗುರುವಾದ ಬಸವನನ್ನು ಕೊಲ್ಲಲು ಪ್ರಯತ್ನಿಸಿ, ಬಳಿಕ ಅವನಿಂದ ಜ್ಞಾನೋಪದೇಶವನ್ನು ಹೊಂದಿ ಮುಕ್ತಿಯನ್ನು ಪಡೆದ ಚಿಕ್ಕಯ್ಯನ ಕಥೆಯು ಇದರಲ್ಲಿ ಪ್ರತಿಪಾದ್ಯವು.

ಅಸಮಗ್ರ. ಓಲೆಗಳು ಸರ್ವಾಂಗದಲ್ಲಿಯೂ ಜೀರ್ಣವಾಗಿವೆ. ಆರಂಭದ ೬೦ ಓಲೆಗಳಲ್ಲಿ ಕೆಲವು ತುಂಡುಗಳು ಮಾತ್ರ ಇವೆ. ಇಲ್ಲಿ ಕೊನೆಗೆ ಕಾಣಿಸಿದ ಗ್ರಂಥ ಭಾಗದಲ್ಲಿರುವ ಬಸವ, ಶ್ರೀ ಗುರುರಾಯ, ಕುಪ್ಪಸ ಕಂತೆಯ ವೀರಲೋಕಾರಾಧ್ಯ ಮೋಹನಸಾರ ಎಂಬ ಅಂಕಗಳಿಂದ (ಕರ್ಣಾಟಕ ಕವಿಚರಿತೆಯ ೨ ನೆಯ ಸಂಪುಟದಲ್ಲಿ ವರ್ಣಿಸಿದಂತೆ) ವೀರ ಶೈವ ಕವಿಯಾದ ಬಸವನು ಗ್ರಂಥಕರ್ತನೆಂದೂ, ಅವನ ಗುರು ಕುಪ್ಪಸಕಂತೆಯ ವೀರ ಶೈವಜನಾರಾಧ್ಯನಾದ ಗಂಗಾಧರ ಪ್ರಭುವೆಂದೂ, ಗ್ರಂಥಕ್ಕೆ ಮೋಹನ ಸಾರ ಅಥವಾ ಭಕ್ತಿಮೋಹಸಾರವೆಂಬ ಹೆಸರುಂಟೆಂದೂ ಹೇಳಬಹುದಾಗಿದೆ. ಕವಿಯ ಕಾಲವು ಸುಮಾರು ಕ್ರಿ. ಶ. ೧೫೫೦ ಆಗಿರಬಹುದು.

No: 928. ಚೆನ್ನಬಸವ ಪುರಾಣಕಾವ್ಯ by ವಿರೂಪಾಕ್ಷ ಪಂಡಿತ.

CENNABASAVA PURĀṆAKĀVYA BY VIRŪPĀKṢAPAṆḌITA.

Substance, paper. Size, 16-11/16 × 7-5/16 inches. Pages, 952. Lines, 18 to 20 on a page. Extent, 9,500 Granthas. Character, Kannada. Condition, good. Appearance, old. Mode of writing, fair.

Complete.

A poem in Vārdhaka Ṣaṭpadi metre describing the story of *Cennabasava*, son **of** *Nagalāmbike*, who was the sister of *Basava*. The author wrote it in the year **Tāraṇa 1507** Śaka, corresponding to 1584 A.D. He was **a** Vīraśaiva **by** religion **and a disciple** of *Siddhavīrēsa* of *Hiriyamaṭha* at *Vidyānagara*.

Beginning :

ಸೂ || ಪರಮಗುರು ಚೆನ್ನಬಸವಂ ಸಿದ್ಧರಾಮಂಗೆ |
ಪರಮ ಶಿವ ತತ್ತ್ವಮಂ ತಿಳುಪಿ ದೀಕ್ಷೆಯ ನಿತ್ತು |
ಪರಮಸತ್ಕಥೆಯಿಂದಂ ಸದ್ಭಕ್ತರೊಲಿಪಿನಿಂ ಕೇಳ ಕೃತಕೃತ್ಯರಹರು ||
ಶ್ರೀ ಪರಮ ಸದ್ಗುರು ಪರಂ ಪರಂಜ್ಯೋತಿ ಸ್ವ- |
ರೂಪನಾದ್ಯಂತರರಹಿತಂ ನಿತ್ಯನದ್ವಯಂ ||
ಪಾಪರಹಿತಂ ಪರಬ್ರಹ್ಮ ಬ್ರಹ್ಮಜ್ಞಾನ ಬೋಧಕಸುಕರ್ತೃವೆಂದು ||
ಗೋಪವಾಹನರಾವಗಂ ಬಿಡದೆ ನಿಮ್ಮಯ |
ಶ್ರೀಪಾದಪದ್ಮಂಗಳಂ ಭಜಿಸುತಿಹರೆನ್ನ |
ತಾಪತ್ರಯಂಗಳಂ ಹರಿಸಿ ರಕ್ಷಿಸು ನಿಮ್ಮನಾಪೊಗಳ್ವೆನೆಳ್ಕರಿಂದ ||

*   *   *   *

ಸರಸಕವಿ ಬಾಣನು ಮಯೂರ ಭವ ಭೂತಿ ಸ- |
ದ್ವರ ಕಾಳಿದಾಸ ಮಲುಹಣ ಮಲೆಯರಾಜನತಿ |
ಬಿರುದಂಕ ಕವಿ ರಾಘವಾಂಕ ಹಂಪೆಯ ಹರೀಶ್ವರ ಹಲಾಯುಧನುದ್ಭಟ ||
ಗುರು ಪಂಡಿತೇಶ ಪಾಲ್ಕುರಿಕೆಯಾರಾಧ್ಯ ಭೀ- |
ಮರಸ ಮೊಗ್ಗೆಯ ಮಾಯಿ ದೇವ ಚಾಮರಸ ಶಂ |
ಕರ ಕೆರೆಯ ಪದ್ಮರಸರಾದ ಶಿವ ಕವಿಗಳಂ ಬಲಗೊಂಡು ಕೃತಿವೇಳ್ವೆನು ||
ನುಡಿಯ ಮಾತಾಡುವಂದದೊಳೋರ್ವನೊಳಗಿರ್ದು |
ನುಡಿದೊಡನ್ಯರ ಕಿವಿಗೆ ಪ್ರತಿಶಬ್ದದಿಂದಾಗ |
ತೊಡನೆ ತಾ ಕೇಳಬಂದಂತೆ ನಿಜ ಹೃತ್ಕಮಲ ಕರ್ಣಿಕಾಮಧ್ಯದಲ್ಲಿ ||
ಎಡೆವಿಡದೊಲಾವಾಗ ಮಿರ್ಪ ಪಂಪಾಕ್ಷೇತ್ರ |
ದೊಡೆಯನೆ ವಿರೂಪಾಕ್ಷನೇ ಪೇಳಿಸಿದೊಡೆ ಸವಿ |
ನುಡಿಗಳಿಂದೀ ಚೆನ್ನ ಬಸವ ಪುರಾಣಮಂ ಪೇಳ್ವೆನಧಿಕೋತ್ಸವದೊಳು ||
ಕಥೆಯ ನಾಮಂ ಚೆನ್ನಬಸವ ಪುರಾಣಮೀ |
ಕಥೆಗೊಡೆಯನಾ ವಿಮಲ ಚೆನ್ನ ಬಸವೇಶ್ವರಂ |
ಕಥೆಯ ಪೇಳ್ದಾತಂ ವಿರೂಪಾಕ್ಷಪಂಡಿತಾರಾಧ್ಯನಾಗಮಹೃದ್ಯನು ||

*   *   *   *

ಪರಿವಿಡಿಯೊಳೀ ಪುರಾಣದ ಕಥಾಕೌಳಿಕ ಮಂ |

ವಿರಚಿಪೆಂ ಕೈಲಾಸವರ್ಣನಂ ನಾರದನ ।
ದರುಶನಂ ಚೆನ್ನಬಸವೋತ್ಪತ್ತಿ ಪುಷ್ಪಕೋತ್ಸವ ಪೂತನ ಸುಳೀಲೆಯಂ ॥
ಅರಸಿನಾಸ್ಥಾನವಮಂ ಪುರದೇಶವರ್ಣನಂ ।
ಗುರು ಚೆನ್ನಬಸವನಾ ಸಿದ್ಧರಾಮೇಶ್ವರಂ ।
ಗೊರೆದ ಶಿವತತ್ವಮಂ ಶಿವನೇಕವಾದದಿಂ ನಿಂದು ನರ್ತಿಸಿದ ಲೀಲೆ ॥
ಪರಮಸೋಮಂ ವೃಷಭಯಾನ. ಮುರುಳಿಂಗಮಂ ।
ದಿರದರ್ಧ ನಾರೀಶ ನಜಶಿರಚ್ಛೇದವಮಂ ।
ದುರುತರದ ಬಿಕ್ಷಾಟನಂ ದಕ್ಷಿಣಾಮೂರ್ತಿ ವಿಷ್ಣು ಕಂಕಾಳಧರನು ।
ಗರಳಧರನಿಂದುಧರನಾ ಜಲಂಧರನ ಸಂ ।
ಹರಣವಾ ಚಕ್ರದಾನಂ ಗಜಾಸುರಮಥನ ।
ಮಿರದೆ ದಕ್ಷಾಧ್ವರಂ ಹರಿಹರಂ ಕಾಮದಹನಂ ಶಿವೆಯ ಕಲ್ಯಾಣಮುಂ ।
ವರಕುಮಾರೋತ್ಪತ್ತಿ ತಾರಕಾಸುರನ ಸಂ ।
ಹರಣವಾ ತ್ರಿಪುರದಹನಂ ವಸಂತೋತ್ಸವಂ ।
ಉರುತರದ ಗಂಗಾಧರಂ ಬಳಕ್ಕಂಧಕಾಸುರ ಹರಂ ಕಾಲ ದಹನಂ ॥
ಪರಮ ಸುಖವಹ ಮೂರ್ತಿಯರ್ಜುನಗೆ ಪಾಶುಪತ ।
ಕರವಿತ್ತ ಲೀಲೆಯಾ ಸೋಮ ಸೂರ್ಯಾನ್ವಯಂ ।
ಕರಣಾ (ರ ಸು) ಚರಿತೆ ದೀಕ್ಷಾವಿಧಾನಂ ಷಟ್ಸ್ಥಲಂ ಸುಕಾಲಜ್ಞಾನಮುಂ ॥
ಇಂತಿವೆಲ್ಲಂ ಚೆನ್ನ ಬಸವ ಪುರಾಣದಾ-।
ದ್ಯಂತ ಸತ್ಕಥೆಯ ಸೂಚನೆಯಿದಂ ಪರಮಸುಖ ।
ಸಂತಸದಿ ಪೇಳ್ವರ್ಗೆ ಕೇಳ್ವರ್ಗೆ ಭಕ್ತಿಯಿಂ ಬರೆದೋದಿ ಪಠಿಸಿದರ್ಗೆ ॥
ಸಂತಸದಿ ಸಕಲ ಸುಖಮಂ ಸಕಲ ಭೋಗಮನ ॥
ನಂತಸಾಭಾಗ್ಯಮಂ ಕೊಟ್ಟು ರಕ್ಷಿಸುವನಾ ।
ಕಂತುಹರನವರಾವತಾರ ನೆನಿಸುವ ಚೆನ್ನಬಸವೇಶನಟ್ಕಿರಿಂದೆ ॥

Colophon :

ಅಂತು ಪ್ರಥಮ ಸಂಧಿ ಸಂಪೂರ್ಣಂ.

ಸೂ ॥ ಪರಮಗಿರಿ ಕೈಲಾಸ ಶಿಖರದಾಸ್ಥಾನದೊಳ್ ।
ಪರಮೇಷ್ಠಿ ವಿಷ್ಣು ಸುರನರ್ಭುಜಂಗರ್ವೆರಸಿ ।
ಪರಮೇಶ್ವರಂ ಗಿರಿಜೆ ಸಹಿತ ಮತಿ ವಿಭವದಿಂದೊಡ್ಡೋಲಗ ದೊಳಿಸೆದನು ॥

End :

ಶಾಲಿವಾಹನ ಶಕದ ಸಾಹಸ್ರದೈನೂರ ।
ಮೇಲರೇಳನೆಯ ತಾರಣ ಸಂವತ್ಸರದ ।
ಕಾಲದೊಳಗೆಸೆವ ಶ್ರಾವಣ ಬಹುಳ ದಶಮಿಯಾ ಗುರುವಾರ ಕತಿಸಾಂಗದಿಂ ॥
ವೇಳ ಮುಗಿಸಿದ ಪಂಡಿತಾಗ್ರಣಿ ವಿರೂಪಾಕ್ಷ ।
ಲೀಲೆಯಿಂ ಚೆನ್ನ ಬಸವೇಶ ಪುರಾಣಮಿದ ।
ನಾಲಿಸುವ ಶರಣರಿಗೆ ಸಕಲ ಪದವಿಯ ನೀವ ಚೆನ್ನಬಸವೇಶನೊಲಿದು ॥

ಇದು ಸಕಲ ವೀರಮಾಹೇಶ್ವರರ ಸದ್ವಿಮಲ ।
ಹೃದಯಾಬ್ಜ ಮಿತ್ರನುರು ಷಟ್ಸ್ಥಲ ಬ್ರಹ್ಮವೆಂ- ।
ಬುದಧಿವರ್ಧನ ಸೋಮನೆನಿಪ ಗುರು ಸಿದ್ಧವೀರೇಶ್ವರನ ಕರಜಾತನು ॥
ಸದಮಲಜ್ಞಾನ ಸಕಲಾಗಮ ಪುರಾಣಕೋ- ।
ವಿದನೆನಿಪ ವಿರೂಪಾಕ್ಷಪಂಡಿತಾರಾಧ್ಯನತಿ ।
ಮುದದಿ ಪೇಳ್ದೀ ಚೆನ್ನ ಬಸವ ಪುರಾಣ ಸತ್ಕಥೆಯೊಳೈದನೆಯ ಕಾಂಡ ॥
ಇಂತೆಸೆವ ಚೆನ್ನಬಸವೇಶನ ಪುರಾಣಮಂ ।
ಸಂತಸದೆ ಬರೆದವರ್ಗೋದಿದರ್ಗರ್ಥವಾ ।
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ॥
ಸಂತತಂ ಸಕಲಸುಖಮಂ ಸಕಲಭೋಗಮನ- ।
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ ।
ಕಂತುಹರನಪರಾವತಾರನೆನಿಸುವ ಚೆನ್ನ ಬಸವೇಶನಕ್ಕರಿಂದ ॥
ಅಂತು ಸಂಧಿ ೬೩ ಕ್ಕಂ ಪದನು ೨೮೯೧ ಕ್ಕಂ ಮಂಗಳ ಮಹಾ ಶ್ರೀ.

Colophon :

(ವಿ-ಬಿ.)—

ಸಮಗ್ರ ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ.

ಇದು ವಾರ್ಧಕ ಷಟ್ಪದಿಯಲ್ಲಿ ಬರೆದಿದೆ. ಇದರಲ್ಲಿ ೫ ಕಾಂಡಗಳು ೬೩ ಸಂಧಿಗಳು, ೨೮೯೧ ಪದ್ಯಗಳು ಇರುವುವು. (ಮುದ್ರಿತ ಪುಸ್ತಕದಲ್ಲಿ ಪದ್ಯಸಂಖ್ಯೆ ೨೮೯೮). ಗ್ರಂಥದಾದಿಯಲ್ಲಿ ಪಂಪಾವಿರೂಪಾಕ್ಷ ಸ್ತುತಿಯಿದೆ. ಆ ಮೇಲೆ ಕವಿ ನಂದಿ, ಭೃಂಗಿ, ವೀರಭದ್ರ ಕುಮಾರಸ್ವಾಮಿಗಳನ್ನು ನುತಿಸಿ ತರುವಾಯ ಪ್ರಭುದೇವ ಮೊದಲಾದ ಪುರಾತನರನ್ನು ಹೊಗಳಿದ್ದಾನೆ. ಪೂರ್ವ ಕವಿಗಳನ್ನು 'ಸರಸಕವಿ ಬಾಣನು' ಎಂಬ ಪದ್ಯದಲ್ಲಿ ಸ್ಮರಿಸಿದ್ದಾನೆ. ತನ್ನ ಕಾವ್ಯದ ವಿಷಯವಾಗಿ 'ಕರ್ಣಾಟಕ ವ್ಯಾಕರಣ ಛಂದಸ್ಸಲಂಕಾರ ಶಬ್ದಂಗಳನನುಗೊಳಿಸಿ ವರ್ಣಕಕ್ಕಿಲ್ಲ ಲಕ್ಷಣವೆಂಬ ಜನರ ನಾಣ್ನುಡಿಯು ನಲ್ಲೆನಿಸಿ ಪೇಳ್ದೆಂ ವಿನೂತನ ಕಾವ್ಯಮಂಜಗತ್ಸೇವ್ಯಮಂ' ಎಂದೂ 'ನುತಿವಡೆದ ಪದಿನೆಂಟು ವರ್ಣನೆಗಳಿಂ ಸಮಾ। ಶ್ರಿತ ನವರಸಾದ್ಯ ಲಂಕಾರಂಗಳಿಂ ವಿಬುಧ। ತತಿ ಬಣ್ಣಿಪಂತಾಗಿರುವೀ ಕಾವ್ಯಮತಿ ಸೇವ್ಯಮಾದುದು॥' ಎಂದು ಹೇಳಿದ್ದಾನೆ. ಇದರಲ್ಲಿ ಬಸವನ ಸಹೋದರಿ ನಾಗಲಾಂಬಿಕೆಯ ಮಗನಾದ ಚೆನ್ನಬಸವನ ಚರಿತ್ರವು ವರ್ಣಿತವಾಗಿದೆ. ಅಲ್ಲದೆ ಶಿವ ಲೀಲೆಗಳು ಷಟ್ಸ್ಥಲ ಮುಂತಾದ ವಿಷಯಗಳೂ ಉಕ್ತವಾಗಿವೆ. ಈ ಗ್ರಂಥದಿಂದ ಚರಿತ್ರೆಗೆ ಸಂಬಂಧಪಟ್ಟ ಅನೇಕ ವಿಷಯಗಳು ಗೊತ್ತಾಗುವುವೆಂಬುದು ಇದನ್ನೋದುವುದರಿಂದ ತಿಳಿದುಬರುವುದು.' ಈ ಬಗೆಗೆಲ್ಲ ಉದಾಹೃತ ಭಾಗಗಳನ್ನೂ ಕವಿಚರಿತೆ (ಸಂಪುಟ ೨, ಪುಟ ೩೦೮) ಯನ್ನೂ ನೋಡಿ ತಿಳಿಯುವುದು.

ಕವಿ ವಿರೂಪಾಕ್ಷಪಂಡಿತನೆಂಬುವನು. ಈತನು ವೀರಶೈವ ಮತದವನು. ವಿದ್ಯಾನಗರಿಯ ಹಿರಿಯ ಮಠದಲ್ಲಿ ಗುರುವಾಗಿದ್ದ ಸಿದ್ಧವೀರೇಶನ ಶಿಷ್ಯನು. ಸಕಲಾಗಮಕೋವಿದಂ, ಸರಸಕರ್ಣಾಟಾದಿ ಭಾಷಾ ವಿಶಾರದಂ ಮುಂತಾಗಿ ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ತನ್ನ ಗ್ರಂಥವನ್ನು ಶಕ ೧೫೦೬ ತಾರಣ ವರ್ಷದಲ್ಲಿ ಎಂದರೆ ಕ್ರಿ.ಶ. ೧೫೮೪ ರಲ್ಲಿ ಬರೆದಂತೆ ಹೇಳಿದ್ದಾನೆ.

No. 929. ಚೆನ್ನಬಸವ ಪುರಾಣಕಾವ್ಯ by ವಿರೂಪಾಕ್ಷ ಪಂಡಿತ-

CENNABASAVA PURĀṆAKĀVYA BY VIRŪPĀKṢAPAṆḌITA.

Substance, paper. Size, 12-11/16 × 8-11/16 inches. Pages 302. Lines, 33 to 38 on a page. Extent, 9,400 granthas. Character, Kannada. Condition, good. Appearance, old. Mode of writing, not bad.

Complete.

Same work as that described above.

(ವಿ-ವಿ.)—

ಸಮಗ್ರ. ಇದರಲ್ಲಿ ಪದ್ಯ ಸಂಖ್ಯೆ ೨೮೬೦. ಕಾಗದದ ಪ್ರತಿ. ಲಿಪಿ ಸಾಮಾನ್ಯವಾಗಿದೆ ಈ ಪುಸ್ತಕದ ಅಟ್ಟೆಯಲ್ಲಿ ಇದನ್ನು ಕ್ರಿ.ಶ. ೧೮೪೭ ರಲ್ಲಿ ಬಳ್ಳಾರಿಯಿಂದ ಕಳುಹಿಸಿಕೊಟ್ಟ ಹಾಗೆ ಸಿ. ಪಿ. ಬ್ರಾನರ ರುಜುವಿನೊಡನೆ ಇಂಗ್ಲೀಷಿನಲ್ಲಿ ಬರೆದಿದೆ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 930. ಚೆನ್ನಬಸವ ಪುರಾಣಕಾವ್ಯ by ವಿರೂಪಾಕ್ಷ ಪಂಡಿತ-

CENNABASAVAPURĀṆAKĀVYA BY VIRŪPĀKṢAPAṆḌITA.

Substance, palm-leaf. Size, 18¾ × 1⅛ inches. Pages 479. Lines, 7–9 on a page. Extent, 9,500 granthas. Character, Kannada. Condition, much injured. Appearance, old. Mode of writing, not bad.

Complete.

Same work as that described above.

(ವಿ-ವಿ.)—

ಸಮಗ್ರ. ಶಿಥಿಲ. ಲಿಪಿ ಸಾಮಾನ್ಯ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 931. ಚೆನ್ನಬಸವ ಪುರಾಣಕಾವ್ಯ by ವಿರೂಪಾಕ್ಷ ಪಂಡಿತ-

CENNABASAVAPURĀṆAKĀVYA BY VIRŪPĀKṢAPAṆḌITA.

Substance, paper. Size, 11¾ × 4 inches. Pages, 85. Lines, 13 to 15 on a page. Extent. 2,200 granthas. Character, Kannada. Condition, slightly injured. Appearance, old. Mode of writing, not good.

Contains the sandhis 1 to 12 and Sūcanāpadya in the 13th sandhi.

Same work as that described above.

(ವಿ-ವಿ.)—

ಅಸಮಗ್ರ. ಸಂಧಿ ೧-೧೨ ಪೂರ್ಣವಾಗಿವೆ. ೧೩ ನೆಯದರಲ್ಲಿ ಸೂಚನಾ ಪದ್ಯವು ಮಾತ್ರ ಇದೆ. ಕಾಗದದ ಪ್ರತಿ. ಸ್ವಲ್ಪ ಶಿಥಿಲ. ಲಿಪಿ ಸಾಮಾನ್ಯವಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 932. ಚೇರಮಕಾವ್ಯ by ಚೇರಮಾಂಕ, son of ಗಂಗಯ ಸೆಟ್ಟಿ-

CĒRAMAKĀVYA BY CĒRAMĀṄKA, SON OF GAṄGAYA SEṬṬI.

Substance, palm-leaf. Size, 17⅜ × 1½ inches. Pages, 130. Lines, 6 to 7 on a page. Extent, 2,300 granthas. Character, Kannada. Condition, very much injured. Appearance, old. Mode of writing, fair.

Complete in 11 sandhis.

Written in Vārdhaka Ṣaṭpadi metre. In the verse beginning with 'ದೇವವಾಕ್ಯಂ' (See extracts below) the date of the work is stated as 1448 Śaka year corresponding to 1526 A.D.

The story is as follows :—At the request of Nārada, God Śiva sent *Bhasitakāya* (Nandi) to the mortal world, to teach 'Dharma' and the greatness of Śiva among men. Thereupon *Bhasitakāya* was born as *Cērama* and in association with *Nambiyaṇṇa* carried on the mission of Śiva, and finally went to the abode of Śiva.

Beginning :

ವಾ ॥ ಪ ॥ ಸೂಚನೆ :—

ಭೂವಳಯದನುವನಾ ನಾರದಂ ಬಿನ್ನವಿಸೆ ।
ಪಾವನ ಚರಿತ್ರನೆನಿಸುವ ಭಸಿತಕಾಯನಂ ।
ದೇವ ದೇವಂ ಕಳುಪೆ ಧರಣಿತ . . . . . . ಂದನು ॥
ಶ್ರೀಮದಗಜಾವದನ ತಾಮರಸ ದಿನನಾಥ
ಕಾಮಿತ ಫಲಪ್ರದ ಸದಾ ಮಂಜುಲಾಂಗ ನಿ ।
ಸ್ಸೀಮ ನಿರ್ಮಳಮೂರ್ತಿ ಸಾಮವೇದಸ್ತುತ್ಯ ರಾಮಣೀಯಕ ಸುಭಕ್ತ ॥
ಪ್ರೇಮಿ . . . . . . ಕಲ್ಪಭೂಮಿರುಹ ಸಕಲ ಸುಖ ।
ಧಾಮ ಪರ್ವತ ಸಾರ್ವಭೌಮ ಸೌಂದರ ದಿವ್ಯ ।
ಜಾಮಾತೃವೆನಿಪ ಗಂಗಾ ಮಕುಟ ರಕ್ಷಿಸಾ ಪ್ರೇಮದಿಂಭೋಗ ಮಲ್ಲ ॥ ೧ ॥

* * * *

ನಾರದನ ಬಿನ್ನಪಕೆ ಭಸಿತಕಾಯನ ಶಿವಂ ।
ಧಾರಿಣಿಗೆ ಕಳುಪೆ ಚೇರಮನೆನಿಸಿ ರಕ್ಷಾವಿ ।
ಚಾರಮಂ ಪರಿಕಲಿಸಿ ಭವನನುಜ್ಞೆಯು ಭದ್ರಗಾಯಕಂಗಿಷ್ಟವಿತ್ತು ॥
ಆರುಚಿರ ನಂಬ್ಯಣ್ಣನೊಡನಿರ್ದು ಬಟಿಕವಂ ।
ಮಾರಾರಿಯೂರ್ಗೆಯ್ದಿ ಪಿಂದೆ ದಾಳಯು ಪೋಗಿ ।
ಚಾಗು ಕಾವ್ಯವನಲ್ಲಿ ಕೇಳಸಿದನೆಂಬ ಕಥೆಯಿದಕೆ ಮೊದಲಾವುದೆನಲು ॥ ೨೪ ॥

" * * *

ಇದು ಸಕಲಭಕ್ತ ಪದಪದ್ಮ ಮಧುಕರ ಪುಣ್ಯ ।
ಸದನ ಗುಬ್ಬಿಯ ಮಲ್ಲಣಾರ್ಯರ ಕೃಪಾ ಪಾತ್ರ ।
ಮುದಿತ ನವರಸಭಾವ ಲಕ್ಷಣಾಲಂಕಾರ ನಿಪುಣನೆಂದೆನಿಸಿ ಮೆಱೆವ ॥
ಚದುರಚೇರಮನೊರೆದ ಚೇರಮ ಚರಿತ್ರಮಂ ।
ಪದಪಿಂದ ಬರೆದೋದಿ ಕೇಳ ವಿಸ್ತರಿಸುವ ।
ಗೊರ್ದಗಿಪ್ಪುದಾಯುರಾರೋಗ್ಯ ಸಂಪದ ಸರ್ವಸಿದ್ಧಿ ಸತ್ಯಂ ತಥ್ಯವು ॥ ೫೦ ॥

Colophon :

ಅಂತು ಸಂಧಿ ೧ ಕ್ಕಂ ಪದನು ೫೦ ಕ್ಕಂ ಮಂಗಳ ಮಹಾಶ್ರೀ.

ಸೂ ॥ ದೇಶಾಧಿ ಪುರವರ್ಣನಂಗಳಂ ಕೇರಳಮ ।
ಹೀಶನೆನಿಪಮರನಾಥಂ ವನಿತೆ ಸಹಿತ ಸ ।
ವೇಶನಂ ಭಜಿಸಿ ತನಗಣುಗನಪ್ಪಾಸರಂ ಬಡೆದ ಕಥನವನೊರೆಪೆನು ॥

End :

ಒಪ್ಪುತ ಭಪಂ ಚೇರಮನ ದಿವ್ಯಕಾವ್ಯಮಂ ।
ತಪ್ಪದೋದಿಸುತಲಾನಂದಿಸುತ ಬಾರೆಸ್ನ ।
ಬೊಪ್ಪ ಎಂದಡಿಗಡಿಗೆ ಮುದ್ದಿಸುತ ಕೇರಳನ ಹರುಷದಿಂ ಪಾಲಿಸುತ್ತ ॥
ಒಪ್ಪಿದಂ ಗಣಪದವನಿತ್ತು ಸರ್ವೇಶನೊ ।

ತೊಪ್ಪಿದಂ ಸಕಲ ಲೋಕಾಧೀಶನುಱಿಕೃಪೆಯೊ ।
ಳೊಪ್ಪಿದಂ ಭೋಗಮಲ್ಲೇಶನಘನಾಶ ಧೃತಕೇಶ ದಿವ್ಯಪ್ರಕಾಶ ॥ ೨೮ ॥
ದೇವವಾಕ್ಯಂ ಶಾಲಿವಾಹನಶಕಂ ನಡೆದ ।
ಪಾವನಾಬ್ದದ ಸಧರ್ಮವ್ಯಯದ ಕಾರ್ತಿಕ ।
ದಾವಿಮಲ ಶುದ್ಧಪಾಡ್ಯೋದಯಂ ರವಿದಿನಂ ಸ್ವಾತಿಸುಪ್ರೀತಿಯೋಗಂ ॥
ಭಾವಿಸಲ್ಕವಿಕುಲಾರಾಶಿ ಶಶಿತಾರೆಗಳು ।
ತೀವಿರ್ದ ಸನ್ಮುಹೂರ್ತದೊಳಧಿಕ ಸೌಖ್ಯದಿಂ ।
ಭೂವರಂ ಚೇರಮಾಂಕನ ಚರಿತ್ರಂ ನಾಡೆ ಸಂಪೂರ್ಣಮಾಯ್ತು ಚೆಲ್ವಿಂ ॥ ೩೯ ॥

ನವಸುರಭಿ ಕರೆಯಲಿ ಸುಭಿಕ್ಷಂಗಳಾಗಲತಿ
ಭುವನಾಧಿಪತಿಗಳ್ಗೆ ಶಂಕರನ ಸೇವೆ ಸಂ ।
ಭವಿಸಲಿ ಸದಾ ಸುಜನಸಂಕುಲಕೆ ವೈಭವಂ ಭಕ್ತಿಮುಕ್ತಿಗಳೊದಗಲಿ ॥
ಅವನಿರವಿ ಶಶಿದಿವಿಗಳುಳ್ಳನ್ನೆವರಲುಮಾ ।
[ವರನ] (ಧವನ) ಕೃಪೆಯಿಂಚೇರಮಾಂಕನ ಚರಿತ್ರಮಂ ।
ತವೆ ರಸಿಕರಾಲಿಸಲಿ ಶುಭಮಸ್ತು ಕಲ್ಯಾಣಮಸ್ತು ಶಿವಮಸ್ತು ಸತತಂ ॥ ೩೦ ॥
ರಸಿಕರಾಹಾಯೆನಲು ಭಾವಕರು ತಲೆದೂಗೆ ।
ಪೊಸ ಬಗೆಯಿದೆಂದು ಕೊಂಡಾಡೆ ಲಾಕ್ಷಣಿಕರಾ ।
ಲಿಸಲು ವಿದ್ವಜ್ಜನಂ ಪೇಳದೀ ಕಾವ್ಯಕ್ಕೆ ಹನ್ನೊಂದು ಸಂಧಿಪದನು ॥
ಎಸಕದೈನೂಱ ಮೇಲಿಪ್ಪತ್ತಯ್ದಱಿಂ ।
ದೊಸೆದು ಪರರುಕ್ತಿಗಳು ಪೊಗಬಾರದಂತೆ ಸೇ ।
ರಿಸಿದ ಗುರು ಮಲ್ಲಣಾರ್ಯರ ಕೃಪೆಯೊಳುಸಿರ್ದೆನಾಂ ಶರಣರಹುದಹುದೆಂಬಿನಂ ॥ ೩೧ ॥

"ಮುಕ್ತಾಕ್ಷರ ಗ್ರಸ್ತಪದ"

ಅಮಮ ಕರಿಮುಖ ಜನಕ ಕಮಲಾಕ್ಷನತಪಾದ ।
ದಮಿತಾಘ ಶಶಿಚೂಡ ಡಮರು ಹಸ್ತೋತ್ತುಂಗ ।
ಗಮನಾಗಮನದೂರ ರಮಣೀಯ ತರಕಾಯ ಯಮಕಾಲ ಹರ ಸುವಿಪ್ರ ॥
ಪ್ರಮಥೇಂದ್ರ ಜಿತಮದನ ನಮಿತಜನ ಸೂರಭೂಜ ।
ಜಮದಗ್ನಿ ಸುತಸರಸ ಸಮಯಪಾವನ ಜೀವಿ ।
ವಿಮಲತಾಪಸ ಮೋಹಿ ಹಿಮಗಿರಿ ಸುತಾರಾಮ [ಮಮ] (ಮಾಂ) ರಕ್ಷಭೋಗಮಲ್ಲ ॥ ೩೨ ॥

ಇದು ಸಕಲ ಭಕ್ತಪದ * * * ಸತ್ಯಂ ತಥ್ಯವು ॥

ಅಂತು ಸಂಧಿ 11 ಕ್ಕಂ ಪದನು ೫೩೫ ಕ್ಕಂ ಮಂಗಳ ಮಹಾಶ್ರೀ.

Colophon :

ಚೇರಮ ಕಾವ್ಯಂ ಸಮಾಪ್ತಂ.

(ವಿ ವಿ.)—

ಸಮಗ್ರ ಅತ್ಯಂತ ಶಿಥಿಲವಾದ ಪ್ರತಿ ಓಲೆಗಳು ಬಹಳವಾಗಿ ಮುರಿದಿವೆ. ಲಿಪಿ ಉತ್ತಮವು. ಕೊನೆಯಲ್ಲಿ 'ಕ್ರೋಧಿಸಂವತ್ಸರದ ಆಶ್ವೀಜ ಶುದ್ಧ ೧ ರಲ್ಲಿ ಅಗರದ ವೃಷಭಾರಾಧ್ಯರಿಗೆ ಚೇರಮ ಕಾವ್ಯವನು ಬರೆದನು' ಎಂದಿದೆ.

ಇದು ವಾರ್ಧಿಕ ಷಟ್ಪದಿಯಲ್ಲಿ ಬರೆದಿದೆ. ಸಂಧಿಗಳು ೧೧, ಪದ್ಯಗಳು ೫೩೫. ಕಥಾಗರ್ಭವನ್ನು ಉದಾಹೃತವಾಗಿರುವ 'ನಾರದನ ಬಿನ್ನಪಕೆ' ಎಂಬ ಪದ್ಯದಿಂದರಿಯಬಹುದು. ಗ್ರಂಥದಾದಿಯಲ್ಲಿ ಭೋಗಮಲ್ಲೇಶಸ್ತುತಿಯಿದೆ. ಬಳಿಕ ಕವಿಯು ಪಾರ್ವತಿ, ವಿಘ್ನೇಶ್ವರ, ಷಣ್ಮುಖ, ನಂದಿ, ಭೃಂಗಿ, ವೀರಭದ್ರ ಇವರನ್ನು ಸ್ತುತಿಸಿ ತರುವಾಯ ಚೆನ್ನವೀರೇಶ, ಗುಬ್ಬಿಯ ಮಲ್ಲಣಾಚಾರ್ಯ ಪೌತ್ರನೂ ಬಸವೇಶ್ವರ ಪುರಾಣಾರ್ಥ ಭೋಗಿಯೂ ಆದ ಮಲ್ಲಣಾರ್ಯ, ಸೋಲೂರ ಚಿಕ್ಕಬಸವ ಇವರನ್ನು ನುತಿಸಿದ್ದಾನೆ. ಪೂರ್ವ ಕವಿಗಳಲ್ಲಿ

ವಾಲ್ಮೀಕಿ, ಮಯೂರ, ಹಲಾಯುಧ, ಪಾಲ್ಕುರಿಕೆಸೋಮ, ಭೋಜ, ಬಾಣ, ಕೆರೆಯ ಪದ್ಮರಸ, ಕುಮಾರಪದ್ಮರಸ, ಹರೀಶ್ವರ ಇವರನ್ನು ಹೊಗಳಿದ್ದಾನೆ.

ಕವಿ ಚೇರಮಾಂಕನು. ವೀರಶೈವ ಮತದವನು ಗಂಗಯ್ಯ ಸೆಟ್ಟಿಯ ಮಗನು. ಗುಬ್ಬಿಯ ಮಲ್ಲಣಾರ್ಯನ ಕೃಪೆಯಿಂದ ಈ ಗ್ರಂಥವನ್ನು ಬರೆದಂತೆ ಹೇಳುತ್ತಾನೆ. ಗ್ರಂಥನಿರ್ಮಾಣಕಾಲವು ಶಕ ೧೪೪೮ ಎಂದು 'ದೇವವಾಕ್ಯಂ' ಎಂಬ ಪದ್ಯದಿಂದ ಗೊತ್ತಾಗುವುದು. ಈ ಸಂಖ್ಯೆಯು ಕ್ರಿ.ಶ. ೧೫೨೬ ಕ್ಕೆ ಸರಿಯಾಗುವುದು. ಇದೇ ಕವಿಯ ಕಾಲವು.

No. 933. ಚೇರಮಕಾವ್ಯ by ಚೇರಮಾಂಕ, son of ಗಂಗಯ್ಯ ಸೆಟ್ಟಿ-

CĒRAMAKĀVYA BY CĒRAMAṄKA, SON OF GAṄGAYASEṬṬI.

Substance, paper. Size, 10·7/16 × 9½ inches. Pages, 170. Lines, 20 on a page. Extent, **2,300 granthas.** Character, Kannada. Condition, good. Appearance, new.

Restored in 1934–35 from the manuscript described above (No. 932).

Complete.

(ವಿ.ವಿ.)—

ಸಮಗ್ರ. ಕಾಗದದ ಪ್ರತಿ. ಹಿಂದಣ ೯೩೨ ನೆಯ ನಂಬರಿನ ಪ್ರತಿಯ ಪುತ್ರಿಕೆಯಾಗಿದೆ. ಕೆಲವೆಡೆ ಪದ್ಯಗಳಲ್ಲಿ ಅಲ್ಲಲ್ಲಿ ಚುಕ್ಕೆಯನ್ನು ಹಾಕಿ ಬಿಟ್ಟಿದೆ.

No. 934. ಚೋಳರಾಜ ಸಾಂಗತ್ಯ by ಲಿಂಗ-

CŌḶARĀJASĀṄGATYA BY LIṄGA.

Substance, palm-leaf. Size, 11⅝ × 1·1/16 inches. Pages, 134. Lines, 4 to 6 on a page. Extent, 800 granthas. Character, Kannada. Condition, much injured. Appearance, old. Mode of writing, not bad.

Begins on fol. 1-*a*. The other work herein is :—1. Āsthānajyōti 68-*a*.

Wants some stanzas in the end. Otherwise complete.

Deals with the story of the Cōḷa king of the Lunar race, a great devotee of Śiva. The author *Ḷinga* is the son of *Timmaṇṇamantri*. He was a vīraśaiva by religion and is supposed to have lived in 1550 A.D.

Beginning :

ಕಂದ ॥ ಶ್ರೀರವಿಕುಲ ಚೂಡಾಮಣಿ ।
ಭೂರಮಣಂ ಚೋಳನೃಪತಿ ಪಾಂಡ್ಯಂ ಕಪ್ಪವ-॥
ನೋರಂತೀಯದೆ ಮುಳಿಯಲು ।
ಧಾರಿಣಿಯೊಳ್ ಕಾದಿ ಗೆಲ್ದ ಕತೆಯಂ ಪೇಳ್ವೆಂ ॥

ಸಾಂಗತ್ಯ ॥ ಶ್ರೀ ಕೈಲಾಸನಿವಾಸ ಮಹೇಶ ದಿ ।
ವಾಕರಕೋಟಿ ಪ್ರಕಾಶ ।
ಲೋಕಕಧೀಶ ಗಿರಿಜೇಶ ಸರ್ವೇಶ ನಿ-।
ಶಾಕರ ಭೂಷನೆ ಶರಣು ॥ ೧ ॥
ರುಂಡಮಾಲಾಧರ ಖಂಡೇಂದು ಶೇಖರ

ಮಂಡಿತ ಪುಣ್ಯಾಕರಂಗ ॥
ಚಂಡಾಂಶುತೇಜ ಶ್ರೀಚಂಡೀ ಕಾಂತನನುಱಿತೆ ।
ಕೊಂಡಾಡುವೆ ಮುದದಿಂದ ॥ ೧ ॥

*　　　*　　　*　　　*

ಅಲ್ಲಮನಜಗಣ್ಣ ಮೊಲ್ಲೆಯ ಬೊಮ್ಮಣ್ಣ ।
ಕ [ಲ್ಲಾ] (ಲ್ಯಾ)ಣದ ಬಸವಣ್ಣ ॥
ಕಲ್ಲಯ್ಯ ಸಿಂಧು ಬಲ್ಲಾಳನು ಮೊದಲಾದ ।
ಎಲ್ಲ ಪುರಾತ(ನ)ರ ನೆನೆವೆ ॥ ೭ ॥
. . . . ಛಂದ ಗೊಳಲಂಕಾರವು ಶಬ್ದ ।
ನಾನಾ ತೆರದ ವಿಭಕ್ತಿ ॥
ನಾನಾ ಕಾವ್ಯವ ಬಲ್ಲರೀ ಕೃತಿಯೊಳು ।
ಯೇನೆಡಹಿದರೆ ತಿದ್ದುವುದು ॥ ೬ ॥
ಕನ್ನಡ [ದೇಶದೊ] (ನಾಡಿನೊ) ಳೊಪ್ಪುವ ಕವಿಗಳ ।
ಯುನ್ನತ ಗುಣಮಣಿಯೆನಿಪ ॥
ಸನ್ನುತ ತಿಮ್ಮಣ್ಣಮಂತ್ರಿಯ ಸುತ ಲಿಂಗ ।
ಬಣ್ಣಿಸಿ ಪೇಳ್ದನೀ ಕೃತಿಯ ॥ ೭ ॥
ಸವಿನುಡಿಗಳ ಪೊಂಪ ನವರಸಗಳ ಗುಂಪು ।
ಶಿವಕವಿ ಮನದಿಂಪು ॥
ಭುವನದ [ಹೆಂ] (ಬೆಂ)ಪು ಲಿಂಗನ ಕೃತಿಯಿದು ।
ವಿವರಿಸಿ ಕೇಳ್ವರಿಗಿಂಪು ॥ ೮ ॥
ಈಕಥೆ ಗಧಿನಾಯಕ ಚೋಳನೃಪತಿ ದಿ ।
ವಾಕರ ವಂಶಲಲಾಮ ॥
ಭೂಕಾಂತೆಯ ವಲ್ಲಭ ಶಿವಶರಣ ।
ಲೋಕವಱಿಯೆ ಬಣ್ಣಿಸುವೆ ॥ ೯ ॥
ಜಡೆದಲೆಯನು ಕಂಡು ಮುಡಿದಲೆಯನು ಕೊಟ್ಟ ।
ಕಡುಗಲಿ ಚೋಳ ನೃಪಾಲ ॥
ಮೃಡನ ಪದವ ನೆಱೆ (ಪಡೆದ ಕತೆಯನು) ।
ಪ್ರೌಢವಿಯರಿಯಲು ಸಿರುವೆನು ॥ ೧೦ ॥

*　　　*　　　*

ಅಲ್ಲಲ್ಲಿ ಜೊನ್ನವ ಸವಿ (ವ)ಚಕೋರನು ।
ಚೆಲ್ಲಿದಿ ಶಶಿಕಾಂತದೊಳು ॥
ನಲ್ಲಳೊಡನೆ ನಿರತಸುಖ ದೊಳೆಸೆದನೆಂ ।
ಬಲ್ಲಿಗೆ ಸಂಧಿ ಪೂರಾಯ ॥ ೨೮ ॥

Colophon :

ಸಂಧಿ ೧ ಕ್ಕಂ ಮಂಗಳ ಮಹಾ ಶ್ರೀ.

ಕಂ ॥ ಸೋಮ ಕುಲೋದ್ಭವ ಪಾಂಡ್ಯಂ ।
ಸೀಮೆಯೊಳೊಲಿದಿರ್ದ ಪಂಡಿತರ ನುಡಿಗೇಳದೆ ॥ (?)
ತಾಮಸ ಭುಜಬಲದಿಂದಂ ।
ಭೂಮಿಪನೊಳ್ ಕಾದಿಗೆಲಿದ ಆಯತವೆಂತೋ ॥ (?)

End :

ಸಾಂ ॥ ಎಲೆಲೆಲೆ ಗಿರಿಜೆ ಜಡೆದಲಾಗುಱತೆ ಮುಡಿ ।
ದಲೆಯನು ಕೊಟ್ಟವರುಂಟೆ ॥
ಕಲಿಚೋಳನ ಭಕ್ತಿಯುಚ್ಚರಿಯೆನುತಲಾ ।
ಗೊಲಿದಿತ್ತನು ಗಣಪದವ ॥ ೧೯೦ ॥
ಕಕ್ಕಯ್ಯ ಹೊನ್ನಯ್ಯ ಚಿಕ್ಕಯ್ಯ ನಿಜಲಿಂಗ ।
ಚಿಕ್ಕಯ್ಯನುಲಿಯ ಚಂದಯ್ಯ ॥
ಅಕ್ಕಯ್ಯ ಗುಂಡಯ್ಯ ನಾರಯ್ಯರೆನಿಸುವ ।
ರಕ್ಕಱಮಿಗೆ ಮನ್ನಿಸಿದ ॥ ೧೯೧ ॥
ಅಮ್ಮವ್ವೆ ಚಂಗಳೆ ಗುಡ್ಡವ್ವೆ ಕಾಂತಾ ।
ರಮ್ಮೆ ಶರಣೆ ಮಹದೇವಿ ॥
ಅಮ್ಮವ್ವೆ ನಿಂಬಕ್ಕ ಸತ್ಯಕ್ಕ ಚೋಳ್ಯಕ್ಕ ।
ರುಮ್ಮಹದಲಿ ಪರಸಿದರು ॥ ೧೯೨ ॥
ಕೈಲಾಸದೊಳಗೆಲ್ಲ ಮನುಜರ ಸಂದಣಿ ।
ಚೋಳನೊಬ್ಬನ ದೆಸೆಯಿಂದ ॥

(ವಿ-ವಿ.)—

ಇದರಲ್ಲಿ ಮೊದಲಿಂದ ಮೂರನೆಯ ಸಂಧಿಯ ೧೯೩ ನೆಯ ಪದ್ಯಾಂತ್ಯದ ವರೆಗೂ ಇದೆ. ೧೯೩ ನೆಯ ದಲ್ಲಿ ಅರ್ಧಪದ್ಯಮಾತ್ರ ಇದೆ. ಮುಂದಣ ನಾಲ್ಕುವರೆ ಪದ್ಯಗಳೂ ಇರುತ್ತಿದ್ದರೆ ಪೂರ್ಣವೆನ್ನಬಹು ದಿದ್ದಿತು.˙ ಎರಡನೆಯ ಓಲೆ ಹೋಗಿದೆ. ಅತಿ ಶಿಥಿಲವಾದ ಪ್ರತಿ. ಬರೆವಣಿಗೆ ಸಾಮಾನ್ಯವಾಗಿದೆ. ಈ ಪುಸ್ತಕದೊಡನೆ ಆಸ್ಥಾನ ಜ್ಯೋತಿಯೆಂಬ ಪುಸ್ತಕವೂ ಇದೆ.

ಇದು ಸಾಂಗತ್ಯದಲ್ಲಿ ಬರೆದಿದೆ. ಸಂಧಿಗಳಾದಿಯಲ್ಲಿ ಒಂದೊಂದು ಕಂದಪದ್ಯವಿದೆ. ಸಂಧಿ ೩ ಪದ ಗಳು ೫೬೨. ಗ್ರಂಥದಾದಿಯಲ್ಲಿ ಶಿವ (ಗಿರಿಜೇಶ, ಚಂಡೀಕಾಂತ, ಉಮಾಪತಿ) ಸರಸ್ವತಿ, ಗಣಪತಿ ಇವರ ಸ್ತುತಿಯಿದೆ. ಆ ಮೇಲೆ ಕವಿ ಪುರಾತನ ಶಿವಭಕ್ತರನ್ನು ಸ್ಮರಿಸಿ, ಬಲ್ಲವರು ತನ್ನ ಕಾವ್ಯವನ್ನು ತಿದ್ದುವ ರೆಂದು ಹೇಳಿ, ತನ್ನ ವಿಷಯವನ್ನೂ, ಗ್ರಂಥದ ಉತ್ಕೃಷ್ಟತೆಯನ್ನೂ ಸೂಚಿಸಿ ಕತೆಯನ್ನು ಆರಂಭಿಸಿದ್ದಾನೆ. ‘ ಜಡಿದಲೆಯನು * * * ಪ್ರೌಢವಿಯಱಿಯಲು ಸುರುವೆನು ’ ಎಂದು ಕಥಾಗರ್ಭ ವನ್ನು ಹೇಳಿರುತ್ತಾನೆ.

ಕವಿ <u>ತಿಮ್ಮಣ್ಣ ಮಂತ್ರಿ</u>ಯ ಮಗನಾದ ಲಿಂಗನೆಂಬುವನು ವೀರಶೈವಮತದವನು. ಕನ್ನಡಕವಿ ಗಳಗುನ್ನತಗುಣಮಣಿ, ಹರಕವಿಗಳ ಪದಕಮಲ ಭ್ರಮರ ಎಂದು ಹೇಳಿಕೊಂಡಿದ್ದಾನೆ. ಕವಿಚರಿತ್ರಕಾರರು ಈತನ ಕಾಲವನ್ನು ಕ್ರಿ.ಶ. ಸು ೧೫೫೦ ಆಗ ಬಹುದೆಂದು ತೋರುತ್ತದೆ ಎಂದು ಹೇಳುತ್ತಾರೆ.

No. 935. ಚೋಳರಾಜ ಸಾಂಗತ್ಯ by ಲಿಂಗ.

CŌḶARĀJASĀṄGATYA BY LIṄGA.

Substance, palm-leaf. **Size,** 8·7/16 × 1⅝ inches. **Pages,** 88. **Lines,** 4 to 6 on a page. **Extent,** 500 granthas. **Character,** Kannada. **Condition,** much injured. **Appearance,** old. **Mode of writing,** fair. Full of mistakes.

Begins on fol. 13-*a* of the Ms. described under No. 773 ante.

Incomplete; contains from the beginning of second sandhi to the end.

Same work as that described above.

Beginning :

ದೇವರದೇವನ ಗಿರಿಜೆಯ ರಮಣ ಕ ।
ಲಾವಿದ ರನ್ನನ ಹರನ ॥
ಪಾವನಮೂರುತಿ ಪರಮನ ನಿಜಸುಖ ।
ವೀವ ಶಿವನ ಬಲಗೊಂಬೆ ॥ ೧ ॥
ತಂಗಾಳಿಯು ತಂಪಿನವೊಲು ಮೋಹನ ।
ಸಿಂಗರವೆಣ್ಣಿನಂದದಲಿ ॥
ಲಿಂಗನ ಕೃತಿ ರಂಜಿಸುವುದು ಕೇಳ್ವಜ ।
ಸಂಗಳಗತಿ ಹರುಷದಲಿ ॥ ೨ ॥

End :

ಈ ಶಿವಕಥೆಯನು ಕೇಳದವರ ಪಾಪ ।
ನಾಶನವಹುದು ನಿಮಿಷದಿ ॥
ಲೇಸ ಕೊಡುವ ಗಿರಿಜಾವರನೆಂಬ ಕೈ ।
ಲಾಸದ ಸಂಧಿ ಪೂರಾಯ ॥ ೧೯೦ ॥

Colophon :

ಹರಕವಿಗಳ ಪದಕಮಲ ಭ್ರಮರನುರು ।
ತರಶಬ್ದ ಭರಿತ ಗಂಭೀರ ॥
ವರರಸವಾಕ್ಯ ವಿಶಾಲರಸಿಕ ಲಿಂಗ ।
ನೊರೆದನು ಚೋಳನ ಕತೆಯ ॥ ೧೯೧ ॥

(ವಿ-ವಿ.)—

ಎರಡನೆಯ ಸಂಧಿಯಿಂದ ಅಂತ್ಯದ ವರೆಗಿನ ಭಾಗವಿದೆ. ಮೂರನೆಯ ಸಂಧಿಯ ಆದಿಯಲ್ಲಿ ಒಂದು ಓಲೆ ಹೋಗಿದೆ. ಅತಿ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ತಪ್ಪುಗಳು ಬಹಳ ಇವೆ

No. 936. ಚೋಳರಾಜ ಸಾಂಗತ್ಯ by ಲಿಂಗ-

CŌḶARĀJASĀṄGATYA BY LIṄGA.

Substance, palm-leaf. Size, 11 × 1¼ inches. Pages, 108. Lines, 5 on a page. Extent, 680 granthas. Character, Kannada. Condition, injured. Appearance, old. Mode of writing, good.

Begins on fol. 6-*a*. The other works herein are :—

(1) *Siddhanīti* 1-*a*, (2) *Sabhāpatilakṣaṇa* 61-*a* and (3) *Śakunaviṣaya* 73-*a*.

Incomplete. Contains first sandhi incomplete and second and third complete.

Same work as that described above.

Date of transcription :—Third day of the dark fortnight of the lunar month Vaiśākha in the year Nandana.

Name of the scribe :—Kambāḷeya.

Beginning :

ಸಾಂ ॥ (ಹಾಲೆ ಹಲಸುದಿಂದ ಜಾಲ) ಕದಿ ಕೇಲು ಹೊಂ ।
ದಾಳೆ ಸಿರೀಸ ಚೆನ್ನಂಗಿ ।
ಆಲವರಳ ಬೆಲ್ಲವತ್ತ ಕವ್ಮುರೆಗಳು ।

ತೀವಿದ ವಿಪಿನ ತುಂಬಿಹುವು ॥
(ಸುರಗಿ ಸಂಪಗೆ ಬಕುಳ ಸುರಹೊನ್ನೆಯು ।
ವರಪಾದರಿ ಪಾರಿಜಾತ ॥)

End :

ಕೈಲಾಸದೊಳಗೆಲ್ಲ ಮನುಜರ ಸಂದಣಿ।
ಚೋಳನೊಬ್ಬನ ಭಕ್ತಿಯಿಂದ ॥
ಸೂರಿಯು ಕರುಣಾವ ಹೊಗಳಲರಿದು ಬಹು ।
ನಾಲಗೆಯುಳ್ಳ ಫಣಿಪಗೆ ॥
ಈ ಶಿವಕತೆಯನು ಬೇಟಿದವರ ಕರ್ಮ ।
ನಾಶವಹುದು ನಿಮಿಷದಲಿ ॥
ಲೇಸಾಗಿ ಕೊಡುವ ಕೈಲಾಸದ ಪದವಿಯು ಗೌ ।
ರೀಶನ ಕಾರುಣ್ಯದಲಿ ॥
ಶಿವಭಕ್ತ ಚರಿತೆಯನು ಕೇಳದವರಿಗಹುದು ।
ಧನಧಾನ್ಯಗಳು ಘಸಣಹುದು ॥ (?)
ಭವ [ಭವ] (ಭಸು) ನಾಶನವಹುದು ಸಜ್ಜನರುಗ ।
ಳವಧರಿಸುವುದೀ ಕೃತಿಯು ॥
ಹರಕವಿಗಳ ಪಾದಕಮಲ ಪೂಜಿತಭೃಂಗ ।
ನುರುತರ ಶಬ್ದ ಗಂಭೀರ ॥
ವರರಸಕಾವ್ಯ ವಿಶಾಲರಸಿಕ ಲಿಂಗ ।
ನೊರೆದನು ಚೋಳನ ಕೃತಿಯ ॥

Colophon :

(ಪದ್ಯ) ೧೯೫ ಕ್ಕಂ ಮಂಗಳ ಮಹಾಶ್ರೀ.

(ವಿ-ವಿ.)—

ಇದರಲ್ಲಿ ಮೊದಲಸಂಧಿಯ ೧೯ ನೆಯ ಪದ್ಯದಿಂದ ಮೂಱನೆಯ ಸಂಧ್ಯಂತದ ವರೆಗೂ ಇದೆ. ಆದರೆ ನಡುವೆ ೯, ೨೯ ನೆಯವಾದ ಎರಡು ಓಲೆಗಳ ಹೋಗಿವೆ. ಈ ಪುಸ್ತಕವು ಶಿಥಿಲವಾದುದು. ಅಲ್ಲಲ್ಲಿ ಓಲೆಗಳು ಮುರಿದಿವೆ. ಇದರೊಡನೆ ಸಿದ್ಧನೀತಿ (ಓಲೆ ೧), ಸಭಾಪತಿ ಲಕ್ಷ್ಮಣ (ಓಲೆ ೬೧), ಶಕುನ ವಿಷಯ (ಓಲೆ ೭೩ ಒಂದೇ ಓಲೆ) ಗಳೂ ಇವೆ. ಕೊನೆಯಲ್ಲಿ ' ನಂದನ ಸಂವತ್ಸರದ ವೈಶಾಖ ಬ. ೩ ಲ್ಲು ಕಂಬಾಳಯನು ವೀರಪ್ಪಮಗನಿಗೆ ಬರೆದುಕೊಟ್ಟ ಚೋಳಸಾಂಗತ್ಯಕ್ಕೆ ಶುಭಮಸ್ತು. ನಡುಕಟ್ಟಿನ ವೀರಪ್ಪನ ಮಗ ಚೆನ್ನಣ್ಣನ ಪುಸ್ತಕಕ್ಕೆ ಆಯುರಾರೋಗ್ಯೈಶ್ವರ್ಯ ಮಸ್ತು. ಕಂಬಾಳಯನ ಬರಹ ' ಎಂದಿದೆ. ಇದಕ್ಕೆ ಹಿಂದೆ ವರ್ಣಿತವಾಗಿರುವ ಪುಸ್ತಕದಲ್ಲಿ ಗ್ರಂಥದ ಕೊನೆಯ ಭಾಗವಿಲ್ಲವಾದ ಕಾರಣ ಇದರಿಂದಲೂ ಉದ್ಧರಿಸಲಾಯಿತು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 937. ಚೋಳರಾಜ ಸಾಂಗತ್ಯ by ಲಿಂಗ.

CŌḶARĀJASĀṄGATYA BY LIṄGA.

Substance, palm-leaf. **Size**, 12 × 1¾ inches. **Pages**, 18. **Lines**, 5 on a page. **Extent**, 180 granthas. **Character**, Kannaḍa. **Condition**, very much injured. **Appearance**, old. **Mode of writing**, not bad.

Begins on fol. 14-*a*. The other works herein are :—(1) *Vaidyaviṣaya* 1-*a*, (2) *Śivastōtra* (Ṣatpadi) 9-*a* and (3) *Kīrtanegaḷu* 23-*a*.

Contains fow stanzas in first and second sandhis.

Same work as that described above.

(ವಿ-ವಿ.)—

ಅಸಮಗ್ರ. ಓಲೆಗಳು ಮುರಿದಿವೆ. ಪ್ರಥಮ ದ್ವಿತೀಯ ಸಂಧಿಗಳಲ್ಲಿ ಕೆಲವು ಪದ್ಯಗಳು ಇವೆ. ಸಂಧಿ, ಪದ್ಯ ಸಂಖ್ಯೆಗಳು ಕ್ರಮವಾಗಿಲ್ಲ. ಓಲೆಗಳು ನಡುನಡುವೆ ಹೋಗಿವೆ. ಅತ್ಯಂತ ಜೀರ್ಣವಾದ ಪ್ರತಿ. ಲಿಪಿ ಅಷ್ಟು ಚೆನ್ನಾಗಿಲ್ಲ. ಇದರೊಡನೆ ವೈದ್ಯ ವಿಷಯ (ಓಲೆ ೧), ಶಿವಸ್ತೋತ್ರ (ಷಟ್ಪದಿ-ಓಲೆ ೯), ಕೀರ್ತನೆಗಳು (ಓಲೆ ೨೩) ಇವುಗಳೂ ಇವೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 938. ಚೋಳರಾಜ ಸಾಂಗತ್ಯ by ಲಿಂಗ-

CŌḶARĀJASĀṄGATYA BY LIṄGA.

Substance, paper. Size, 14⅞ × 8⅝ inches. Pages, 15. Lines, 21 on some pages and 46 to 48 on other pages. Extent, 800 granthas. Character, Kannaḍa. Condition, very much injured. Appearance, old. Mode of writing, not good.

Begins on pages 1, 2, 129 of the manuscript described under No. 895 ante.

Complete in 3 sandhis.

Same work as that described above.

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಪತ್ರಗಳು ಕ್ರಮವನ್ನನುಸರಿಸಿ ಬೈಂಡು ಮಾಡಲ್ಪಡಲಿಲ್ಲ. ೧, ೧೨೯, ೧೩೦, ೨- ೧೩ ಪುಟಗಳಲ್ಲಿ ಈ ಗ್ರಂಥವು ಇದೆ. ಪತ್ರಗಳು ಅಲ್ಲಲ್ಲಿ ಮುರಿದಿವೆ. ಲಿಪಿ ಅಂದವಾಗಿಲ್ಲ. ಇದರೊಡನೆ ಇನ್ನೂ ಕೆಲವು ಗ್ರಂಥಗಳಿವೆ. ಅವಾವು ವೆಂಬುದನ್ನು ೮೯೫ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 939. ಚೋಳರಾಜ ಸಾಂಗತ್ಯ by ಲಿಂಗ-

CŌḶARĀJASĀṄGATYA BY LIṄGA.

Substance, palm-leaf. Size, 8¾ × 1-13/16 inches. Pages, 86. Lines, 5 on a page. Extent, 480 granthas. Character, Kannaḍa. Condition, much injured. Appearance, old. Mode of writing, not bad.

Incomplete ; Contains from 7th stanza up to the end. Some leaves are wanting in the middle. Date of transcription :—Friday, the tenth day of the dark fortnight of the lunar month Caitra in the year Krōdhi, Śaka year 1527 corresponding 1605 A.D.

Name of the scribe :—*Gurudēvaru*, son of *Vīraṇṇodeyarudēvaru* of ***Kereyūru.***

Same work as that described above.

(ವಿ-ವಿ.)—

ಅಸಂಪೂರ್ಣ, ಮೊದಲಿಲ್ಲ, ಕೊನೆಯಿದೆ, ನಡುವೆ ಅನೇಕ ಓಲೆಗಳು ಹೋಗಿವೆ. (೧, ೪—೬, ೯, ೧೪—೧೬, ೧೮, ೧೯, ೨೧, ೨೬, ೨೭, ೨೯—೩೧, ೩೯—೪೧, ೪೭, ೫೦, ೫೧, ೫೩—೫೫, ೫೭, ೫೮, ೬೦, ೬೨, ೬೪—೭೧, ೭೩, ೭೬, ೭೮, ೮೦ ಈ ಸಂಖ್ಯೆಯ ಓಲೆಗಳಿಲ್ಲ.) ಕೊನೆಯ ಓಲೆಯ ಸಂಖ್ಯೆ ೮೩. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾಗಿದೆ. ಕೊನೆಯಲ್ಲಿ 'ಅಂತು ಸಂಧಿ ೩ ಕ್ಕಂಪದನು ೫೬೧ ಕ್ಕಂ ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರುಷ ೧೫೭೭ ನೆಯ ಕ್ರೋಧಿ ಸಂವತ್ಸರದ ಚೈತ್ರ ಬಹುಳ ದಶಮಿಯು ಶುಕ್ರವಾರದಲ್ಲು ಕೆಜೆಯೂರಪುರದ ವೀರಣ್ಣೊಡೆಯರು ದೇವರ ಮಕ್ಕಳು ಗುರುದೇವರು ಹನಸೋಗೆಯ ಗಂಗಯ್ಯನವರ ಮಕ್ಕಳು ಕೆಂಪಗಂಗೊಡೆಯರಿಗೆ ಆಯುರಾರೋಗ್ಯ ಪರಮೈಶ್ವರ್ಯ ವೃದ್ಧಿಯಾಗಿ ಪುತ್ರಪೌತ್ರಾದಿಗಳಾಗಿ ಬದುಕಲೆಂದು ಹರಸಿ ಬರೆದ ಚೋಳಸಾಂಗತ್ಯ ಸಮಾಪ್ತ. ಮಂಗಳ ಮಹಾಶ್ರೀ'.—ಎಂದಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 940. ಚೋಳರಾಜ ಸಾಂಗತ್ಯ by ಲಿಂಗ.

CŌḶARĀJASAṄGATYA BY LIṄGA.

Substance, palm-leaf. Size, 8½ × 1⅛ inches. Pages, 64. Lines, 4 to 5 on a page. Extent, 250 granthas. Character, Kannaḍa. Condition, much injured. Appearance, old. Mode of writing, good.

Contains first and second sandhis incomplete. One side of each and every leaf is broken. first and fifth to twelth leaves are wanting. Six leaves are broken in the middle.

Same work as that described above.

(ವಿ-ವಿ.)—

ಅಸಮಗ್ರ ೧, ೫—೧೨ ಈ ಓಲೆಗಳಿಲ್ಲ. ೭, ೩೪ ರಿಂದ ಐದು ಓಲೆಗಳು ಮುರಿದಿವೆ. (ಮೊದಲ ಮತ್ತು ಎರಡನೆಯ ಸಂಧಿಯ ಕೆಲವು ಭಾಗಗಳು.) ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 941. ಚೋಳರಾಜ ಸಾಂಗತ್ಯ by ಲಿಂಗ.

CŌḶARĀJASĀṄGATYA BY LIṄGA.

Substance, palm-leaf. Size, 11-13/16 × 1¼ inches. Pages, 23. Lines, 5 to 6 on a page. Extent, 140 granthas. Character, Kannaḍa. Condition, injured. Appearance, old. Mode of writing, fair.

Begins on fol. 20-*a*. The other works herein are—(1) *Siddhanīti* 1-*a* and (2) Lekkagaḷu 14-*a*.

Contains 93 stanzas in the first sandhi.

Same work as that described above.

(ವಿ-ವಿ.)—

ಅಸಮಗ್ರ. ಮೊದಲ ಸಂಧಿಯಲ್ಲಿ ೯೩ ಪದ್ಯಗಳು ಮಾತ್ರ ಇವೆ. ಶಿಥಿಲವಾದ ಪ್ರತಿ. ಅಕ್ಷರಗಳು ಚೆನ್ನಾಗಿವೆ. ಇದರೊಡನೆ ಸಿದ್ಧನೀತಿ, ಮಗ್ಗಿ ಅಥವಾ ಲೆಕ್ಕಗಳು (ಮುಪ್ಪಾಗ, ಅದ್ದ, ಹಾಗ) ಇವೂ ಇವೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 942. ಚೋಳರಾಜ ಸಾಂಗತ್ಯ by ಲಿಂಗ.

CŌḶARĀJASĀṄGATYA BY LIṄGA.

Substance, paper. Size, 10-7/16 × 9⅜ inches. Pages, 12. Lines, 20 on a page. Extent, 140 granthas. Character, Kannaḍa. Condition, good. Appearance, new. Mode of writing, fair.

Restored in 1916–17 from the manuscript described above (No. 941).

Begins on page 23, Part I. The other works herein are :—Part I—(1) *Siddhanīti* 1–14 and (2) *Lekkagaḷu* 15–34, Part II—(1) *Maisūrurājāra caritre* 1–44, Part III—(1) *Dēvarājasāṅgatya* 1–6, Part IV—(1) *Gārgyanāradasamvāda* 1–9, (2) *Hariharada Kaifiet* 9–15 and (3) Hoḷehonnūru Kaifiet 15–39.

Incomplete.

(ವಿ-ವಿ.)—

ಅಸಮಗ್ರ ಮೊದಲ ಸಂಧಿಯಲ್ಲಿ ೯೭ ಪದ್ಯಗಳು ಮಾತ್ರ ಇವೆ. ಕಾಗದದ ಪ್ರತಿ. ಅಕ್ಷರಗಳು ಚೆನ್ನಾಗಿವೆ. ಇದರೊಡನೆ ಭಾಗ ೧.—ಸಿದ್ಧನೀತಿ, ಲೆಕ್ಕಗಳು (ಮುಪ್ಪಾಗ, ಅಡ್ಡ, ಹಾಗ), ಭಾಗ ೨.—ಮೈಸೂರು ರಾಜರ ಚರಿತ್ರೆ, ಭಾಗ ೩ —ದೇವರಾಜ ಸಾಂಗತ್ಯ, ಭಾಗ ೪.—ಗಾರ್ಗ್ಯನಾರದ ಸಂವಾದ (ಸ್ಕಾಂದಪುರಾಣಾಂತರ್ಗತ), ಹರಿಹರದ ಕೈಫಿಯತ್ತು, ಹೊಳೆ ಹೊನ್ನೂರು ಕೈಫಿಯತ್ತು ಇವೂ ಇವೆ. ಈ ಚೋಳ ಸಾಂಗತ್ಯದ ಭಾಗವು ಹಿಂದಣ ೯೪೧ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪುಸ್ತಕದ ಪ್ರತಿಕೆಯಾಗಿದೆ.

No. 943. ಚೋಳರಾಜ ಸಾಂಗತ್ಯ by ಲಿಂಗ.

CŌḶARĀJASĀṄGATYA BY LIṄGA.

Substance, palm-leaf. Size, 11½ × 1⅛ inches. Pages, 64. Lines, 5 on a page. Extent, 580 granthas. Character, Kannaḍa. Condition, very much injured. Appearance, old. Mode of writing, not bad.

Contains from the 50th stanza in the 2nd sandhi to the end. Some leaves are wanting in the middle.

Date of transcription :—Friday, the third day of the dark fortnight of lunar month Kārtika in the year Durmukhi.

Name of the scribe :—*Liṅga*, son of *Mallu Upādhyaya* of *Kāregana haḷḷi.*

Same work as that described above.

(ವಿ-ವಿ.)—

ಅಸಮಗ್ರ. ಮೊದಲ ಸಂಧಿಯಿಲ್ಲ. ಎರಡನೆಯ ಸಂಧಿಯ ೫೦ ನೆಯ ಪದ್ಯದಿಂದ ಮೂರನೆಯ ಸಂಧಿಯ ಕಡೆಯುವರೆಗೆ ಇದೆ. ಕೆಲವು ಓಲೆಗಳು ಹೋಗಿವೆ. ಕೆಲವು ಮುರಿದಿವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾಗಿದೆ. ಕೊನೆಯಲ್ಲಿ "ದುರ್ಮುಖಿ ಸಂವತ್ಸರದ ಕಾರ್ತಿಕ ಬ ೩ ಭಾರ್ಗ (ವ) ವಾಸರದಲ್ಲು ಕಾರೆಗನ ಹಳ್ಳಿ ಮಲ್ಲು ಉಪಾಧ್ಯನ ಮಗ ಲಿಂಗನು ಅತಿಕಾರಿ ಪುರದ……………ಚೋಳ ಸಾಂಗತ್ಯಕ್ಕೆ ಮಂಗಳ ಮಹಾಶ್ರೀ."—ಎಂದಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 944. ಚೋಳರಾಜ ಸಾಂಗತ್ಯ by ಲಿಂಗ-

CŌḶARĀJASĀṄGATYA BY LIṄGA.

Substance, palm-leaf. Size, $10\frac{3}{4} \times 1\frac{1}{8}$ inches. Pages, 152. **Lines, 4 to 5 on a page. Extent,** 800 granthas. Character, Kannaḍa. Condition, very much injured. Appearance, old. **Mode of writing, not bad.**

Incomplete.

Same work as that described above.

(ವಿ-ವಿ.)—

ಅಸಮಗ್ರ. ಅತ್ಯಂತ ಶಿಥಿಲವಾಗಿದೆ. ಓಲೆಗಳು ಅಸ್ತವ್ಯಸ್ತವಾಗಿದೆ. ಅಕ್ಷರಗಳು ಸಾಮಾನ್ಯವಾಗಿವೆ ನಡುವೆ ಕುಮಾರರಾಮನ ಕಥೆಯ ಸಾಂಗತ್ಯ ಪದ್ಯಗಳು ಮುಂತಾದುವು ಕೆಲವು ಓಲೆಗಳಲ್ಲಿ ಕಂಡುಬರುತ್ತವೆ. ಅಸ್ತವ್ಯಸ್ತವಾದ ಓಲೆಗಳನ್ನು ಸರಿಪಡಿಸುವುದಕ್ಕೂ, ಎಲ್ಲಿಂದ ಎಲ್ಲಿಯವರೆಗೆ ಕಥಾ ಭಾಗವಿದೆಯೆಂಬುದನ್ನು ಸರಿಯಾಗಿ ನಿರ್ಣಯಿಸುವುದಕ್ಕೂ, ಈ ಪುಸ್ತಕವು ತಂಬಾ ಜೀರ್ಣವಾಗಿರುವುದರಿಂದ ಸಾಧ್ಯವಿಲ್ಲವಾಗಿದೆ. ಕಥೆ ಮುಂತಾದುವುಗಳಿಗಾಗಿ ಹಿಂದೆ ವರ್ಣಿತವಾಗಿರುವ ನಂಬರುಗಳನ್ನು ನೋಡುವುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 945. ಜೈಮಿನಿ ಭಾರತ by ಲಕ್ಷ್ಮೀಶ-

JAIMINIBHĀRATA BY LAKṢMĪŚA.

Substance, palm-leaf. Size, $16\frac{5}{8} \times 1\frac{1}{4}$ inches. Pages 380. **Lines, 7 to 8 on a page. Extent,** 6,600 granthas. Character, Kannaḍa. Condition, much injured. Appearance, old. **Mode of writing, good.**

Complete in 34 sandhis including the Pīṭhikāsandhi.

This is written in Vārdhakaṣaṭpadi metre, on the lines of the Jaiminibhārata in Sanskrit. This work is very popular and deserves the foremost rank among the Ṣaṭpadi poems in Kannada literature. Descriptions herein are elegant and attractive. The story relates to the performance of Aśvamēdha sacrifice by Dharmarāja as an expiation for the sin of killing his close relation in the battle.

For particulars regarding the author see extracts given below.

Date of transcription :—Tuesday, the 3rd day of the bright fortnight of the lunar month Āṣāḍha in the year Piṅgala.

Name of the scribe :—*Mallarasayya*, son of *Upādya Linganṇa* of *Haradana Haḷḷi.*

Beginning :

ವಾ. ಷ.॥ ಶ್ರೀ ವಧುವಿನಂಬಕ ಚಕೋರಕಂ ಪೊರೆಯೆ ಭ- ।
ಕ್ತಾವಳಿಯ ಹೃತ್ಕುಮುದಕೋರಕಂ ಬಿರಿಯೆ ಜಗ- ।
ತೀವಲಯದಮಲಸೌಭಾಗ್ಯರತ್ನಾಕರಂ ಪೆರ್ಚನಿಂ ಮೇರೆವರಿಯೆ ॥
ಆವಗಂ ಸರಸಕರುಣಾಮೃತದ ಕಲೆಗಳಂ ।
ತೀವಿದೆಳನಗೆಯ ಬೆಳ್ದಿಂಗಳಂ ಪಸರಿಸುವ ।
ದೇವಪುರ [ನಿಲಯ] ಲಕ್ಷ್ಮೀರಮಣನಾಸ್ಯ ಚಂದ್ರನಾನಂದಮಂ ಸಮಗೀಯಲಿ ॥ ೧ ॥

* * * *

ಶಾರದೆ ಪರಾರ್ಥಮಂ ವರಯತಿಗೆ ಭಂಗಮಂ ।
ತಾರದೆ ನಿಜಾನ್ವಯ ಕ್ರಿಯೆಗಳ್ಗೆ ದೂಷಣಂ ।
ಬಾರದೆ ವಿಶೇಷಗುಣಗಣಕಲಾಗೌರವಂ ತೀರದೆ ದುರುಕ್ತಿಗಳ್ಗೆ ॥
ಸೇರದೆ ಸುಮಾರ್ಗದೊಳ್ ನಡೆವ ಸತ್ಪುರುಷರ ಗ- ।
ಭೀರದೆಸಕವ ಪೋಲ್ವ ಕಾವ್ಯ ಪ್ರಬಂಧಮಂ ।
ಕಾರದೆಯು ಕರುಣದಿಂ ಪೇಳ್ವೆನಾಂ ದೋಷಮಂ ತೊರೆದೆಲ್ಲರುಂ ಕೇಳ್ಪುದು ॥ ೫ ॥
ಛಂದಸ್ಸುಲಕ್ಷಣಮಲಂಕಾರ ಭಾವ ರಸ ।
ವೊಂದಿ ಕಲೆವೆತ್ತ ಸತ್ಕೃತಿ ಚಮತ್ಕೃತಿಯುಕ್ತ ।
ವೊಂದುಮಿಲ್ಲದ ಕಾವ್ಯಮಶ್ರಾವ್ಯಮಹುದೆಂದು ಕವಿತೆಯನು ಬರಿದೆ ಜಱೆದು
ದಂದುಗಕ್ಕೊಳಗಾಗಿ ಪೇಳ್ದೆನೆಂದೆ [ನ್ನ] (ನುತೆ) ನಗು ।
ವಂದಮಂ ಮಾಡದೆನಗೊಲಿದಿತ್ತನಮಲ ಮತಿ ।
ಯಂ ದೇವಪುರದ ಲಕ್ಷ್ಮೀರಮಣನೆಂದರಿದು ಕೇಳ್ವುದೆಲ್ಲಾ ಸುಜನರು ॥ ೬ ॥

* * * *

ವಿದ್ವತ್ಸಭಾವಲಯಮರಿಯೆ ವಿರಚಿಸಿದಂ ಭ ।
ರದ್ವಾಜಗೋತ್ರ ಭವನಣ್ಣಮಾಂಕನ ಸುತಂ ।
ಸದ್ವಿನುತ ಕರ್ಣಾಟ ಕವಿ ಚೂತವನ ಚೈತ್ರ ಲಕ್ಷ್ಮೀಶನೆಂಬೊರ್ವನು ॥
ಹೃದ್ವನಜದೊಳ್ದೇವಪುರದ ಸಿರಿಯರಸನ ಪ- ।
ದದ್ವಯವನಾವಗಂ ಧ್ಯಾನಿಸುವರಡಿಗಳ್ಗಂ ।
ಸದ್ವಿನಯದಿಂ ಭಜಿಪ ಬಲ್ಪಿಂದೆ ವಿಮಲಜೈಮಿನಿಭಾರತದ ಕಥೆಯನು ॥ ೧೧ ॥
ವರವರ್ಣದಿಂದೆ ಶೋಭಿತವಾಗಿ ರೂಪವಿ- ।
ಸ್ತರದಿಂದೆ ಚೆಲ್ವಾಗಿ ಮಧುರತರನವರ (ಸೋ ।
ದರ) ಭರಿತದಿಂದೆ ವಿಲಸಿತವಾಗಿ ಸುಮನೋನುರಾಗದಿಂ ಪ್ರಚುರಮಾಗಿ ॥
ನಿರುತಮಂಜುಳಶಬ್ದದಿಂದೆ ಕಿವಿಗಿಂಪಾಗಿ ।
ಚರಿಸುವ ಸುಲಲಿತ ಷಟ್ಪದಿಗಳೆಡೆವಿಡದೆ ಝೇಂ ।
ಕರಿಸದಿರ್ಪವೆ ಬಂದು ನೆರೆದ ವಿದ್ವತ್ಸಭಾನೀರೇರುಹಾಕರದೊಳು ॥ ೧೨ ॥

Colophon :

ಪೀಠಿಕಾಧ್ಯಾಯ ಸಮಾಪ್ತಂ.

ಸೂಚನೆ ॥ ರಾಜೇಂದ್ರ ಧರ್ಮತನಯಂ ಬಾದರಾಯಣನ ।
ವಾಜಿಮೇಧಾಧ್ವರ ವಿಧಾನಮಂ ಕೇಳ್ದು ಪಂ ।
ಕೇಜಪತ್ರೇಕ್ಷಣನ ಮತವಿಡಿದು ಕಳುಹಿದಂ ಕುದುರೆಗೆ ವೃಕೋದರನನು ॥

End :

ಅಶ್ವಮೇಧಿಕ ಪರ್ವದಮಲಸತ್ಕಥೆ ಯಾವ ।
ನಾಶ್ವಾದಿ ನೃಪರ ಚರಿತಂಗೇಳ್ದ ಮಾನವ ।
ಗೈಶ್ವರ್ಯಮಾರೋಗ್ಯಮಾಯುಷ್ಯಮಭಿವೃದ್ಧಿ ಕಲಿನಾಶನಂ ಧರೆಯೊಳು ॥
ಆಶ್ವೇತಕೀರ್ತಿ ಸುತಲಾಭ ಶತ್ರುಕ್ಷಯಂ ।
ಶಾಶ್ವತಸ್ವರ್ಗಭೋಗಂಗಳಾದಪ್ಪವು ಸ- ।
ರ್ವೇಶ್ವರನ ಭಕ್ತಿ ದೊರೆಕೊಂಡಪುದು ದೇವಪುರ ಲಕ್ಷ್ಮೀಶನಾಜ್ಞೆಯಿಂದ ॥ ೪೦ ॥

* * * *

ಪ್ರಣ್ಯಮಿದು ಕೃಷ್ಣಚರಿತಾಮೃತಂ ಸುಕವೀಂದ್ರ ।
ಗಣ್ಯಮಿದು ಶೃಂಗಾರಕುಸುಮತರು ತುರುಗಿದಾ ।
ರಣ್ಯಮಿದು ನವರಸಪ್ರಾಪ್ತಿಲಾಲಿತ್ಯನಾನಾ ನಿಚಿತಾರ್ಥಂಗಳ ॥
ಪಣ್ಯಮಿದು ಶಾರದೆಯ ಸಮ್ಮೋಹನಾಂಗಲಾ- ।
ವಣ್ಯಮಿದು ಭಾವಕರ ಕಿವಿದೊಡವಿಗೊದವಿದ ಹಿ- ।
ರಣ್ಯಮಿದು ಭೂತಳದೊಳಿನೆ ವಿರಾಜಿಪ್ಪುದು ಲಕ್ಷ್ಮೀಪತಿಯ ಕಾವ್ಯರಚನೆ ॥

Colophon :

ಅಂತು ಸಂಧಿ ೩೩ ಕ್ಕ ಪದಂಗಳು ೧೯೦೦ ಕ್ಕಂ ಮಂಗಳ ಮಹಾ ಶ್ರೀ.

(ವಿ.ವಿ.)—

ಸಮಗ್ರವಾಗಿದೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಉತ್ತಮವು. ಕಡೆಯಲ್ಲಿ ' ಪಿಂಗಳನಾಮ ಸಂವತ್ಸರದ ಆಷಾಢ ಶು. ೩ ಅಂಗಾರ (ಕ) ವಾರ ಪುಷ್ಯ ನಕ್ಷತ್ರ, ಸೂರ್ಯನು ಪೂರ್ವಪ್ರತಿಷ್ಠೆಯಾದ ಗಳಿಗೆ ೪ ಜೈಮಿನಿ (ಭಾರತವು) ಸಂಪೂರ್ಣವಾ (ದು) ದಕ್ಕೆ ಜಯಮಂಗಳ ಮಹಾ ಶ್ರೀ. ಈ ಜೈಮಿನಿಯಂ ಬರೆದಾತ ಹರದನಹಳ್ಳಿ ಉಪಾಧ್ಯರ ಲಿಂಗಣ್ಣನವರ ಮಗ ಮಲ್ಲರಸಯ್ಯನ ಸ್ವಹಸ್ತ (ದ) ಬರೆಹಕ್ಕೆ ಜಯಾತ್ತುಜಯಾತು.' ಎಂದಿದೆ.

ಇದು ವಾರ್ಧಕ ಷಟ್ಪದಿಯಲ್ಲಿ ಬರೆದಿದೆ. ಪೀಠಿಕಾಸಂಧಿಯೂ ಸೇರಿ ಇದರಲ್ಲಿ ೩೪ ಸಂಧಿಗಳವೆ. ಪದ್ಯಗಳು ೧೯೦೦. ಗ್ರಂಥಾದಿಯಲ್ಲಿ ದೇವಪುರ ಲಕ್ಷ್ಮೀರಮಣನ ಸ್ತುತಿಯಿದೆ. ಬಳಿಕ ಕವಿ ಗಂಗಾಧರ, ವಿನಾಯಕ, ವಾಣಿ ಇವರನ್ನು ಸ್ತುತಿಸಿದ್ದಾನೆ. ಆ ಮೇಲೆ ತನ್ನ ಕಾವ್ಯವು ಸತ್ಪುರುಷರ ಗಾಂಭೀರ್ಯವನ್ನು ಹೋಲುವುದೆಂದೂ, ಛಂದಸ್ಸು ಮುಂತಾದ ಲಕ್ಷಣಗಳಿಂದ ಬದ್ಧವಾಗಿದೆಯೆಂದೂ ತಿಳಿಸಿ, ವಿಮರ್ಶೆಯನ್ನು ಮಾಡದೆ ಇದನ್ನು ನೂತನ ಕವಿತೆಯೆಂದು ಜರಿಯಬಾರದೆಂದೂ, ದೇವಪುರದ ಲಕ್ಷ್ಮೀರಮಣಸ್ವಾಮಿಯೇ ತನ್ನ ಮೂಲಕ ಹೇಳಿಸಿರುವನೆಂದೂ ಹೇಳುವನು. ತರುವಾಯ, ಸುಮನಸರಿಗೆ ಈ ಕಾವ್ಯವು ಚಂದ್ರನಂತೆ ಸಂತಸವೀವುದೆಂದು ಹೇಳಿ, ಪೂರ್ವ ಕವಿಗಳನ್ನು ನಮಿಸಿ, ತನ್ನ ಕುಲಗೋತ್ರಾದಿಗಳನ್ನು ತಿಳಿಸಿ ಕಥೆಯನ್ನಾರಂಭಿಸುವನು.

ಕಥಾಗರ್ಭ :—ಗುರುಗಳನ್ನೂ ಬಂಧುಗಳನ್ನೂ ಕೊಂದ ಪಾಪ ಪರಿಹಾರಕ್ಕಾಗಿ ಧರ್ಮರಾಜ ಅಶ್ವಮೇಧಯಾಗವನ್ನು ಶಾಸ್ತ್ರೋಕ್ತವಾಗಿ ಆಚರಿಸಿದನು ; ಎಂಬುದು.

ಷಟ್ಪದೀಗ್ರಂಥಗಳಲ್ಲಿ ಇದು ಮೇಲ್ತರಗತಿಗೆ ಸೇರತಕ್ಕುದೆಂಬುದು ನಿಸ್ಸಂಶಯವಾದ ವಿಷಯವು. ಸಂಸ್ಕೃತ ಜೈಮಿನಿ ಭಾರತದ ಆಶ್ವಮೇಧಿಕ ಪರ್ವವನ್ನನುಸರಿಸಿ ಕವಿ ಈ ಗ್ರಂಥವನ್ನು ರಚಿಸಿದ್ದಾನೆ. ಇದು ಲಲಿತವಾಗಿಯೂ ಮನೋಹರವಾಗಿಯೂ ಇದೆ. ಈಚಿನ ಗ್ರಂಥವಾದರೂ ಕನ್ನಡನಾಡಿನಲ್ಲಿ ಇದಕ್ಕಿರುವ ಪ್ರಾಶಸ್ತ್ಯ ಪ್ರಸಿದ್ಧಿಗಳು ಉಳಿದವುಗಳಿಗಿಲ್ಲವೆನ್ನಬಹುದು. ಇದು ಪಂಡಿತಪಾಮರರೆನ್ನದೆ ಎಲ್ಲರ ಮೆಚ್ಚುಗೆಗೂ ಪಾತ್ರವಾಗಿದೆ.

ಕವಿ ಲಕ್ಷ್ಮೀಶನೆಂಬುವನು. ಇವನು ತನ್ನ ಊರು, ಗೋತ್ರ, ತಂದೆ, ಬಿರುದು, ದೇವರುಗಳ ವಿಷಯವಾಗಿ ' ವಿದ್ವತ್ಸಭಾವಲಯಮಣಿಯ ' ಎಂಬ ಪದ್ಯದಲ್ಲಿ ಹೇಳಿದ್ದಾನೆ. ಇವನ ಕಾಲವೂ ಮತವೂ ಆವುದೆಂಬುದು ಸಂದಿಗ್ಧವಿಷಯಗಳಾಗಿವೆ. ಈ ಬಗೆಗೆ ಕ್ರಿಸ್ತು ವರ್ಷ ೧೯೩೩ ರಲ್ಲಿ ಚಿಕ್ಕಮಗಳೂರು ಕರ್ಣಾಟಕ ಸಂಘದಿಂದ ಬೆಂಗಳೂರಿನ ಸತ್ಯಶೋಧನ ಪ್ರಕಟನ ಮಂದಿರದಲ್ಲಿ ಮುದ್ರಿತವಾದ ' ಕವಿ ಲಕ್ಷ್ಮೀಶ ' ಎಂಬ ಪುಸ್ತಕವನ್ನು ನೋಡಬಹುದು. ಇವನಲ್ಲಿ ಪಾಂಡಿತ್ಯಕವಿತಾ ಸಂಪತ್ತುಗಳೆರಡೂ ತುಂಬಿದ್ದುವೆಂಬುದು ಇವನ ಗ್ರಂಥವನ್ನವಲೋಕಿಸಿದವರಿಗೆ ತಿಳಿಯದಿರಲಾರದು. ಹಾಗೆಯೆ ಕನ್ನಡಕ್ಕಿಂತಲೂ ಸಂಸ್ಕೃತದಲ್ಲಿ ಹೆಚ್ಚಾದ ಅರಿವಿತ್ತೆಂಬುದೂ ಗೊತ್ತಾಗುವುದು.

No. 946. ಜೈಮಿನಿಭಾರತ by ಲಕ್ಷ್ಮೀಶ-

JAIMINIBHĀRATA BY LAKṢMĪŚA.

Substance, palm-leaf. Size, 15¾ × 1-7/16 inches. Pages, 480. Lines, 5–8 on a page. Extent, 6,500 granthas. Character, Kannaḍa. Condition, injured. Appearance, old. Mode of writing, good.

Complete.

Same work as that described above.

The transcription of this manuscript has been commenced on Wednesday, the first day of the bright fortnight of the lunar month Phālguṇa in the year Jaya and completed on the tenth day of the dark fortnight of the lunar month Māgha in the year Manmatha.

Name of the scribe :—*Bāṇayya*, son of shyanubhāga *Maṭayya*.

(ವಿ-ವಿ·)—

ಸಮಗ್ರ. ೯೨, ೧೨೯ ನೆಯವುಗಳಾದ ಎರಡು ಓಲೆಗಳು ಹೋಗಿವೆ. ಕೊನೆಯ ಓಲೆಯ ಸಂಖ್ಯೆ ೨೪೨. ಇದರಲ್ಲಿ ಕೆಲವೆಡೆ ೨ ಸಂಧಿಗಳನ್ನು ಒಂದಾಗಿ ಮಾಡಿ ಬರೆದಿದೆ. ಶಿಥಿಲವಾದ ಪ್ರತಿ. ಲಿಪಿ ಉತ್ತಮವಾಗಿದೆ. ಪುಸ್ತಕದಾದಿಯಲ್ಲಿ 'ಜಯ ಸಂವತ್ಸರದ ಫಾಲ್ಗುಣ ಶು. ೧ ಯೂ ಬುಧವಾರ ಗಂಡಸೆ ಸ್ಥಳದ ಶ್ಯಾನುಭೋಗ ಮಟ್ಟೆಯನವರ ದ್ವಿತೀಯ ಕುಮಾರ ಬಾಣಯ್ಯನು ತನ್ನ ಸಂಗ್ರಹನಿಮಿತ್ತ್ಯಕ್ಕೋಸ್ಕರ ಸದಾ ದೇವಪುರ ಲಕ್ಷ್ಮೀಕಾಂತಸ್ವಾಮಿಯವರ ದಿವ್ಯ ಶ್ರೀ ಪಾದಪದ್ಮಂಗಳನ್ನು ಜಾಗ್ರತ್ಸ್ವಪ್ನ ಸಷುಪ್ತಿಯಲ್ಲಿಯೂ ಸ್ಮರಣೆಮಾಡಬೇಕು. ಎಂದು ಜೈಮಿನಿಭಾರತದ ಪುಸ್ತಕಬರೆವುದಕ್ಕೆ 'ನಿರ್ವಿಘ್ನಮಸ್ತು' ಎಂದೂ, 'ನಿಡಿಗಟದ ಉಡಿಸಲ್ಲಮ್ಮನವರ ಪಾದವೇಗತಿ' ಎಂದೂ, ಅಂತ್ಯದಲ್ಲಿ, 'ಶ್ರೀ ಹರಿಕಥೆಯ ಪ್ರಾರಂಭವಾದಕ್ಕು ಪೂರ್ಣವಾದು ಮನ್ಮಥ ಸಂವತ್ಸರದ ಮಾಘ ಬ· ೧೦ ವರೆಗೆ ಮುಗಿಯಿತು' ಎಂದೂ ಪ್ರತಿಯನ್ನು ಬರೆಯಲಾರಂಭಿಸಿ ಮುಗಿಸಿದ ಕಾಲಸೂಚನವಿದೆ·

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 947. ಜೈಮಿನಿಭಾರತ by ಲಕ್ಷ್ಮೀಶ-

JAIMINIBHĀRATA BY LAKṢMĪŚA.

Substance, palm-leaf. Size, 15⅜ to 15½ × 1⅜ inches. Pages, 446. Lines, 6 to 8 on a page. Extent, 5,650 granthas. Character, Kannaḍa. Condition, much injured. Appearance, old. Mode of writing, good.

Incomplete. Contains from the 4th sandhi to the end. One leaf is wanting in the middle.

Date of transcription :—Tenth day of the dark fortnight of the lunar month Mārgaśira in the year sarvadhāri.

Name of the scribe :—*Doddavīrayya.*

Same work as that described above.

(ವಿ-ವಿ.)—

ಅಸಮಗ್ರ. ಓಲೆಗಳು ೧೫—೧೨೦, ೧೨೨—೨೩೮ ಇವೆ. ಸಂಧಿಗಳು ೪ ರಿಂದ ಪೂರ್ಣವಾಗಿವೆ. (ಮಧ್ಯದಲ್ಲಿ ಒಂದೋಲೆಯ ಭಾಗವಿಲ್ಲ) ಅತಿ ಶಿಥಿಲವಾದ ಪ್ರತಿ. ಲಿಪಿ, ಉತ್ತಮವು ಕೊನೆಯ ಓಲೆಯ ಸಂಖ್ಯೆ ೨೩೮. ಈ ಪುಸ್ತಕದಾಂತ್ಯದಲ್ಲಿ ಹುತ್ರಿದುರ್ಗ, ಸೆಲ ಪಟ್ಟಣ, ಸಾವಂದಿದುರ್ಗಗಳ ದೇವರುಗಳ ಹೆಸರುಗಳವೆ. ಮತ್ತು 'ಸರ್ವಧಾರಿನಾಮ ಸಂವತ್ಸರದ ಮಾರ್ಗಶಿರ ಬಹುಳ ೧೦ ಲ್ಲು ದೊಡ್ಡವೀರಯ್ಯನವರು ಬರೆದ ಜೈಮಿನಿ ಭಾರತದ ಪುಸ್ತಕಕ್ಕೆ * * * ಸಾಮ್ರಾಜ್ಯಮಸ್ತು' ಎಂದಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 948. ಜೈಮಿನಿ ಭಾರತ by ಲಕ್ಷ್ಮೀಶ.

JAIMINIBHĀRATA BY LAKṢMĪŚA.

Substance, Srītāla. Size, 18 × $2\frac{1}{8}$ inches. Pages, 180. Lines, 11 to 15 on a page. Extent, 6,500 granthas. Character, Kannaḍa. Condition, injured. Appearance, old. Mode of writing, fair.

Wants 10 stanzas in the end ; otherwise complete.

Same work as that described above.

(ವಿ-ವಿ.)—

ಕಡೆಯಲ್ಲಿ ೧೦ ಪದ್ಯಗಳಿಲ್ಲ. ಇಲ್ಲವಾದರೆ ಸಮಗ್ರವೆನ್ನಬಹುದಿದ್ದಿತು. ಇದರಲ್ಲಿ ಕೂಡ ೯೪೯ ನೆಯ ನಂಬರಿನ ಪ್ರತಿಯಂತೆ ಕೊನೆಯ ಸಂಧಿಯು ೩೧ ನೆಯದಾಗಿದೆ. ಇದಕ್ಕೆ ಕಾರಣವು ಕೆಲವೆಡೆ ಎರಡೆರಡು ಸಂಧಿಗಳನ್ನು ಕೂಡಿಸಿ ಒಂದೇ ಸಂಧಿಯಾಗಿ ಬರೆದಿರುವುದೆಂಬುದು ಪ್ರತಿಯನ್ನು ವಿಮರ್ಶಿಸಿ ನೋಡುವಾಗ ವ್ಯಕ್ತವಾಗುವುದು. ಪುಸ್ತಕವು ಶಿಥಿಲವಾಗಿದೆ. ಶ್ರೀತಾಳ ಪ್ರತಿ. ಲಿಪಿ ಚೆನ್ನಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 949. ಜೈಮಿನಿ ಭಾರತ by ಲಕ್ಷ್ಮೀಶ.

JAIMINIBHĀRATA BY LAKṢMĪŚA.

Substance, Srītāla. Size, $16\frac{1}{8}$ × $1\frac{1}{2}$ inches. Pages, 248. Lines, 8 to 10 on a page. Extent, 6,250 granthas. Character, Kannaḍa. Condition, much injured. Appearance, old. Mode of writing, good.

Wants some stanzas in the end ; otherwise complete.

Same work as that described above.

(ವಿ-ವಿ.)—

ಕೊನೆಯ ಸಂಧಿಯಲ್ಲಿ ಕಡೆಯ ೧೨ ಪದ್ಯಗಳಿಲ್ಲ. ಇಲ್ಲವಾದರೆ ಪೂರ್ಣವೆನ್ನಬಹುದಿದ್ದಿತು ೨೦, ೨೧ ನೆಯ ಓಲೆಗಳು (೫ ನೆಯ ಸಂಧಿಯ ೫೭ ನೆಯ ಪದ್ಯದಿಂದ ೬ ನೆಯ ಸಂಧಿಯ ೭ ನೆಯ ಪದ್ಯದ ವರೆಗೆ) ಇಲ್ಲ. ಆದಿಯಲ್ಲಿ ಸರಸ್ವತಿ, ಶಿವ, ವಿಷ್ಣು ಈ ಕ್ರಮದಿಂದ ಸ್ತೋತ್ರ ಪದ್ಯಗಳಿವೆ. ವಿಘ್ನೇಶ್ವರ ಸ್ತುತಿಯಿಲ್ಲ. ಕಡೆಯ ಸಂಧಿಯ ಸಂಖ್ಯೆ ೩೧. ಇದಕ್ಕೆ ಕಾರಣವು ಮಧ್ಯೇ ಮಧ್ಯೇ ಎರಡೆರಡು ಸಂಧಿಗಳನ್ನು ಸೇರಿಸಿ ಒಂದು ಮಾಡಿರುವುದೆಂದು ಗೊತ್ತಾಗುತ್ತದೆ. ಇದು ಅತಿ ಶಿಥಿಲವಾದ ಪ್ರತಿ. ಇದರಲ್ಲಿ ಓಲೆಗಳು ಶ್ರೀತಾಳಗಳು. ಕೆಲವು ಓಲೆಗಳು ಮುರಿದಿವೆ. ಅಕ್ಷರಗಳು ಅಂದವಾಗಿವೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 950. ಜೈಮಿನಿ ಭಾರತ by ಲಕ್ಷ್ಮೀಶ.

JAIMINIBHĀRATA BY LAKṢMĪŚA.

Substance, palm-leaf. Size, 15 × $1\frac{3}{8}$ inches. Pages, 230. Lines, 6 to 7 on a page. Extent, 4,000 granthas. Character, Kannaḍa. Condition, very much injured. Appearance, old. Mode of writing, good.

Breaks off in the 40th stanza of the 22nd sandhi.

Same work as that described above.

(ವಿ-ವಿ.)—

ಅಸಮಗ್ರ. ಮೊದಲಿಂದ ೨೦ ನೆಯ ಸಂಧಿಯಲ್ಲಿ ವೃಷಕೇತು ಬಭ್ರುವಾಹನರ ಕಾಳಗದ ಕತೆಯ ವರೆಗಿದೆ. ಓಲೆಗಳ ಒಂದು ಕೊನೆಯು ತುಂಬಾ ಜೀರ್ಣವಾಗಿದೆ. ೪೯, ೫೩—೫೯ ಈ ಓಲೆಗಳಿಲ್ಲ. ೧೯ ನೆಯ ಓಲೆಯು ಎರಡು ಸರ್ತಿ ಇದೆ. ಕಡೆಗಿನ ಓಲೆಯ ಸಂಖ್ಯೆ ೧೨೨. ೨೯ ನೆಯ ಓಲೆಯ ಎರಡನೆಯ ಪುಟ ಮತ್ತು ೮೨ ನೆಯ ಓಲೆಯು ಸಹ ಬರೆಯದೆ ಬಿಡಲ್ಪಟ್ಟಿವೆ. ಪೀಠಿಕಾ ಸಂಧಿಯನ್ನು ಗಣಿಸದೆ ಅದರ ನಂತರದ ಸಂಧಿಯನ್ನು ಮೊದಲನೆಯದಾಗಿ ಗಣಿಸಿದೆ. ೮ ನೆಯ ಸಂಧಿಯ ೨೩ ನೆಯ ಪದ್ಯದಿಂದ ೯ ರ ಎರಡನೆಯ ಪದ್ಯದವರೆಗೂ, ೧೦ ನೆಯ ಸಂಧಿಯ ೯ ನೆಯ ಪದ್ಯದಿಂದ ೧೧ ರ ೩೩ ನೆಯ ಪದ್ಯದ ವರೆಗೂ ಗ್ರಂಥಪಾತವಿದೆ. ಲಿಪಿ ಉತ್ತಮವು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 951. ಜೈಮಿನಿ ಭಾರತ by ಲಕ್ಷ್ಮೀಶ-

JAIMINIBHĀRATA BY LAKṢMĪŚA.

Substance, Śrītāla. Size, 12⅛ × 2⅜ inches. Pages, 209. Lines, 13 to 15 on a page. Extent, 5,000 granthas. Character, Kannaḍa. Condition, injured. Appearance, old. Mode of writing, good.

Incomplete ; contains 1 to 26 sandhis besides Pīthikāsandhi.

Same work as that described above.

(ವಿ-ವಿ.)—

ಶ್ರೀತಾಳ ಪ್ರತಿ. ಓಲೆಗಳು ೧೦೫. ಅಸಮಗ್ರ. ಪೀಠಿಕಾ ಸಂಧಿಯಲ್ಲದೆ ೨೬ ಸಂಧಿಗಳಿವೆ. ಶಿಥಿಲವಾಗಿದೆ. ಲಿಪಿ ಉತ್ತಮವು. ಇದರಲ್ಲಿ ಆರಂಭದ ಸ್ತುತಿ ಪದ್ಯಗಳು, ಗಣಪತಿ, ವಾಣಿ, ಶಿವ, ವಿಷ್ಣು (ಲಕ್ಷ್ಮೀರಮಣ) ಈ ಕ್ರಮದಲ್ಲಿವೆ. ಈ ಪ್ರತಿಯನ್ನು ಬರೆದವನು ಕಣ್ವಪುರ, ಸುಬ್ರಹ್ಮಣ್ಯ, ಅನಂತಪುರ ಮುಂತಾದ ಊರುಗಳ ದೇವರನ್ನು ಸ್ಮರಿಸಿದ್ದಾನೆ. ಮತ್ತು ಈ ಪುಸ್ತಕದ ಮೊದಲು ಒಂದೋಲೆಯಲ್ಲಿ ಲಕ್ಷ್ಮೀನಾರಾಯಣ, ಲಕ್ಷ್ಮಿ, ವೆಂಕಟಪತಿಯಾರನೆಯ ಕುಮಾರ ತಿಮ್ಮಯ್ಯ ಇವರ ಜಾತಕಗಳಿವೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 952. ಜೈಮಿನಿ ಭಾರತ by ಲಕ್ಷ್ಮೀಶ-

JAIMINIBHĀRATA BY LAKṢMĪŚA.

Substance, palm-leaf. Size, 11¾ × 1¼ and 12¾ × 1⅛ inches. Pages, 39. Lines, 5 to 6 on a page. Extent, 400 granthas. Character, Kannaḍa. Condition, injured. Appearance, old. Mode of writing, good.

Begins on fol. 60-*a* of the manuscript described under No. 851 ante.

Begins in the 31st stanza in the 2nd sandhi and breaks off in the 67th stanza in the 4th sandhi.

Wants some stanzas in the middle.

Same work as that described above.

(ವಿ-ವಿ.)—

ಅಸಮಗ್ರ. ೨ ನೆಯ ಸಂಧಿಯ ೩೧ ನೆಯ ಪದ್ಯದಿಂದ ಆರಂಭಿಸಿ ೪ ನೆಯ ಸಂಧಿಯ ೬೭ ನೆಯ ಪದ್ಯದ ವರೆಗೆ ಇದೆ. ಮಧ್ಯದಲ್ಲಿ ೨ ನೆಯ ಸಂಧಿಯ ೫೮ ರಿಂದ ೬೩ ರ ವರೆಗಿನ ಪದ್ಯಗಳೂ, ೩ ನೆಯದರಲ್ಲಿ ೧೫ ನೆಯ ಪದ್ಯದಿಂದ ಅನಂತರ ಭಾಗವೂ, ೪ ನೇ ಯದರಲ್ಲಿ ೧—೧೭ ಮತ್ತು ೫೧—೫೩ ಪದ್ಯಗಳೂ ಇಲ್ಲ. ಕೆಲವು ಓಲೆಗಳ ಒಂದು ಬದಿಯು ಮುರಿದಿದೆ. ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

ಇದರೊಡನೆ ಇನ್ನೂ ಕೆಲವು ಪುಸ್ತಕಗಳವೆ. ಆ ಬಗೆಗೆ ಹಿಂದಣ ೯೫೧ ನೆಯ ನಂಬರನ್ನು ನೋಡುವುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 953. ಜೈಮಿನಿಭಾರತ by ಲಕ್ಷ್ಮೀಶ.

JAIMINIBHĀRATA BY LAKṢMĪŚA.

Substance, paper. Size, 10-3/16×8-3/16 inches. Pages, 337. Lines, 16 to 20 on a page. Extent, 4,300 granthas. Character, Kannaḍa. Condition, good. Appearance, not new. Mode of writing, not bad.

Incomplete; contains 1–24 sandhis complete and sūcanāpadya in the 25th sandhi.

Same work as that described above.

(ವಿ.ವಿ.)—

ಅಸಮಗ್ರ. ಮೊದಲಿಂದ ೨೪ ಸಂಧಿಗಳವೆ. ೨೫ ನೆಯ ಸಂಧಿಸೂಚನೆ ಮಾತ್ರ ಇದೆ. ನಡುವೆ ಅಲ್ಲಲ್ಲಿ ಕೆಲವು ಪದ್ಯಗಳನ್ನು ಬರೆದಿಲ್ಲ. ಪುಟದ ಸಂಖ್ಯೆಯು ೨೧೨ ರ ನಂತರ ೨೦೩ ಎಂದು ತಪ್ಪಾಗಿ ಬರೆದಿದೆ. ೨೫೩ ಎಂಬ ಸಂಖ್ಯೆಯು ಎರಡುಬಾರಿ ಇದೆ. ೧೬೭ ನೆಯ ಪತ್ರದ ಎರಡನೆಯ ಭಾಗವು ಬರೆಯದೆ ಬಿಟ್ಟಿದೆ. ಕಡೆಗಿನ ಪುಟ ಸಂಖ್ಯೆ ೩೨೭. ಕಾಗದದ ಪ್ರತಿ. ಲಿಪಿ ಸಾಮಾನ್ಯವಾದುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 954. ಜೈಮಿನಿಭಾರತ by ಲಕ್ಷ್ಮೀಶ.

JAIMINIBHĀRATA BY LAKṢMĪŚA.

Substance, palm-leaf. Size, 18-9/16 × 1⅝ inches. Pages, 304. Lines, 6 to 7 on a page. Extent, 3,700 granthas. Character, Kannaḍa. Condition, much injured. Appearance, old. Mode of writing, good.

Contains 1–24 sandhis; wants some stanzas in sandhis 5, 6 and 15.

Date of transcription:—Seventh day of the dark fortnight of the lunar month Bhādrapada in the year Plava.

Name of the scribe:—*Krishnappa*, son of *Nāgarasayya* śānubhogu of *Manigatti*.

Same work as that described above.

(ವಿ.ವಿ.)—

ಇದರಲ್ಲಿ ಪೀಠಿಕಾ ಸಂಧಿ ಸೇರಿ ಮೊದಲಿಂದ ೨೪ ಸಂಧಿಗಳವೆ. ೫ ನೆಯ ಸಂಧಿಯ ೬೪ ನೆಯ ಪದ್ಯದಿಂದ ೬ ರ ೨ ನೆಯ ಪದ್ಯದ ವರೆಗಿರುವ ಭಾಗವೂ, ೧೫ ರ ೪೪ ನೆಯ ಪದ್ಯದಿಂದ ೧೬ ರ ೧ ನೆಯ ಪದ್ಯದ ವರೆಗಿರುವ ಭಾಗವೂ ಬರೆಯದೆ ಬಿಟ್ಟಿದೆ ಇದು ಅತಿ ಶಿಥಿಲವಾದ ಪ್ರತಿ. ಲಿಪಿ ಉತ್ತಮವಾಗಿದೆ. ಪುಸ್ತಕದಾದಿಯಲ್ಲಿ 'ಪ್ಲವನಾಮ ಸಂವತ್ಸರದ ಭಾದ್ರಪದ ಬ. ೭ (ರ) ರಲ್ಲು ಮಣಿಗಟ್ಟ ಶ್ಯಾನುಭೋಗ ನಾಗರಸಯ್ಯನ ಕುಮಾರ ಕೃಷ್ಣಪ್ಪನು ಬರೆದ ಜೈಮಿನಿ ಪುಸ್ತಕ' ಎಂದಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವಾಗಿದೆ.

No. 955. ಜೈಮಿನಿಭಾರತ by ಲಕ್ಷ್ಮೀಶ.

JAIMINIBHĀRATA BY LAKṢMĪŚA.

Substance, palm-leaf. Size, 13¼ × 1⅜ inches. Pages, 252. Lines, 5 on a page. Extent, 1,800 granthas. Character, Kannaḍa. Condition, much injured. Appearance, old. Mode of writing, good.

Breaks off in the 4th stanza of the 13th sandhi.

Same work as that described above.

(ವಿ-ವಿ.)—

ಅಸಮಗ್ರ. ಇದರಲ್ಲಿ ೧೨ ಸಂಧಿಗಳು ಸಮಗ್ರವಾಗಿಯೂ ೧೩ ರ ಆದಿಯಲ್ಲಿ ೩ ಪದ್ಯಗಳೂ ಇರುವುವು. ಡಿ. ನಂ. ೯೪೫ ರಲ್ಲಿ ವರ್ಣಿತವಾಗಿರುವ ಪುಸ್ತಕದೊಡನೆ ಇದನ್ನು ಹೋಲಿಸಿದರೆ ಇದರ ೧೨ ಸಂಧಿಗಳು ಅದರಲ್ಲಿ ೧೪ ಸಂಧಿಗಳಾಗುವುವು. ಕೆಲವೆಡೆ ಎರಡೆರಡು ಸಂಧಿಗಳನ್ನು ಜೋಡಿಸಿ ಒಂದು ಸಂಧಿ ಮಾಡಿರುವುದೇ ಈ ವ್ಯತ್ಯಾಸಕ್ಕೆ ಕಾರಣವಾಗಿದೆ. ಇದು ಅತಿ ಶಿಥಿಲವಾದ ಪ್ರತಿ. ಲಿಪಿ ಉತ್ತಮವಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ

No. 956. ಜೈಮಿನಿಭಾರತ by ಲಕ್ಷ್ಮೀಶ.

JAIMINIBHĀRATA BY LAKṢMĪŚA.

Substance, palm-leaf. Size, 13¾ × 1⅛ inches. Pages, 8. Lines, 5 on a page. Extent, 40 granthas. Character, Kannaḍa. Condition, very much injured. Appearance, old. Mode of writing, not bad.

Begins on fol. 1-*a*. The other work herein is :—(1) The catalogue of books, 6-*a*.

Fol. 5 contains Kannaḍa vacanakādambari.

Incomplete.

Same work as that described above.

(ವಿ-ವಿ.)—

ಇದರಲ್ಲಿ ಪೀಠಿಕಾ ಸಂಧಿಯಲ್ಲಿ ೫ ನೆಯ ಪದ್ಯದಿಂದ ಪ್ರಾರಂಭಿಸಿ ಪೂರ್ಣವಾಗಿಯೂ, ೨ ನೆಯ ಸಂಧಿಯಲ್ಲಿ ೪ ಪದ್ಯಗಳೂ ಇವೆ. ಅತ್ಯಂತ ಶಿಥಿಲವಾದ ಪ್ರತಿ. ಅಕ್ಷರಗಳು ಸಾಮಾನ್ಯವಾಗಿದೆ. ಇದರೊಡನೆ ಕನ್ನಡ ವಚನಕಾದಂಬರಿಯ ಒಂದೋಲೆಯೂ, ೬೦೦ ಗ್ರಂಥಗಳ ಹೆಸರುಗಳಿರುವ ಸೂಚೀಪತ್ರ (catalogue) ವೊಂದೂ ಇವೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 957. ಜೈಮಿನಿಭಾರತ by ಲಕ್ಷ್ಮೀಶ.

JAIMINIBHĀRATA BY LAKṢMĪŚA.

Substance, palm-leaf. Size, 17⅜ × 1-5/16 inches. Pages, 140. Lines, 6 on a page. Extent, 1,500 granthas. Character, Kannaḍa. Condition, very much injured. Appearance, old. Mode of writing, good.

Contains sandhis 2–6 and 11–13 complete and 1st, 7th and 10th sandhis incomplete.

Foll. 46 to 60 are left blank.

Same work as that described above.

(ವಿ-ವಿ.)—

ಮುದ್ರಿತ ಪುಸ್ತಕದಲ್ಲಿರುವ ಪ್ರಕಾರ ಮೊದಲನೆಯ ಸಂಧಿಯ ೯ ನೆಯ ಪದ್ಯದಿಂದ ೭ ನೆಯ ಸಂಧಿಯ ೩೦ ನೆಯ ಪದ್ಯದವರೆಗೂ ೧೦ ನೆಯ ಸಂಧಿಯ ೩ ನೆಯ ಪದ್ಯದಿಂದ ೧೩ ರ ಕೊನೆಯವರೆಗೂ ಇರುವ ಭಾಗವು ಇದರಲ್ಲಿದೆ. ಇದರಲ್ಲಿ ಪೀಠಿಕಾ ಸಂಧಿಗೆ ಸಂಖ್ಯೆಯನ್ನು ಕೊಟ್ಟಿಲ್ಲ. ೧೦, ೧೧ ಈ ಎರಡು ಸಂಧಿಗಳನ್ನು ಸೇರಿಸಿ ಒಂದೇ ಸಂಧಿಯನ್ನಾಗಿ ಮಾಡಿ ಅದನ್ನು ೮ ನೆಯದನ್ನಾಗಿ ಪರಿಗಣಿಸಿದೆ. ಇದರಲ್ಲಿ ಒಂದನೆಯ ಓಲೆಯು ಇಲ್ಲ. ೮೩, ೮೪ ನೆಯ ಓಲೆಗಳ ತುಂಡುಗಳು ಮಾತ್ರ ಇವೆ. ೪೬ ರಿಂದ ೬೦ ರ ವರೆಗಿರುವ ೧೫ ಓಲೆಗಳು ಬರೆಯದೆ ಬಿಟ್ಟಿವೆ. ಕಡೆಗಿರುವ ಓಲೆಯಲ್ಲಿ ಕಾಣಿಸಿದ ಸಂಖ್ಯೆ ೮೬. ಇದು ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಉತ್ತಮವಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 958. ಜೈಮಿನಿಭಾರತ by ಲಕ್ಷ್ಮೀಶ.

JAIMINIBHĀRATA BY LAKṢMĪŚA.

Substance, Śrītāla. Size, 9¼ × 1¼ inches. Pages, 322. Lines, 10 on a page. Extent, 4,050 granthas. Character, Kannaḍa. Condition, much injured. Appearance, old. Mode of writing, not bad.

Begins on fol. 1-*a*. The other work herein is :—(1) *Vibhīṣaṇabuddhi* (Rāmāyaṇā-ntargata) 161-*b*.

Wants some foll. in the beginning and here and there ; otherwise complete.

Date of transcription :—Third day of the bright fortnight of the lunar month Vaiśākha in the year Bhāva.

Name of the scribe :—*Nañjayya*, sanbhogue.

Same work as that described above.

(ವಿ.ವಿ.)—

ಶ್ರೀತಾಳಪ್ರತಿ. ಇದರಲ್ಲಿ ೧-೧೦, ೧೩-೩೭ (ಈ ನಡುವೆ ಒಂದೋಲೆ ಇದೆ. ಅದರಲ್ಲಿ ಸಂಖ್ಯೆಯಿರುವ ಭಾಗ ಮುರಿದಿದೆ.), ೪೩, ೪೫-೪೯, ೬೩, ೯೦-೧೦೦, ೧೯೨, ೧೯೩, ೨೦೦-೨೦೭ ಈ ಓಲೆಗಳು ಎಂದರೆ ಒಟ್ಟು ೬೩ ಓಲೆಗಳಿಲ್ಲ. ಇಲ್ಲವಾದರೆ ಸಮಗ್ರ ಪ್ರತಿಯನ್ನು ಓಹುದಿದ್ದಿತು. ಕಡೆಗಣ ಓಲೆಯ ಅಂಕೆ ೨೨೪. ಈ ಪುಸ್ತಕವು ಅತ್ಯಂತ ಶಿಥಿಲವಾಗಿದೆ. ಇದರಲ್ಲಿ ಲಿಪಿ ಸಾಮಾನ್ಯವಾಗಿದೆ. ಅಂತ್ಯದಲ್ಲಿ ಭಾವಸಂವತ್ಸರದ ವೈಶಾಖ ಶುದ್ಧ ೩ ಆರಭ್ಯವಾಗಿ ಬರೆದ ಜೈಮಿನಿ ಭಾರತದ ಪುಸ್ತಕ. [ಸೀನ ಬಾ] (ಶ್ಯಾನುಭೋ)ಗ ನಂಜಯ್ಯನ ಬರ(ರೆ)ಹ' ಎಂದಿದೆ. ಇದರೊಡನೆ 'ವಿಭೀಷಣ ಬುದ್ಧಿ' (ತೊರವೆ ರಾಮಾಯಣಾಂತರ್ಗತ) ಎಂಬ ಭಾಗವಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 959. ಜೈಮಿನಿ ಭಾರತ by ಲಕ್ಷ್ಮೀಶ.

JAIMINIBHĀRATA BY LAKṢMĪŚA.

Substance, palm-leaf. Size, 16½ × 1¼ to 1½ inches. Pages, 240. Lines, 8 to 9 on a page. Extent, 5,800 granthas. Character, Kannaḍa. Condition, very much injured. Appearance, old. Mode of writing, good.

Wants first sandhi and 1 to 51 stanzas in the 2nd sandhi and 3 stanzas in the end ; otherwise complete.

Same work as that described above.

(ವಿ.ವಿ.)—

ಅಸಮಗ್ರ. ಪೀಠಿಕಾಸಂಧಿಯೂ, ೨ ನೆಯ ಸಂಧಿಯಲ್ಲಿ ೫೧ ಪದ್ಯಗಳೂ ಹೋಗಿವೆ. ಅಂತ್ಯದಲ್ಲಿ '೩೧ ಅಧ್ಯಾಯಕ್ಕೆ ಮಂಗಳ ಮಹಾ' ಎಂದಿದೆ. ಆದರೆ ೩೪ ನೆಯ ಅಧ್ಯಾಯವನ್ನೇ ೩೧ ನೆಯದೆಂದು ಬರೆಯುತ್ತಾನೆ. ಇದರಲ್ಲಿ 'ಉಪವನತಟಾಕ * * * ಕೇಳ್ದವರ್ಗೆ' ಎಂಬ ಪದ್ಯದವರೆಗೆ ಮಾತ್ರ ಇದೆ. ಇನ್ನೂ ಮುಂದಕ್ಕಿರಬೇಕಾದ ೩ ಪದ್ಯಗಳಿಲ್ಲ. ಅತ್ಯಂತ ಶಿಥಿಲವಾದ ಪ್ರತಿ. ಪ್ರತಿಯೊಂದು ಓಲೆಯನ್ನೂ ಹುಳು ಕೊರೆದಿದೆ. ಅಕ್ಷರಗಳು ಅಂದವಾಗಿವೆ. ಅಲ್ಲಲ್ಲಿ ತಪ್ಪುಗಳುಂಟು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 960. ಜೈಮಿನಿ ಭಾರತ by ಲಕ್ಷ್ಮೀಶ-

JAIMINIBHĀRATA BY LAKṢMĪŚA.

Substance, paper. Size, 12-11/16 × 7¼ inches. Pages, 151. Lines, 16 on a page. Extent, 1,800 granthas. Character, Kannaḍa. Condition, slightly injured. Appearance, old. Mode of writing, good.

Incomplete.

Contains from the 15th stanza of the 6th sandhi to the 26th stanza of the 17th sandhi.

Same work as that described above.

(ವಿ-ವಿ.)—

ಅಸಮಗ್ರ. ೬ ನೆಯ ಸಂಧಿ ೧೫ ನೆಯ ಪದ್ಯದಿಂದ ೧೭ ರ ೨೬ ನೆಯ ಪದ್ಯದ ವರೆಗಿದೆ. ಕಾಗದದ ಪ್ರತಿ. ಪತ್ರಗಳು ಅಸ್ತವ್ಯಸ್ತವಾಗಿವೆ. (ಪತ್ರಗಳು ೬೧-೭೨, ೧೩-೨೪, ೩೭-೬೦, ೧-೧೨, ೨೫-೩೬, ೭೩-೭೬ ಈ ಕ್ರಮದಲ್ಲಿವೆ.) ಲಿಪಿ ಉತ್ತಮವಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 961. ಜೈಮಿನಿ ಭಾರತ by ಲಕ್ಷ್ಮೀಶ-

JAIMINIBHĀRATA BY LAKṢMĪŚA.

Substance, palm-leaf. Size, 12⅞ × 1½ inches. Pages, 326. Lines, 4 to 6 on a page. Extent, 2,400 granthas. Character, Kannaḍa. Condition, very much injured. Appearance, old. Mode of writing, good.

Contains 17–26 sandhis complete.

Same work as that described above.

(ವಿ-ವಿ.)—

ಅಸಮಗ್ರ. ೧೭-೨೬ ಸಂಧಿಗಳವೆ. (ಬಭ್ರುವಾಹನನು ವಿನಯದಿಂದ ತಂದೆಯಾದ ಅರ್ಜುನನನ್ನು ನೋಡಲು ಹೊರಟುದು ಮೊದಲು, ಮಯೂರಧ್ವಜನು ತನ್ನ ಶರೀರಾರ್ಧವನ್ನು ಕುಯ್ದು ವಿಷ್ಣುವಿಗೆ ಅರ್ಪಿಸಿ ಅವನ ಮೆಚ್ಚುಗೆಗೆ ಪಾತ್ರನಾಗುವ ವರೆಗೆ ಕಥಾಭಾಗವಿದೆ.) ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಉತ್ತಮವಾದುದು. ಓಲೆಗಳು ಕ್ರಿಮಿದಷ್ಟವಾಗಿಯೂ ಅಲ್ಲಲ್ಲಿ ಮುರಿದೂ ಇವೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 962. ಜೈಮಿನಿ ಭಾರತ by ಲಕ್ಷ್ಮೀಶ-

JAIMINIBHĀRATA BY LAKṢMĪŚA.

Substance, Śrītāla. Size, 15⅛ × 1⅜ inches. Pages, 216. Lines, 4 to 7 on a page. Extent, 2,400 granthas. Character, Kannaḍa. Condition, much injured. Appearance, old. Mode of writing, good.

Begins on fol. 28-*a* of the manuscript described under No. 49 ante, wherein this work has been omitted to be mentioned as the other work.

Contains from the 6th stanza of the 17th sandhi to the 40th stanza of the 26th sandhi.

Same work as that described above.

(ವಿ-ವಿ.)—

ಅಸಮಗ್ರ. ೧೭ ನೆಯ ಸಂಧಿಯ ೬ ನೆಯ ಪದ್ಯದಿಂದ ೨೬ ನೆಯ ಸಂಧಿಯ ೪೦ ನೆಯ ಪದ್ಯದ ವರೆಗಿರುವ ಭಾಗವಿದೆ. ಸಂಧಿಗಳು ಮತ್ತು ಪದ್ಯಗಳು ಇದರಲ್ಲಿ ಅಸ್ತವ್ಯಸ್ತಗಳಾಗಿವೆ. ಕೆಲವು ಓಲೆಗಳು ಮುರಿದಿವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಉತ್ತಮವು. ಇದರೊಡನೆ ಭಾರತದ, ಅರಣ್ಯ ಪರ್ವದ ೩-೫ ಸಂಧಿಗಳೂ, ೨,೬ ಸಂಧಿಗಳ ಸ್ವಲ್ಪ ಭಾಗವೂ ಇವೆ. ಇದು ಹಿಂದೆ ೯೯ ನೆಯ ನಂಬರಿನಲ್ಲಿ ವರ್ಣಿತವಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 963. ಜೈಮಿನಿ ಭಾರತ by ಲಕ್ಷ್ಮೀಶ-
JAIMINIBHĀRATA BY LAKṢMĪŚA.

Substance, palm-leaf. Size, 12¾ × 1¼ inches. Pages, 257. Lines, 5 to 7 on a page. Extent, 2,500 granthas. Character, Kannaḍa. Condition, much injured. Appearance, old. Mode of writing, good.

Contains from the 3rd stanza of the 22nd sandhi to the end.

Same work as that described above.

(ವಿ-ಪಿ.)—

ಅಸಮಗ್ರ. ೨೨ ನೆಯ ಸಂಧಿಯಿಂದ (ಬಭ್ರುವಾಹನ, ಅರ್ಜುನರ ಯುದ್ಧ) ಕೊನೆಯ ವರೆಗೂ ಇದೆ. ೨೨ ನೆಯ ಸಂಧಿಯಾದಿಯಲ್ಲಿ ೨ ಪದ್ಯಗಳಿಲ್ಲ. ಅಲ್ಲದೆ ಆದಿಯಲ್ಲಿ ಎರಡೋಲೆಗಳಲ್ಲಿ ಬರೆದ ವಿಷಯವನ್ನೇ ಮರಳಿ ಎರಡೋಲೆಗಳಲ್ಲಿ ಬರೆದಿದೆ. ಪ್ರತಿಯೊಂದು ಸಂಧಿಯಾದಿಯಲ್ಲಿಯೂ 'ಬಿಂಡಿಗನವಿಲೆಗರುಡಸ್ವಾಮಿಯವರ ಪಾದವೇಗತಿ' ಎಂಬ ಸ್ತುತಿಯಿದೆ. ಇದು ಅತಿ ಶಿಥಿಲವಾಗಿದೆ. ಇದರ ಲಿಪಿ ಉತ್ತಮವಾದುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 964. ತೇರಮನ ಅಷ್ಟಕ-
TĒRAMANA AṢṬAKA.

Substance, palm-leaf. Size, 13⅜ × 1⅜ inches. Pages, 3. Lines, 5 on a page. Extent, 25 granthas. Character, Kannaḍa. Condition, injured. Appearance, old. Mode of writing, fair.

Begins on fol. 48-*a* of the manuscript described under No. 6990 of the Descriptive Catalogue of the Sanskrit manuscripts.

Complete.

Similar to the work described under No. 926.

Beginning :

ತೇರಮನ ಅಷ್ಟಕ :—

ಹಗಲಿರುಳು ನಿನ್ನ ಮೇಲಣಾಶೆಯ ಹಂಬಲಿಸಿ ಬಡವಾದಳೋ ॥
ಅಗಿಲು ಕುಂಕುಮ ಚಂದನದ ಅನು । ಲೇಪನವ ಮಾಡಲೊಲ್ಲಳೋ ॥

ಸೊಗಸು ಮಲ್ಲಿಗೆ ಜಾಜಿಸಂಪಗೆ ಸುದತಿ ಮುಡಿಹೂವ ಮುಡಿಯಳೋ ॥
ತೆಗಸು ಮಾದನನಬಲವು ಬಂದಿದೆ । ತೇರಮಲ್ಲ ದಯಾನಿಧೇ ॥ ೧ ॥

End:

ಕಾಯಜನ ಸಮರೂಪ ಹರತೆಯು । ರಾಯನಬ್ಬಯು ಕೆಂಚಗೆ ॥
ಆಯು ರಾರೋಗ್ಯವನು ಅರಿನಿ (?) ಯಿತ್ತು ಪ್ರಿಯದಿ ॥
ಈ ಯವಸ್ಥೆಯು ಬಿಡಿಸಿ . . . ನ್ನಯ ಯೆಡೆಗೆ ಬಂದು ಸಂತೋಷದಿಂ ।
ತೋಯಜಾಕ್ಷಿಯು ಸೆರೆದೆ ಹಿರಿಯೂರ ತೇರಮಲ್ಲ ದಯಾನಿಧೇ ॥ ೪ ॥

Colophon:

ಶ್ರೀ. ಶ್ರೀ. ಶ್ರೀ.

(ವಿ-ವಿ.)—

ಸಮಗ್ರ. ಚೌಪದಿಯಲ್ಲಿ ಬರೆದ ಈ ಅಷ್ಟಕವು ರತ್ಯುದ್ದೀಪಕವಾದ ಶೃಂಗಾರದ ಹಾಡುಗಳ ಗೋಷ್ಠಿಯಲ್ಲಿ ಸೇರಬೇಕಾದುದಾಗಿದೆ. ತೇರಮನ ಅಥವಾ ತೇರಮಲ್ಲನ ಮೇಲೆ ಕಾಮಮೋಹಿತಳಾದ ಒಬ್ಬಾಕೆಯು ವಿರಹಾವಸ್ಥೆಗಳನ್ನು ಅವಳಸಖಿಯು ಅವನ ಮುಂದೆ ವರ್ಣಿಸುವಂತೆ ಈ ಪದ್ಯಗಳು ಬರೆಯಲ್ಪಟ್ಟಿವೆ. ಈ ತೇರಮನು ಹಿರಿಯೂರಲ್ಲಿ ಅರಸಾಗಿದ್ದಂತೆ ಈ ಪದ್ಯಗಳಿಂದ ಊಹಿಸಬಹುದಾಗಿದೆ. ಪದ್ಯಗಳಲ್ಲಿರುವಂತೆ ಈ ರಾಜನ ಸರಿಯಾದ ಹೆಸರು 'ತೇರಮಲ್ಲ' ನೆಂದಾಗ ಬೇಕು. ಗ್ರಂಥದಾದಿಯಲ್ಲಿ 'ತೇರಮನ ಅಷ್ಟಕ' ವೆಂದಿರುವುದರಿಂದ ಇದೇ ಹೆಸರನ್ನು ಗ್ರಂಥಕ್ಕೆ ಕೊಟ್ಟಿದೆ.

No. 965. ತ್ರಿಭುವನ ತಿಲಕ by ವಿರುಪರಾಜ-

TRIBHUVANATILAKA BY VIRUPARĀJA.

Substance, Śrītāla. Size, 11⅞ × 1-13/16 inches. Pages, 261. Lines, 8 to 9 on a page. Extent, 2,200 granthas. Character, Kannaḍa. Condition, injured. Appearance, old. Mode of writing, fair.

Complete in 27 sandhis.

Written in Sāṅgatya metre. Describes the story of Cēramāṅka, a devotee of God Siva. The author *Viruparāja* was a Vīraśaiva poet and belonged to a royal family. He was the grand-son of *Cikkavirūpākṣa* who had the titles *Eḷu bīdinagōpa*, *Cōḷarabhīma*, etc., and the son of *Kāma* and *Vīrambe*. It is clear from a verse appearing at the end of the work that it was written in the Śaka year 1441 corresponding to 1519 A.D.

Beginning:

ಸಾಂಗತ್ಯ ॥ ಕೋಗಿಲೆ ತಳತ ಮಾಕಂದವೆ ಕನ್ನೆ ।
ಕೋಗಿಲೆ ತಳತ ಮಾಕಂದವೆ ॥
ಶ್ರೀಕರ ಶಂಕರ ಶುಭಕರ ವಿಪುಲಾಕ್ಷ ।
ನೀಕಾರ ತರುಣೇಂದು ಶೇಖರ ॥
ನಾಕಾದಿ ಭುವನರಕ್ಷಾಕರ ಘನಮಹಿ—
ಮಾಕಾರ ಮಲ್ಲಿಕಾರ್ಜುನಜಯ ॥
* * * *
ಭಕ್ತಿಭೂಷಣ ಬಸವೇಶನ ಭಸಿತಸಂ ।
ಯುಕ್ತ ಭಾಳನ ಮಡಿವಾಳನ ॥

ಮುಕ್ತಿಯು ಗೃಹದೊಳೆಸೆವನ ಚೆನ್ನಬಸವನ ।
ಲಕ್ಷ್ಮಾಂಘ್ರಿ ಕಮಲ ಕಾಂತನವೆ ॥ ೧೦ ॥
ಸುರಸರ ಕೆರೆಯು ಪದ್ಮರಸರ ಶಿವಭಕ್ತಿ ।
ಭರಿತಭಾವರ ಹರಿದೇವರ ॥
ಪರಸಾಧ್ಯರ ಪಾಲ್ಕುರಿಕೆಯಾರಾಧ್ಯರ ।
ಚರಣಸರೋಜಷಟ್ಪದನಪ್ಪೆ ॥ ೧೧ ॥
ನಿರ್ವಾಣಯುಗೆ ನಿಗಮಾಂತರಹಸ್ಯನ ।
ತ್ರಿವರ್ಗಗೆ ಷಟ್ಸ್ಥಲ ಮಾರ್ಗದ ॥
ಮುರ್ಜಗೆ ಮಾಯಿದೇವ ಪ್ರಭುವಿಗೆ ।
ಕೂರ್ಪಿನಿಂದೆರಗುವೆನನುದಿನ ॥ ೧೨ ॥

* * *

ಬಲಗೊಂಬೆನಧಿಕ ಪ್ರವೀಣನ ಬಾಣನ ।
ಕಲೆಗಳ ಸಾರ ಮಯೂರನ ।
ಸುಲಲಿತ ವಾಕ್ಯಭೂಷಣ ಕಾಳಿದಾಸನ ।
ಚಲದಂಕ ರಾಘವಾಂಕನ ॥ ೧೬ ॥
ನವರಸಾಮೃತ ಪೂರದಿಂದ ಮತಿಪ್ರಕಾ ।
ಶವ ಬೀರುತಗಲದೆ ಚರಿಸುಗೆ ॥
ಶಿವಕವಿರಾಜ ಹಂಸಂಗಳು ಮುದದಿಂ ।
ದವೆನಿಜ ಹೃದಯ ಪುಷ್ಕರದೊಳು ॥ ೧೭ ॥
ಸಜ್ಜನಸ್ತುತಿಗೆಯ್ವುಲಾತ್ಮಸ್ತುತಿಯುಕ್ಕ ।
ಮಜ್ಜೀವವರಾಗಿ ಕುಜನರ ।
ಲಜ್ಜಿಸಿ ನಿಂದಿಸೊಡಿದು ಪುಣ್ಯಕಥೆ ಬೇಳ ।
ಲುಜ್ಜುಗಿವೆನ್ನ ಸತ್ಕೃತಿಯೊಳು ॥ ೧೮ ॥
ಜಲಬಿಂದು ಶುಕ್ತಿಕೆಯೊಳು ಜಳಮುತ್ತಾಗಿ ।
ಬೆಲೆವಡೆವಂತೆನ್ನ ಜಡನುಡಿ ॥
ಬೆಲೆವಡೆಯದೆ ಪೋಣ್ಬುದೆ ನಿಮ್ಮ ಕಿವಿ ಸೋಂಕ ।
ಲೊಲಿದು ಭಾವಕರವಧರಿಪ್ಪುದು ॥ ೧೯ ॥
ಉಸಿರುವೆ ನಾನಿಮ್ಮ ಬಲ್ಪಿಂದೀ ಕೃತಿಯ ಲಾ ।
ಲಿಸುಗೆ ತಿದ್ದುಗೆ ಬುಧರೆನ್ನಯ ॥
ಜಸನಳಜಸ ನಿಮ್ಮ ಜಡದಾ ನಿಖಿಳರು ನಿಂ ।
ದಿಸದಂತೆ ಸುಜನರಾದರಿ ಪಂತೆ ॥ ೨೦ ॥
ಈ ಕಬ್ಬ ರಸಿಕಜನದ ಕಿವಿಗಳ ಹಬ್ಬ ।
ಈ ಕಾವ್ಯ ಮಲ್ಲಿಕಾರ್ಜುನ ಶಿವ ॥
ಈ ಕಥೆ ಯಿಹ ಪರವಡರ್ವ ಸೌಖ್ಯದ ಲತೆ ।
ಈ ಕೃತಿ ವಿಪುಳ . . . . ॥ ೨೧ ॥
. . . . ।
. . ದು ಚೇರಮಾಂಕ ಭೂವರನ ಚಾರಿತ್ರ ॥
. . . . ನಂದನ ಚೈತ್ರ ಶಿವಮಾರ್ಗದೆ ।

ಚರಿಸುವ ಭಕ್ತಜನ ಮಿತ್ರ ॥ ೨೨ ॥
ಈ ಕಾವ್ಯಮನತಿಶಯದಿಂದೆ ಬೇಳ್ದನಾ ।
ನೇಕಚಿತ್ರಾರ್ಥ ಭಾವಗಳಿಂದೆ ॥
ಶ್ರೀಕಂಠವಂಶವಾರಿಧಿ ಚಂದ್ರನೆನಿಪ ನಾ ।
ನಾಕಲಾಪ ವಿರೂಪಭೂಪ ॥ ೨೩ ॥
ಕಂತುವಿಗೂರೆ ಮಿಗಿಲೆನಿಪ ಪರುಪಭೂ ।
ಕಾಂತನ ಮನದನ್ನಳೆನಿಸುವ ॥
ಕಾಂತೆ ಗುಣಾನ್ವಿತ ಸ್ವಾಂತೆ ನಾನಾಕಲಾ ।
ವಂತೆ ಬಣ್ಣಿಸಿ ಕೇಳ್ದಳಂತೆಂದು ॥ ೨೪ ॥
ಧರಣಿಯೊಳೆಸೆವೇ [ಳೆ] (ಬಿತೆ) ಬೀಡಿನ ಗೋಪ ಚೋ ।
ಳರ ಭೀಮ ಚೋಳನಾರಾಯಣ ॥
ಧುರಧೀರ ಹನ್ನೊಂದು ಬೀಡಿನ ಮಂಡಲಿ ।
ಕರ ಹೊನ್ನೊರೆ ಬಿರುದಾಂಕ ॥ ೨೫ ॥

*   *   *   *   *

ಚೇರಮಶರಣಾಗ್ರಣಿಯು ಕೃತಿಯು ವಿ-।
ಸ್ತಾರವ ಮಾಳ್ಪರಾದರಿಪರ ॥
ತಾರಾರ್ಕರುಳ್ಳನ್ನೆವರ ಮಲ್ಲಿಕಾರ್ಜುನ ।
ನೋರಂತೆ ಪಾಲಿಪನೊಲಿಪಿಂದೆ ॥

Colophon :

ಅಂತು ಸಂಧಿ ೧ ಕ್ಕೆ ಮಂಗಳಂ.

ವಾಸವನಮಿತ ಪದಾಂಬುಜ ಫಣಿಪತಿ ।
ಭೂಷಣ ದೋಷ ವಿಭೀಷಣ ॥
ಶ್ರೀಶ ಪಿತಾಮಹನುತಿ ಪಾತ್ರ ಶಾಂತಮ-।
ಲ್ಲೇಶನೊಲಿದು ಸಲಹುಗೆ ನಮ್ಮ ॥

End :

ಚತುರಚಕೋರಿ ಜೇಪಿಸೆ ಸೂರಿ ನೀಲಾಬ್ಜ ।
ವಿತತಿನಿಂಬಾಗೆ ರಾಗೋತ್ಕರ ॥
ಕ್ಷಿತಿನಾಥ ಹೊನ್ನೊರೆ ವಿರೂಪರಾಜೇಂದ್ರನ ।
ಕೃತಿಚಂದ್ರ ಬೆಳಗುಗೆ ಭುವನವ ॥ ೭೦ ॥
ಶಿವಗಣನಾಯಕ ಚೇರಮಭೂಪನ ।
ಸವಿಗಬ್ಬದೊಳಗಕ್ಕರವೊಂದ ॥
ಭುವನದೊಳಾರೋದಿದವರಿಗೆ ಕಾವ್ಯಾ-।
ರ್ಥವ ಶಾಂತ ಮಲ್ಲಿಕಾರ್ಜುನ ಜಯ ॥
ಗಿರಿಜೆಯು ಮೆಯ್ಗಂಪಿ ಗೆರಗುವ ತುಂಬಿಯಿಂ ।
ತರವತ್ಯತರಗಿಸರಸದೊಳು ॥
ಬೆರೆದು ಕಿವಿಗೆ ರಂಜಿಸೆ ತಲೆಯೊಲೆವ ಶಂ-।
ಕರ ಶಾಂತ ಮಲ್ಲಿಕಾರ್ಜುನ ಜಯ ॥
ಚೇರಮ ಶರಣಾಗ್ರಣಿಯ ಕೃತಿಯು ವಿ-।

ಸ್ಮಾರವ ಪೊಳ್ಪರಾದರಿಪರ ।
ತಾರಾರ್ಕರುಳ್ಳನ್ನೆವರ ಮಲ್ಲಿಕಾರ್ಜುನ ।
ನೋರಂತೆ ಪಾಲಿಪ ನೊಲವಿಂದೆ ॥

Colophon :

ಅಂತು (ಸಂಧಿ) ೨೩ ಕ್ಕಂ ಪದನು ೧೫೬೨ ಕ್ಕಂ ಮಂಗಳಮಹಾಶ್ರೀ.—

(ವಿ.-ವಿ.)—

ಸಮಗ್ರ. ಶಿಥಿಲವಾಗಿದೆ. ಶ್ರೀತಾಳ ಪ್ರತಿ. ಅಕ್ಷರಗಳು ಚೆನ್ನಾಗಿವೆ. ಈ ಪುಸ್ತಕದ ಕೊನೆಯಲ್ಲಿ 'ರಾಕ್ಷಸ ಸಂವತ್ಸರದ ಮಾರ್ಗಶಿರ ಶು. ೧೫ ಲ್ಲು ಕಲ್ಯಾಣದಯ್ಯ ಅರಸಿನವರಿಗೆ ಆಯುರಾರೋಗ್ಯರೂಪು ಯೌವನ ಲಾವಣ್ಯ ಲಕ್ಷಣ ಸತ್ಕುಲ ಸಾಹಸವನಿತಾ ವಿಲಾಸ ಪುತ್ರ ಪೌತ್ರ ಬಂಧು ಬಾಂಧವ ಧನಧಾನ್ಯ ಬಲಪರಾಕ್ರಮ ವಿದ್ಯಾ ವಿತರಣ ನಯವಿನಯಾದಿ ಸಕಲ ಸೌಭಾಗ್ಯ ಸಮಗ್ರತೆ ಸಹಿತವಾಗಿ ಸಪ್ತ ಸಮುದ್ರ ಮುದ್ರಿತ ವಸುಧಾಧಿಪತ್ಯಸಂತೋಷ ಸಂಜನಿತ ಸುಖಮಂ ಕ್ಷೇಮದಿಂದಿಹದೊಳನುಭವಿಸಿ ಮೇಲೆ ಸರ್ವೋತ್ಕರ್ಷವಾದ ಶ್ರೀಗುರು ಶಂಭುಲಿಂಗ ದೊಡಗೂಡಿ ಸರ್ವಜ್ಞತ್ವ ಸರ್ವಕರ್ತೃತ್ವದಿಂ ಸತ್ಯಾನಂದ ಸ್ವರೂಪರಾಗಿ ಇರಬೇಕೆಂದು ಕಣಿಯಕಲ್ಲು ಅಪ್ಪಯ್ಯನವರ ಕುಮಾರ ಕೃಷ್ಣಯ್ಯ ಉಪಾಧ್ಯರು ತ್ರಿಭುವನ ತಿಲಕವನ್ನು ಬರೆದು ಕೊಟ್ಟನು' ಎಂದಿದೆ. ಈ ಪ್ರತಿಯಲ್ಲಿ ೧೧೭ ನೆಯ ಓಲೆಯಿಲ್ಲ. ಆದರೆ ಗ್ರಂಥ ಲೋಪವಿಲ್ಲ. ೬೫ ನೆಯ ಓಲೆಯಲ್ಲಿ ಒಂದೇ ಕಡೆ ಬರೆದಿದೆ.

ಇದು ಸಾಂಗತ್ಯದಲ್ಲಿ ಬರೆದಿದೆ. ಸಂಧಿ ೨೩, ಪದ್ಯ ೧೫೬೨. ಗ್ರಂಥದಾದಿಯಲ್ಲಿ ಮಲ್ಲಿಕಾರ್ಜುನ ಸ್ತುತಿಯಿದೆ. ಬಳಿಕ ಕವಿ ಗಿರಿನಂದನೆ, ಗುರು, ನಂದಿ, ಭೃಂಗಿ, ವೀರಭದ್ರ, ಕುಮಾರ ಇವರನ್ನು ಸ್ತುತಿಸಿ, ಪೂರ್ವ ಕವಿಗಳಾದ ಬಸವ, ಮಡಿವಾಳಯ್ಯ, ಚೆನ್ನಬಸವ, ಕೆರೆಯ ಪದ್ಮರಸ, ಹರಿಹರ, ಪಾಲ್ಕುರಿಕೆ ಸೋಮ, ಮಾಯಿದೇವ ಇವರನ್ನು ಹೊಗಳಿ ಮತ್ತೆ ವಿನಾಯಕ, ಭಾರತಿಯರನ್ನು ನುತಿಸಿ, ಆ ಮೇಲೆ ಬಾಣ, ಮಯೂರ, ಕಾಳಿದಾಸ, ರಾಘವಾಂಕ ಇವರನ್ನು ಸ್ಮರಿಸಿದ್ದಾನೆ, ಶಿವಭಕ್ತರಲ್ಲಿ ಒಬ್ಬನಾದ ಚೇರಮಾಂಕ ನೃಪನ ಕತೆ ಇದರಲ್ಲಿ ಉಕ್ತವಾಗಿದೆ.

ಕವಿ ನಾಸಾಕಲಾರಾಮ ಚೋಳರಭೀಮ ಭೋಗನನುಜ ವಿರುಪರಾಜನು. ಇವನು ವೀರಶೈವ ಮತದವನು ರಾಜವಂಶಕ್ಕೆ ಸೇರಿದವನು. ಈತನ ತಾತ (ಅಜ್ಜ) ಏಳು ಬೀಡಿನ ಗೋವ ಚೋಳರ ಭೀಮ ಚೋಳನಾರಾಯಣ ಹನ್ನೊಂದು ಬೀಡಿನ ಮಂಡಲಿಕರಗಂಡ ಹೊನ್ನೂರೆ ಬಿರುದಾಂಕ ಶ್ರೀಕಂಠ ವಂಶಾಬ್ಧಿ ಹಿಮಕರನಾದ ಚಿಕ್ಕವಿರೂಪಾಕ್ಷನು. ತಂದೆ ಸಂಗರ ಭೀಮ ಹೊನ್ನೊರೆಕಾವ ಏಳು ಬೀಡಿನ ಗೋವ ವೆಸರನು ಪಾಲ್ದ ಕಾಮ. ತಾಯಿ ವೀರಾಂಬೆ.

ಈ ಗ್ರಂಥದ ಕೊನೆಯಲ್ಲಿ—

'ಕಂ॥ ಈ ನವ ಕೃತಿಯೊಳ್ಸಾಸಿರ ।
ದೈನೂರಿಪ್ಪತ್ತು ಮತ್ತೆ ಮೇಲೈದು ಪದಂ ॥
ಕಾವೆನಿಪುವು ವಿಜಾರಿ ಮ । (?)
ಹೀನಾಥನ ವಿಪುಳ ವಿರುಪ ಭೂವಿಶ್ವರನಾ

ವೃತ್ತ॥ ಮ. ಸ್ರ॥

ವಿದಿತಂ ಶಾಕಾಬ್ದದೊಳ್ಸಾಸಿರದೊದವಿದ ನಾನೂರ ನಾಲ್ವತ್ತರ ಗ್ರೈ ।
ಕದ ಸುಪ್ರಮಾದಿ ಸಂವತ್ಸರ[ದ]ಘನಶುಭ(ದಂ) ಶುದ್ಧ ಪಂಚಮ್ಯಪಾಕಾ ॥
ಲದೊಳುದ್ಯತ್ಕಾವ್ಯಬಂಧಂ ನೆಗಳ್ದುದು ವಿರುಪಕ್ಷ್ಮಾಪನಿಂ ಸತ್ಕಲಾ ಕೋ-।
ವಿದರಾಹಾ ಯೆಂದೆನಲ್ಕೀ ತ್ರಿಭುವನ ತಿಲಕಂ ನವ್ಯಮಾ ಚಂದ್ರ ಸೇವ್ಯಂ ॥'

ಎಂದಿದೆ. ಇದರಿಂದ ಈ ಗ್ರಂಥವು ಶಾಲಿವಾಹನ ಶಕ ೧೪೪೧ ಎಂದರೆ ಕ್ರಿಸ್ತಶಕ ೧೫೧೯ ರಲ್ಲಿ ವಿರಚಿತವಾಗಿದೆಯೆಂದು ಸ್ಪಷ್ಟವಾಗುತ್ತದೆ.

No. 966. ತ್ರಿಭುವನತಿಲಕ by ವಿರುಪರಾಜ.

TRIBHUVANATILAKA BY VIRUPARĀJA.

Substance, palm-leaf. Size, 11¼ × 1-7/16 inches. Pages, 380. Lines, 5 to 6 on a page. Extent, 2,200 granthas. Character, Kannaḍa. Condition, injured. Appearance, old. Mode of writing, good.

Complete.

Same work as that described above.

Date of transcription :—The eighth day of the bright fortnight in the month of Kārtika, in the year Rudhirōdgāri.

Name of the scribe :—*Veṅkaṭapati*, son of Veṅkappayya.

98th leaf is broken.

(ವಿ.ವಿ.)—

ಸಮಗ್ರ. ಶಿಥಿಲವಾಗಿದೆ. ಲಿಪಿ ಉತ್ತಮವು. ಪುಸ್ತಕದ ಕೊನೆಯಲ್ಲಿ “ ರುಧಿರೋದ್ಗಾರಿ ಸಂವತ್ಸರದ ಕಾರ್ತಿಕ ಶುದ್ಧ ಅಷ್ಟಮಿಯಲ್ಲು ಪೂರ್ಣವಾದ ತ್ರಿಭುವನ ತಿಲಕವೆಂಬ ಶರಣಚರಿತ್ರದ ಪದನು ೧೫೦೫ [ದ]ನ್ನು ಬರೆದಾತ ಶ್ರೀ ಲಕ್ಷ್ಮೀ ಲೋಲನಹ ಶ್ರೀ ವೆಂಕಟೇಶ್ವರ ಸ್ವಾಮಿಯವರ ದಾಸಾನುದಾಸರಾದ ಪರಮ ಭಾಗವತರ ಸೇವಕರಾದ ವೆಂಕಪ್ಪಯ್ಯನವರ ಮಗ ವೆಂಕಟಪತಿಯು ಬರೆದ ಪುಸ್ತಕಕ್ಕೆ ಜಯಮಸ್ತು.

ದೇವದೇವೋತ್ತಮ ದೇವತಾಸಾರ್ವಭೌಮ ಅಖಿಲಾಂಡಕೋಟಿ ಬ್ರಹ್ಮಾಂಡನಾಯಕ ವೇದಾನುವೇದ್ಯ ಕೋಟಿ ಸೂರ್ಯ ಪ್ರಕಾಶ ಶಂಖ ಚಕ್ರ ಗದಾಧರ ಪಾಂಡವ ಪ್ರತಿಪಾಲಕ ಭಕ್ತವತ್ಸಲ ಕರುಣಾಸಾಗರ ಲಕ್ಷ್ಮೀಮನೋಹರ ಸೀತಾವಲ್ಲಭ ರುಕ್ಮಿಣೀಪತಿ ಸೌಮ್ಯನಾ[ಯಕಿ] (ಯಿಕಾ)ರಮಣ ಗೋವರ್ಧನೋದ್ಧಾರ ವಸುದೇವನಂದನ ಸುರಲೋಕೈಕನಾಥ ಗರುಡಧ್ವಜ ಕ್ಷೀರಸಾಗರವಾಸ ವೈಕುಂಠಪುರವರಾಧೀಶ್ವರ ಮಹಾಮಹಿಮ ಸ್ವಾಮಿ! ಇದ ಬರೆದಾತನ ಮೇಲೆ ನಿನ್ನ ಕರುಣಾ ಕಟಾಕ್ಷ ವಿರಬೇಕೆಂದು ಸಾಷ್ಟಾಂಗ [ವೆ](ದಿಸೆ)ರಗಿ ಪೊಡಮಟ್ಟು ಬಿನ್ನಪವಂ ಗೆಯ್ದನು ” ಎಂದಿದೆ. ೯೮ ನೆಯ ಓಲೆ ಮುರಿದಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 967. ದೀಪದ ಕಲಿಯಾರ ಕಾವ್ಯ by ಚೆನ್ನಮಲ್ಲೇಶ.

DĪPADAKALIYĀRAKĀVYA BY CENNAMALLĒŚA.

Substance, Śritāla. Size, 8-11/16 × 1-11/16 inches. Pages, 294. Lines, 5 to 8 on a page. Extent, 1,800 granthas. Character, Kannaḍa. Condition, slightly injured. Appearance, old. Mode of writing, good.

Complete in 9 sandhis.

Describes the story of *Ḍīpada Kaliyāra*, one of the devotees of Śiva. The author *Cennamallēśa* is a native of *Ūmbulige*. His date is mentioned as about 1700 A.D. in the " Lives of Kannada poets." Fol. 49 is wanting. Foll. 60-*b*, 88-*b* and 148-*b* are left blank.

Beginning :

ಸಾಂಗತ್ಯ ॥ ಶ್ರೀಮದಗಜಾವರ ಪ್ರೇಮ ನಿತ್ಯಾನಂದ ।
ಕೋಮಲಾಂಗನೆ ವ್ಯೋಮಕೇಶ ॥
ಕಾಮ ನಿರ್ಧೂಮ ಶ್ರೀರಾಮ ಲೋಚನ ಪದ ।
ಸೋಮಶೇಖರ ಜಯ ಜಯತು ॥ ೧ ॥

ಮೂರೈದು ನಯನ ಕಂಠೀರ (ವ) ಚರ್ಮಾಂಬರ । (?)
ವಾರಿಜೋದ್ಭವ ಶಿರಕರನೆ ॥
ಮುರಾರಿಯೊಲಿಸಿದ ಧೀರ ದೀಪದ ಕಲಿ ।
ಯಾರ ಚರಿತ್ರೆಯನುಸುರುವೆನು ॥ ೧ ॥
ಗಿರಿಜೆಯ ಕುಮಾರ ಕರಿಮುಖ ಗಂಗೆಯು ।
ತರಳನೆ ಕಲಿವೀರಭದ್ರ ॥
ವರಮತಿ ಕೊಡಿಸು ಶ್ರೀಗಿರಿ ಚೆನ್ನಮಲ್ಲೇಶ ।
ಪರಮಾಮೃತ ರಸಗರೆದು ॥ ೨ ॥
ಸೋದರಳಿಯನಿಗೆ ಬೇಳ್ದ ಬಸವಣ್ಣ ।
ನಾದಿ ಪ್ರಮಥಗಣಶಿವನ ॥
ಪಾದ ದೀಪದ ಕಲಿ ಪೂಜಿಸಿ ಗುಡಿಸಹ ।
ಪೋದನು ಕೇಳು ಮೇಲ್ಗತೆಯ ॥ ೪ ॥
ಒರೆದು ಪೇಳ್ವೆನು ಶಿವಶರಣ ಗಣಂಗಳ ।
ಚರಣವ ನುತಿಸಿ ಬಿನ್ನವಿಸಿ ॥
ಗುರುಲಿಂಗ ಜಂಗಮ ಚರಿಸುವೆ ಮತಿ ಚಮ '
ತ್ಕಾರದಿಂ ಕೊಡು ಬಸವೇಶ ॥ (?) ೬ ॥
ನಾರದ ಭೃಂಗಿ ಮಯೂರ ಮಲುಹಣ ಹಂಪೆ ।
ಹರಿಹರಸುತ ರಾಘವಾಂಕ ॥
ಹರಸಿ ಬೇಳ್ಕೊಂಡು ವಿಸ್ತಾರ ವರ್ಣಿಸುವೆನು ।
ಸಾರಾಯ ಸಂಗೀತ ಕೃತಿಯ (?) ॥ ೭ ॥
ಕೆರೆಯ ಪದ್ಮರಸ ಮಯೂರ ಮಲುಹಣ ಮುಖ್ಯ ।
ಸಾರಾಯ ಸಕಲ ದೇವತ್ತರ ॥ (?)
ವರಭೀಮ ಲೀಲೆ ಚಾಮರಸ ನುದ್ಭಟ ಪಾಲ ।
ಕುರಿಕೆ ಸೋಮೇಶ ಗೊಂದಿಸುವೆ ॥ ೮ ॥

* * *

ಗರುಡಗಂಧರ್ವ ಕಿನ್ನರರು ಕಿಂಪುರುಷರ ।
ಸ್ಪರಕೆ ಬೇಕೆಂಬ ಷಟ್ಪದಿಯ ।
ಸರಕುಸು [ಮು] (ಮನು) ಸುರಿವ ಧರೆಯೊಳುಂಬುಲಿಗೆಯ ।
ಹರಭಕ್ತ ಚೆನ್ನಮಲ್ಲೇಶ ॥ ೧೦ ॥
ಸಂಗೀತ ದೊಳಗೆ ಪ್ರಸಂಗದೊಳಗೆ ಬೆಳ ।
ದಿಂಗಳ ಬೆಳಗು ಬೊಲ್ಪಡಿಯ ।
ಅಂಗನೆಯರಿಗೆ ಸರ್ವಾಂಗಾಭರಣದೊಳು ।
ಮಂಗಳಸೂತ್ರವೀ ಕಾವ್ಯ ॥ ೧೧ ।

* * *

ಪತಿವ್ರತೆ ಗಂಡನ ನುತಿಸಿ ಬೇಳ್ಕೊಂಬುತ ।
ಅತಿಶಯ ಸಾಮ್ರಾಜ್ಯದಿಂದ ॥
ಪತಿಪಾಲಿಸಿಯಾ ಸುಕೃತ ನಿಮ್ಮದೆಂದಲ್ಲಿ ।
ಗತಿ ಮುಗಿಯಿತೊಂದು ಸಂಧಿಯನು ॥ ೭೪ ॥

ಇದುವೇ ದೀಪದ ಕಲಿಯಾರ ಕಾವ್ಯ ಕೇಳ್ವರಿ ।
ಗಿದುವಮೃತದ ಸೋನೆ ಗರೆದಂತೆ ।
ಇದನೋದಿ ಬರೆದು ಕೇಳ್ದೊಡೆ ಮುಕ್ತಿ ಸಾಮ್ರಾಜ್ಯ ।
ಪದನೀವ ಪಾರ್ವತೀ ಕಾಂತ ॥ ೭೬ ॥

Colophon :

ಅಂತು ಸಂಧಿ ೧ ಕ್ಕಂ ಶ್ರೀ. ಶ್ರೀ.

End :

ಗುರು ಚೆನ್ನ ಮಲ್ಲಿಕಾರ್ಜುನ ಕೊಟ್ಟ ಮತಿಯಿಂದ ।
ವೊರೆದು ಹೇಳಿದೆ ಕಥೆ ಕಾವ್ಯ ॥
ಕರಣಾ ದೀಪದ ಕಲಿ ಚರಣಾ ಕಮಲವನು ।
ಹರಸಿ ಬೀಳ್ಕೊಂಡು ವಂದಿಸುವೆ ॥
ಇಂದು-ಶೇಖರ ಜಯ ಕಂದರ್ಪಹರ ಜಯ ।
ಮಂದರಗಿರಿ ವಾಸ ಜಯತು ॥
ನಂದಿವಾಹನ ಜಯ ನಂದ ಪ್ರಮಥಗಣಾ ।
ಸಂಧಿಯೊಂಬತ್ತಕೆ ಜಯತು ।
ಇದುವೆ ದೀಪದ ಕಲಿಯಾರ ಕಾವ್ಯ * * * ಪಾರ್ವತೀ ಕಾಂತ ॥

Colophon :

ಅಂತು ಸಂಧಿ ೯ ಕ್ಕಂ ಪದನು ೧೦೫೪ ಕ್ಕಂ ಮಂಗಳ ಮಹಾ ಶ್ರೀ.

(ವಿ-ವಿ.)—

ಸಮಗ್ರ. ಶ್ರೀ ತಾಳಪತ್ರ. ಶಿಥಿಲವಾಗಿದೆ. ಲಿಪಿ ಚೆನ್ನಾಗಿದೆ. ಪುಸ್ತಕದಾದಿಯಲ್ಲಿ "ಮುರಿಗೆ ಸ್ವಾಮಿಗಳ ಪಾದವೇಗತಿ" ಎಂದಿದೆ. ಇದರಿಂದ ಈ ಪುಸ್ತಕವನ್ನು ಬರೆದವನು ಮುರಿಗೆ ಮಠಕ್ಕೆ ಸೇರಿದವನೂ ಆ ಪ್ರಾಂತ್ಯಕ್ಕೆ ಸಮೀಪದವನೂ ಇರಬೇಕೆಂದು ಊಹಿಸಬಹುದು. ಇದರಲ್ಲಿ ೪೯ ನೆಯ ಓಲೆಯಿಲ್ಲ. ಈ ಕಾರಣದಿಂದ ೪ ನೆಯ ಸಂಧಿಯಲ್ಲಿ ೪೩ ನೆಯ ಪದ್ಯದಿಂದ ೫೦ ನೆಯ ಪದ್ಯದ ವರೆಗೆ ಗ್ರಂಥಪಾತವಿದೆ. ೬೦, ೮೮ ನೆಯ ಓಲೆಗಳ ಒಂದೇ ಪಕ್ಕದಲ್ಲಿ ಬರೆದಿದೆ.

ಇದು ಸಾಂಗತ್ಯದಲ್ಲಿ ಬರೆದಿದೆ. ಸಂಧಿ ೯. ಪದ್ಯಗಳು ೧೦೫೪. ೬೩ ಶಿವಭಕ್ತರಲ್ಲಿ ಒಬ್ಬನಾದ ದೀಪದ ಕಲಿಯಾರ ಚರಿತೆಯು ಇದರಲ್ಲಿ ಉಕ್ತವಾಗಿದೆ

ಕವಿ ಚೆನ್ನಮಲ್ಲೇಶನು. ಇವನ ಸ್ಥಳ ಅಂಬಲಿಗೆ. ವೀರಶೈವ ಮತದವನು. ಪೂರ್ವ ಕವಿಗಳಲ್ಲಿ ಹರೀಶ್ವರ ಮುಂತಾದವರನ್ನು ಸ್ಮರಿಸಿದ್ದಾನೆ. ಆ ವಿಷಯಗಳಿಗಾಗಿ ಉದಾಹೃತ ಭಾಗವನ್ನು ನೋಡುವುದು. 'ಪೂರ್ವ ಕವಿಗಳಲ್ಲಿ ಚಾಮರಸನನ್ನು (ಸು. ೧೪೩೦) ಸ್ತುತಿಸುವುದರಿಂದ ಕವಿ ಅವನ ಕಾಲಕ್ಕಿಂತ ಈಚೆಯವನು ಎಂಬುದು ವ್ಯಕ್ತವಾಗಿದೆ. ಸುಮಾರು ೧೫೦೦ ರಲ್ಲಿ ಇದ್ದಿರಬಹುದು' ಎಂದು ಕವಿಚರಿತೆ (ಸಂಪುಟ ೨, ಪುಟ ೫೪೩) ಯಲ್ಲಿ ಬರೆದಿದೆ

No. 968. ದೇವರಾಜ ಸಾಂಗತ್ಯ by ಚಾಮಯ್ಯ.

DĒVARĀJASĀṄGATYA BY CĀMAYYA.

Substance, palm-leaf. Size, 14½ × 1¼ inches. Pages, 14. Lines, 5 on a page. Extent, 105 granthas. Character, Kannada. Condition, very much injured. Appearance, old. Mode of writing, good.

Incomplete.

Contains Pīṭhikāsandhi and 36 stanzas in the 2nd sandhi.

Deals with the life of Dēvarāja, king of Mysore. The author is a native of Mysore and his date is about 1700 A.D.

Beginning :

ಸಾಂಗತ್ಯ ॥ ಶ್ರೀವನಿತಾ ಪ್ರಿಯ ಸುಜನರ ಮುನಿಕುಲ ।
ಸೇವಿತಪಾದ ಪಂಕಜನ ॥
ಭಾವಜಪಿತ ಪದ್ಮಗಿರಿಯೊಳು ನೆಲಸಿದ ।
ದೇವ ಕೊಡೆನಗೆ ಸನ್ಮತಿಯ ॥ ೧ ॥
ಗೀತೆಯ ತೋರಬೇಕೆಂದು ಬಳಿಯಬೇಡಿ ।
ಕಾಳದೆ ಸಭಧರೆ ಪದ [ಬ] (ವ) ॥
ನೀಲಮೇಘಶ್ಯಾಮಲಾಂಗ ಪಶ್ಚಿಮ ರಂಗ ।
ಪಾಲಿಸು ಕೃತಿಗೆ ಮಂಗಳವ ॥ ೨ ॥

* * *

ವ್ಯಾಸ ವಾಲ್ಮೀಕಿ ಜೈಮಿನಿ ಮೊದಲಾದ ಕ ।
ವೀಶರ ಪಾದಪಂಕಜವ ॥
ಭಾಸಿತವಾಗಿಯೆ ಬಲಗೊಂಡು ಕೃತಿಯ ಸಂ ।
ತೋಷದಿಂದಲಿ ಪೇಳುವೆನು ॥ ೧೨ ॥
ಒಲಿದು ಲಾಲಿಪ ಮುಗುದೆಯ ಮುದ್ದುನುಡಿಯೊಸ ।
ದ್ವಿಲಸಿತವಾದ ಪಾಲ್ಗೆನೆಯೊ ॥
ಎಳಬಾಲಕರ ತೊದಳ್ನುಡಿಯೋ ಚಾಮನು ಪೇಳ್ವ ।
ಲಲಿತಸಿಂಗರದ ಸತ್ಕಥೆಯೊ ॥ ೩೦ ॥

* * *

ವೈರಿಮಹೀಪ ಮಾತಂಗ ಕೇಸರಿ ವೀ್ರ ।
ಸೂರ ದೇವ ಭೂವರನ ॥
ಚಾರು ಕೃತಿಯನೊಲಿ ದಾಲಿಸಿದವರನು ।
ಶ್ರೀರಂಗಧಾಮ ರಕ್ಷಿಸನು ॥ ೩೨ ॥
ಕಂದರ್ಪ ರೂಪನೆನಿಪ ದೇವರಾಜಭೂ ।
ಮೀಂದ್ರನ ಕಥೆಯ ವಿಸ್ತರಿಸಿ ॥
ಮುಂದೆ ಪ್ರಜ್ವಲಿಸಿ ಪೇಳಲು ಪೀಠಿಕಾವತ ॥
ಸಂಧಿಯೊಳಗೆಯ ಸಂಬಂಧಿ ॥ ೩೩ ॥

Colophon :

ಇತಿ ಪೀಠಿಕಾ ಸಂಧಿ.

ಸೂಚನೆ ॥ ಧರಣಿ ವಿಸ್ತಾರಕಾಂಚನ ಶೈಲ ಮಹಿಶೂರ ।
ಪುರವರ್ಣನೆಯನು ಪೇಳುವೆನು ॥

End :

ಇನಿತು ವೈಭವದಿಂದಲೊಪ್ಪುವ . . . . . ।
. . . .
. . . . ನೊಂ ।
ಪಿನ ಇರವೇನ ಬಣ್ಣಿಪೆನು ॥

ದನುಜರಿಗಳುಕೆ ಪುರಂದರ ಸಮ್ಮತವ ।

ಕನಕಕ . . . . ॥

(ವಿ-ವಿ.)—

ಅಸಮಗ್ರ. ಪೀಠಿಕಾ ಸಂಧಿಯೂ ಎರಡನೆಯ ಸಂಧಿಯಲ್ಲಿ ಮೂವತ್ತಾರು ಪದ್ಯಗಳೂ ಇವೆ. ಮೂವತ್ತೇಳನೆಯದು ಅಪೂರ್ಣವಾಗಿದೆ. ಓಲೆಗಳು ಮುರಿದೂ ಹುಳುತಿಂದೂ ಇವೆ. ತಾಳೆಪ್ರತಿ, ಲಿಪಿ ಉತ್ತಮವಾದುದು.

ಇದು ಸಾಂಗತ್ಯದಲ್ಲಿ ಬರೆದಿದೆ. ಸಂಪೂರ್ಣ ಪ್ರತಿಯಲ್ಲಿ ಸಂಧಿ ೧೧, ಪದ್ಯಗಳು ೧೨೫೦. ಗ್ರಂಥದಾದಿಯಲ್ಲಿ ಪದ್ಮಗಿರಿಯಲ್ಲಿ ನೆಲಸಿದ ದೇವನ ಸ್ತುತಿಯಿದೆ. ಪದ್ಮಗಿರಿಯನ್ನು ಹಿಮವದ್ಗೋಪಾಲಸ್ವಾಮಿಯ ಬೆಟ್ಟವೆನ್ನುವರು. ಆ ಮೇಲೆ ಕವಿ ಪಶ್ಚಿಮ ರಂಗನಾಥ, ನರಹರಿ, ಲಕ್ಷ್ಮೀಕಾಂತ, ತ್ರಿಣಯನ, ಗಣಪತಿ, ಸರಸ್ವತಿ, ಈಶ, ಚಾಮುಂಡಿ, ಸೂರ್ಯ, ವರಪ್ಪಯ್ಯಾಚಾರ್ಯ ಇವರನ್ನು ನುತಿಸಿದ್ದಾನೆ. ಪೂರ್ವ ಕವಿಗಳಲ್ಲಿ ವ್ಯಾಸ ವಾಲ್ಮೀಕಿ ಜೈಮಿನಿಗಳನ್ನು ಹೊಗಳಿದ್ದಾನೆ. ಮೈಸೂರು ದೊರೆಯಾಗಿದ್ದ ದೇವರಾಜನ ಚರಿತವು ಈ ಗ್ರಂಥಕ್ಕೆ ವಿಷಯವು.

ಕವಿ ಚಾಮಯ್ಯನೆಂಬುವನು. ಇವನ ಕಾಲವು ಸುಮಾರು ಕ್ರಿ.ಶ. ೧೭೦೦. ಉಳಿದ ವಿಷಯಗಳಿಗಾಗಿ ಮುಂದಣ ೯೭೦ ನೆಯ ನಂಬರನ್ನು ನೋಡುವುದು.

No. 969. ದೇವರಾಜಸಾಂಗತ್ಯ by ಚಾಮಯ್ಯ.

DĒVARĀJASĀṄGATYA BY CĀMAYYA.

Substance, paper. Size, 10-7/16 × $9\frac{3}{8}$ inches. Pages, 6. Lines, 20 on a page. Extent, 105 granthas. Character, Kannaḍa. Condition, good. Appearance, new.

Restored in 1916–17 from the manuscript described above (No. 968).

Begins on page 1, part 3 of the manuscript described under No. 942 ante.

(ವಿ-ವಿ.)—

ಅಸಮಗ್ರ. ಇದು ಹಿಂದೆ (೯೬೮ ನೆಯ ನಂಬರಿನಲ್ಲಿ) ವರ್ಣಿತವಾಗಿರುವ ಪ್ರತಿಯ ಪ್ರತಿಕೆಯು. ಇದರೊಡನೆ ಇನ್ನೂ ಅನೇಕ ಪುಸ್ತಕಗಳು ಸೇರಿವೆ. ಅವಾವುವೆಂಬುದನ್ನು ಹಿಂದಣ ೯೪೨ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 970. ದೇವರಾಜ ಸಾಂಗತ್ಯ by ಚಾಮಯ್ಯ.

DĒVARĀJASĀṄGATYA BY CĀMAYYA.

Substance, palm-leaf. Size, $14\frac{5}{8}$ × 1-5/16 inches. Pages, 146. Lines, 6 on a page. Extent, 1,650 granthas. Character, Kannaḍa. Condition, very much injured. Appearance, old.

Incomplete; contains sandhis 2–4 incomplete and 5–11 complete.

Same work as that described above.

Beginning :

. . . . |

ಸಲ್ಲಲಿತಾಮಳೋದಕವ ॥

ಚೆಲ್ಲವರಿಯ . . . . ಯರವಟಿಗೆಗ ।

ಕೊಲ್ಲಾಸ ಮಿಗಲೊಪ್ಪಿ . . . . . . ॥ ೭೧ ॥ (೨ ನೆಯ ಸಂಧಿ.)

* * * *

. . . . ರಾಗವೆನಿಪ ಕೋಮ ।
ಲಾಂಗದ ಸರಸ ವಿಭ್ರಮದಿ ॥
ಸಂಗೀತವೆರಸಿವಾ . . . . . . ರು ।
ಮಂಗಳಾ . . . . ॥
. . . . ।
. . . . ಘೋಷದಲಿ ॥
ಈಧರಣಿಯೊಳಗ . . . ಶಿಷ್ಟರೆನಿಪ ।
ಭೂದೇವ ಖೀಥಿಯೊಪ್ಪಿದುದು ॥ ೪೪ ॥ (೨ ನೆಯ ಸಂಧಿ)

* * * *

ಇಂದು ಕುಲಾಂಬುಧಿ ಚಂದಿರ ದೇವರಾ ।
ಜೇಂದ್ರ ನಧಿಕ ಕೀರ್ತಿ ಸಾಂದ್ರ ।
ಕಂದರ್ಪ ಸದೃಶ ರೂಪನು ಸುಚರಿತೆಯೊ ।
ಳೊಂದಿದ ಸಂಧಿ . . . . ॥

Colophon :

ಅಂತು ಸಂಧಿ ೩ ಕ್ಕಂ ಪದನು ೧೯೦ ಕ್ಕಂ ಮಂಗಳ ಮಹಾಶ್ರೀ.

ಸೂಚನೆ ॥ ಧಾರಿಣೀಶ್ವರ ದೇವನೃಪತಿಯ ಜನನ ವಿ ।
ಸ್ತಾರವ . . . ದು ಪೇಳುವೆನು ॥

End :

ಭೂಪತಿ ದೇವರಾಜೇಂದ್ರನ ಕಥೆಯ ಸ ।
ದಾ ಪಠಿಸುವ ವಿದ್ವಜ್ಜನರ ॥
ಆ ಪದ್ಮಗಿರಿಯ ನಿವಾಸ ದೇವರ ದೇವ ।
ಗೋಪಾಲಸ್ವಾಮಿ ರಕ್ಷಿಪನು ॥
ಇದು ಹರಿಪದಕ ಮಲಾಂತರ ಸುರುಚಿರ ।
ಮಧುಕರ ದೇವಭೂಪತಿಯ ॥
ಸದಮಳ ಚರಿತ ಕರ್ತನು ಪಶ್ಚಿಮ ರಂಗ ।
ನೊದವಿಪ ಲೇಸನೆಲ್ಲರಿಗೆ ॥

Colophon :

ಅಂತು ಸಂಧಿ ೧೧ ಕ್ಕಂ ಪದನು ೧೨೫೦ ಕ್ಕಂ ಮಂಗಳ ಮಹಾಶ್ರೀ.

(ವಿ-ವಿ).—

ಮೊದಲ ಸಂಧಿಯಿಲ್ಲ. ೨, ೩, ೪ ನೆಯ ಸಂಧಿಗಳಲ್ಲಿ ಅಲ್ಲಲ್ಲಿ ಕೆಲವು ಪದ್ಯಗಳು ಇವೆ. ೫ ರಿಂದ ೧೧ ಸಂಧಿಗಳು ಪೂರ್ಣವಾಗಿವೆ. ಓಲೆಗಳು ಕೆಲವೆಡೆಯಲ್ಲಿ ಮುರಿದು ಹೋಗಿವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಪುಸ್ತಕದ ಕೊನೆಯಲ್ಲಿ ಕವಿಕೃತವೂ ದೇವರಾಜ ವಿಷಯಕವೂ ದ್ವಿಪದಾತ್ಮಕವೂ ಆದ ಕೆಲವು ಪದ್ಯಗಳು ಬಂದೋಲೆಯಲ್ಲಿದೆ. ಅದು ಅತ್ಯಂತ ಶಿಥಿಲವಾಗಿಯೂ ಮುರಿದು ಹೋಗಿಯೂ ಇದೆ. ಬಳಿಕ ಮತ್ತೊಂದೋಲೆಯಲ್ಲಿ (ಕಾರ್ತಿಕ ಶು. ೧೫ ಲ್ಲು . . . ಊರ ರಾಯ[ಸ್ವ] (ಸದ) ರಾಮಯ್ಯನು ಬರೆದ ಮೈಸೂರ ಚಾಮಯ್ಯನವರ ಕವಿಕೃತವಾದ ದೇವರಾಜ ವಿಜಯವೆಂಬ ಸಾಂಗತ್ಯ ಪ್ರಬಂಧದ ಪುಸ್ತಕಕ್ಕೆ . . . ಮಂಗಳ ಮಹಾಶ್ರೀ.

ಕಂ ॥ ಕೃತಪ್ಪು ನೋಡಿ ತಿದ್ದಿರಿ ।
ರೀತಿಯು ಜಾತಿಯನು ತಿಳಿದು ಪ್ರಿಯ ಪಜನಗಳಂ ॥

ಭೂತಳದೊಳು ಕವಿಗಳು ವಿ ।
ಖ್ಯಾತಮಾಯು. ಬೆಸರುಪಡೆದ ಘಸರುಗಳಾಗಲ್ ॥ (?) ”

ಎಂದಿದೆ —

ಇದು ಸಾಂಗತ್ಯದಲ್ಲಿ ಬರೆದಿದೆ. ಸಂಧಿ ೧೧. ಪದ್ಯಗಳು ೧೨೫೦. ಗ್ರಂಥದಾದಿಭಾಗವು ಹಿಂದಣ ನಂಬರುಗಳಲ್ಲಿ ವರ್ಣಿತವಾಗಿದೆ. ಮೈಸೂರು ದೊರೆಯಾಗಿದ್ದ ದೇವರಾಜನ ಚರಿತ್ರವೇ ಈ ಗ್ರಂಥಕ್ಕೆ ಉಕ್ತ ವಿಷಯವು. ಎಂದರೆ :—

ಸಂಧಿ ೧ ರಲ್ಲಿ ಪೀಠಿಕೆ.
,, ೨ ,, ಮೈಸೂರು ಪುರವರ್ಣನೆ.
,, ೩ ,, ಮೈಸೂರು ರಾಜರ ವಂಶಾವಳಿ.
,, ೪ ,, (ದೇವರಾಜನ) ಜನನ.
,, ೫ ,, ಕ್ಷೇತ್ರಮಾಹಾತ್ಮ್ಯವು ; ಶ್ರೀರಂಗ ಪಟ್ಟಣ ವರ್ಣನೆ.
,, ೬ ,, ರಾಜಮಂದಿರ ವರ್ಣನೆ.
,, ೭ ,, ಮಹಾನವಮಿ ಯೋಲಗ ವರ್ಣನೆ.
,, ೮ ,, ಮಹಾ ನವಮಿ ಪೂಜೆ.
,, ೯ ,, ಇಕ್ಕೇರಿಯರಸನು ಶ್ರೀರಂಗಪಟ್ಟಣವನ್ನು ಮುತ್ತಿದುದು
,, ೧೦ ,, ದೇವರಾಜನು ಇಕ್ಕೇರಿಯ ದೊರೆ ಶಿವಪ್ಪ ನಾಯಕನನ್ನು ಗೆಲ್ಲುವುದು.
,, ೧೧ ,, ದೇವರಾಜನ ನೆಗಟತ್ತಿ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 971. ದೇವರಾಜ ಸಾಂಗತ್ಯ by ಚಾಮಯ್ಯ-
DĒVARĀJASĀṄGATYA BY CĀMAYYA.

Substance, paper. **Size**, 10·7/16 × 9·7/16 inches. **Pages**, 115. **Lines**, 20 on a page. **Extent**, 1,650 granthas. **Character**, Kannaḍa. **Condition**, good. **Appearance**, new.

Restored in 1936–37 from the manuscript described above (No. 970).

Incomplete.

(ಪ-ವಿ).—

ಇದು ಹಿಂದಣ ೯೭೦ ನೆಯ ನಂಬರಿನಲ್ಲಿ ವರ್ಣಿತವಾದ ಪ್ರತಿಯ ಪ್ರತಿಕೆಯು. ಕಾಗದದ ಪ್ರತಿ.

No. 972. ನಂದಿ ಮಹಾತ್ಮ್ಯವು by ಗೋವಿಂದ-
NANDIMĀHĀTMYAVU BY GOVINDA.

Substance, Śrītāla. **Size**, 17·9/16 × $2\frac{1}{8}$ inches. **Pages**, 107. **Lines**, 10 to 14 on a page. **Extent**, 5,000 granthas. **Character**, Kannada. **Condition**, injured. **Appearance**, old. **Mode of writing**, fair.

Complete in 24 sandhis.

Written in Vārdhaka ṣaṭpadi metre. It deals with the greatness of Śaiva places of pilgrimage, as narrated by Kūṣmāṇḍa to Nandi.

The author is one *Govinda*, son of *Joti* Karnam of *Khēḍabuyyara* on the banks of the river *Bhīmarathi*. He had the title Sukavikaṇṭthābharaṇa. He says that he wrote this at the instance of *Immadi Hāvalīndra*.

Date of transcription :—Monday, the 10th day of the bright fortnight of the lunar month Āṣāḍha of the year Parābhava.

Name of the scribe :—*Kuppaṇṇa*, son of *Venkaṭayya*, disciple of *Cidānandāsrama* of Kāturu.

Beginning :

ವಾ. ಷ ॥ ಶ್ರೀ ನಗಸುತಾವಾಕ್ಯರಾಲಾಪದಿಂ ಶಿವಾ ।
ಕಾನ . . ತಾಂಗ ಪರಿಜನಿತ ಕುಚಕುಡ್ಮಲ ವಿ ।
ತಾನದಿಂ ಪೂರ್ವಶ್ರೀ ಲಲಿತಮೃದುಯಾನವರ ಹಂಸಗಮನೋತ್ಸಾಹದಿಂ ॥
ಮೀನಾತ್ಮಜಾತಾಂಬಿಕ ಭ್ರಮರದಿಂದಂ ಭ ।
ವಾನಿಯು ನವೀನತರವಾದ ವರಯುಗ್ಮವನೋ ।
ದ್ಯಾನದೊಳ್ಕ್ರೀಡಿಸುವ ನಂದೀಶ ಚೈತ್ರನೊಳ್ದೀಗೆ ನಮಗಿಷ್ಟಾರ್ಥಮಂ ॥
* * * *

ಜನಮಿತ್ರ ಕಾಳಿದಾಸನ ಕಲಾನಿಧಿ ಮಯೂ ।
ರನ ಮಂಗಳಚರಿತ್ರ ಮಲುಹಣನ ಸೌಮ್ಯ ಬಾ ।
ಣನ ಚತುರ ಸಂಜೀವ ರತ್ನ ಭೋಜನ ಕವೀಶ್ವರ ಕೇಶಿರಾಜನೊಳ್ದು ॥
ಘನ ಶಬ್ದ ಶಾರಿ ಪಂಪನ ಭೋಗಿ ಭಲ್ಲಟನ ।
ವಿನುತಸತ್ಕೀರ್ತಿ ಶುಕರೂಪನಡಿದಾವರೆಯು ।
ನೆನೆದುಪಕ್ರಮಿಸೆ ಕೃತಿಗವರೊಳ್ನವ ಗೃಹಂ ಬಲವಂದು ದಂಪೀಯುವೆ ॥ ೧೪ ॥
ಚತುರಾಸ್ಯ ರುದ್ರಲಕ್ಷ್ಮೀಪತಿಮುನಂತರು ।
ಸ್ತುತ ಸತ್ಯಲೋಕ ಕಾತ್ಕೀಲ ಕೀಲಾಲನಿಧಿ ।
ವಿತಳಮಂ ನಿರಲಿಮ್ಮರಿವರಾರೆಂದು ಸುಕವೀಂದ್ರಾಭಿಧಾನವಹಾಂತು ॥
ಕೃತೀ ಕರ್ತರೆನಿಸಿ ವಿಶ್ರುತರಾಗೆ ಲೋಕದೊ ।
ಳ್ನುತಿಸಿದ ವರಾವರ್ಣನೋಪಮದದಿಂದ ಕಾವ್ಯಪ ।
ದ್ಧತಿಯೊಳಾನಭಿ ವಂದನಂಗೆಯ್ದು ಮುಂದೆ ಪದಸಂದರ್ಭಮಂ ಸಾಗಿಪೆಂ ॥ ೧೫ ॥
* * * *

ಹರುಷವಂ ತಾಳ್ದು [ಮಹಾತ್ಮ್ಯಯುಂ] (ಮಾಹಾತ್ಮ್ಯಯುಂ) ಪೇಳ್ದನಾ ।
ವರದ ವಿಶ್ವಾಮಿತ್ರಗೋತ್ರಜಂ ಭೀಮರಥಿ ।
ಯುರು ತೀರದೊಳ್ತೊಳಪ ಖೇಡಬಾಯ್ಯರದ ಕರಣಿಕ ಜೋತಿಯಾತ್ಮಭವನು ।
ಸರಸಿರುಹನೇತ್ರ ಶ್ರೀಮದನ ಗೋಪಾಲಕನ ।
ಕರುಣದಿಂ ಗೋವಿಂದ ನೆಂಬೊರ್ವನಂ ಪ್ರಿಯದಿ ॥
ಪರಮ ಸತ್ಪುರುಷರಾಲಿಸಿ ಲಾಲಿಸುವುದೆನ್ನ ಮೇಲುಳ್ಳ ಮೋಹದಿಂದ ॥ ೨೯ ॥

* * * *

ಎಳನೀರೊಳೆಯ್ದೆ ತವರಾಜ ಬೆಳೆದಂದದಿಂ ।
ಸುಲಿದ ರಸಗಂಧಿವಾಳಿತೆಯೊಳು ಜೇನ್ದಳದಂತೆ ।
ಲಲಿತಮಾಧುರ್ಯ ದ್ರಾಕ್ಷಾಫಲ ಪ್ರಚಯಮಂ ರಸದಾಳರಸ ದೊಳೊಸೆದು ॥
ಇಳುಹಿದಂತೊಲ್ದು ಚೆನಿವಾಲ್ಗೆನೆಗೆ ಸದ್ವೃತ್ತಂ ।
ಗಲಸಿದಂದದೊಳೆನ್ನ ಕೃತಿರಸಂ ನಾಡೆ ನವಿ ।
ಗೆಳಸುವುದು ನಿರ್ಮತ್ಸರ ದೊಲ್ವಾಲಿಸುವ ರಸಿಕವೃಂದಕಾನಂದವಾಗೆ ॥ ೩೦ ॥

Colophon :

ಪ್ರಥಮ ಸಂಧಿ ೧ ಕ್ಕೆ ಪದನು ೩೧ ಕ್ಕಂ ಮಂಗಳ ಮಹಾಶ್ರೀ.

ಸೂಚನೆ । ವಿನಯದಿಂದ ಮುನಿಜನಂ ಬೆಸಗೊಳ್ಳಲ್ ಪಸಗೆ (?) ಸಂ ।
ಜನಿಸಲೊಯ್ಯನೆ ಪೇಳಲೆಂದು ಮನದಂದು ಸು ।
ದರ್ಶನಘ ಕೈಲಾಸ ಪ್ರಕಾಶಿಸುತ್ತಿಹುದೆನುತ ಸೂತನಾಖ್ಯಾತ ಮಾಗೆ ।

End :

ಇಂತು ಬ್ರಹ್ಮಾಂಡ ಪೌರಾಣದೊಳ್ ಪೇಳ್ದ ಸುಕ ।
ಥಾಂತರಂ ನಂದಿಯು ಮಹಾತ್ಮೆಯಿದ ಮೂಲಾಗ್ರ ।
ಮಂ ತೊಡಗಿ ನಾಂ ಬಲ್ಲತೆರದೆ ವಿಸ್ತರಿಸಿದೆಂ ಪೂರ್ವ ಗ್ರಂಥಾಂತರದೊಳು ॥
ಎಂತಿರ್ದುದಂತಾಟಿದ ಕೇಳ್ದ ಸತ್ಪುರುಷರೋ ।
ರಂತೆ ಕೃತಿಯಂ ತಿರ್ದಿ ಲೋಕ ಪ್ರಸಿದ್ಧಿಗೆ ವ ।
ಲಂತ್ರಹುದು ಶಿಷ್ಯ ತಪ್ಪಲುಗ್ರುಗಳಂ ತಿದ್ದುವುದು ಧರೆಯೊಳು ॥ ೨೪ ॥
ವ್ಯಾಸಮುನಿತಿಲಕ ಬ್ರಹ್ಮಾಂಡ ಪೌರಾಣ (?) ಮಂ ।
ಶಾಸವಿಸ್ತರ ಮಾಗಿಸುತ್ತದ ರೊಳೊಲ್ದುಪ ।
ನ್ಯಾಸಮಂ ಮಾಡಿ ಪೇಳ್ದಂಪಂಚ ನಂದಿಯು ಮಹಾತ್ಮೆಯಂತದ ಮುದದೊಳು ।
ಭಾಸುರ ಸುಕರ್ಣಾಟ ಭಾಷಾವಿಶೇಷದಿಂ ।
ಬೇಸಱತೊಂದದೊಲು ಶ್ರೀ ಮದನ ಗೋಪಾಲನಾ ।
ಜ್ಞಾಸಮಂಜಸದಿ ಕೃತಿಗೆಯ್ದ ಸುಜನರ್ತಿದ್ದುವುದು ಲೋಕಸ್ವೀಕರಿಪೊಲು ॥ ೨೫ ॥
ಲಲಿತ ಬ್ರಹ್ಮಾಂಡ ಪೌರಾಣ ಸುಕಥಾ ಕುತೂ ।
ಹಲಕ[ವಿ] (ಲಿ) ತಮಲಾ ಪ್ರಬಂಧ ಮಧ್ಯ [ಧ್ವಲಾ] ಸ್ಥಲೋ ।
ಜ್ವಲಿತನಾಯಕ ರತ್ನ ನಂದೀಶ್ವರಾಖ್ಯಾನ ಮಿರೆ ಮನೋಲ್ಲಾಸದಿಂದೆ ॥
ಒಲಿದು ಕನ್ನಡದಿ ಕೃತಿವೇಳ್ದನೆನ್ನಯ ಮತಿಗೆ ।
ನಿಲುಕಿ ದಂ (ದ) ದೊಳು ಜೀವಕ್ಕೆ ಪೊಣೆಯಿರೆ ಕಾದಿ । (?)
ಗೆಲುವುದಚ್ಚರಿಯೆ [ಸು] (ಸ) ತ್ಪುರುಷರನು ಗೆಯ್ವರೆಂಬಾ ಬಲ್ಪ ಮನದೆ ಗೊಂಡು ॥ ೨೬ ।
ನಂದಿಯು ಮಹಾತ್ಮೆಯಂ (?) ಪೇಟಿಸಿದ ಭೋಗ ಸಂ ।
ಕ್ರಂದನಂ ವಿಮಲ ವಿದ್ಯಾವಿನೋದಂ ಭಜಕ ।
ವೃಂದ ಮಂದಾರ ಮನವದ್ಯ ಸತ್ಕೀರ್ತಿ ಯುಕ್ತಂ ವಿನಯರತ್ನಭೂಷಂ ।
ಕಂದರ್ಪ ಸನ್ನಿಭಂ ಸಕಲ ಲೋಕಾಭಿರಾ ।
ಮಂ ದಯಾಪೂರ್ಣಂ ಪರೇಂಗಿತಜ್ಞಂ ದ್ವಿಜ ।
ನೇಂದು ಸ್ವಭಾನು ಸುಚಾರಿತ್ರ ಸಂಪನ್ನನುಂ ಪರಾಕ್ರಮವಿಕ್ರಮಂ ॥ ೨೭ ॥
ಗುರುಕೃಪಾಮೃತಲೋಲ ವಿತರಣ ವಿಶಾಲಭಾ ।
ಸುರಪ್ರತಿಜ್ಞಾ ಪರಶುರಾಮ ಸಂಗರಭೀಮ ।
ನಿರುತಕನಕ ವಸಂತ ವಿಭವ ವಿಜಿತಜಯಂತ ಮಹದಾಭಿ (?) ಮಾನಿದಾನಿ ॥
ಅರಿರಾಯಮಾನಮರ್ದನ ಸದ್ಗುಣ ನಿಧಾನ ।
ಧರಣೀಂದ್ರ ಕುಲಸಾರ್ವಭೌಮ ಸುಕಲೋದ್ಧಾಮ ।
ವರಹಾವಳೀಂದ್ರ ಸುಕುಮಾರ ಸತ್ಯಾಚಾರಧೀರನ ಸಹಾಯ ಶೂರ ॥ ೨೮
ಸುರರತ್ನಮಾಕಾರಮಾದಂತೆ ಸುಧೆ ಮನೋ ।
ಹರರೂಪುವೆತ್ತಂತೆ ಕಲ್ಪಪಾದಪವೆ ಮೃದು ।
ತರದಿ ನುಡಿಗಲ್ತಂತಿರುದಿಸಿ ದಿವ್ಯಾದಿ ಹಾವಳೀಂದ್ರ ಸತ್ಕೀರ್ತಿ ಸಾಂದ್ರ ॥

ವರ (ಸೂರಿನಿ) ಕರ ಶುಕ ಸೇವಿತ ರಸಾಲ ನತಿ ।
ಪರಿತೋಷದಿಂ ಕೃತಿಯ ಕೇಳ್ದೊಲ್ದು ವಿರುಪಾಕ್ಷ ।
ಪುರವ ಧಾರಾದತ್ತವಾಗಿತ್ತನಾ ಚಂದ್ರತಾರಾರ್ಕ ಚಿರವಿಪ್ರೂರ್ಪಲು ॥ ೧೯ ॥
ಒಡೆವ್ರದು ತಟಾಕ ಮಾರವುಡಿವ್ರದು ಶಿವಾಲಯಂ ।
ಕೆಡುವುದು ದ್ವಿಜಸ್ವಾಸ್ಥ್ಯ ಕೆಡುವ್ರದು ದುರಾಚಾರ ।
ಪಿಡಿವ್ರದು . . . . ॥
ಕೃತಿಯುಪಪ್ರತಿಮ ನಂಜೀಶ್ವರ ಮಹಾತ್ಮೆಯೊ ।
ಕೃತಿಗೆಯಧಿನಾಥ ನಂಜೀಶ್ವರ ಸವೀಕೃತಿಗೆ ।
ಹಿತರಾಗಿ ಲೀಲೆಯಿಂದಾಲಿಸುವ ಪಾಲಿಸುವ ಲಾಲಿಸುವರಾರೆಂದೊಡೆ ॥
ಸತತ ಸತ್ಪುರುಷ ಸಂತತಿ ಭಕ್ತಿಯುಣ್ಮಲೀ ।
ಕೃತಿಯ ವಿರಚಿಸಿದ ಕೃತಪುಣ್ಯನಾರೆನಲು ವಿ ।
ಶ್ರುತವಾಗಿ ಸುಕವಿಕಂಠಾಭರಣನೆಂದೆನಿಪ ಕರಣಿಕ [ಗೋಪ] (ರ) ಕುಲದೀಪನು ॥ ೨೧ ॥
ಧಾರಿಣಿಜಲಾಗ್ನಿ ಮರುದಂಬರಗಳುಳ್ಳನ್ನ ।
ತಾರಾಳಿ ಚಂದ್ರಾರ್ಕಬಿಂಬ ಬಿಂಬಿಸುವನ್ನ ।
ವಾರಿಧಿಗಳೇಳ್ನದಿ ನವವ್ರಾತ ಖಿಪ್ಪನ್ನ ಗ್ರಹಚಕ್ರ ಚರಿಸುವನ್ನ ॥
ಮೇರು ಮಂದರ ಹೇಮಶೈಲ ರಜತಾದ್ರಿಗ ।
ಳೊತ್ತೀರುವನ್ನಬರ ಲೋಕಪ್ರಸಿದ್ಧ[ತೆಯಾಗಿ] (ಮಿದಾಗಿ) ।
ರಾರಾಜಿಸಲಿ ಗೋಪಕವಿ ಪೇಳ್ದ ನಂದಿಯ ಮಹಾತ್ಮೆ ಭೂಭಾಗದಲ್ಲಿ ॥ ೨೨ ॥
ನಂದಿಯ ಮಹಾತ್ಮೆಯ ಮಹಾಕೃತಿಯ ಸಂತತಂ ।
ಸಂದಭಕ್ತಿಯೊಳಾವವರ್ಕೇಳ್ವರವರ್ಗೆಯಿಂ ।
ದೆಂದು ಲಕ್ಷ್ಮೀವಿಲಾಸಂ ಚಿರಾಯುಷ್ಯಮಾರೋಗ್ಯಾತ್ಮಜಾಭಿವೃದ್ಧಿ ।
ಇಂದು ಧರಸೇವೆ ಜಯ (ಸತ್ಕೀರ್ತಿ) ಜಾಣ್ಮೆಯಾ । (?)
ನಂದ ನಿತ್ಯೋತ್ಸವಂ ಧರ್ಮಪ್ರಬು[ದ್ಧಿ] (ದ್ಧ) ಮತಿ ।
ಬಂಧುವರ್ಗಸ್ನೇಹ ದೊರಕೊಂಬುದಿದು ಸಿದ್ಧಮೆಂದು ಕೇಳ್ವುದು ಸುಜನರು ॥ ೨೩ ॥
ಪ್ರವಿಮಲವುದಾದ ನಂದಿಯ ಮಹಾತ್ಮೆಯ ಕಥಾ ।
ವಿವರಮಂ ವಿಸ್ತೀರ್ಣವಾಗಿ ವಿಶ್ವಾಸದಿಂ ।
ದವೆ ಮನೋಜನಿತ ಸದ್ಭಕ್ತಿಯಿಂದಾದೊಡೆ ವಿಲಾಸಮಾರ್ಗ ದೊಳಾದೊಡೆ ॥
ತವೆ ಕೇಳ್ ಜೇಸೆಯ್ಯ ಪುರವಂತ ಮರ್ಮಗಾ ।
ಲುವೆಯಂತೆ ರಸದಾಳರಸದ ವಿವರ್ಣನಲಂತೆ ।
ಸವಿಯನೊಲಿದೀವ್ರದನವರತ ಮಿಂಪಾಗಿ ಕವಿಗೋಪಕೃತಿಕಾವ್ಯ ರಚನೆ ॥ ೨೪ ॥
ವಿನುತ ದ್ರೋಣಜನಾಯು ದಶರಥ ದ ಸಿರಿ ರಾಘ ।
ವನ ವಿಪಕ್ಷಕ್ಷಯಂ ನಹುಷ ನೈಶ್ವರ್ಯ ಪವ ।
ನನ ಗತಿ ಸುಯೋಧನನ ಮಾನ್ಯಭೀಷ್ಮನ ಶೌರ್ಯ ಬಲನ ಭುಜ ಬಲದೇಳಗ ।
ಜನಪ ಧರ್ಮಜನ ಸತ್ಯಂ ಧೀರ ಸುಜ್ಞಾನ ।
ವನುದಿನಂ ದೊರೆಕೊಳ್ಳ ನಂದಿಯ ಮಹಾತ್ಮೆಯಂ ।
ಘನಭಕ್ತಿಯಿಂದೆ ಕೇಳ್ದ ಸಜ್ಜನರ್ಗೆ ನಂಜೀಶ್ವರನ ಕರುಣದಿಂದೆ । ೨೫ ॥

ಅಂತು ಸಂಧಿ ೪೮ ಕ್ಕಂ ಪದನು . . . ಕ್ಕಂ ಮಂಗಳ ಮಹಾಶ್ರೀ.

Colophon :

(ವಿ.ವಿ) :—

ಸಮಗ್ರ. ಶಿಥಿಲವಾಗಿದೆ. ಲಿಪಿ ಉತ್ತಮವಾದುದು. ತಪ್ಪುಗಳಿವೆ. ಪುಸ್ತಕದ ಕೊನೆಯಲ್ಲಿ 'ಪರಾಭವ ಸಂವತ್ಸರದ ಆಷಾಢ. ಶು. ೧೦ ಸೋಮವಾರ ಮದನಗೋಪಾಲ ಕೃಷ್ಣನ ಕೃಪೆಯಲಿ ಕಾತೂರ ವೆಂಕ

ಚಿಯ್ಯನವರ ಕುಮಾರ ಚಿದಾನಂದಾಶ್ರಮರ ಶಿಷ್ಯ ಕುಪ್ಪಣ್ಣನು ಬರೆದ ನಂದಿಯ ಮಹಾತ್ಮೆಯ ಪುಸ್ತಕಕ್ಕೆ ಆ ಚಂದ್ರಾರ್ಕ ಮಸ್ತು.' ಎಂದಿದೆ.

ಇದು ವಾರ್ಧಕ ಷಟ್ಪದಿಯಲ್ಲಿ ಬರೆದಿದೆ. ಇದರಲ್ಲಿ ೨೪ ಸಂಧಿಗಳವೆ. ಗ್ರಂಥದಾದಿಯಲ್ಲಿ ನಂದೀಶ ಸ್ತುತಿಯಿದೆ. ಬಳಿಕ ಕ್ರಮವಾಗಿ ಆದಿನಾರಾಯಣ, ಪಾರ್ವತಿ, ವೀರಭದ್ರ, ಅಱುಮೊಗ, ನಂದಿ, ಭೃಂಗಿ, ಗಣಪ, ಶಾರದೆ ಇವರ ಸ್ತುತಿಯಿದೆ. ಪೂರ್ವ ಕವಿಗಳಲ್ಲಿ ಕಾಳಿದಾಸ, ಮಯೂರ, ಮಲುಹಣ, ಬಾಣ, ಭೋಜ, ಕೇಶಿರಾಜ, ಪಂಪ, ಭಲ್ಲಟ, ಸುಕರೂಪ (ಕುಮಾರವ್ಯಾಸ) ರನ್ನು ಕವಿ ಸುತಿಸಿದ್ದಾನೆ.

ಕವಿ ಗೋವಿಂದನೆಂಬುವನು, ಕಡೆಗಿನ ಸಂಧಿಯ ೩೧ ನೆಯ ಪದ್ಯದಿಂದ ಇವನಿಗೆ "ಸುಕವಿ ಕಂಠಾಭರಣ" ಎಂಬ ಬಿರುದಿದ್ದಂತೆ ತಿಳಿಯುತ್ತದೆ. ಇವನು ಬ್ರಾಹ್ಮಣನು, ವಿಶ್ವಾಮಿತ್ರ ಗೋತ್ರದವನು. ಭೀಮರಥಿಯ ತೀರದಲ್ಲಿರುವ ಬೇಡಬುಯ್ಯಾರದ ಕರಣಿಕ ಜೋತಿಯ ಮಗನು. ಬೇಡಬುಯ್ಯಾರವೆಂಬುದಕ್ಕೆ ಕವಿ ಚರಿತ್ರೆಯಲ್ಲಿ ಬೇಡಬುಯ್ಯಾರವೆಂದಿದೆ. ಇಲ್ಲಿರುವ ಪ್ರತಿಯಲ್ಲಿ ಬೇಡಬುಯ್ಯಾರವೆಂದು ಸ್ಪಷ್ಟವಾಗಿ ಬರೆದಿದೆ. ಮದನಗೋಪಾಲನ ಕರುಣದಿಂದ ತನ್ನ ಈ ಗ್ರಂಥವನ್ನು ಬರೆದಂತೆ ಹೇಳುತ್ತಾನೆ. ಮತ್ತು ಇದನ್ನು, ಭೋಗಸಂಕ್ರಮವನೆ ಮುಂತಾಗಿ ಹೆಸರುಪಡೆದಿರುವ, ಹಾವಳೇಂದ್ರ ಸುಕುಮಾರನಾದ ಇಮ್ಮಡಿ ಹಾವಳೇಂದ್ರನು ಕೇಳಿಸಿದಂತೆ ಹೇಳಿದ್ದಾನೆ.

ಈ ಗ್ರಂಥದ ವಿಷಯವಾಗಿ ಕವಿಚರಿತ್ರೆಯಲ್ಲಿ ಹೀಗೆ ಹೇಳಿದೆ :—"ನಮಗೆ ದೊರೆತ ಅಸಮಗ್ರ ಪ್ರತಿಯಲ್ಲಿ ೨೩ ಸಂಧಿಗಳವೆ. ಒಟ್ಟು ೫೦ ಸಂಧಿಗಳವೆಯೆಂದು ಕಾವ್ಯ ಕಲಾನಿಧಿಯ ಸಂಪಾದಕರು ಬರೆದಿದ್ದಾರೆ. ಇದರಲ್ಲಿ ನಂದಿಗೆ ಗಣನಾಥನಾದ ಕೂಷ್ಮಾಂಡನು ಶೈವ ಕ್ಷೇತ್ರಗಳ ಮಹಿಮೆಯನ್ನು ನಿರೂಪಿಸಿದಂತೆಯೂ ನಂದಿ ಪಾರ್ವತಿಗೆ ಸಂದೇಹವನ್ನು ಉಂಟುಮಾಡಿದ ತನ್ನ ಶಿವಸಾರೂಪ್ಯವನ್ನು ಶಿವನ ಅನುಗ್ರಹದಿಂದ ನೀಗಿ ಮುನ್ನಿನಾಕೃತಿಯನ್ನು ಪಡೆದಂತೆಯೂ ಹೇಳಿದೆ."

No. 973. ನಂದಿ ಮಾಹಾತ್ಮ್ಯವು by ಗೋವಿಂದ-

NANDIMĀHĀTMYAVU BY GOVINDA.

Substance, paper. Size, 10·7/16 × 9·7/16 inches. Pages, 382. Lines, 20 on a page. Extent, 5,000 granthas. Character, Kannaḍa. Condition, good. Appearance, new. Mode of writing, good.

Restored in 1935–36 from the manuscript described above. (No. 972.)

Complete in 24 sandhis.

(ವಿ-ವಿ.) --

ಸಮಗ್ರ. ಕಾಗದದ ಪ್ರತಿ. ಹಿಂದೆ (೯೭೨ ನೆಯ ನಂಬರಿನಲ್ಲಿ) ವರ್ಣಿತವಾಗಿರುವ ಪ್ರತಿಯ ಪ್ರತಿಯಾಗಿದೆ. ಲಿಪಿ ಉತ್ತಮವು.

No. 974. ನವಮೋಹನ ತರಂಗಿಣಿ by ಶಂಕರ

NAVAMŌHANATARAṄGIṆI BY ŚAṄKARA.

Substance, Śrītāla. Size, 9 × 2·5/16 inches. Pages, 358. Lines, 12–15 on a page. Extent, 8,500 granthas. Character, Kannaḍa. Condition, slightly injured. Appearance, old. Mode of writing, good.

Complete in 33 sandhis.

A poem in Vārdhaka Ṣaṭpadi metre, which deals with the story of **Bāṇāsura** and is said to have been narrated by the poet to his wife as at her request. The poet gives his name as ***Śaṅkara,*** son of ***Basavarasa*** and ***Nāgāmbe***. He was a vīraśaiva by caste and as he says that he wrote this work by the grace of God *Rāmēsvarā*

(Śiva) worshipped at *Kōḻūru*, there is reason to believe that he was a native of that place. He states that he completed this work in the month of Phālguṇa in the year Manmatha Śaka 1696 which corresponds to 1774 A.D.

Date of transcription :—Eleventh day of the bright fortnight in the month of Āśvayuja in the year Sarvadhāri, Śaka 1750 corresponding to 1828 A.D.

Beginning :

ವಾರ್ಧಕ ಷಟ್ಪದಿ :—

ಶ್ರೀಗುರುವಿನಮಳ ಕೋಮಲವಾದ ಪಂಕಜವ ।
ರಾಗ ಷಟ್ಚರಣ ಶಂಕರನಾಮಧೇಯ ಮನೋ ।
ರಾಗದಿಂ ಶಿವನೊಲವ ಪಡೆದ ವರಸತ್ಕಥೆಯ ಬಿತ್ತರಿಸು ಚಿತ್ಕಾಂತನೆ ॥
ಶ್ರೀಕು ... ಲರಾಣಿ ಪಲ್ಲವಪಾಣಿ ಮೃದುವಾಣಿ ।
ರಾಕೇಂದು ವಕ್ತ್ರ ರಮಣೀಯ ಕಾನಕ ಗಾತ್ರ ।
ಶ್ರೀಕರ ಶ್ರೋತ್ರ ಸುಸ್ಥಿರದ ಸಾಪಿತ್ರ ಸುಚರಿತೆ ಕೇಳ್ಕತ್ಕಳತ್ರ ॥
ಆಕಾಶ ಮಧ್ಯೆ ಮನ್ಮಥ ಕಳಾಬೋಧ್ಯೆ ಮಳ ।
ಶೋಕ ಮಿಥುನಾಪೀನ ಪೀವರ ಸ್ತನಯುಗಳೆ ॥
ಸಾಕಾರರತಿ ಸರಸವತಿ ಸಕಲಗುಣಯುತೆ ಸನ್ಮಾನೆ ದಾನಿಜ್ಞಾನಿ ॥ ೧ ॥

*   *   *   *

ಎನ್ನಹೃತ್ಸರಸಿ ಗೊಪ್ಪುವ ರಾಜಹಂಸೆ ಕೇಳ್ ।
ಹುಣ್ಣಿಮೆಯ ಸಂಪೂರ್ಣ ಜೊನ್ನೊಡಲ ಸುದಿಸೆಸಂ ।
ಪನ್ನತೆಯೊಳಂ ಕ್ಷೀರ ಶರಧಿ ಪೆರ್ಚಿರೆಪೆರ್ಚಿಯುಕ್ಕಿ ಸಂತೋಷಿಪವೊಲು ॥
ಇನ್ನು ಮದ್ವಚನದಿಂದುದಿಸುವ ಕಳಾನಿಧಿಯು ।
ನಿನ್ನ ಹೃದಯಾಂಬೋಧಿ ಪೊಂಗಿ ವರ್ಧಿಸುವಂತೆ ।
ಚೆನ್ನಾಗಿ ಪಳ್ವೇ ‘ನವಮೋಹನ ತರಂಗಿಣಿಯು’ ಎಂದೆಂಬಸತ್ಕಥೆಯನು ॥ ೨ ॥
ಯುವತಿ ಈ ಸತ್ಕಥಾಮೃತವ ಪೇಳ್ವರೆ ಮೊದಲೆ ।
ಶಿವನ ಶಿವಲಿಂಗನೆಯ ಶಿವಪುತ್ರ ಶಿವಪ್ರಮಥ ।
ಶಿವ ಮಹೇಶ್ವರರ ಶಿವಭಕ್ತ ಶಿವಕವಿಗಳನು ಶಿವ ಎಂದು ಸ್ಮರಿಸುತಿಹರ ॥
ಅವರ ಶ್ರೀಪಾದ ಪದ್ಮಂಗಳನು ಬಲಗೊಂಡು ।
ಅವರ ಸತ್ಕೃಪೆವೆತ್ತು ಯೆನಗೆ ವಾಗ್ವೋಳವೊಂ ।
ದಿನವಾತ್ರಸೋಂಕದೊಲುವಾರ್ಧಕ(ದ) ಷಟ್ಪದದೆಪೇಳ್ವೆ ಕೇಳ್ಪಂಕಜಾಕ್ಷಿ ॥ ೪ ॥

*   *   *   *

ಧರೆಯೊಳಗೆ ಯಧಿಕರೆನಿಸುತ್ತ ಪೇಳ್ವರ ಕವಿತೆ ।
ಸರಿಬಾರದೋ ನಿಮಗೆ ಏನೇನ ನರಿಯದಿಹ ।
ನೆರೆಮೂರ್ಖರುಸುರ್ವ ತೊದಲ್ನುಡಿಗಿಂಪಡೆನಿತು ನಾವರಿಯುವಯ್ ನಿಮ್ಮನೆಲೆಯ ॥
ಬರೆದೋದಿದವನಲ್ಲ ಕನಕದಾಸನವೊಡನೆ । (?)
ಹರಿಮುನ್ನಪೇಳಿಸಿದ ನಾನು ದೊಳಕ್ಕರವ ।
ನರಿಯೆ ನೆನ್ನಿಂದೆ ಪೇಳಿಸುವ ಹರಿಹರರ ಮಹಿಮೆಯನುಯಾರ್ಬಲ್ಲರ ಭವ ॥ ೬ ॥
ಓದಿದವನಲ್ಲ ಕವಿತಾದಲಕ್ಷಣಮನೀ ।
ಮೇದಿನಿಯ ಜನರು ಬಲ್ಲರು ಎನ್ನ ಸ್ಥಿತಿಗತಿಯ ।

ಮಹಾದೇವರಾಜ್ಞಾನೀ ನೊಲಿದುದೇ ದಿಟವಹಾಗೆ ಪ್ರೌಢರಂ ಮೆಚ್ಚುವಂತೆ ।
ನೀವಯಾವಿಪೇಳಿಸಿದೊಡೊಳ್ಳಿತಯ್ಯಲ್ಲದೊಡೆ ।
ಯಾವ ಕೊರತೆಯು ನಿಮ್ಮದಲ್ಲದೆಯೆ ಎನಗಿಲ್ಲ ।
ಪೀಠರೆಯೊಳಧಿಕ ಶ್ರೀ ಕೋಳೂರುವಾಸ ಶ್ರೀ ರಾಮೇಶನಾ ಸಾರಿದೆ ॥ ೧೦ ॥

* * * *

ಬಲಗೊಂಬೆನಂದಿ ಭೃಂಗಿಯು ವೀರಸ್ಕಂಧರಾ ।
ಕುಳರುದ್ರ ಪ್ರಮಥೇಂದ್ರರಮಳ ಪದಪದ್ಮಗಳ ।
ಬಳಿಕವರ ಸತ್ಸಂಪ್ರದಾಯವಿಡಿದಿಳೆಯೊಳು ಪ್ರವರ್ತಿಸುವ ಗುರುಚರರ್ಗಳ ।
ಸಲೆಸಕಲ ಜನರ ಪಾವನಮಾಳ್ಪ ಕೃತ್ಯಮಂ ।
ತಳೆದ ರೇವಣ ಮರುಳು ಸಿದ್ಧರಾಮಾಚಾರ್ಯ ॥
ರಲಘು ಶ್ರೀಪಂಡಿತಾರಾಧ್ಯಾದಿ ವೀರಶೈವಾಚಾರ್ಯರುಗಳ ಪಡೆದೆ ॥ ೧೩ ॥
ನಿರ್ಮಾಯ ನಿತ್ಯನಿರ್ವಾಣ ಶ್ರೀ ಪ್ರಭುರಾಯ ।
ಧರ್ಮ ಸ್ವರೂಪ ಸಂಗನ ಬಸವ ರಾಜಯ್ಯ ।
ಕರ್ಮ ವರ್ಜಿಸಿದ ಷ[ಡು]ಸ್ಥಲ ಬ್ರಹ್ಮಸಾಚಿಕ್ಕ ಚೆನ್ನಬಸವಾ ಚಾರ್ಯರ ॥
ಮರ್ಮಜ್ಞ ಮಡಿವಾಳ ಮಾಚರಸ ಕಿನ್ನರನ ।
ನಿರ್ಮೋಹಿ ಕಲಕಿ (?) ಖ್ಯಾತ ಬ್ರಹ್ಮಯ್ಯ ಮೊದಲಾದ
ನಿರ್ಮಲಾತ್ಮಕ ಪರಮ ಶಿವಶರಣರಡಿಗೆ ಎನ್ನೆದೆಯ ಪಾದುಕೆಗೈವೆನು ॥ ೧೪ ॥
ಬಾಣ ಮಯೂರನಾ ಕಾಳಿದಾಸನನು ಸು ।
ಜ್ಞಾನಿ ಮಾಗ್ಗೆಯ ಮಾಯಿದೇವರಸ ಹಂಪೆಯಪ್ಪ ।
ವೀಣ ಹರಿಹರನು ರಾಘವನು ಚಾಮರಸ ಲಕ್ಕ[ಣ] ಣ್ಣ ಮಾತ್ಯರ ॥
ಮಾಣದೆ ಚತುರ್ವೇದ ಸಾರವಂ ಗೈದ [ಸೂ](ನು) ।
ಜಾಣ ಪಾಲ್ಕುರಿಕೆ ಸೋಮಾರಾಧ್ಯ ಮೊದಲಾದ ।
ಪೆಣಾಂಕಧರನ ಸತ್ಕವಿಗಳನು ಬಲಗೊಂಡು ಯೀಪ್ರಬಂಧವನುಸಿರ್ವೆನು ॥ ೧೫ ॥
ಕವಿಕಾವ್ಯಲಕ್ಷಣಂ ಶಬ್ದಭೇದವನೆಣಿಸಿ ।
ಸವಿಗಳೆಯಬೇಡಿ ಶಿವನುಡಿಸಿಪಂದದಿ ಪೇಳ್ವೆ ।
ತವೆಸ್ವಾತಿ ಜಲಪಿಂದೊಗೆದ ಮುತ್ತಿಂಗೆತಿಗ ಮೊಗವಾತ್ರ ದೆಂದೆಣಿಪರೆ ॥
ಅವಪರೀಕ್ಷಿಸಿ ರಂಧ್ರಗೈದು ಸರಗೊಳಸುತ್ತ ।
ಲವನುಚೆಲೆ ಪದಿಕರೆ ನೆರೆಜಾಣರಾದ ಸ ।
ತ್ಕವಿಗಳುಂ ನಿಮ್ಮಬಾಲಕನ ತೊದಲ್ನುಡಿತಪ್ಪಿತಿದ್ದಿ ಪಸಗೊಳಪುದೊಲಿದು ॥ ೧೬ ॥
ಈ ಪ್ರಬಂಧವನಾವ ದೇವನಡೆಸುವ ನೊಲಿದು ।
ಸುಪ್ರೇಮದಿಂದ ಲಾಲಿಪರಾರು ಪೇಳುವ ಕ ।
ವಿಪ್ರವರ ನಾರೆನಲು ಭೂದೇವಿಯುರದ ಪೊಂಗರದಿ (೦) ಗೆ ಎಂದೆನಿಸುತ್ತ ।
ಸುಪ್ರಸಿದ್ಧದಿಮೆರೆವ ಕೋಳೂರರಾಮೇಶ ।
ನ ಪ್ರತಿಮ ನುಡಿಸುತಿಹ ಚಿತ್ಕಾಂತೆ ಲಾಲಿಪಳು ।
ಕ್ಷಿಪ್ರಕುಪ್ಪಸ ಕಂಥೆ ಗುರುವಾರ್ಯ ಪದಪದ್ಮಲೆಂಕ ಶಂಕರ ನುಸಿದ್ದನು ॥ ೧೭ ॥
ಇದುವೆ ಬಾಣಾಖ್ಯ ಸಾಯುಜ್ಯಪ್ರಬಂಧವು ।
ತ್ರಿದುವೆ ನವಮೋಹನ ತರಂಗಿಣಿ ಯಭಿದಾನ ।

ಇದನು ಶ್ರೀ ಕೋಳೂರ ರಾಮೇಶ ನುಡಿಸಿದೊಡೆವೇಳ್ದ ಶಂಕರನು ಪ್ರೊಲಿದು ।
ಇದನು ಸರಸೋಕ್ತಿಯಿಂ ಬರೆದೋದಿ ಬೇಳ್ಕೇಳ್ವ ।
ಸದುಹೃದಯರಾದ ಸತ್ಪುರುಷರಿಗೆ ಸಂತಸದಿ ।
ಕುಧರ ಜಾರ್ಧಾಂಗ ಸೌಭಾಗ್ಯ ಸಂಪದ ಸೌಖ್ಯವಿತ್ತು ರಕ್ಷಿಸುವ ಬಿಡದೆ ॥ ೧೯ ॥

Colophon :—

ಅಂತು ಸಂಧಿ ೧ಕ್ಕಂ ಪದನು ೧೯ ಕ್ಕಂ ಮಂಗಳ ಮಹಾಶ್ರೀ.

ಸೂಚನೆ ॥ ಶಿವನ ನರ್ಚಿಸುತ ಶಿವನೊಲಿಸಿ ಕೃಪೆವಡೆದ ।
ಯುವಿರಳಾತ್ಮಕರ ಚಾರಿತ್ರಾಮೃತವನೆನ್ನ ।
ಕಿವಿಗೆ ರತ್ನಾಭರಣ ಮಮರ್ದು ಶೋಭಿಸುವಂತೆ ಬಿತ್ತರಿಸು ಚಿತ್ಕಾಂತನೆ ॥

End :—

ಇಂತು ಬಾಷಾಖ್ಯ ಪದಗಳ ನೊಲಿದು ಸುಖಿ ಸುತ್ತ ।
ಲಂತಿರ್ಪ ಸತ್ಕಥಾ ಸಲ್ಲಾಪ ಸಾರಗಳ ।
ನಾದ್ಯಂತ ದನುವಾಗಿ ನವರಸಾಲಂಕೃತದಿ ಪೇಳ್ದ ಕವಿತಾ ಸುಧೆಯನು ॥
ಸಂಶಸದಿ ಸವಿಸವಿದು (ನಿ) [ತ್ಪ]ನ್ಮನೋಕಳಹಂಸ ।
ವಿಂತುಡೆರನೆಡೆಗಿ ಸಮ್ಮುದಿತವಾಯಿತೆ । (?)
ಕಂತುಹರ ಕೋಳೂರ ರಾಮೇಶ್ವರನ ಭರವ ಹಾರೈಸು ಕಂಬುಕಂಠ ॥ ೪೫ ॥
ಮತ್ಕಾಂತ ನೀನೊಲಿದು ಹೃತ್ಸರಸಿಹಂಸನಿಗೆ ।
ಸತ್ಕಥಾಮೃತ ಉಣಿಸಿ ಉತ್ಪ್ರೇಕ್ಷನನು ಮಾಳ್ಪಿಂ . (?)
ಮತ್ತನ್ನ ಸೌಭಾಗ್ಯ ಕೆಷ್ಟುಜನ್ಮದ ಗೌರಿನೋಂತ ಫಲದಿಂದಲಿಂಥ ॥
ಸತ್ಪುರುಷ ಕವಿಸರಸನುತ್ಪನ್ನ ಕಲೆಗಾರ ।
ಚಿತ್ತೇಪ್ಸನಂ ಪಡೆದೆ ಸುಚರಿತ ಚಾರಿತ್ರ ।
ಸತ್ಪಂಡಿತಾಖ್ಯ ರೊಳಗುತ್ಕೃಷ್ಟ ಕವಿತೆಯನು ಪೇಳ್ವಿಂ ರಾಮೇಶವೊಲವಿಂ ॥ ೪೬ ॥

ಪರಮ ಬಾಷಾಖ್ಯ ಸಾಯುಜ್ಯ ಪ್ರಬಂಧ ಬಂ ।
ಧುರಶಾಲಿವಾಹಶಕ ಸಾವಿರದ ಆಱುನೂ ।
ರರವೋಲೆ ತೊಂಭತ್ತರಾರನೆಯ ಸ್ಮರಸಂವತ್ಸರದ ಫಾಲ್ಗುಣ ಶುದ್ಧದಿ ॥
ಮೆರೆವ ತದಿಗೆಯಲಿ ರೇವತಿಯ ನಕ್ಷತ್ರದೊಳು ।
ಪರಿಪೂರ್ಣಮಾದುದಿದ ಲಾಲಿಸಿದ ಬುಧಜನರು ।
ಜರಿಯದೆಯೆ ತಮ್ಮ ಬಾಲಕರ ತೊದಲ್ನುಡಿಯೆಂದೆ ತಿದ್ದಿ ಪಸಗೊಳ್ಪುದೊಲಿದು ॥ ೪೭ ॥

ವಸುಧೆಯೊಳು ಹೊನ್ನ ಕೋಳೂರ ರಾಮೇಶ್ವರನ ।
ಬೆಸನಮುಮನಿಂತು ಯತಿಪುಣ್ಯದಂಪತಿಗಳಹ ।
ಬಸವರಸ ನಾಗಾಂಬೆಯರ ಗರ್ಭಸುಕ್ಷೀರ ವಾರ್ಧಿವರ್ಧಿಸುವ ಪೂರ್ಣ ॥
ಶಶಧರನು ಯೆನಿಪ ಶಂಕರ ನುಸುರ್ದನೀ [ನವ] (ಪೊಸತು) ।
ಬೆಸರಾಂತ ಮೋಹನ ತರಂಗಿಣೀ ಸತ್ಕಾವ್ಯ ।
ರಸಿಕರಾದವರು ಕುಂದೊಂದಿರಲು ತಿದ್ದಿ ಭೂತಳದೊಳ್ಗಂ ಮೆರೆಸದಿಹರೆ ॥ ೪೮ ॥

ಪಿತಮಾತೆಯರನುಳ್ಳದ ಪರಪುಟ್ಟನಂ ನೋಡಿ ।
ಯತಿದಯಾನ್ವಿತರು ಇನಿತಿನಿತು ಯನ್ನಮನೀಯ ।

ಓತಿಕರುದಿಳ್ದುಂಡು ವರ್ಧಿಸಿ ಪ್ರಬುದ್ಧನು ಎನಿಸಿ ಮೆರೆಯುತೆ ಭೂತಳದೊಳು ॥
ಅತಿಪುಣ್ಯ ಸುಸುರ್ದ ಕಾವ್ಯದಿ ಕುಂದುತೋರಿದೊಡೆ ।
ಪತಿಕರಿಸಿ ಬಲ್ಲವರು ತಿದ್ದಿ ಪಸಗೊಳಸಿದೊಡೆ ।
ಕ್ಷಿತಿ ತಳದೊಳದು ಪ್ರಸಿದ್ಧದಿ ಮೆಱೆಯುತಿಹುದೆ ಮಿಂಚಿಟ್ಟ ಮಾಣಿಕ್ಯದಂತೆ ॥ ೪೯ ॥
ಜಯಜಯತು ಪರಮ ಸದ್ಭಕ್ತರಿಗೆ ಯುಕ್ತರಿಗೆ ।
ಜಯಜಯತು ನಿರುಪಮ ಮಹೇಶ ನಿರ್ದೋಷರಿಗೆ ।
ಜಯತು ನಿಷ್ಕಾಮ ವಿರಕ್ತರಿಗೆ ಮುಕ್ತರಿಗೆ ಜಯತು ಸತ್ಯವಿನಿಕರಕೆ ॥
ಜಯಜಯತು ನಂದೀಶ ಮುಖ್ಯ ಪ್ರಮಥೇಂದ್ರರಿಗೆ ।
ಜಯಜಯತು ಜಗದೀಶ ದೇವದೇವೇಶ್ವರಗೆ ।
ಜಯತು ಶ್ರೀಕೋಳೂರ ಪುರವರಾಧೀಶ ರಾಮೇಶ್ವರನ ಭಜಿಸುವರ್ಗೆ ॥ ೫೦ ॥
ಉಷೆಯ ಕಲ್ಯಾಣ ಕಥೆಯೇಳದನು ಯೆಂದೆನ್ನ ।
ಪುಸಿಕ ನೆನೆದಿರುಗೆ ಶಂಕರ ಸಂಹಿತೆ ಭಾಗವತ ।
ಮುಸುರ್ವ ಇತಿಹಾಸ ಬೆಂಬಳವಿಡಿದು ನಿನ್ನೊಡನೆ ವಚಿಸಿದೆನು ಇನಿದುಜಿಯುಳ ॥
ಶಶಿಧರನ ಸುಪ್ರಸಾದ ಸುವಾಕ್ಯಮಂ ಪೇಳ್ದ ।
ಅಸಮ ಸತ್ಕಥೆಯಮೃತ ಮೆಂದು ನಾಂ ಭಾವಿಪೆನೆ ।
ರಸಿಕ ಮತ್ಕಾಂತ ನಾವೇಂಧನ್ಯಳೋ ಬಿಡದೆ ಲಾಲಿಸುತ ತೃಪ್ತಳಾದೆ ॥ ೫೧ ॥
ಬಾಹಾಖ್ಯ ಸಾಯುಜ್ಯ ವೀಕಾವ್ಯ ಮಹಿಮೆಯಿಂ ।
ಕ್ಷೋಣಿಗೆಯು (?) ಮಾಸಕ್ಕೆ ಮೂರುಮರುಮಂಗರಿಗೆ ।
ಮಾಣದೆಯೆ ಯುಲ್ಲಧಾನ್ಯಂಬೆಳಗೆ ಸಕಲ ಪ್ರಜೆಸುಖದಿಂದೆ ಸಲೆಬಾಳುಗೆ ॥
ಧೇನು ಜಯುಗ್ರಾಸಗೊಂಡತಿ ಪುಷ್ಟಿಯಿಂ ಕರಿಗೆ ।
ಕಾನನದ ಕಗೆರಡಗಳು ಬೆಗುರ್ದುಭಜಿರ್ಪರಲಿ । (?)
ಸಾನುರಾಗದಿ ದೇವಬ್ರಹ್ಮಗರುಚರ ಶಿವಾರ್ಚಕರು ಅತಿತುಷ್ಟರಕ್ಕೆ ॥ ೫೨ ॥
ಗೋತ್ರೇಶ ವರಲಿಂಗ ನೇತ್ರಕರನದಿ ಭೂಷ ।
ಧಾತ್ರಿಧ್ರ ಧನುತಾರ್ಷ್ಯಂ ಮಾತ್ರನುತ ನಾಳೀಕ ।
ಪುತ್ರಸಖ ಶಕಲಕರಪಾತ್ರ ದೃಗ್ರಾಜಿತ ಸುಗಾತ್ರಾಂಗ ಜಾತಪರದ ॥
ಗೋತ್ರಧರನಮಳಸನ್ಮಿತ್ರ ಪಾವನಗಾತ್ರ ।
ರಾತ್ರೀಶರಸ ನಿರಸಗಾತ್ರ ಲೋಕಸುನೇತ್ರ ।
ಗೋತ್ರಿತ್ರಯ ಯಮಿಜನ ಸ್ತೋತ್ರ ಪಾತ್ರಪವಿತ್ರ ರಾಮೇಶಜಯತುಜಯತು ॥ ೫೩ ॥
ಇದುವೆ ಬಾಹಾಖ್ಯ ಸಾಯುಜ್ಯಪ್ರಬಂಧಮ ।
ತ್ರಿದುವೆ * * * * * ರಕ್ಷಿಸುವಬಿಡದೆ ॥

ಅಂತು ಸಂಧಿ ೩೩ ಕ್ಕಂ ಪದನು ೨೦೧೧ ಕ್ಕಂ ಮಂಗಳಮಹಾಶ್ರೀ.—

Colophon :—

(ಎ.-ಎ.)—

ಸಮಗ್ರ. ಶಿಥಿಲವಾದ ಪ್ರತಿ. ಶ್ರೀತಾಳೆಯಲ್ಲಿ ಬರೆದಿದೆ. ಲಿಪಿ ಚೆನ್ನಾಗಿದೆ. ಪುಸ್ತಕಾಂತ್ಯದಲ್ಲಿ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ [ಸಾವಿರದ] ೧೭೩೦ ನೆಯ ಸ ವರ್ಧಾರಿನಾಮ ಸಂವತ್ಸರದ, ಆಶ್ವಯುಜ ಶು॥ ೧೧ ಭಾನುವಾರ ' ಎಂದಿದೆ. ಬಳಿಕ ಎರಡು ಪದ್ಯಗಳು ಬರೆದಿವೆ. ಅವು ' ಪರಮ

ಬಾಣಾಖ್ಯ ಸಾಯುಜ್ಯಪ್ರಬಂಧ ಬಂ। ಧುರ ಶಾಲಿವಾಹಶ * * * * ’ ಎಂಬ ಪದ್ಯಕ್ಕೆ ಮೊದಲಿರ ಬೇಕಾದುವು. ತಪ್ಪಿಹೋಗಿ ಕೊನೆಯಲ್ಲಿ ಶಾಯಿಯಿಂದ ಬರೆದಿವೆ. ಅವನ್ನು ಈ ಮೇಲೆ ಕಾಣಿಸಿದ ಕೊನೆಯ ಭಾಗದಲ್ಲಿ ಯಥಾಸ್ಥಾನದಲ್ಲಿ ಸೇರಿಸಿದೆ.

ಇದು ವಾರ್ಧಕ ಷಟ್ಪದಿಯಲ್ಲಿ ಬರೆದಿದೆ. ಸಂಧಿ ೩೩. ಪದ್ಯಗಳು ೨೦೧೧. ಇದರಲ್ಲಿ ಮನ್ಮಥ ದಹನ, ಕಾಮೋತ್ಪತ್ತಿ, ಶಂಬರಾಸುರನವಧೆ, ಅನಿರುದ್ಧವೃತ್ತಾಂತ, ಬಾಣಾಸುರನ ಕಥೆ ಮುಂತಾದ ವಿಷಯಗಳು ಉಕ್ತನಾಗಿವೆ. ಕವಿ ತನ್ನ ಹೆಂಡತಿಯ ಕೋರಿಕೆಯಂತೆ ಈ ಕಥೆಯನ್ನವಳಿಗೆ ಹೇಳಲು ತೊಡಗಿ ಗುರು, ಮೃಡ, ಕೋಳೂರ ರಾಮೇಶ ಮೃಡಾನಿ, ಗಣೇಶ, ನಂದಿ, ಭೃಂಗಿ, ವೀರಭದ್ರ, ಸ್ಕಂಥ ಇವರನ್ನು ಸ್ತುತಿಸಿದ್ದಾನೆ. ಬಳಿಕ ರೇವಣಾಚಾರ್ಯನಿಂದ ಬ್ರಹ್ಮಯ್ಯನವರೆಗೆ ಪುರಾತನರನ್ನೂ, ಬಾಣಮಯೂರ ಮೊದಲಾದ ಪೂರ್ವ ಕವಿಗಳನ್ನೂ ಸ್ಮರಿಸಿದ್ದಾನೆ. (ಇವರೆಲ್ಲರನ್ನು ಉದಾಹೃತ ಭಾಗದಲ್ಲಿ ನೋಡಿ ತಿಳಿಯುವುದು.)

ಇದರಲ್ಲಿ ವ್ಯಾಕರಣಕ್ಕೆ ವಿರುದ್ಧ ಪ್ರಯೋಗಗಳು ಅಲ್ಲಲ್ಲಿವೆ. ವರ್ಣನೆಗಳು ಹೃದಯಂಗಮವಾಗಿವೆ. ಈ ಗ್ರಂಥವನ್ನು ಶಾಲಿವಾಹನ ಶಕ ೧೬೯೬ ನೆಯ (ಕ್ರಿ. ಶ. 1774) ಸ್ಮರ ಸಂವತ್ಸರದ ಫಾಲ್ಗುಣ ಮಾಸದಲ್ಲಿ ರಚಿಸಿದಂತೆ ಕವಿ ಹೇಳುತ್ತಾನೆ. ಮತ್ತು ಇದನ್ನು ಕೋಳೂರು ರಾಮೇಶ್ವರನ ಅನುಗ್ರಹದಿಂದ ಬರೆದಂತೆ ಹೇಳುವುದರಿಂದ ಕವಿಯ ಸ್ಥಳವು ಕೋಳೂರಾಗಿರಬಹುದೆಂದು ಹೇಳಲವಕಾಶವಿದೆ. ‘ಮೋಹನ ತರಂಗಿಣಿ’ಯೆಂದು ಕನಕದಾಸನು ಸಾಂಗತ್ಯದಲ್ಲಿ ಬರೆದಿರುವ ಕತೆಯನ್ನೇ ತಾನೂ ಬರೆದಿರುವನಾದುದರಿಂದ ಇದಕ್ಕೆ ನವಮೋಹನ ತರಂಗಿಣಿ ’ ಎಂದು ಹೆಸರಿಟ್ಟಂತೆ ತೋರುತ್ತದೆ.

ಕವಿ ತನ್ನ ಹೆಸರನ್ನು ಶಂಕರನೆಂದು ಹೇಳಿದ್ದಾನೆ. ಇವನ ತಾಯ್ತಂದೆಗಳು ನಾಗಾಂಬೆ ಮತ್ತು ಬಸವರಸರೆಂಬುವರು. ಇವನು ವೀರ ಶೈವ ಮತದವನೆಂದು ಹೇಳಬಹುದು. ಕವಿ ಚಿಕ್ಕಂದಿನಲ್ಲಿಯೆ ತಾನು ತಾಯ್ತಂದೆಗಳನ್ನು ಕಳೆದುಕೊಂಡು ಇತರರಿಂದ ವಿಳ್ಗವಡೆದಿರಬಹುದೆಂದು, ಈ ಗ್ರಂಥದ ಕೊನೆಯ ಸಂಧಿಯ ೪೯ ನೆಯ ಪದ್ಯದಿಂದ ಊಹಿಸ ಬಹುದಾಗಿದೆ. ಕನಕದಾಸನ ಹಾಗೆಯೆ ತಾನು ಬರೆದೋದಿದವನಲ್ಲ. ಆದರೂ ಅವನಿಗೆ ಹರಿಯು ಹೇಗೆ ದಯೆಗೆಯ್ದನೊ ಹಾಗೆಯೆ ತನಗೆ ಹರನು ದಯೆಗೆಯ್ದು ಹೇಳಿಸುವನು ಎಂದು ಹೇಳಿರುವುದರಿಂದ ಇವನು ಕನಕದಾಸನಿಗಿಂತಲೂ ಈಚಿನವನು ಅಥವಾ ಅವನ ಸಮಕಾಲಿಕನು ಎಂದು ಹೇಳ ಬಹುದು. ಇವನು ಇನ್ನಾವ ಗ್ರಂಥವನ್ನು ಬರೆದಂತೆಯೂ ಈ ಗ್ರಂಥದಿಂದ ತಿಳಿದು ಬರುವುದಿಲ್ಲ. ಆದರೆ ಈ ಹೆಸರಿನ ಕವಿಯೊಬ್ಬನು ಶಾಲಿವಾಹನ ಶ॥ ೧೬೮೫ (ಕ್ರಿ. ಶ. ೧೭೬೩) ನೆಯ ಸ್ವಭಾನು ಸಂವತ್ಸರದಲ್ಲಿ ಚೋರಬಸವನ ಚರಿತ್ರೆಯನ್ನು ವಾರ್ಧಕ ಷಟ್ಪದಿಯಲ್ಲಿ ಕೋಳೂರ ರಾಮೇಶ್ವರನ ಅನುಗ್ರಹದಿಂದ ಬರೆದಂತೆ ಕವಿಚರಿತ್ರೆ (ಸಂಪುಟ ೩, ಪುಟ ೧೧೫) ಯಲ್ಲಿ ಹೇಳಿದೆ. ಅವನೂ ಇವನೂ ಒಬ್ಬನೇ ಆಗಿರಬೇಕೆಂದು ಊಹಿಸಲೆಡೆ ಇದೆ ಈ ಕೆಳಗಿನ ಸಾಮ್ಯಗಳಿಂದ. ಕವಿಗಳಿಬ್ಬರ ಹೆಸರಿನ ಅಭಿನ್ನತೆ, ಕೋಳೂರು ರಾಮೇಶ್ವರ ದೇವರಸ್ತುತಿ, ಎರಡು ಗ್ರಂಥಗಳಲ್ಲಿಯೂ ಇರುವ ವೃತ್ತ ಸಾಮ್ಯ, ಪೂರ್ವಕವಿ ಸ್ತುತಿ, ವರ್ಣನಾ ಸಾಜಾತ್ಯ, ಗ್ರಂಥ ನಿರ್ಮಾಣಕಾಲಗಳ ಅನ್ಯೋನ್ಯ ಸಾಮೀಪ್ಯ ಮುಂತಾದುವುಗಳು.

ಈ ತರ್ಕದ ಮೇಲೆ ಒಬ್ಬನೇ ಶಂಕರ ಕವಿಯು ಮೊದಲು ಕ್ರಿ. ಶ. ೧೭೬೩ ರಲ್ಲಿ ಚೋರ ಬಸವ ಚರಿತ್ರೆಯನ್ನು ಬರೆದು ಹನ್ನೊಂದು ವರ್ಷಗಳ ಅನಂತರ ಕ್ರಿ.ಶ. ೧೭೭೪ ರಲ್ಲಿ ಈ ಗ್ರಂಥವನ್ನು ರಚಿಸಿರಬೇಕೆಂದು ನಮ್ಮ ಅಭಿಪ್ರಾಯವು. ಈ ಗ್ರಂಥವು ಕವಿ ಚರಿತ್ರೆಯಲ್ಲಿ ವರ್ಣಿತವಾಗಿಲ್ಲ.

No. 975. ನಳಚರಿತ್ರ by ಕನಕದಾಸ.

NAḶACARITRE, BY KANAKADĀSA.

Substance, paper. Size, 12¼ × 7½ inches. Pages, 85. Lines, 21 on a page. Extent, 1,400 granthas. Character, Kannaḍa. Condition, good. Appearance, old. Mode of writing, good.

Begins on page 58. The other work herein is:—(1) Sāraṅgadharacarita (Yakṣagāna).

Complete in 9 Sandhis.

Written in Bhāminiṣaṭpadi metre. This work narrates the story of King Nala, described in Mahā Bhārata.

No mention is made in this regarding the author. But in the beginning of the work *Cennigarāya* (Srikrishna) the favourite God of Kanakadāsa, is praised; from this it is presumed that Kanakadāsa is the author. His date is about 1550 A.D.

Beginning:

ಭಾ. ಷಟ್ಪದಿ ॥

ಶ್ರೀರಮಣ ಸರಸಿಜದಳಾಕ್ಷ ಮು ।
ರಾರಿ ಸಚರಾಚರ ಭರಿತ ದುರಿ।
ತಾರಿ ನಿತ್ಯಾನಂದ ನಿರ್ಜಿತ ನಿಕರದಾತಾರ ॥
ಪಾರಿಜಾಂಬಕ ವರಗುಣ ತ್ರಯ ।
ಮಾರಪಿತ ವೇದಾಂತ ನುತ ಪರ ।
ತೂರ ಚೆನ್ನಿಗ ರಾಯ ಪಾಲಿಸು ಯೆನಗೆ ಸತ್ಕೃಪೆಯ ॥

*　　*　　*　　*

ರಾಯರೊಳಗಗ್ಗಳೆಯ ನಾ ಕಾಂ ।
ತೇಯನಿಗೆ ರೋಮಶ ಮಹಾಮುನಿ ।
ರಾಯ ವಿಸ್ತರಿಸಿದನು ನಳ ಭೂವರನ ಚರಿತೆಯನು ॥
ಶ್ರೀ ಯರಸ ವರಪುರದ ಚೆನ್ನಿಗ ।
ರಾಯನಂಕಿತವಾಗಿ ಪೇಳುವೆ ।
ಪ್ರಿಯದಿಂದಾಲಿಸುಗೆ ಜನರಿಂದೀ ಮಹಾ ಕಥೆಯ ॥ ೬ ॥

*　　*　　*　　*

ಬಂದು ಸತಿಯರು ಕೊಳನ ತೀರದಿ ।
ನಿಂದು ರತ್ನಾಭರಣ ಭೂಷಿತ ।
ದಿಂದ ಶಶಿಕಾಂತೋಪಲದಿ ಕುಳ್ಳಿರಿಸಿ[ದರು] ಶಶಿಮುಖಿಯ ॥
ಅಂದು ವಿರಹವ್ಯಥೆಯ[ನದ]ನಾನಾ ।
ಛಂದದಲಿ ಶೈತ್ಯೋಪ ಚಾರ ಗ ।
ಳಿಂದ ಸಂತೈಸಿದರು ವರಪುರದರಸ ನಾಜ್ಞೆಯಲಿ ॥ ೪೪ ॥

ಪ್ರಥಮ ಸಂಧಿ ಸಮಾಪ್ತಂ.

Colophon :

ಸೂಚನೆ.— ಹಲವು ನಯನೀತಿಯಲಿ ಹಂಸಿಯ ।
ಕಳುಹಲಂದಿನ ರಾಜ ಭವನದಿ ।
ನಳನೃಪಗೆ ಸತಿಯಾದಳಾ ದಮಯಂತಿ ಮನವೊಲಿದು ॥

End :

ಹರನು ನಿಮಗೆ ಸಹಾಯ ದೇವಾ
ಸುರರು ನಿಮಗೊಲ್ಲಿದರು ಲಕ್ಷ್ಮೀ ।
ವರನು ನಿನಗಿನ್ನಂತರಂಗದ ಪರಮ ಸಖನಿರಲು ॥
ಮರುಗ ಲೇಕಿನ್ನಾವು ದರಿದೆಲೆ ।
ಧರಣಿಪತಿ ನಾಕಿನ್ನು ರಾಜ್ಯದ ।
ಸಿರಿನಿಮಗೆ ಬಂದಿಹುದು ರಿಪುಸಂಹಾರವಹುದೆಂದ ॥ ೬೪ ॥

ಎಂದು ಬೋಧೆಯ ವೇಳ ಮುನಿ ಯಮ ।
ನಂದನನು ಬೀಳ್ಕೊಂಡು ತಾಪಸ ।
ವೃಂದ ಸಹಿತಲ್ಲಿಂದ ಹೊರವಂಟನು ನಿಜಾಶ್ರಮಕೆ ॥
ಅಂದು ಯಮಳರು ಧೌಮ್ಯ ದ್ರೌಪದಿ ।
ಸಂದ ಮುನಿಜನ ಸಹಿತ ಯಮಸುತ ।
ಬಂದು ಹೊಕ್ಕನು ಪರ್ಣಶಾಲೆಯನಧಿಕ ವಿಭವದಲಿ ॥ ೬೯ ॥

ಈ ಕಥೆಯ ನಾಲಿಸುವ ಜನರಿಗ ।
ನೇಕ ಸುಖಸಾಮ್ರಾಜ್ಯ ಪದವಿಯ ।
ನಾಕಮಲಲೋಚನನು ವರಪುರದರಸಮನ್ನಿಸುವ ॥
ಲೋಕಪಾವನ ನಳನ ಕಥೆಯನಿ ।
ರಾಕರಿಸಿದವರಧಿಕ ನರಕದ ।
ಲೋಕವಾಳುವರೆಂದು ರೋಮಜ ನುಡಿದ ನರಸಂಗೆ ॥ ೭೦ ॥

ಮೇದಿನಿಯೊಳೀ ಪುಣ್ಯಚರಿತೆಯ ।
ನಾದರಿಸಿ ಬರೆದೋದಿ ಕೇಳುವ ।
ಸಾಧು ಸಜ್ಜನರಾದವರಿ ಗಹುದಖಿಳ ಕೈವಲ್ಯ ॥
ವೇದ ಗೋಚರ ಕೃಷ್ಣವರಪುರ ।
ದಾದಿ ಕೇಶವ ನಮರ ವಂದಿತ ।
ನಾದಿ ನಾರಾಯಣನು ರಕ್ಷಿಪ ಸಕಲ ಸಜ್ಜನರ । ೭೧ ॥

Colophon :

ಅಂತು ಸಂಧಿ ೯ ಕ್ಕಂ ಪದನು ೪೯೩ ಕ್ಕಂ ಮಂಗಳ ಮಹಾ ಶ್ರೀ॥—

(ವಿ-ವಿ.)—

ಸಮಗ್ರ. ಕಾಗದದ ಪ್ರತಿ, ಚೆನ್ನಾಗಿದೆ. ಲಿಪಿ ಉತ್ತಮವು. ತಪ್ಪುಗಳಿವೆ. ಇದರೊಡನೆ ಸಾರಂಗಧರ ಚರಿತ್ರೆ (ಯಕ್ಷಗಾನ) ಯಿದೆ. ಇದು ಭಾಮಿನೀ ಷಟ್ಪದಿಯಲ್ಲಿ ಬರೆದಿದೆ. ಸಂಧಿ ೯. ಪದ್ಯಗಳು ೪೯೩. ಜೂಜಿನಲ್ಲಿ ಸೋತು ಧರ್ಮಜನು ಹೆಂಡತಿ, ತಮ್ಮಂದಿರು ಗುರು ಮುಂತಾದವರಿಂದ ಕೂಡಿದವನಾಗಿ

ಕಾವ್ಯಕವನಕ್ಕೆ ಬಂದಿರುವಾಗ ದುಃಖದಿಂದ ತನ್ನ ವೃತ್ತಾಂತವನ್ನು ರೋಮಶ ಮಾಹರ್ಷಿಗಳೊಡನೆ ಬಿನ್ನವಿಸಲು ಅವರು ಹಿಂದೆ ನಳ ಹರಿಶ್ಚಂದ್ರ ರಾಘವರಿಗೆ ಸಂಭವಿಸಿದ ಸಂಕಷ್ಟಗಳನ್ನು ವಿವರಿಸುವುದರ ಮೂಲಕ ಅವನನ್ನು ಸಂತವಿಸುವುದಕ್ಕಾಗಿ ಈ ಕಥೆಯನ್ನು ಹೇಳುವರು. ಗ್ರಂಥದಾದಿಯಲ್ಲಿ ಚೆನ್ನಿಗರಾಯನ ಸ್ತುತಿ ಇದೆ. ಬಳಿಕ ಗಣಪತಿ, ಶಾರದೆ ಇವರನ್ನು ಕವಿ ನುತಿಸಿದ್ದಾನೆ.

ಕವಿಯ ಸಂಬಂಧವಾಗಿ ಈ ಗ್ರಂಥದಲ್ಲಿ ಏನೂ ಹೇಳಿಲ್ಲ. ಗ್ರಂಥದಾದಿಯಲ್ಲಿ ಚೆನ್ನಿಗರಾಯನನ್ನು ಸ್ತುತಿಸಿರುವುದರಿಂದ ಕವಿ ಕನಕದಾಸನಾಗಿರಬಹುದೆಂದು ತೋರುತ್ತದೆ. ನಾಡಿನಲ್ಲಿಯೂ ಹೀಗೆಯೇ ಸುದ್ದಿ ಇದೆ. ಈತನ ಕಾಲವು ಕ್ರಿ. ಶ. ಸುಮಾರು ೧೫೫೦ ಎಂದು ಕವಿ ಚರಿತೆಯಲ್ಲಿ (ಸಂಪುಟ ೨. ಪುಟ ೨೩೭) ಬರೆದಿದೆ.

No. 976. ನಳಚರಿತ್ರೆ by ಕನಕದಾಸ.

NAḶACARITRE, BY KANAKADĀSA.

Substance, paper. Size, $11\frac{7}{8} \times 7\frac{1}{4}$ inches. Pages, 86. Lines, 20 to 22 on a page. Extent, 1,400 granthas. Character, Kannaḍa. Condition, slightly injured. Appearance, old. Mode of writing, good.

Begins on page 1. The other works herein are :—(1) *Sārangadhara- carite* (Yakṣagāna) 87. (2) Bijjaḷacarite (Sāngatya) 149.

Complete in 9 Sandhis.

Same work as that described above.

(ವಿ.ವಿ.)—

ಸಮಗ್ರ. ಕಾಗದದ ಪ್ರತಿ. ಸ್ವಲ್ಪಮಟ್ಟಿಗೆ ಶಿಥಿಲವಾಗಿದೆ. ಈ ಪುಸ್ತಕಾಂತ್ಯದಲ್ಲಿ Collated with the Original 13 July 1842' ಎಂದು ಸೀಸದ ಕಡ್ಡಿಯಿಂದ ಬರೆದಿದೆ. ಇದರೊಡನೆ ಸಾರಂಗಧರ ಚರಿತೆ (ಯಕ್ಷಗಾನ) ಬಿಜ್ಜಳರಾಯ ಚರಿತೆ (ಸಾಂಗತ್ಯ) ಗಳೂ ಇವೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 977. ನಳಚರಿತ್ರೆ by ಕನಕದಾಸ.

NAḶACARITRE BY KANAKADĀSA.

Substance, paper. Size, $9\frac{1}{4} \times 7\frac{1}{4}$ inches. Pages, 106. Lines, 18 on a page. Extent, 1,400 granthams. Character, Kannaḍa. Condition, much injured. Appearance, old. Mode of writing, fair.

Begins on page 1 of the manuscript described under No. 19 ante.

Complete in 9 Sandhis.

Name of the scribe :—*Ṇarasimha*, son of *Ramappa*, Shānbhogue of *Nirathadi* in *Anaji* Taluk.

Same work as that described above.

(ವಿ-ವಿ.)—

ಸಮಗ್ರ. ಕಾಗದದ ಪ್ರತಿ. ಅತ್ಯಂತ ಶಿಥಿಲವಾಗಿದೆ. ಕೊನೆಯಲ್ಲಿ 'ಅಣಜಿ ತಾಲೂಕು ನೀರಥಡಿ ಶ್ಯಾನುಭೋಗ ರಾಮಪ್ಪನವರ ಮಗ ನರಸಿಂಹನು ಬರೆದ ಪ್ರತಿ' ಎಂದಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಸೇರಿವೆ. ಆ ಬಗೆಗೆ ಹಿಂದಣ ಡಿ. ನಂಬರು ೧೯ ನ್ನು ನೋಡಿ ತಿಳಿಯುವುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 978. ಪುರುಷ ವಿರಹ (ಸಾಂಗತ್ಯ) by ಚಿಕ್ಕುಪಾಧ್ಯಾಯ.

PURUSAVIRAHA (SĀNGATYA) BY CIKKUPĀDHYĀYA.

Substance, palm-leaf. Size, 11¾ × 1-1/16 inches. Pages, 37. Lines, 3 to 4 on a page. Extent, 200 granthas. Character, Kannada. Condition, very much injured. Appearance, Old. Mode of writing, good.

Begins on fol. 68 a of the manuscript described Under No. 257 ante.

Complete.

A poem in Sângatya in 102 Stanzas. God Ranganātha is made the hero of the work, and his love in separation is described in this in covert language. The author is *Cikkupādhyāya*, a minister of *Cikkdevarāja*, (1672—1704) the famous King of Mysore.

Beginning :

ಸಾಂಗತ್ಯ. — ಶ್ರೀರಂಗ ನೊಂದೊಂದು ಬಗೆಯಿಂ ಬಣ್ಣಿಪುದು ।
. . , ... ॥
. . . . ।
. . . . ॥
. . . . , . . . ಯು ಕುಂಕುಮಗಂಧಿಯು ।
ಕರಿಗಮನೆಯುಕಂ . . . . ॥
. . . . ಸಾರ್ದ ಮರ್ದಪ್ಪಿ ರಂಗಾಯೆಂಬ ।
ಕರುಣಿಯೆಂದು ತಕ್ಕೈಸೆನೊ ॥

*   *   *   *   *   *

ಕಾಡುವುರ್ವಿನ ಕೋಪುಲಾಂಗಿಯು ಕಡುಚೆಲು ।
ವಿಡಿದ ಕರ್ಣದ ಕಾಮಿನಿಯು ॥
ಒಡನೆ ರಂಗಾ ಯೆಂದೊರೆದೊಡನೊಲಿಸುವ ।
ಮಡದಿ ಮೈದೋರ್ವಳೆನ್ನಿಂದೆ ॥ ೫ ॥

ಮಿರುಪ ಕದಪನಾಂತ ಮಾಟು ಜವ್ವನೆಯಳ ।
ಮೊರವ ನಾಸಿಕದ ಗರುವೆಯು ।
ತೆರೆದಧರದಿ ತೋರ್ಕೆ ವೆತ್ತು ರಂಗಾ ಯೆಂಬ ।
ಯೊರೆಯುಳನೆಂದು ದಿಟ್ಟವೆನೊ ॥ ೬ ॥

End :

ತಪ್ಪನೆಣಿಸದೆ ಸದ್ಗುಣವಿಟ್ಟು ಕೊಂಡಾಡಿ ।
ಅಪ್ಪು ಗೈದೆನ್ನ ಕಾಪಿಟ್ಟು ॥
ಒಪ್ಪುವರಂಗ ನೀವೇ ಬಲ್ಲೆ ಯೆಂಬಳೆಂ ।
ತಪ್ಪುಳಾಗಲಿ ಕಾಯದಿರೆನು ॥ ೯೯ ॥

ಅಕ್ಷಿಯೊಳೀಕ್ಷಿಸಿ ಮುಚ್ಚಿಸಿ ಮನ್ನಿಸಿ ।
ಪಕ್ಷೀಕರಿಸಿ ಪದುಳ-ಪ್ರುತ ॥
ರಕ್ಷಿಸುರಂಗಾ ಎಂಬಳ್ಗೆನ್ನಯ ।
ವಕ್ಷಸ್ಥಳ ವಾಸವರಿದೆ ॥ ೧೦೦ ॥

ಮಂಗಳಮಹಿಮ ಪುರುಷವಿರಹದೊಂದು ।
ಸಾಂಗತ್ಯದ ಸಂಗತಿಯೊಳು ॥
ವ್ಯಂಗ್ಯೋಕ್ತಿಯಿಂ ಚಿಕುಪಾಧ್ಯಾಯ ಕೃತಮಿದಕೆ ।
ಮಂಗಳ (ಮಕ್ಕಿಮ ಸತತಂ) ॥ ೧೦೧ ॥

ಚಿಕದೇವರಾಯನೊಲ್ಮೆಯ ನಿಮಿತ್ತಕ್ಕಾಗಿ ।
ಚಿಕುಪಾಧ್ಯಾಯ ನೊರೆದ ಸಾಂಗತ್ಯ ॥
ಪ್ರಕಟದಿಂದಾ ಚಂದ್ರಾರ್ಕವೆತ್ತಿರುತಿರ್ಕೆ ।
ಸಕಲರ್ಗೆ ಮಂಗಳಂ ಶ್ರೀ ಶ್ರೀ ॥ ೧೦೨ ॥

(ವಿ.ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ 'ಶ್ರೀರಂಗಮಹಾತ್ಮ್ಯ' ಮುಂತಾಗಿ ಹಲವು ಗ್ರಂಥಗಳವೆ ಆ ಬಗೆಗೆ ಹಿಂದಣ ೨೫೭ ನೆಯ ಸಂಬರನ್ನು ನೋಡುವುದು.

ಇದು ಸಾಂಗತ್ಯದಲ್ಲಿ ಬರೆದಿದೆ. ಪದ್ಯಗಳು ೧೦೨. ಇದರಲ್ಲಿ ರಂಗನಾಥದೇವರ ವಿರಹವು ವ್ಯಂಗ್ಯೋಕ್ತಿಯಿಂದ ಸೂಚಿತವಾಗಿದೆ. ಕವಿ, ಚಿಕುಪಾಧ್ಯಾಯನೆಂಬುವನು. ಈತನು ಶ್ರೀರಂಗಮಹಾತ್ಮ್ಯ, ವಿಷ್ಣು ಪುರಾಣ, ರುಕ್ಮಾಂಗದ ಚರಿತ್ರೆ ಮುಂತಾಗಿ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಈತನ ವಿಷಯವಾಗಿ ಹೆಚ್ಚು ತಿಳಿಯ ಬಯಸುವವರು ಹಿಂದಣ ೨೮೯ ನೆಯ ನಂಬರನ್ನೂ ಕವಿ ಚರಿತ್ರೆಯ ೨ ನೆಯ ಭಾಗದ ೪೬೭ ನೆಯ ಪುಟವನ್ನೂ ನೋಡುವುದು.

No. 979. ಪುರುಷವಿರಹ (ಸಾಂಗತ್ಯ.) by ಚಿಕ್ಕುಪಾಧ್ಯಾಯ.

PURUSAVIRAHA (SĀNGATYA) BY CIKKUPĀDHYĀYA.

Substance, paper. Size, 10⅜ × 9⅜ inches. Pages, 21. Lines, 20 on a page. Extent, 200 granthas. Character, Kannaḍa. Condition, good. Appearance, new. Mode of writing, good.

Restored in 1930–31 from the Mss described above (No. 978). Complete in 102 stanzas.

(ವಿ.ವಿ.)—

ಸಮಗ್ರ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದು ಇದರ ಹಿಂದಣ ೯೭೮ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ.

No. 980. ಪ್ರಸಾದ ಸಾಂಗತ್ಯ by ಮಲ್ಲಿಕಾರ್ಜುನ.

PRASĀDA SĀNGATYA BY MALLIKĀRJUNA.

Substance, Palm-leaf. Size, $14\frac{1}{4} \times 1\frac{1}{4}$ inches. Pages, 24. Lines, 6 on a page. Extent, 260 gṇs. Character, Kannada. Condition injured. Appearance, old. Mode of writing, not, bad.

Complete in 180 stanzas.

A sângatya illustrating the greatness of the devotees of śiva. The story described in this runs as follows :—

In the village of *Bejavāḍi* there lived a person by name *Bomma gauḍa*. *Ellakka* was his wife. A Gandharva, under a curse lived in his house in the form of a pig. Once a Jangama (devotee of Śiva) came as a guest to the house of Bommagauḍa, and polluted the cooked flour. Thereupon *Ellakka* grew wild with her husband, and gave the polluted cooked flour to the pig. It ate the flour and resuming its own form as Gandharva, reached Śiva's abode, the King of the place. Sēdirāja also honoured the devotees of Śiva and obtained salvation. The author is *Mallu* or *Mallikarjuna* who lived in about 1650 A.D.

Beginning :

ಸಾಂಗತ್ಯ ॥ ಶ್ರೀಗುರು ಲಿಂಗ ಜಂಗಮದ ಚರಣಕ್ಕೆ ।
ಬಾಗುವೆ ನೆಂ ನಮಸ್ಕಾರವ ॥
ಬೇಗದೊಳೆನಗೆ ಮತಿಯನಿತ್ತು ಕೃಪೆಯಾಗಿ ।
ಯಾಗಲಿ ಕೃತಿ ರಾಜಿಪಂತೆ ॥ ೧ ॥

ಲಿಂಗನ ಕಾಡುವೆ ಲಿಂಗ[ವ]ನ ಬೇಡುವೆ ।
ಲಿಂಗನ ನೀಡು ವಂದಿಸುವೆ ॥
ಲಿಂಗವಲ್ಲದ ಹಿಂದೆ ಕಂಗೆಸೆದ ಭಕ್ತ ।
ರಂಘ್ರಿಗೆ ನಾನೆರಗುವೆನು ॥ ೨ ॥

ಶರಣರ ಕಾಡುವೆ ಶರಣರ ಬೇಡುವೆ ।
ಶರಣರ ಕಂಡುವಂದಿಸುವೆ ॥
ಶರಣರು ಪಿಡಿದ ಪ್ರಸಾದ ಮಾಹಾತ್ಮ್ಯವ ।
ವಿರಚಿಸುವೆನು ಬಲ್ಲನಿತ ॥ ೩ ॥

ಕಡೆಮೊದಲಕ್ಷರ ಪಡಿಪ್ರಾಸುಗಳೆಂಬ ।
ಅಡಿವಜ್ಜೆಯು ಬೆಂಬಳಿಯು ॥
ಗೊಡವೆಯನರಿಯೆ ಬಲ್ಲದ ಮಲ್ಲ ಪೇಳದ ।
ಮೃಡ ಶರಣರ ಕರುಣದಲಿ ॥ ೪ ॥

ಉತ್ತರ ದೇಶದೊಳಹುದೊಂದು ಪುರವರ್ಗ ।
ಸತ್ಯ ಗ್ರಾಮವು ಬೆಜವಾಡಿ ॥

ಕರ್ತೃರ್ಗೆ ವಲ್ಲಿಗೆ ಸೇದಿರಾಜನೆನಿಪನೃಪ ।
ಭಕ್ತನಲ್ಲದೆ ಯಿರುತಿಹನು ॥ ೫ ॥

ಪುರದ ಸುತ್ತಲುನವಿ ಪರಿಪರಿಯಲಿ ತೋಟ ।
ಪರಿವ ಕಾಲುವೆ ಸಾಗುವಳಿ ॥
ತರತರದಿ ಕೈಕೊಳ್ಳದಿ ಕೆಂದಾವರೆ ।
ಮೆರೆವ ಸಂಪಗೆ ತೋಪುಗಳು ॥ ೬ ॥

End :

ಭಕ್ತನ ಮನವಾಯಿತೆನೆ ಸೇದಿರಾಜನ ।
ಮುಕ್ತಿವಂತನ ತರಬೇಕು ॥
ಚಿತ್ತದೊಳ...... ನನೆ ದಾಕ್ಷಣದಲ್ಲಿ ।
ಮರ್ತ್ಯಕೆ ಕಳುಹಿ ಪುಷ್ಪಕವ ॥ ೧೭೪ ॥

ವಸುಧೆಗೆ ದೇವ ದುಂದುಭಿ ಸೂಳೈಸಲು ।
ಪಶುಪತಿ ಪೂಮಳೆ ಗರೆಯೆ ॥
ಶಶಿಧರ ರಾಜ್ಯ ದೇಶವ ತಳತಂತ್ರವ ।
ನೊಸೆ ದೊಯ್ದನು ತನ್ನ ಪುರಿಗೆ ॥ ೧೭೫ ॥

ರಂಭೆ-ವೂರ್ವಸಿ ತಿಲೋತ್ತಮೆ ಮಂಜುಘೋಷೆಯು ।
ರೆಂಬ ಸತಿಯರ ಸಂಭ್ರಮದಿ ॥
ತುಂಬುರು ನಾರದ ನೃತ್ಯ ವಾದ್ಯಗಳಿಂದ ।
ಶಂಭು ವೋಲಗ ವೊಪ್ಪಿದನು ॥ ೧೭೬ ॥

ಸ್ಮರಹರ ದುರಿತ ಹರನು ಭಾಳನೇತ್ರನು ॥
ಪರಶು ಡಮರು ಶೂಲಧರನು ॥
ಕರುಣಿ ಈರೇಳು ಲೋಕವರಕ್ಷಿಪ ದೇವ ।
ಗುರುಮೂರ್ತಿ ಶಿವ ನೊಪ್ಪಿದನು ॥ ೧೭೭ ॥

ಗುರುಪಾದ ತೀರ್ಥ ಪ್ರಸಾದ ವೆಂದರಿದರೆ ।
ನರ[ನ]ರೆಲ್ಲ ಶರಣರು ಕೇಳಿ ॥
ನರಜನ್ಮದೊಳು ಬಂದು ಫಲವಿಲ್ಲವರಿಯ[ದ](ದೆ) ।
ಕುರಿಗಳಾಗಿ ಯೆಸಿಸುವರು ॥ ೧೭೮ ॥

ಧನಧಾನ್ಯ ಸುತರಷ್ಟಭಾಗ್ಯವನೀವನು ।
ಮನಸಂದು ಕೇಳದವರಿಗೆ ॥
ಇನಿತೆಲ್ಲ ಸತ್ಯವೆನುತ ಬಲ್ಲಿದ ಮಲ್ಲ ।
ವಿನಯದಿ ಪೇಳ್ದ ನವಧರಿಸಿ ॥ ೧೭೯ ॥

ಇಂದುಧರನ ಭಕ್ತರ ಚರಿತ್ರದ ।
ಲೊಂದಕ್ಷರವ ಕೇಳ್ವವರ ॥
ಹಿಂದೆ ಮಾಡಿದ ಪಾಪವೆಲ್ಲ ದಹಿಸಿ ಪೋಪು ।
ದೆಂದೆನೆ ಸಂಧಿ ಸಂಪೂರ್ಣ ॥ ೧೮೦ ॥

ಪ್ರಸಾದ ಸಾಂಗತ್ಯಂ ಸಮಾಪ್ತಂ.

Colophon :

(ವಿ.-ವಿ.)—

ಸಮಗ್ರ. ಶಿಥಿಲವಾದ ಪ್ರತಿ. ಲಿಪಿಸಾಮಾನ್ಯವಾಗಿದೆ. ಈ ಪ್ರತಿಯಲ್ಲಿ 'ಱ' ಕಾರವು ತೋರಿ ಬರುತ್ತದೆ.

ಇದು ಸಾಂಗತ್ಯದಲ್ಲಿ ಬರೆದಿದೆ. ಪದ್ಯಗಳು ೧೪೦. ಕವಿಚರಿತ್ರೆಯಲ್ಲಿ ಈ ಗ್ರಂಥವನ್ನು ಅಸಮಗ್ರವೆಂದು ಬರೆದಿದೆ. ಕಥಾ ವಿಷಯ :—ಉತ್ತರ ದೇಶದಲ್ಲಿ ಬೆಜವಾಡಿ ಯೆಂಬ ಗ್ರಾಮವೊಂದುಂಟು. ಅಲ್ಲಿ ಬೊಮ್ಮನೆಂಬ ಒಬ್ಬ ಗೌಡನಿದ್ದನು. ಅವನ ಹೆಂಡತಿ ಎಲ್ಲಕ್ಕ ನೆಂಬವಳು. ಆ ಗೌಡನ ಮನೆಯಲ್ಲಿ ಒಬ್ಬ ಗಂಧರ್ವನು ಒಬ್ಬ ಶಿವ ಭಕ್ತನ ಶಾಪದಿಂದ ಹಂದಿಯಾಗಿ ಹುಟ್ಟಿ ವಾಸಿಸು ತಿದ್ದನು. ಒಂದು ದಿನ ಒಬ್ಬ ಜಂಗಮನು ಆ ಗೌಡನ ಮನೆಗೆ ಅತಿಥಿಯಾಗಿ ಬಂದು ಎಡೆಯಿರಿಸಿದ ಹಿಟ್ಟನ್ನು ಎಂಜಲು ಮಾಡಿಬಿಟ್ಟು ಹೋಗಲು, ಬಜಾರಿಯಾದ ಗೌಡನ ಹೆಂಡತಿ ರೇಗಿ ಗಂಡನನ್ನು ಬೈದು, ಊರ ಹೆಂಗುಸರನ್ನೆಲ್ಲ ಕರೆದೊಪ್ಪಿಸಿ ರಚ್ಚೆ ಮಾಡಿ ಆ ಎಂಜಲನ್ನು ತನ್ನ ಹಂದಿಯ ಮುಂದಿಡಲು ಅದು ಸಂತೋಷದಿಂದ ಅದನ್ನು ಭುಂಜಿಸಿ ತನ್ನ ಪೂರ್ವರೂಪದಿಂದ ಶಿವ ಸಾಲೋಕ್ಯವನ್ನು ಪಡೆಯುವುದು. ಶಿವ ಭಕ್ತ (ಜಂಗಮ) ಪ್ರಸಾದದ ಈ ಮಹಿಮೆಯನ್ನು ಆ ಊರಿನೊಡೆಯನಾದ ಸೇದಿ ರಾಜನು ತಿಳಿದು ತಾನೂ ಶಿವ ಭಕ್ತರನ್ನು ಸೇವಿಸಿ ಶಿವ ಸಾಲೋಕ್ಯವನ್ನು ಪಡೆಯುವನು. ಕವಿ ಈ ಕಥೆಯನ್ನು ಹಾಸ್ಯ ಭೀಭತ್ಸರಸ ಪ್ರಧಾನವಾಗಿ ಹಳ್ಳಿಯವರ ಮಾತಿನಲ್ಲಿ ಹೇಳಿದ್ದಾನೆ. ಕವಿ ಮಲ್ಲ ಅಥವಾ ಮಲ್ಲಿಕಾರ್ಜುನ ನೆಂಬುವನು. ಇವನ ಕಾಲವು ಸುಮಾರು ೧೬೫೦ ಎಂದು ಕವಿ ಚರಿತ್ರೆಯಲ್ಲಿ ಹೇಳಿದೆ. ಉಳಿದ ವಿಷಯಗಳನ್ನು ಉದಾಹೃತ ಭಾಗಗಳನ್ನು ನೋಡಿ ತಿಳಿಯುವುದು.

———

No. 981. ಪ್ರಹ್ಲಾದ ಚರಿತ್ರೆ by ನರಹರಿ son of ಸಂಗಪ.

PRAHLĀDA CARITRE BY NARAHARI S/O SANGAPA.

Substance, Srītāla. Size 19⅛ × 2 inches. Pages, 86. Lines, 11 to 12 on a page. Extent, 3,100 granthas. Character, Kannada. Condition, injured. Appearance, old. Mode of writing, good.

Begins on fol. 1*a*. The other work herein is :—

Ādipurāna (by Pampa) 44 *a*.

Complete in 17 sandhis.

Written in Bhāminiṣaṭpadi metre, it deals with the story of Prahlāda as described in Bhāgavata purāṇa. The author was a Vaisnavite and his native place was Ballālapura on the banks of Kāvēri. His date is about 1650 A.D.

Beginning :

ಭಾ ॥ ಷ ॥ ಶ್ರೀರಮಣ ಸುರನಾಥ ವಂದಿತ ।
ಕ್ಷೀರವಾರಿಧಿ ಶಯನ ಪುರಹರ ।
ವಾರಿಜೋದ್ಭವ ಪಿತನೆ ದಿವಿಜ ವಿರೋಧಿತ ಮರವಿಯೆ ॥
ಕಾರಣಾತ್ಮಕ ನೆನಿಪ ಕರುಣಾ ।

ಸಾರಶ್ರುತಿ ತರ್ಕಗಳು ಕಾಣದ ।
ನಾರ-ಸಿಂಹನೆ ರಕ್ಷಿಸುಗೆ ಮೂಜಗವ ನನವರತ ॥

* * * * *

ಧರೆಯೊಳಗೆ ಕರ್ಣಾಟಕದ ಕವಿ ।
ನರಹರಿಯ ಕೃತಿ ಕೇಳು ರಾಯಂ ।
ದಿರನು [ತಾ] ಕೊಂಡಾಡಿದರೆ ಕಾವ್ಯಕೆ ಭಂಗ ಸಿರಿವರನ ॥
ಒರೆದ ಕವಿತಾಸಾರ ಭವನಾ ।
ಗರ[ವೆನಿ] (ವನೀ)ಸುವ ತೆಪ್ಪ ವಿದೆವಿ ।
ಸ್ಮರಿಸುವೆನು ಕಿವಿಗೊಟ್ಟು ಕೇಳು [ವರೊ] ವ್ರದೊಲಿದು ಸಜ್ಜನರು ॥ ೧೩ ॥

ಪೀಠಿಕೆ ಸಮಾಪ್ತಂ

Colophon :

ಸೂಚನೆ ॥ ದರಣಿಪಾಲ ಪರೀಕ್ಷಿತಗೆವಿ ।
ಸ್ಮರಿಸಿದ [ಮಹಾ] (ನು) ಹರಿಭಕ್ತಿ ಸಾಗರ ।
(ವರ) ಕಥಾಮೃತರಸವ ಶುಕಯೋಗೀಂದ್ರ ಮುನಿರಾಯ ॥

* * * * *

ಕರೆದು ಪ್ರಹಲ್ಲಾದಂಗೆ ಬುದ್ಧಿಯ ।
ನೊರೆದ ನೊಳಗಡೆಗೆಯ್ದಿ ಕಡುನಿ ।
ಷ್ಟುರವ ನಾಡದಿ ರೋಬ್ಬರೊಳು ಹಡಿಯದಿರಧರ್ಮವನು ॥
ಹಿರಿಯತನದಲಿ ಧರ್ಮವನು ಬಿ ।
ಟ್ಟಿರದೆ ರಾಜ್ಯವ ನಾಳು ಹೋಗೆಂ ।
ದಿರಿಸು ತೆದ್ದು ಮುರಾಂತಕನು ಹೊರವಂಟನರಮನೆಯ ॥

End :

ಇತ್ತನಿಂತೀ ಕೃತಿಗೆ ಕಳಸವ ।
ನಿತ್ತು ಕವಿವರ್ಣಿಸಿದ ತನ್ನನು ।
ಬಿತ್ತವರ ಪೆಸರುಗಳ ಜನ್ಮಸ್ಥಳವ ನಾಪುರದ ॥
ಕುಸ್ಮರಿಸಿಕೇಳ್ದರಿಗೆ ಪೇಟಿಸ್ವಿನು ।
ವಿಸ್ತರಿಸಿ ತಸಗಾದ ನಾಮಸ ।
ಮಸ್ತ ಮೆಲ್ಲವ ರಚಿಸಿದನು ಮುಂದಾಸಭಾಸ್ಥಳಕೆ ॥ ೬೦ ॥

ಧಾರಿಣಿ ಯೊಳುನ್ನತದ ದಕ್ಷಿಣಾ ।
ವಾರಣಾಸಿ ಯೆನಿಸಿ ಮೆರೆವ ಕಾ ।
ವೇರಿ ತೀರದೊಳೆಸೆವ ಬಲ್ಲಳಪುರದ ಪ್ರಭುವಿಳೆಗೆ ॥
ವೀರ ವೈಷ್ಣವ ಸಂಗಪಗಳ ಕು- ।
ಮಾರ ನರಹರಿ ದೇವನೀ ಕೃತಿ ।
ಸಾರವನು ವರ್ಣಿಸಿದ ವೊಲಿದು ನೃಸಿಂಹ ನೊಲವಿನಲಿ ॥ ೬೩ ॥

Colophon :

ಅಂತು ಸಂಧಿ ೧೬ ಕ್ಕಂ ಪದನು ೧೧೧೧ ಕ್ಕಂ ಮಂಗಳ ಮಹಾಶ್ರೀ.

(ವಿ..ವಿ.)—

ಸಮಗ್ರ. ಶ್ರೀತಾಳ ಪ್ರತಿ. ಶಿಥಿಲವಾಗಿದೆ. ಲಿಪಿ ಚೆನ್ನಾಗಿದೆ. ಈ ಪುಸ್ತಕದಾದಿಯಲ್ಲಿ ಬಂಡಿಗ ನವಿಲೆಯ ಶ್ರೀ ಚೆನ್ನಗರುಡ ಸ್ವಾಮಿಯನ್ನು ಬರೆದವನು ಸ್ಮರಿಸಿದ್ದಾನೆ. ಈ ಪುಸ್ತಕದೊಡನೆ ಆದಿಪುರಾಣದ ನಾಲ್ಕನೆಯಾಶ್ವಾಸದ ಭಾಗವಿದೆ.

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ. ಸಂಧಿ ೧೩ ಪದ್ಯಗಳು. ೧೧೧೧ ಶುಕಮುನಿಯು ಪರೀಕ್ಷಿತ ರಾಜನಿಗೆ ಹೇಳಿದ ಭಾಗವತದೊಳಗಣ ಪ್ರಹ್ಲಾದ ಚರಿತವು ಇದರಲ್ಲಿ ಉಕ್ತವಾಗಿದೆ. ಗ್ರಂಥದಾದಿಯಲ್ಲಿ ನರಸಿಂಹ ಸ್ತುತಿ ಇದೆ. ಆಮೇಲೆ ಕ್ರಮವಾಗಿ ಗಣನಾಥ, ವಾಣಿ, ನರಹರಿ, ಲಕ್ಷ್ಮೀನಾರಾಯಣ, ವೇಣುಧರ ಗೋವಿಂದ, ನರಸಿಂಹ, ಮೃಡ, ನಂಜುಂಡ ಇವರುಗಳ ಸ್ತುತಿ ಯಿದೆ. ಬಳಿಕ "ಶ್ರುತಿ ವಿಚಾರರು ಶಾಸ್ತ್ರಗಳು ಚಾ । ರತಿಗಳುತ್ತಮ ಮಂತ್ರಗಳು ಕವಿ । ಸುತಗಮಕಿಗಳು ಪಾಠಕರು ನರ್ತಕರು ಕೋವಿದರು ॥ ಕೃತಿಯ ಕೇಳುವುದೊಲಿದು ಸುಜನರು । ಮತಿಯ ನೀವುದು ತಪ್ಪುತಿದ್ದುವು । ದತಿಶಯದಿ ಕೊಂಡಾಡುವುದು ಸದ್ಗುಣರು ಧಾತ್ರಿಯಲಿ ॥" ಎಂದೂ ಫುಲ್ಲನಾಭನ ಭಕ್ತ ಜನರಿತ್ತವರದಿಂದ ತಾನು ಈ ಕಾವ್ಯವನ್ನು ರಚಿಸಲು ಸಮರ್ಥನಾದೆನೆಂದೂ, ಹೊಸ ಹೂವಿನ ಪರಿಮಳವನ್ನು ತುಂಬಿಪೀರ್ವಂತೆ, ಜೀಮೂತ ನಾದಕ್ಕೆ ನವಿಲು ನಲಿವಂತೆ, ನೈದಿಲೆಯು ಚಂದ್ರನನ್ನು ಕಂಡಂತೆ ಮುಂತಾಗಿ ಈ ಹರಿ ಭಕ್ತಿ ಸಾರದ ಸುಖವು ಕೇಳಿದವರಿಗಿಂಪಾಗುವುದೆಂದೂ ಹೇಳಿದ್ದಾನೆ.

ಕವಿ ನರಹರಿ, ವೈಷ್ಣವ ಮತದವನು. ಇವನ ತಂದೆ ಸಂಗಪ ; ಊರು ದಕ್ಷಿಣ ವಾರಣಾಸಿಯೆನಿಸಿ ಮೆರೆವ ಕಾವೇರೀ ತಟದಲ್ಲಿರುವ ಬಲ್ಲಾಳಪುರವು. ಈ ಬಲ್ಲಾಳಪುರಕ್ಕೆ ತಾನು ಪ್ರಭುವೆಂದು ಹೇಳಿಕೊಂಡಿದ್ದಾನೆ. ಈತನ ಕಾಲವು ಕ್ರಿ. ಶ. ಸು. ೧೬೫೦ ಇರಬಹುದೆಂದು ಕವಿಚರಿತ್ರಕಾರರು ಊಹಿಸುತ್ತಾರೆ.

PRAHLĀDA CARITRE, BY NARAHARI SON OF SANGAPA.

No. 982. ಪ್ರಹ್ಲಾದ ಚರಿತ್ರ by ನರಹರಿ son of ಸಂಗಪ.

Substnace, palm-leaf. Size, 12 × $1\frac{1}{16}$ inches. Pages, 252. Lines, 5—7 on a page. Extent, 2,400 granthas. Character, Kannada. Condition, much injured. Appearance, old. Mode of writing, good.

Incomplete.

Same work as that described above.

Beginning :

. . . . ಕೇಳುತ್ತಿರದೆಸ- ।
ಮಸ್ತಲೋಕಗಳೊಡನೆ ಕಪ್ಪವ ।
ತೆತ್ತು ಬಂದೋಲೈಸ ತೊಡಗಿದುದರಸ ಕೇಳೆಂದ ॥ ೪೮ ॥
*   *   *   *

End :

ಅನ್ನದಾನದ ಫಲಸುವಸ್ತ್ರಸು ।
ವರ್ಣ ಮೊದಲಾದ ಖಿಳನಾನಾ ।
ವರ್ಣದುತ್ತಮ ದಾನಫಲ ಯಜ್ಞಾದಿ ಕರ್ಮಫಲ ॥
ಮುನ್ನ ಮಾಡಿದ ಪಾಪವಳಿದು ।

(ಪಿ-ಪಿ.)—

ಅಸಮಗ್ರ. ಪೀಠಿಕಾ ಸಂಧಿಯೊಡನೆ ಮೊದಲ ಮೂರು ಸಂಧಿಗಳಿಲ್ಲ. ಅನಂತರ ೪ ನೆಯ ಸಂಧಿಯಲ್ಲಿ, ೪೯ ನೆಯ ಪದ್ಯದಿಂದ ಮುಂದಿನ ಭಾಗವೂ, ೫-೧೧ ಸಂಧಿಗಳೂ, ೧೦ ರಲ್ಲಿ ೧-೧೪, ೨೩-೩೭ ಪದ್ಯಗಳೂ, ೧೫ ನೆಯದರ ೩೭ ನೆಯ ಪದ್ಯದಿಂದ ೧೭ ನೆಯದರ ೬೩ ನೆಯ ಪದ್ಯದ ವರೆಗೂ ಇವೆ. ಕಡೆಯದಾದ ೧೭ ನೆಯ ಸಂಧಿಯಲ್ಲಿ ಒಂದೆರಡು ಪದ್ಯಗಳು ಇಲ್ಲವೆಂದು ತೋರುತ್ತದೆ. ಈ ಪುಸ್ತಕದಲ್ಲಿ ೪ ನೆಯ ಸಂಧಿಯನ್ನು ೩ ನೆಯದೆಂದು ಪರಿಗಣಿಸಿದುದಾಗಿ ಕಾಣುತ್ತದೆ. ಆದರಿಂದ ೧೦ ನೆಯ ಸಂಧಿಯವರೆಗೆ ಪ್ರತಿಯೊಂದು ಸಂಧಿಯ ಅಂತ್ಯದಲ್ಲಿ ಅದರ ಸಂಖ್ಯೆಯನ್ನು ಪ್ರದರ್ಶಿಸುವಾಗ ಒಂದು ಸಂಖ್ಯೆಯಿಂದ ನ್ಯೂನತೆಯು ಅನುವರ್ತಿಸಿದೆ. ಮುಂದೆ ೧೫, ೧೬. ೧೭, ಸಂಧಿಗಳನ್ನು ೧೩, ೧೪, ೧೫ ಎಂದು ತಪ್ಪಾಗಿ ಬರೆದಿದೆ. ಓಲೆಗಳು ೧, ೩೦, ೧೦೧-೧೪೪ ಇಲ್ಲ. ಕೊನೆಯ ಓಲೆಯ ಸಂಖ್ಯೆ ೧೭೭. ನಂ. 981 ರಲ್ಲಿ ಕಡೆಯದಾಗಿ ಉದ್ಧರಿಸಿರುವ 'ಧಾರಿಣಿಯೊಳುನ್ನತದ' ಎಂಬ ಪದ್ಯದನಂತರ ಈ ಪ್ರತಿಯಲ್ಲಿ ಸ್ವಲ್ಪ ಭಾಗವಿದೆ. ಅದನ್ನಿಲ್ಲಿ ಬರೆಯಲಾಗಿದೆ :—

ಈ ಕಥೆಯ ಕೇಳ್ದರಿಗೆ ಬಹಳವಿ ।
ವೇಕವರಿಕೆಗಳುದಿಸಿ ಚಿತ್ತ ।
ವ್ಯಾಕುಲಗಳತಿ ಹಿಂಗಿ ಬಂದಪಮೃತ್ಯು ಪರಿಹರಿಸಿ ॥
ನಾಕನಿಪ ಭಾಗ್ಯಗಳ ನಿಹದಲ ।
ನೇಕದಿನ ವನುಭವಿಸಿ ಮೇಲೆಮ ।
ಹಾಕಮಲ ಲೋಚನನ ಕೂಡುವರರಸ ಕೇಳೆಂದ ॥
ಅನ್ನದಾನದ ಫಲಸುವಸ್ತ್ರಸು ।
ವರ್ಣಮೊದಲಾದಖಿಳ ನಾನಾ ।
ವರ್ಣ ದುತ್ತಮ ದಾನಫಲ ಯಜ್ಞಾದಿ ಕರ್ಮಫಲ ॥
ಮುನ್ನ ಮಾಡಿದ ಪಾಪವಳಿದು ।
. . . .
. . . .

ಇದು ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 983. ಪ್ರಹ್ಲಾದ ಚರಿತ್ರೆ.

PRAHLĀDA CARITRE.

Substance, palm-leaf. Size, 15-$\frac{3}{8}$ × 1-$\frac{5}{16}$ inches. Pages, 169. Lines, 6 and 7 on a page. Extent, 2,700 granthas. Character, Kannada. Condition, much injured. Appearance, old. Mode of writing, good.

Complete in 14 sandhis.

Deals with the same story as the previous work. The opening stanzas in praise of favourite deities and the stanza in the succeeding portion till the end of 11th sandhi herein are same as in the work described above with several different readings and some additional stanzas ; but the remaining portion differs to a great extent from the previous work. The name of the author is not mentioned in this. For other particulars see extracts given below.

Beginning :

ಭಾಮಿನೀ ಷಟ್ಪದಿ ॥ ಸೂಚನೆ :—

ಧರಣಿಪತಿ ಸುಪರೀಕ್ಷಿತಗೆ ವಿ ।
ಸ್ತರಿಸಿದನು ಹರಿಭಕ್ತಿ ಸಾರವ ।
ವರಕಥಾಮೃತ ರಸವ ಶುಕಯೋಗೀಂದ್ರ ವರರಾಯ ॥

ಶ್ರೀರಮಣ ಮುನಿನಿಕರ ವಂದಿತ ।
ಕ್ಷೀರವಾರಿಧಿ ಶಯನ ನಗಧರ ।
ವಾರಿಜೋದ್ಭವ ಪಿತನೆ ದಿವಿಜ ವಿರೋಧಿತ ಮರವಿಯೆ ॥
ಕಾರಣಾತ್ಮಕ ನೆನಿಪ ಕರುಣಾ ।
ಸಾರ ಶ್ರುತಿ ತರ್ಕಗಳು ಕಾಣದ । ನಾರಸಿಂಹನೆ ರಕ್ಷಿಸುಗೆ ಮೂಜಗವ ಕರುಣದಲಿ ।

* * * *

ಮುನಿವರರು ತಮ್ಮೊಳಗೆ ಕಶ್ಯಪ ।
ತನಯರೀ ಪರಿಗಳನು [ಕಂಡೆ] (ಕಾಣುತೆ) ।
ಮನದೊಳಗೆ ಭಯ ಪಡೆಸಿ ಇವರಿಂದೆಮಗೆ ಕಂಟಕವು ॥

ಘನ ವಹುದು ಮೂಜಗಕೆ ಇನ್ನೀ ।
ನೆನುತ ಚಿಂತಾ-ಕ್ರಾಂತ-ರಾಗಿಯೆ ।
ವನಜನಾಭನ ನೆನವುತಿರ್ದರು ದಿನವ ಕಳೆಯುತಲಿ ॥

ಪ್ರಥಮ ಸಂಧಿ ಸಮಾಪ್ತಂ.

Colophon :

ಸೂ ॥ ಲೋಕಕತಿ ಯುಚ್ಚರಿಯು ಯೆಂಬೀ । (?)
ಸೂಕರಾ ಕೃತಿಯಿಂದ ಶ್ರೀಹರಿ ।
ಲೋಕಭಾರ ಹಿರಣ್ಯಾಕನ ವಧಿಸಿದನು ಶೀಘ್ರದಲಿ ॥

* * * *

೧೪ ನೆಯ ಸಂಧಿ ಸೂಚನೆ :—

ನರಹರಿಯು ನೇಮದಲಿ ಪಟ್ಟವ ।
ಧರಿಸಿದನು ಪ್ರಹ್ಲಾದ ಧರ್ಮದಿ ।
ಧರೆಯ ಪ್ರತಿಪಾಲಿಸುತಲಿರ್ದನು ಸಕಲವಿಭವದಲಿ ॥

End :

ಮುನಿಪನಡಿಗಳ ಕಂಡು ಸಿಂಹಾ ।
ಸನದಿ ಕುಳ್ಳಿರಿ ಸರ್ಘ್ಯ ಪಾದ್ಯವ ।
ನನು ನಯದೊಳಿತ್ತಾಗ ಕೈಗಳ ಮುಗಿದು ಪ್ರಹ್ಲಾದ ॥

ವಿನಯದಿಂದುಪ ಚರಿಸೆ ಹರುಷದಿ ।
ವನಜ ನಾಭನು ನಿನಗೆ ಬೇಡಿದ ।
ಮನದ ಭೀಷ್ಟವ ಕೊಡಲೆನುತ ಹರಿಸಿದನು ನಾರದನು ॥

ಗುರು ಹಿರಿಯರುತ್ತಮರು ವೈಷ್ಣವ ।
ಪುರಜನಾವಳಿ ಮಂತ್ರಿ ಮನ್ನೆಯ ।
ಕರಣಿಕರು ಸೇವಕರು ನಾಯಕ ನಿಕರ ಮೊದಲಾಗಿ ।

ನೆರೆದು ತಪೋಮ್ಮಳು ತಾವೆ ಸಲಿವುತ ।
ವರಮುನಿಗೆ ವಂದಿಸುತ ಲಾತನ ।
ಚರಣ ಕಮಲಕೆ ನಮಿಸಿ ಕೊಂಡಾಡಿದರು ನಾರದನ ॥

ಅಂತು ಸಂಧಿ ೧೪ ಕ್ಕಂ. ಪದನು ೯೬೦ ಕ್ಕಂ ಮಂಗಳ ಮಹಾ ಶ್ರೀ.

Colophon :

(ಪಿ.-ವಿ.)—

ಸಮಗ್ರ. ೧೪ ಸಂಧಿಗಳು. ಅತ್ಯಂತ ಶಿಥಿಲವಾಗಿದೆ. ಓಲೆಯ ಪ್ರತಿ. ಲಿಪಿ ಚೆನ್ನಾಗಿದೆ. ೫೭, ೬೩ ನೆಯ ಓಲೆಗಳು ಮುರಿದಿವೆ.

ಇದು ಭಾಮಿನೀ ಷಟ್ಪದಿಯಲ್ಲಿ ಬರೆದಿದೆ. ಸಂಧಿಗಳು ೧೪ ಪದ್ಯಗಳು ೯೬೦. ಹಿಂದೆ ವರ್ಣಿತವಾಗಿರುವ ಗ್ರಂಥದ ಕಥೆಯೆ ಇದರಲ್ಲಿಯೂ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥದಾದಿಯಲ್ಲಿ ದೇವತಾಸ್ತುತಿ ರೂಪವಾದ ಪದ್ಯಗಳು ಈ ಎರಡು ಗ್ರಂಥಗಳಲ್ಲಿಯೂ ಪ್ರಾಯಶಃ ಒಂದೇ ವಿಧವಾಗಿವೆ. ಮುಂದಕ್ಕೆ ೧೧ ಸಂಧಿಗಳಲ್ಲಿ ಪಾಠಬೇದಗಳೊಡನೆ ಅದೇ ಪದ್ಯಗಳೂ, ಕೆಲವೆಡೆ ಅಧಿಕ ಪದ್ಯಗಳೂ, ಇನ್ನು ಕೆಲವೆಡೆ ಪದ್ಯ ಸಂಖ್ಯೆಯನ್ಯೂನತೆಯೂ ಕಂಡು ಬರುತ್ತದೆ. ಅನಂತರದ ಮೂರು ಸಂಧಿಗಳಲ್ಲಿ ಹಿಂದಣ ಗ್ರಂಥದಿಂದ ಸಂಪೂರ್ಣವಾಗಿ ವ್ಯತ್ಯಾಸವು ಕಾಣುತ್ತದೆ. ಹಿಂದಣ ಪುಸ್ತಕದ ೧, ೨ ಸಂಧಿಗಳನ್ನು ಸೇರಿಸಿ ಇದರಲ್ಲಿ ಒಂದನೆಯದನ್ನಾಗಿ ಬರೆದಿದೆ. ಹಿಂದಣ ಗ್ರಂಥದ ೧೩, ೧೪ ಮತ್ತು ೧೫ ನೆಯ ಸಂಧಿಗಳ ಕಥೆಯನ್ನು ಇದರಲ್ಲಿ ೧೨ ಮತ್ತು ೧೩ ನೆಯ ಸಂಧಿಗಳಿಂದ ಕವಿ ಬರೆದಿದ್ದಾನೆ. ೧೬ ನೆ ಸಂಧಿಯ ಕಥೆಯನ್ನು ೧೪ ನೆಯದರಿಂದ ಗ್ರಂಥಿಸಿ ಅಲ್ಲಿಗೆ ಗ್ರಂಥವನ್ನು ಪೂರ್ತಿಗೊಳಿಸಿರುವನು.

ಕವಿಯ ವಿಷಯವು ಈ ಗ್ರಂಥದಿಂದ ಗೊತ್ತಾಗುವುದಿಲ್ಲ. ಹಿಂದಣ ಗ್ರಂಥದಲ್ಲಿ ಕವಿ ನಾಮಾಂಕಿತವಾದ ಪೀಠಿಕಾಸಂಧಿಯ ೧೩ ನೆಯ ಪದ್ಯವು ಇದರಲ್ಲಿ ೧೬ ನೆಯದಾಗಿ ಬರೆದಿದ್ದರೂ ಅದರಲ್ಲಿ ಕವಿ ನಾಮವು ಇಲ್ಲ. ಆ ಸ್ಥಳದಲ್ಲಿ ಬೇರೆ ಪಾಠವು ಬರೆದಿದೆ. ಈ ಕಾರಣಗಳಿಂದ ಇದನ್ನು ಪ್ರತ್ಯೇಕವಾಗಿ ವರ್ಣಿಸಲಾಗಿದೆ.

No. 984. ಪ್ರಹ್ಲಾದ ಚರಿತ್ರೆ.

PRAHLĀDA CARITRE.

Substance, palm-leaf. Size, $13\frac{7}{8} \times 1\frac{1}{8}$ inches. Pages, 128. Lines, 4 on a page. Extent, 750 granthas. Character, Kannada. Condition, very much injured. Appearance, old. Mode of writing, good.

Begins in the beginning and breaks off in the last portion of the 15th sandhi. Many leaves are wanting in the middle and all are broken.

Same work as that described above with the addition of the last sandhi of the work described under No 981 *ante*.

(ಪಿ.ವಿ.)—

ಅಸಮಗ್ರ. ಕೊನೆಯ ಓಲೆಯ ಸಂಖ್ಯೆ ೧೯೧. ಇದರಲ್ಲಿ ೫-೧೩, ೧೫, ೧೭—೨೧, ೨೩; ೨೪, ೨೬, ೨೭, ೪೦, ೪೨—೪೪. ೫೦-೧೫೫, ೧೬೨, ೧೬೫, ೧೮೯—೧೯೧. ಈ ೧೨೭ ಓಲೆಗಳಿಲ್ಲ. ಓಲೆ

ಗಳು ಮುರಿದಿವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಈ ಪುಸ್ತಕವನ್ನು ಬರೆದ ಕಾಲ, ಬರೆದವನ ಹೆಸರು, ಮುಂತಾದುವುಗಳುಳ್ಳ ಓಲೆಯು (೧೯೧ ನೆಯದು) ಮುರಿದು ಹೋಗಿದೆ. ಇರುವ ಭಾಗದಲ್ಲಿ 'ಶ್ರಾವಣ ಬ ೪ . . . . ನಾರಣಯ್ಯನು ಬರೆದಂತ (ಹ) ಶ್ರೀ' ಎಂದಿಷ್ಟು ಮಾತ್ರ ಸಿಕ್ಕುತ್ತದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಮೊದಲು 983 ನೆಯ ನಂಬರಿನಲ್ಲಿ ವರ್ಣಿತವಾದ ಗ್ರಂಥದಲ್ಲಿರುವ ೧೮ ಸಂಧಿಗಳನ್ನು ಬರೆದು ಅಂತ್ಯದಲ್ಲಿ 981 ನೆಯ ನಂಬರಿನಲ್ಲಿ ವರ್ಣಿತವಾದ ಗ್ರಂಥದ ಕೊನೆಯ ಸಂಧಿಯನ್ನು ಸೇರಿಸಿ ಬರೆದಿದೆ.

No. 985. ಪ್ರೌಢರಾಯನ ಕಾವ್ಯ by ಅದೃಶ್ಯ ಕವಿ.

PRAUḌHARĀYANA KĀVYA BY ADṚSYAKAVI.

Substance, paper. Size, 8-$\frac{11}{16}$ × 6 inches. Pages, 237. Lines, 18—20 on a page. Extent, 4,025 granthas. Character, Kannada. Condition, much injured. Appearance, old.

Begins on Page 7. The other work herein is :—

Śūnyasampādane by Prabhudēva I.

Complete in 21 sandhis.

Bound in two Volumes.

Describes the story of Śivaśaraṇās as narrated to *Prauḍharāya* king of *Vijaya-nagara* (1419–1446) by his minister *Jakkanācārya*. The author *Adṛsyakavi* was a Vīraśaiva poet. He was the son of *Aṇṇēndra* and the grand son of *Śaṅkara* who was a disciple of *Maḷeya Mallēśa*. His date is about 1580 A.D.

Date of transcription :—Saturday the saptami in the year Īśvara Śaka 1739 according to 1817 A.D.

Name of the scribe :—*Maḍivāḷa mari*, who prays God *Cennabasava* worshiped at Pēṭematha of Manṭaḷa.

Beginning :

ಪಾ॥ ಪ॥ ಶ್ರೀ ಮಹೀಧರಾತ್ಮಜ ಹೃದಬ್ಜ ಕರಕಮಲ ।
ಶ್ಯಾಮಗಾತ್ರ ಸುಪ್ರಿಯ ಕಾಮರಸ ಶರಧಿಜಯ ।
ವ್ರೋಮಕುಂತಳ ಸುಮನಪತಿನ ಪದಾಂಭೋಜ ನಾಮಗಾನಪ್ರಿಯನೆ ॥
ಸೋವ ಶೇಖರ . . . . . . ಚರಣ ಚಕ್ರನ ।
ಪ್ರೇಮಿಯರಾನತ ಕಲ್ಪಕುಜ ಕುಮುದಸಖಗೋಪ ।
. . . . ದುರಿತವ ಪರಿದು ಪಾಲಿಪುದು ಕಾಮಿತವನಿತ್ತು ಮುದದಿ ॥ (?)

* * * * *

ಇಳೆಯೊಳಾಣ್ಮ ಕೇಳೊಂದು ಪಕ್ಷವವಧಿಯೊಳಗನ್ನು ।
ಕಳುಹದಿದ ಕುತ್ತರವ ತಹೆನೆಂದು ಬೀಳ್ಕೊಂಡು ।
ಬಳಿಕ ಗುರುಧ್ಯಾನದಿಂ ತನ್ನ ಗೃಹಕಂ ಪೋಗೆ ಮುಕುಂದ ಬದ್ದಿ ತವನ್ನ ॥
ನಿಲಯ ಕೆಯ್ದಲ್ಲಿಕ್ಕುತ್ತಲೆ ಜಕ್ಕಣಾಚಾರ್ಯ ।

ತಿಳುಪೆನಗೆ ಚಾಮರಸಾರಾಧ್ಯ ಬರ್ದನ್ನೆಗಂ ।
ಕಳಿಧರನ ಶರಣರ ಕಥೆಯನೆನೆ ಭೂಪರನೆ ಶರಣಾಮಗುಳಂತೆಂದನು ॥ ೫೧ ॥

ಗುರುವೆ ಜಯುಪರಬ್ರಹ್ಮದಿರವೆ ಜಯ ಸದಮಲ ।
ಗುರುವೆ ಜಯ ನಿತ್ಯಪ ಗುರುವೆ ಜಯ ನತಕಲ್ಪ ।
ತರುವೆ ಜಯ ತರಣಿ ಶಶಿಕೋಟಿ ಚಿರ . . . . . ತ್ರುತರುವೆ ಜಯ ಭಕ್ತಜನರ ॥
ಪೊರೆವೆ ಜಯ ಭವಪಾಶ ಹರಿವೆ ಜಯ ಮುಕ್ತಿಪಥ ।
ಚರವೆ ಜಯ ಅಭಯಕರ ಮೆರೆವೆ ಜಯಜಯ ಪರಾ ।
ತ್ವರವೆ ಜಯವರ ಮಳೆಯ ಮಲ್ಲೇಶ ಮಗುರುವೆಮನದಿಷ್ಟವಿತ್ತುಸಲಹು ॥ ೫೨ ॥

ಇಂತು ಪ್ರಥಮ ಸಂಧಿ ಸಮಾಪ್ತಂ.

Colophon :

ಸೂಚನೆ.—

ದೃಢಶರಣ ನಿಮ್ಮಂಥ ಮಣಿಘಟ್ಟಿವಾಳಯ್ಯ ।
ಬಡಿಹೋರಿ ಬ್ರಹ್ಮಯ್ಯ ಕಾಳಿದಾಸನು ಬಾಣ ।
ಕಡುಜಾಣ (ನು) ಮಯೂರ ಮೊದಲಾದವರ ಕಥೆಯ ಪೊಶವಿಪಗೆ ಪೇಳ್ದಮೊಲದು ॥

End :

ಪಾರ್ಥಿ . . . . ಹದಿ ಮೂರುಪಾದ ।
ಮೆರೆವ ಇಪ್ಪತ್ತೊಂದು . . . ನು ಬಂ ।
. . . . ಪ್ರೌಢರಾಯನ ಕಾವ್ಯ ವಿಗಲೆಂದು ಜಾಪುರದ ಪ್ರಾಂತವಲ್ಲಿ ॥
ತೊರೆಸಾಲ ಕ . . . . ಯ ಅಣ್ಣೇಂಪ್ರನು ।
ತರಳನ [ದ್ರುಪೆ] (ದ್ರೀಶ)ನಿಂ ಪೇಳಿಸಿದ ಸಂಗವಿಂ ।
ಸ್ವರನಲ್ಲದೆನಗೆ . . . . . ಳ್ಳನಿತಿಲ್ಲ ಗುರುರಾಯ ಕಾನೆಬಲ್ಲ ॥ ೨೭ ॥

* * * * *

ಇಂದು ಧರನೇ ಪಾಹಿ ವಿಶ್ವೇಶನೇ ಪಾಹಿ ॥
ಕಂದು ಗ್ರೀವನೆ ಪಾಹಿ ಕಪಟ ನಾಟಕಪಾಹಿ ।
ಇಂದು ಜಾಟನೆ ಪಾಹಿ ಶ್ಯಾಮಾಂಗ ಸಖಪಾಹಿ ಮಂದಾರ ನಿಲಯ ಪಾಹಿ ॥
ನಂದಿವಾಹನ ಪಾಹಿ, ನಾಗ ಭೂಷಣ ಪಾಹಿ ।
ಕಂದರ್ಪ ಹರಪಾಹಿ ಕರುಣಾಕರನೆ ಪಾಹಿ ।
ಸ್ಕಂದಪಿತ ಕಡುದಯದಿ ಬಿಡದೆ ಸಲಹುವುದೀಗ ಸಂಗಮೇಶ ಪ್ರಸನ್ನ ॥ ೩೯ ॥
ಗುರುವೆ ಜಯ ಪರಬ್ರಹ್ಮ (x) (x) ಮನದಿಷ್ಟವಿತ್ತು ಸಲಹ ॥ ೪೦ ॥

Colophon :

ಅಂತು ಸಂಧಿ ೨೧ ಕ್ಕಂ ಪದನು ೧೧೩೦ ಕ್ಕಂ ಮಂಗಳ ಮಹಾ ಶ್ರೀ.

(ವಿ.ವಿ.)—

ಅತ್ಯಂತ ಶಿಥಿಲವಾಗಿದೆ. ಕಾಗದದ ಪ್ರತಿ. ಲಿಪಿ ಸಾಮಾನ್ಯವಾದುದು. ಗ್ರಂಥ ಪಾತವು ವಿರಳವಾಗಿದೆ. ಎರಡು ಸಂಪುಟಗಳಾಗಿ ಬೈಂಡು ಮಾಡಲ್ಪಟ್ಟಿದೆ. ಒಂದನೆಯ ಸಂಪುಟದಲ್ಲಿ ೬೬ ಪುಟಗಳೂ, ಎರಡನೆಯದ

ರಲ್ಲಿ ೧೭೧ ಪುಟಗಳೂ ಸೇರಿ ೨೪೭ ಪುಟಗಳಿವೆ. ಪ್ರಭುದೇವ ವಿರಚಿತವಾದ ಶೂನ್ಯಸಂಪಾದನೆ ಎಂಬ ಪುಸ್ತಕವೂ ಇದೆ. ಪುಸ್ತಕಾಂತ್ಯದಲ್ಲಿ :—ಶಕಶಾಲಿವಾಹನ (ಶಕ) ೧೭೪೯ (ನೆಯ) ಈಶ್ವರ ನಾಮಸಂವತ್ಸರ ಸಪ್ತಮಿ ಶನಿವಾರದ ದಿವಸ ಧುಳಜಂಜಲಿ (?) ಸಮಾಪ್ತಂ.—'ಮಂಟಳದ ಪೇಟಿಮಠದ ಚೆನ್ನ ಬಸವದೇವರ ಕಿಂಕರ ಕಿಂಕರರಾದ ಮಡಿವಾಳಮಾರಿ ಬರೆದ ಪುಸ್ತಕವು' ಎಂದಿದೆ. ಮುಂದಣ ನಂಬರಿನಲ್ಲಿ ವರ್ಣಿತವಾಗಿರುವ ಪುಸ್ತಕವು ಇದರ ಪ್ರತಿಕೆಯು.

ಇದು ವಾರ್ಧಕ ಷಟ್ಪದಿಯಲ್ಲಿ ಬರೆದಿದೆ. ಸಂಧಿಗಳು ೨೧, ಪದ್ಯಗಳು, ೧೧೩೦. ಗ್ರಂಥದಾದಿಯಲ್ಲಿ ಶಿವ, ಪಾರ್ವತಿ, ಗಂಗೆ, ಗಣೇಶ, ಷಣ್ಮುಖ, ವೀರಭದ್ರ ಇವರುಗಳ ಸ್ತುತಿ ಪರಿಪಿಡಿಯಿಂದಿದೆ. ಬಳಿಕ "ಪ್ರಭುದೇವ, ಬಸವ, ಸಂಗಮನಾಥ, ಮಳೆಯ ಮಲ್ಲೇಶ, ಚೆನ್ನ ಬಸವ, ಮಡಿವಾಳ ದೇವಯ್ಯ, ಮಂಚಣ್ಣ, ಮನುದಾರಿ, ಹೊಡೆಹುಲ್ಲ ಬಂಕಯ್ಯ, ನೋಳಗೆಯ ಮಾರಯ್ಯ, ಕೋಲ ಶಾಂತಯ್ಯ, ರೇಚಯ್ಯ, ಅಪ್ಪಣ್ಣ, ಸತ್ಯಣ್ಣ, ಮುಖ್ಯಮ್ಮೃಢ ಭಕ್ತ ಬಸವೇಶರೊಡನೆ ಕೈಲಾಸದಿಂ ತಡೆಯದೆಯ್ದಿಂದು ಏಳ್ನೂರು ಎಪ್ಪತ್ತು ಗಣದಡಿದಾವರೆಗಳ ನಾಂಬಿಡದೆ ಕೊಂಡಾಡುತ್ತ ನಡೆಸುವೆನು." ಎಂದು ಕವಿ ಹೇಳುತ್ತಾನೆ. ಆ ಮೇಲೆ ಸರಸ್ವತಿಯನ್ನು ಹೊಗಳಿ ತನ್ನ ಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ :—

"ವರಮಳೆಯ ಮಲ್ಲೇಶ ನುರೆ ಶಿಷ್ಯ ತೋರೆನಾಲ ।
ವರಗಣೆಯ ಕೋಲರ (ಕೊಲ್ಲಿ ?) ಪ್ರರಕ ದೇಶಾಯಿನಾ । ?
ಡೆರೆಯ [ನ] ಹಕ್ಕರಿಯ ಕುಲದಗ್ರಹವೆಂದೆನಿಪ ಹರಭಕ್ತ ಶಂಕರನ ॥
ನೆರೆಪುತ್ರ ಸಣ್ಣೀಂದ್ರ ನಾತ್ಮಜನಸದೃಶ್ಯಕವಿ ।
ವಿರಚಿಸಿದ ಗುರುಬಲದಿ ಪ್ರೌಢರಾಯನಕಾವ್ಯ ।
ವಿರೆತಪ್ಪು ತಿದ್ದುವುದು ನಿಮ್ಮ ಕಿಂಕರನೆಂದು ಶಿವಭಕ್ತರೊಲಿದು ಬೇಗ ॥

ಅನಂತರದಲ್ಲಿ ಕತೆಯಾರಂಭವಾಗುವುದು. ವಿಜಯನಗರದಲ್ಲಿ ದೊರೆಯಾಗಿದ್ದ ಪ್ರೌಢರಾಯನಿಗೆ ಅವನ ಮಂತ್ರಿಯಾದ ಜಕ್ಕಣಾಚಾರ್ಯನು ಹೇಳಿದ ಶಿವಶರಣರ ಕತೆಯು ಇದರಲ್ಲಿ ಉಕ್ತ ವಿಷಯವು. ಕವಿಯ ಕಾಲವು ಸು. ೧೫೮೦ ಇರಬಹುದೆಂದು ಕವಿ ಚರಿತ್ರಕಾರರು ಊಹಿಸುತ್ತಾರೆ.

ಈ ಗ್ರಂಥದಲ್ಲಿ ಪ್ರೌಢದೇವರಾಯನ ಕಾಲದಲ್ಲಿ ನಡೆದುದಾಗಿ ಕವಿ ಹೇಳುವ ಕೆಲವು ಅಂಶಗಳನ್ನು ಕವಿಚರಿತ್ರೆಯಲ್ಲಿ (ಸಂಪುಟ ೨, ಪುಟ ೩೦೬) ಹೀಗೆ ಸಂಗ್ರಹಿಸಿ ಬರೆದಿದೆ :—

"ಪ್ರೌಢರಾಯನ ಬಳಿ ಕಂದಾಳಿ ವಿದ್ಯಾಯಾಚಾರ್ಯ ನೆಂಬವನು ಭಾರತವನ್ನು ಓದಿ ಮೆಚ್ಚುಗೆಯನ್ನು ಮಾಡಿಸಿದನು. ಅದನೋಡಿ ಜಕ್ಕಣಾಚಾರ್ಯನು ಕುಮಾರ ಬಂಕನಾಥ ಗುರುವಿನ ಪಾದುಕೆಯನ್ನು ನೆಲೆಗೊಳಿಸಿ ಪ್ರಭುದೇವರ ವಚನಗಳಿಗೆ ಏಕೋತ್ತರ ಶತಸ್ಥಲದ ಸೂತ್ರಗಳ ವ್ಯಾಖ್ಯಾನವನ್ನು ಮಾಡುತ್ತ 101 ವಿರಕ್ತರು, ಕರತಲದ ನಾಗಯ್ಯ, ಕಲ್ಮಠದ ಪ್ರಭುದೇವ, ವೀರಣ್ಣೊಡೆಯ, ಚಾಮರಸ, ಮುಂತಾದವರು ಸೇರಿ ಏಕೋತ್ತರ ಶತಸ್ಥಲವನು ರಾತ್ರಿ ಮೆರೆಯಿಸಿದರು. ಮುಕುಂದ ಪದ್ದಿಗೂ, ಜಕ್ಕಣನಿಗೂ ವಾಗ್ವಾದವಾಗಿ ಚಾಮರಸನು ದಿನಕ್ಕೆ 11 ಪದ್ಯದಂತೆ ಪ್ರಭುಲಿಂಗ ಲೀಲೆಯನ್ನು ಬರೆದು ರಾಜನಲ್ಲಿ ಓದಲು, ಅದಕ್ಕೆ ಜಕ್ಕಣಾಚಾರ್ಯನು ಅರ್ಥವನ್ನು ಹೇಳಲು, ದೊರೆ ಸಂತೋಷಿಸಿ, ಅವನಿಗೆ ಆಭರಣಾದಿಗಳನ್ನೂ 5 ಗ್ರಾಮಗಳನ್ನೂ ಉಂಬಳಿಯಾ ಕೊಟ್ಟನು. ಹಾಗೆಯೇ ಚಾಮರಸನಿಗೆ ಮರ್ಯಾದೆ ಮಾಡಿಸಿ ಅವನನ್ನೇ ಮಂತ್ರಿಯಾಗಿ ಮಾಡಿಸಿ, ಜಕ್ಕಣಾರ್ಯನು ಬಯಲಾದನು."

No. 986. ಪ್ರೌಢರಾಯನ ಕಾವ್ಯ by ಅದೃಶ್ಯ ಕವಿ.

PRAUḌHARĀYANA KĀVYA BY ADṚŚYAKAVI.

Substance, paper. Size, $10\frac{3}{8} \times 9\frac{1}{2}$ inches. Pages, 342. Lines, 20 on a page. Extent, 4,025 granthas. Character, Kannada. Condition, good. Appearance, new. Mode of writing good.

Restored in 1926-27 from the Ms. described above (No. 985).

Begins on page 7. The other work herein is :—*Sūnya Sampādane* by *Prabhudēva*, 1.

Complete.

(ವಿ-ವಿ.)—

ಸಮಗ್ರ. ಕಾಗದದ ಪ್ರತಿ. ಲಿಪಿ ಉತ್ತಮವಾಗಿದೆ. ಇದು ಹಿಂದೆ ವರ್ಣಿತವಾಗಿರುವ ಪುಸ್ತಕದ ಪುತ್ರಿಕೆಯಾಗಿದೆ. ಇದರೊಡನೆ (ಆದಿಯಲ್ಲಿ) ಪ್ರಭು ದೇವರಶೂನ್ಯಸಂಪಾದನೆ (೬-ಪುಟಗಳು) ಯಿದೆ.

No. 987. ಪ್ರೌಢರಾಯನ ಕಾವ್ಯ by ಅದೃಶ್ಯಕವಿ.

PRAUḌHARĀYANA KĀVYA BY ADṚŚYAKAVI.

Substance, paper. Size, $8\frac{3}{4} \times 4\frac{1}{4}$ inches. Pages, 2. Lines, 16 on a page. Extent, 30 granthas. Character, Kannada. Condition, very much injured. Appearance, old. Mode of writing, not bad.

Begins on Page 319 of the Ms. described under No. 742 *ante*.

Incomplete.

Same work as that described above.

Date of transcription :—Saturday the first day of the bright fortnight of the lunar month Caitra in the year Jaya, Śaka year 1696 corresponding to 1774 A.D.

Doḍḍayya, son of *Karibasavēśvara*, grand-son of *Rēvaṇayya*, who was a brother of *Siddayyadēvaru* the prior of a monastery of Kumasīnagar in *Kalaburgi* ordered this work to be transcribed.

(ವಿ-ವಿ.)—

ಅಸಮಗ್ರ. ಮಾತುಲಾನಿಯ ಮಗಳಾದ ಸೋಮವ್ವೆಯೆಂಬ ಶಿವಭಕ್ತೆಯ ಕತೆ ಇದೆ. ಆ ಬಗೆಗೆ ಅದರ ಆದ್ಯಂತಗಳಲ್ಲಿರುವ ಒಂದೊಂದು ಪದ್ಯವನ್ನು ಉದ್ಧರಿಸಿ ಬರೆಯಲಾಗಿದೆ.

Beginning :

ವಾ। ಷ।   ಭೂವಲಯ ಮುಖಮುಕರದಂತೆ ರಾಜಿಸುತಿರ್ಪ ।
ವಳಿಯು ಎಂದೆಂಬ ಪುರದಲ್ಲಿ ಶೈವನಾ- ।
ಸಾವಳಿಯೊಳುದಿಸಿ ಸುಗುಣಂಗಳಂಧರಿಸಿ ಸರ್ವರೊಳು ಜಾಣೆಯೆನಿಸಿ ॥
ಕಾವನರಸಿಯ ರೂಪ ಪೋಲ್ವ ಕುವಲಯಗಂಧಿ ।
ಗಾವರಿಸುತಿರೆ ಪ್ರಾಯ ಮಾತುಲಾನಿಯ ಸುತಿಗೆ ।
ಆ (ವ್ವಿವಾಹವ) [ವಿವಹ ಮಾಡಿರ್ಪರವಳ] (ನೆಸಗಿದರ್) ತಾಯಿ ತಂದೆಗಳು ಪುರುಷನಾಥ [ನೆಂಬನು] (ನೆನಿಪ್ಪಗೆ) ॥

End :—

ಪರಮೇಶ ನಿಜರೂಪದೋಲಿ ಸೋಮಪ್ಪೈಮನ ।
ದಿರವ ಬೇಡ್ತಾ ಬೇಡು ಎನೆ ಎಲ್ಲೈದೇವ ಮ ।
ತ್ತ್ಯರು ತಿಳಿವ ತೆರದಿಂದ ಕಾರ್ತಿಕ ಮಾಸದೊಳು ಆಕಾಶದೀಪವಾಗೆ ॥
ಮೆರೆವುದೆನೆ ಲೊರವಿತ್ತು ಪುಷ್ಪಕದಿ ಕುಳ್ತು ।
ಹರುಷದಿಂದಾಕ್ಷಣಂ ಕೊಂಡ್ಯೊಯು ಕೈಲಾಸ ।
ಪುರಕೆ ಶಂಕರನೆಂಮು ಪೊರೆದನಾ ಪ್ರೌಢಭೂವರ ನೊಡನೆ ಜಕ್ಕಣಾರ್ಯ ॥

(ವಿ-ವಿ.)—

ಇದು ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾದುದು. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಆ ಬಗೆಗೆ ಹಿಂದಣ ೭೪೩ ನೆಯ ನಂಬರನ್ನು ನೋಡುವುದು. ಕೊನೆಯಲ್ಲಿ ಇದರೊಡನಿರುವ ಪುಸ್ತಕಗಳ ಸಂಬಂಧವಾಗಿ.

“ ಇದು ಶಿವಾಧಿಕ್ಯ ಪೌರಾಣ ಭಿಕ್ಷದ ಚರಿತ್ರ ।
ಪದುಳದಿಂ ಪರಮಾದಿಗಳ ಗಜಾಂಕುಶ ತಾರಾವಳಿಯು ॥ ?
ಹುದುಗಿ ಬರೆಸಿದನು ಕುಮುಸಿ ನಗರದೊಳುವಾಸ ರೇವಣಯ್ಯನ ಪುತ್ರನ ।
ಉದರದಿಂ ಜನಿಸಿದಾತನು ತನ್ನ ಪ್ರೀತಿಯಲಿ ।
ಚದುರತ್ವದಲಿ ಬರೆಸಿದಂಥ ಪುಸ್ತಕವಿದನು ।
ಮದವೇರಿದ ವಾದಿಗಳ ವಾಗ್ಬಂಧಮಂ ಮುದದಿ ಮಾಡುವುದು ಪ್ರೌಢರುಗಳು ॥ ”

ಈ ಪದ್ಯವಿದೆ. ಬಳಿಕ “ ಶಕ ೧೬೭೬ ಪ್ರವರ್ತಮಾನ ಜಯನಾಮಸಂವತ್ಸರದ ಚೈತ್ರ ಶು ೧ ಶನಿವಾರ ಚಂದ್ರಹೋರ್ಯ (ಚಂದ್ರ ಹೋರೆ) ಯೆಂಬನೆ ತಾಸಿನೊಳು ಸತ್ಯ......ವ್ಯಾಳ್ಯ ನೆಪರೇಖ ಅಮೃತ ಘಳಿಗಿ ಜಯದೇವನಲ್ಲು ಮುಗಿಯಿತ್ತು. ಈ ಪುಸ್ತಕ ಆರದು ಎಂದರೆ ಕಲುಬುರಿಗಿ ದೇಶದಲ್ಲು ಕುಮಸಿನಗರಕೆ ಅಂಟಾದ ಮಠಪತಿಗುರು ಸ್ಥಳೀಕ ಪುರಾಣ ಕಲ. - ವ - ಮನಿತಾನ ಪೂರ್ವ ಪೀಠಿಕರು ಸಿದ್ದಯ್ಯ ದೇವರ ಅನುಜ ರೇವಣಯ್ಯನ ಆತ್ಮಜ ಕರಿಬಸವೇಶ್ವರನ ಕುಮಾರ ದೊಡ್ಡಯ್ಯ ತನ್ನ ಪ್ರೀತಿಯಲಿ ಬರೆಸಿದ ಪುಸ್ತಕ ವಿದು ಸಂಪೂರ್ಣ ” ಎಂದಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 988. ಪ್ರೌಢರಾಯನ ಕಾವ್ಯ by ಅದೃಶ್ಯ ಕವಿ.

PRAUḌHARĀYANA KĀVYA BY ADṚŚYAKAVI.

Substance, paper. Size, 10-$\frac{7}{16}$ × 9½ inches. Pages, 4. Lines, 20 on a page. Extent, 30 granthas. Character, Kannada. Condition, good. Appearance, new. Mode of writing, good.

Restored in 1925–26 from the Ms. described above (No. 987).

Begins on Page 384 of the Ms. described under No. 743 *ante*.

Incomplete.

(ವಿ-ವಿ.)—

ಅಸಮಗ್ರ. ಇದು ಇದರ ಹಿಂದಣ (೯೮೭ ನೆಯ) ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೃತಿಯಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಆ ಬಗೆಗೆ ಹಿಂದಣ ೭೪೩ ನೆಯ ನಂಬರನ್ನು ನೋಡುವುದು,

No. 989. ಬಸವ ಪುರಾಣ ಕಾವ್ಯ, by ಭೀಮ ಕವಿ s/o ಶಿವದೇವ-

BASAVAPURĀNA KĀVYA BY BHĪMAKAVI SON OF ŚIVA-DĒVA.

Substance, paper. Size, 11-$\frac{15}{16}$ × 7½ inches. Pages, 728. Lines, 20—22 on a page. Extent, 10,000 granthas. Character, Kannada. Condition, good. Appearance, not new. Mode of writing, fair.

Complete in 60 sandhis.

This is a Kannada rendering in Bhāminiṣaṭpadi metre, of Basavapurāna written by *Pālkurike Sōmanatha* in Telugu language. It deals with the life of Basava and his great achievements. The author Bhīma kavi states that he completed this work in the Ṣāka year 1291 (1369 A.D.). From this it is made out that he lived in the middle of the 14th century.

Beginning :

ಭಾ । ಷ॥

ಸೂಚನೆ ॥ ಆದಿ ಶಿವಲಿಂಗಕ್ಕೆ ವಾಹನ ।
ವಾದ ನಂದೀಶ್ವರನೆ ಮತ್ತೆ ಶಿ ।
ಲಾದಮುನಿಗುದಯಿಸಿದ ಪರಿಯನು ಪೇಳ್ವೆನೆಂತೆನಲು ॥
ಶ್ರೀ ಗುರುವೆ ದೀಕ್ಷಾಗುರುವೆರ ।
ಕ್ಷಾಗುರುವೆ ಶಿಕ್ಷಾಗುರುವೆ ಸ ।
ನ್ಮಾರ್ಗವೋಕ್ತ ಕಳಾಗುರುವೆ ಶಿವಯೋಗ ಧರ್ಮಾರ್ಥ ।
ಭೋಗ ಗುರುವೇತ್ಯಾಗ ಗುರುವೆನು ।
ದೀಗುರುವೆಯಾ [ಗಮಿತವಾ] ಚಾರಗುರು [ವೆ] ಭವ ।
ರೋಗಹರ ಶರಣಾಗು ಬಸವ ಮಹಾಗುರುವೆ ನಮಗೆ ॥

* * * * *

ಕೊಂಡಗೂಳಿಯ ಕೇಶಿಗಳ ಸಿರಿ ।
ಪಂಡಿತರ ಶಿವಲೆಂಕ ಮಂಚಣ ।
ಪಂಡಿತರ ಗುರು ಮಲ್ಲಿಕಾರ್ಜುನ ಪಂಡಿತರ ಕೃಪೆಯಿಂ ।
ಮಂಡಿತ್ರೋಕ್ತಿಯೊಳವರ್ಗಳತ್ತು ।
ದ್ದಂಡ ಮತಿಯಿಂದಿಳೆಗೆ ಬಸವಣ ।
ದಂಡನಾಥನ ಕೃತಿಯ ನೊರೆವೆನ ಖಂಡಿತೋತ್ಸವದಿಂ ॥೧೦॥

ಸರಸ ಮೃದು ಮಧುರೋಪಮೆಗಳಂ ।
ಕುರಿಸಿ ವಸ್ತುಕ ವರ್ಣಕಂಗಳ ।
ನೆರಪಿ ಹರನಂ ಹರಗಣಂಗಳ ನೈದೆ ಕೀರ್ತಿಸುತ ।
ಧರೆಗುಭಯ ಕವಿ ಶರಭಭೇರುಂ ।
ಡರ ಸುಕವಿ ಹರಿಬುಧವರನತ ।
ದ್ವರಸುತನ ರಾಘವನ ಕೃಪೆಯಿಂ ರಚಿಸುವೆಂ ಕೃತಿಯ ॥ ೧೧ ॥

* * * * *

ಅನಿತು ಬಡಮತಿಯಿಂ ಬಸವರಾ ।
ಜನಕೃತಿಯ ನಾನೆಂತು ರಚಿಸುವೆ ।
ನೆನುತ್ತೆಣಿಸಿ ಶಿವಯೋಗನಿದ್ರಾಮುದ್ರಿತದೊಳಿರಲು ॥
ಅನುನಯದಿ ಪಾಲ್ಕುರಿಕೆ ಸೋಮೇ- ।
ಶನು ಮನೆಘ ದೇವಾರ್ಯನುಂಕನ ।
ಸಿನೊಳೊಸೆದು ಬಂದು ಪ್ರಸಾದವನಿತ್ತು ನಡಿಸಿದರು ॥ ೧೪ ॥

ಆವ್ರದಕ್ಕನು ಮಾನಿಸದಿರೊಲೆ ।
ದಾವ ಶಬ್ದಾರ್ಥಮುವು ನಾದೊಡೆ ।
ನಾವ್ರೊಲಿದು ನಿನಗರುಪಿ ನಿನ್ನಾತ್ಮದೊಳ್ ನೆಲಸಿರ್ದು ॥
ನಾವ್ರರಚಿಸುವೆವೆಸೆವ ಬಸವಕ ।
ಥಾ(ರ)ವಿಸರವಂ ಬರೆದುಕೋಎಂ ।
ದೋವಿದ(ವು) ಜಾಜ್ಞೆಯನು ಶಿರದೊಳುಧರಿಸಿ ಮತಿವೆತ್ತು ॥ ೧೫ ॥

ಅಕಮಲಿಂಗೈಕ್ಯಾನು ಭಾವ ।
ಪ್ರಸರ ಮತಿಕವಿ ಸೋಮನಾಥನು ।
ರಸವೊಸರೆ ಮುನ್ನುಸುರ್ದುದನೆ ಕನ್ನಡಿಸಿಪೇಳೆಂದು ॥
ಎಸೆವ ಬಸವ ಪುರಾಣವಂ ಪಸ ।
ರಿಸಿದ ನಿರ್ಮಲಬೋಧೆಯಂ ಕರು ।
ಣಿಸಿದಕಾರಣವೆನಗೆ ಪಿರಿದಾಯಶವಿನ್ನಿಲ್ಲ ॥ ೧೬ ॥

ವಿಮಳ ಸದ್ಗುರು ಸೇವೆಯಲಿದಂ ।
ಗಮಭಜನೆಯಲಿ ಲಿಂಗನಿಷ್ಠಾ ।
ಸಮತೆಯಲಿ ತನುಮನ ಧನಂಗಳನಿತ್ತು ಭಕ್ತಿಯಲಿ ॥
ಸಮಯ ವಾರಿಧಿ ವರ್ಧನೋಜ್ವಲ ।
ಹಿಮಕರಂ ಶಿವದೇವ ನಾತ್ಮಜ ।
ಸುಮತಿ ಭೀಮನುಭಯ ಕವಿತ್ವ ಸಮರ್ಥನುಸುರುವೊಡೆ ॥ ೧೭ ॥

ವೈರಿಪದವಪ ಶಬ್ದವಚವು ।
ಅಕ್ಕರ ಹೀನೋಪಮೆ ನಿಯತಿಪದ ।
ಪೂರಕಂ ಮಸ್ಸಂಧಿಯನಿಬದ್ಧಂ ವಿರುದ್ಧಾರ್ಥ ॥
ನೀರಸಂ ಶೈಥಿಲ್ಯವರ್ಣಂ ।
ಕಾರಕವಿರಹಿತಕ್ರಿಯಾಲಂ ।
ಕಾರಹೀನವೆನಿಪ್ಪ [ಬೊಳ್ಳಂ] (ಪೊಳ್ಳಂ) ತಜಿಯಕಳೆದಿಂತು ॥ ೧೮ ॥

ಸರಸ ಮೃದುತರ ಯಮಕ ಗಮಕವಿ ।
ಸರಸ ವೂಸಪ್ರಾಸ ದೇಶೀ ।
ಸರ ಶಬ್ದಾರ್ಥೋಪಮಾಚಾತುರ್ಯ ಮಾಧುರ್ಯ ॥
ಸರಳಪದ ಶಯ್ಯಾದೃಢವ್ಯಾ ।
ಕರಣಯುತ [ಬಾ] (ಲಾ) ಲಿತ್ಯನಿಯಮಾ ।
[ಸರ] (ಕ್ಷರ) ಸಲಕ್ಷಣ ಭಾವವಾಗಿರೆ ರಚಿಸುವೆಂ ಕೃತಿಯಂ ॥ ೧೯ ॥

* * * * *

ಧಾರುಣೀ ತಳವೊಂದಿ ವಂದಿಸಿ ।
ಸೇರಿ ಕೈಮುಗಿದಭವ ಭವಸಂ ।
ಸಾರ ಭವಸರ್ವಜ್ಞ ಸರ್ವ[ಘ] (ಗ) [ಸರ್ವ] (ಶರ್ವ) ಪರ್ವೇಶ ।
ಸೂರಿಜನ ಮಂದಾರ ವೇದಾಂ ।
ತಾರಗಮ್ಯ ಮನೋರಥ ಪ್ರದ ।
ಪಾರಮಾರ್ಥನ ನೀಲಗಳ ಬಿನ್ನಪದ ನವಧರಿಸು ॥ ೬೬ ॥

ಪ್ರಥಮ ಸಂಧಿ ಸಮಾಪ್ತಂ.

Colophon :

ರಾಗ-ವರಾಳಿ ॥ ಪಲ್ಲವ ॥

ಇಂದುಧರನನುಮತದೊಳಾದಿ ಮ ।
ನಂದಿನಾಥನು ಬಸವನಾಮದಿ ।
ಬಂದವನು ಶಿವಭಕ್ತಿಯಂ ವಸುಮತಿಗೆ ಪಸರಿಸಲು ॥

End :

ಕೋವಿದರು ಕೇಳೊಳ್ಳಿತೆನಲುಡು ;
ದೇವನಿಧಿ ನಯನೇಂದು ಸಂಖ್ಯೆಯೊ ।
ಳೋವಿ ಶಕವರ್ಷಂಗಳಾಗಲು [ಸಾಜಯ] (ಸೌಮ್ಯ) ವತ್ಸರದ ॥
ಶ್ರಾವಣಬಹುಳ ಪಕ್ಷದ ಶಮಿ ।
ಜೀವ ವಾರದೊಳಾ[ರ್ದ್ರ] (ದಿ) ವೃಷಭೇಂ ।
ದ್ರಾವತಾರದ ಬಸವ ಚರಿತೆ ಸಮಾಪ್ತಿಯಾಯಿತ್ತು ॥ ೯೦ ॥

ಅಷ್ಟಮದವಳದಖಿಳ ಶರಣರು ।
ನಿಷ್ಠೆಯಿಂದಲಿ ನಿಟಿಲ ನೇತ್ರನ ।
ಮುಟ್ಟಿ ಭಜಿಯಿಸಿ ಶಾಲಿವಾಹನ ಶಕದರುದ್ಗಾರಿ ॥
ಜ್ಯೇಷ್ಠ ಶುದ್ಧದ ಪಕ್ಷದ ಶಮಿ ।
ಶ್ರೇಷ್ಠವಾರದ ವೃಷಭಾವತಾರದ ; (?)
ದೃಷ್ಟ ಬಸವನ ಚರಿತೆಯಿದುವೆ ಸಮಾಪ್ತಿಯಾಯಿತ್ತು ॥ ೯೦ ॥

* * * *

ಇದು ಸಕಳಮಾಹೇಶ್ವರಾ ಮಳ ।
ಪದಪಯೋಜ ಪರಾಗಮಧು ಷ ।
ಟ್ಪದ[ವೆ] (ನೆ) ನಿಪ ಪಾಲ್ಕುರಿಕೆ ಸೋಮೇಶ್ವರನ ಕಾರುಣ್ಯ ।
ಒದಗಿದಖಿಳ ಕಳಾ ಪ್ರಪೂರಿತ ।
ಹೃದಯ ಭೀಮಕವಿ ಪ್ರಣೀತಾ ।
ಭ್ಯುದಯ ಬಸವಪುರಾಣ ಕಥೆಯೊಳಗಷ್ಟಮಾಶ್ವಾಸ । ೯೨ ॥

Colophon :

ಅಂತು ಸಂಧಿ ೬೦ ಕ್ಕಂ ಪದನು ೩೬೨೯ ಕ್ಕಂ, ಪದನು ೩೬೩೦ ಕ್ಕಂ, ಸಂಧಿ ೫೯ ಕ್ಕಂ (?)

ಮಂಗಳ ಮಹಾ ಶ್ರೀ.

(ವಿ-ನಿ ....

ಸಮಗ್ರ. ಕಾಗದದ ಪ್ರತಿ. ಲಿಪಿ ಅಂದವಾಗಿದೆ. ಇದರಲ್ಲಿ ಪುಟಗಳು ೩೦೮ ಪಂಕ್ತಿಗಳು (ಪ್ರತಿ ಪುಟಕ್ಕೆ) ೨೦ ರಿಂದ ೨೨ ರ ವರೆಗೆ ಇರುವುವು.

ಇದು ಭಾಮಿನೀ ಷಟ್ಪದಿಯಲ್ಲಿ ಬರೆದಿದೆ. ಆಶ್ವಾಸ ೮, ಸಂಧಿ ೬೦, ಪದ್ಯಗಳು ೩೬೨೯. ಗ್ರಂಥದಾದಿಯಲ್ಲಿ ಬಸವ ಮತ್ತು ಸಿದ್ಧವಟಧಾಮ (ಶಿವ) ರಸ್ತುತಿಗಳು ಪರಿವಿಡಿಯಿಂದಿವೆ. ಇದರಲ್ಲಿ ಬಸವನ ಚರಿತವೂ, ಅವನ ಪವಾಡಗಳೂ ಶಿವಭಕ್ತರ ಕಥೆಗಳೂ ಉಕ್ತವಾಗಿವೆ. ಪಾಲ್ಕುರಿಕೆ ಸೋಮನಾಥನೂ, ಅನಘದೇಪಾರ್ಯನೂ ಕನಸಿನಲ್ಲಿ ಕಾಣಿಸಿಕೊಂಡು ಕರುಣಿಸಲಾಗಿ ಅವರ ಅನುಗ್ರಹದಿಂದ, ಸೋಮನಾಥನು ತೆಲುಗಿನಲ್ಲಿ ಬರೆದಿರುವ ಬಸವ ಪುರಾಣವನ್ನು ಕಷ್ಟವಿನಿತಿಲ್ಲದೆ ಕನ್ನಡಿಸಿದೆನೆಂದು ಕವಿ ಹೇಳುತ್ತಾನೆ. ಕೊಂಡೆಗೊಳಕೇಶಿ, ಸಿರಿಪಂಡಿತ, ಶಿವಲೆಂಕಮಂಚಣ್ಣ, ಗುಣಮಲ್ಲಿಕಾರ್ಜುನ ಪಂಡಿತ ಇವರಿತ್ತುದ್ದಂಡಮತಿಯಿಂದೀ ಬಸವದಂಡನಾಥನ ಕೃತಿಯನ್ನು ಒರೆವೆನು ಎಂದು ಹೇಳಿದ್ದಾನೆ. ತಾನು ಉಭಯಕವಿತ್ವ ಸಮರ್ಥನೆಂದೂ, ದೋಷಗಳನ್ನು ತೂರಿ, ಸರಸವಾಗಿಯೂ, ಅಲಂಕಾರಯುಕ್ತವಾಗಿಯೂ, ಈ ಗ್ರಂಥವನ್ನು ಬರೆದಿರುವಂತೆ ಹೇಳಿಕೊಂಡಿದ್ದಾನೆ. ಪೂರ್ವಕವಿಗಳಲ್ಲಿ ಹರಿಹರ ರಾಘವಾಂಕರನ್ನು (೧೧೬೫) ಸ್ತುತಿಸಿದ್ದಾನೆ.

ಗ್ರಂಥಕರ್ತನು ಭೀಮಕವಿ ಯೆಂಬುವನು. ಇವನ ತಂದೆ ಶಿವದೇವನು. ಈ ಬಸವ ಪುರಾಣವನ್ನು 'ಕೋವಿದರು (*) (*) ಸಮಾಪ್ತಿಯಾಯಿತ್ತು ಎಂಬ ತನ್ನ ಪದ್ಯದಲ್ಲಿ ಶಾಲಿವಾಹನ ಶಕ ೧೨೯೧ ನೆಯ ವರ್ಷದಲ್ಲಿ ಪೂರ್ಣಮಾಡಿರುವಂತೆ ಬರೆದಿರುವುದರಿಂದ ಇವನ ಕಾಲವು (ಕ್ರಿ. ಶ. ೧೩೬೯) ಕ್ರಿ. ಶ. ೧೪ ನೆಯ ಶತಮಾನದ ಮಧ್ಯಭಾಗವೆಂಬುದು ಸ್ಪಷ್ಟವಾಗುವುದು.

No. 990. ಬಸವ ಪುರಾಣ ಕಾವ್ಯ by ಭೀಮಕವಿ son of ಶಿವದೇವ.

BASAVAPURĀṆA KĀVYA BY BHĪMAKAVI SON OF ŚIVADĒVA.

Substance, paper. Size, 11-15/16 × 7½ inches. Pages, 339. Lines, 27-31 on a page. Extent, 10,000 granthas. Character, Kannada. Condition, good. Appearance, not new. Mode of writing, good.

Complete in 60 sandhis.

Same work as that described above.

(ಬಿ-ವಿ.)—

ಸಮಗ್ರ. ಈ ಪುಸ್ತಕದಲ್ಲಿ ಸಂಧಿ ೬೦, ಪದ್ಯಗಳು ೩೬೧೮. ಎಂದು ಬರೆದಿದೆ. ಕಾಗದದ ಪುಸ್ತಕವು. ತಪ್ಪುಗಳಿವೆ. ಲಿಪಿ ಉತ್ತಮವು. ಅಲ್ಲಲ್ಲಿ ಪಾಠಭೇದವು ಕಾಣುತ್ತದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 991. ಬಸವ ಪುರಾಣ ಕಾವ್ಯ by ಭೀಮಕವಿ, son of ಶಿವದೇವ.

BASAVAPURĀṆA KAVYA BY BHĪMAKAVI, SON OF ŚIVADĒVA.

Substance, paper. Size, 11 15/16 × 7½ inches. Pages, 661. Lines, 21 on a page. Extent, 10,000 granthas. Character, Kannada. Condition, good. Appearance, not new. Mode of writing, good.

Complete in 60 sandhis.

Same work as that described above.

(ವಿ.ವಿ.)—

ಸಮಗ್ರ. ಈ ಪುಸ್ತಕದಲ್ಲಿ ಸಂಧಿಗಳು ೬೦. ಪದ್ಯಗಳು ೩೬೭೯ ಎಂದು ಬರೆದಿದೆ. ಕಾಗದದ ಪ್ರತಿ. ೩೮೩ ಎಂಬ ಸಂಖ್ಯೆಯು ಎರಡು ಪುಟಗಳಲ್ಲಿ ಬರೆದಿದೆ. ಕೊನೆಯಲ್ಲಿ ಕಾಣಿಸಿದ ಪುಟ ಸಂಖ್ಯೆ ೬೬೦.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 992. ಬಸವ ಪುರಾಣ ಕಾವ್ಯ by ಭೀಮಕವಿ son of ಶಿವದೇವ.

BASAVAPURĀṆAKĀVYA BY BHĪMAKAVI, SON OF ŚIVADĒVA.

Substance, paper. Size, 7¼ × 5 inches. Pages, 512. Lines, 15—19 on a page. Extent, 9,500 granthas. Character, Kannada. Condition, much injured. Appearance, old. Mode of writing, not bad.

Wants about 8 stanzas in the end. Otherwise complete.

Same work as that described above.

(ವಿ.ವಿ.)—

ಕೊನೆಯಲ್ಲಿ ಸುಮಾರು ೮ ಪದ್ಯಗಳಿಲ್ಲ. ಹಾಗಿಲ್ಲದಿದ್ದರೆ ಪೂರ್ಣವೆನ್ನಬಹುದಿದ್ದಿತು. ಅತ್ಯಂತ ಶಿಥಿಲವಾಗಿದೆ. ಕಾಗದದ ಪ್ರತಿ. ಪತ್ರಗಳು ೨, ೪, ೫, ೧೩-೪೩, ೧, ೩, ೬, ೭, ೧೧, ೧೨, ೮-೧೦, ೪೪-೭೩, ೧೨೧-೭೪, ೧೨೨-೧೬೩, ೧೬೫, ೧೬೪, ೧೬೬-೨೫೬. ಈ ಕ್ರಮದಲ್ಲಿ ಜೋಡಿಸಿ ಬೈಂಡಾಗಿವೆ. ಲಿಪಿ ಸಾಮಾನ್ಯವಾದುದು. ಪುಸ್ತಕದಾದಿಯಲ್ಲಿ ' . ದ್ರ . . . . ಬ॥ ೮ ಗುರುವಾರದಲ್ಲು . . . . ೯ ಮ . . . . . ಬಾಹದರನವರಿಗೆ ಸಾಂತಿಂ ೯ (?) ಗಂಗಾವತಿಪ್ರೋ (ಯೋ) ದಿಸುವ . . . . ಬಸವಯ್ಯ . . . . . ಬರೆಸಿಕೊಟ್ಟ ರಸೀದಿ ಕ್ರಮ-ಎಂತೆಂದರೆ—ನೀವು ನಮ್ಮ ಬಸವ-ಪುರಾಣ ಪುಸ್ತಕ ತೆಗೆದುಕೊಂಡು ನಮಗೆ ಸಮಾಧಾನಮಾಡಿ ಸಂಭಾವನೆ ಕೊಟ್ಟ ರೂಪಾಯಿಗಳು ೧೩ ಹದಿಮೂರು ರೂಪಾಯಿ (ಗಳು) ಮುಟ್ಟಿತು. ಎಂಬುದಾಗಿ ಬರೆಸಿಕೊಟ್ಟ ಸ್ವಹಸ್ತಲಿಖಿತ - ರುಜುವು—ಇದಕ್ಕೆ ಸಾಕ್ಷಿಗಳು.—ಆನೆಗೊಂದಿ ವೇಷಧಾರಿ ಅಪ್ಪಯ್ಯ, ಹೊಸಪೇಟೆ ರಾಮಾಜೋಯಿಸರು ' ಎಂದಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 993. ಬಿಜ್ಜಳರಾಯ ಚರಿತೆ by ಧರಣಿಪಂಡಿತ.

BIJJAḶARĀYA CARITE BY DHARAṆIPAṆḌITA.

Substance—paper. Size, 11⅞ × 7½ inches. Pages, 140. Lines, 20 on page. Extent, 2,200 granthas. Character, Kannada. Condition, slightly injured. Appearance, not new. Mode of writing, good.

Begins on Page 149 of the Ms, decribed under No. 976 *ante*.

Complete in 12 sandhis.

Written in Sāṅgatya metre it describes the story of Bijjaḷa, King of Kalyāṇa and a great patron of Jaina religion. The author *Dharaṇi Paṇḍita* is a Jaina by religion. He was the son of *Padmaṇa Paṇḍita* and a native of *Viṣṇuvardhanapura*. His date is about 1650 A.D. For details see extracts below.

Beginning :—

ಸಾಂಗತ್ಯ.— ಶ್ರೀ ಸುರಾಧೀಶ ಯಶಾಕೋಶ ಭವನಾಶ ।
ವಾಸುಕಿ ಪತಿನುತ ಚರಣಾ ॥
ಲೇ[ಸಪ್ಪ] (ನೆನಿಸುವ) ಮುಕ್ತಿಗಧಿಪತಿಯಾದಿ ಜಿ ।
ನೇಶ ಸಲಹು ಭವ್ಯ ಜನರ ॥ ೧ ॥

ಜೈನ ಶಾಸನವಾರ್ಧಿವರ್ಧನ ಚಂದ್ರಮ ।
ಜೈನ ವಂಶಾನ್ವಯ ತಿಲಕ ॥
ಜೈನ ಮಾರ್ಗಾನಂದ ಪರನೆಂದೆನಿಸುವ ।
ಜೈನ ಬಿಜ್ಜಳನ ಕತೆ ಕೇಳಿ ॥ ೨ ॥

ಮೇರ್ವಿಗೆ (ಮೇರುವಿಗೆ) ದಕ್ಷಿಣವಿಷಯದೊಳೊಪ್ಪುವ ।
ಉರ್ವಿಯೊಳಗೆ ಕರ್ಣಾಟಕದ ॥
ಸರ್ವ ಮಂಗಳವಾದ ಕಲ್ಯಾಣಪುರವೆಂದು ।
ಸರ್ವ ಸಂಪತ್ತಿನೊಳಹುದು ॥ ೩ ॥

* * * *

ಬಿಜ್ಜಳರಾಯ[ನು] ಮೈದುನಗೆ ಪಟ್ಟವ ಕಟ್ಟಿ ।
ಯುಬ್ಬಾಜ್ಞಸ್ಥಿಯ ಮೋಹದೊಳಹನು ॥
ಬಿಜ್ಜಳ ಮದಗಜದಂತೆ ಸುಖದಲ್ಲಿರೆ ।
ಪ್ರಜ್ವಲಿಸಿತು ಪ್ರಥಮ ಸಂಧಿ ॥ ೪೭ ॥

Colophon :—

ಅಂತು ಸಂಧಿ ೧ ಕ್ಕಂ ಪದನು ೪೭ ಕ್ಕಂ ಮಂಗಳ ಮಹಾ ಶ್ರೀ.

ಸುರರೊಳು ದೇವೇಂದ್ರ ನರರೊಳು ಚಕ್ರೇಶ ।
ಗಿರಿಯೊಳು ಮಹಾ ಮಂದರವು ॥
ಮೆರೆವಂತೆ ದೇವರೊಳಾದಿಜಿನೇಂದ್ರನು ।
ಮೆರೆದನು ಮೂರು ಲೋಕದಲಿ ॥ ೧ ॥

End :

ಬಸವ ಸತ್ತ ವಾರ್ತೆ ಕಲ್ಯಾಣಕೆ ಬರಲು ।
ಬಸವನ ರಾಣಿ ನೀಲವ್ವ ।
ವಿಷವ ಕೊಂಡಳಿದುವ ಕೇಳಿದಾಕ್ಷಣದೊಳು ।
ವಸುಧೆ [ಯುಯು] (ಯೆ)ಲ್ಲ (ವು) ಬಲ್ಲಂತೆ ॥ ೧೪೫ ॥
ಬಸವನ ಮನೆಯು ಭಂಡಾರವನೆಲ್ಲ ಚೆನ್ನ- ।
ಬಸವಣ್ಣ ಯಿಮ್ಮಡಿ ಬಿಜ್ಜಳಗೆ ॥

[ದೇಶ] (ದೆಸೆ) ವುಂಕೆಯಲಿ ತಂದಿತ್ತರಾಯನಿಗೆ ।
ಸಿಸುವಿನಂದದಿ ಕೂಡಿರ್ದ ॥ ೧೪೬ ॥

ಅಳಿಯ ಬಿಜ್ಜಳನಾಲ್ಕು ದೆಸೆಯೊಳು ಕೀರ್ತಿಯ
ಬೆಳಸಿ ರಾಜ್ಯವನಾಳ್ವಲ್ಲಿಗೆ ॥
ಕಳಿವೆತ್ತ ದ್ವಾದಶ ಸಂಧಿಯೊಪ್ಪಿದ್ದುದು ।
ಇಳೆಗೆ ದ್ವಾದಶ ಸೂರ್ಯರಂತೆ ॥ ೧೪೭ ॥

[ಇನ್ನು] (ಮುನ್ನ) ಬಿಜ್ಜಳನ ಕತೆಯ ವಿಜಯಮ್ಮಿಯ ।
ತನ್ನ ತಾಯಿಗೆ ಪೇಳ್ದಳಾಗ ॥
ಚೆನ್ನಾಗಿ ವಿಸ್ತಾರವಾಗಲೆಂದು ಧರಣೇಂದ್ರ ।
ನನ್ನಿಯಿಂ ಪೇಳ್ದನೀ ಕೃತಿಯ ॥ ೧೪೮ ॥

ನೊದಲು ಪದವನಿಟ್ಟು ಮುಂದಕ್ಕೆ ಪ್ರಾಸಿನ ।
ಹದನ(ವ)ಕಾಣದೆ ಹುಡುಕಾಡಿ ॥
ಹೊಪಕುಳಗೊಂಡು ಪೇಳದ ಸಂಗತಿಯಲ್ಲ ।
ಚದುರರು ಕೇಳ ಮುದ್ದಿಪರು ॥ ೧೪೯ ॥

ಅಚ್ಚ ಗನ್ನಡವು ಶಿಶುಗಳಿಗೆ ಯರಿವಂತೆ ।
ಪೊಚ್ಚ ಮುತ್ತಿನೊಳು ಪವಳವ ॥
ಮೆಚ್ಚುವಂದದಿ ಸರಗೊಳಸಿದೆ ಬಲ್ಲವರು ।
ನಿಚ್ಚ ಧರಿಸಿಯಿಟುಕೆಯ್ಯದೆ ॥ ೧೫೦ ॥

ಪರಮತ ಖಂಡನ ಸ್ವಮತಾಗಮವು ।
ಅರಿವು ದೋರಲು ಶಾಸ್ತ್ರ ಸಿದ್ಧಾಂತ ॥
ನೆರೆತೋರುವುದು ಕರ್ಮ ಹರಕಾರಣ ಕಾವ್ಯ ।
ಧರಣೇಂದ್ರ ಪೇಳ್ದ ಸಾಂಗತ್ಯ ॥ ೧೫೧ ॥

ಕಂಡು ಪೇಳದುದಲ್ಲವೆಂದು ನೀವೆನಿಸಿರಿ ।
ಪುಂಡರೀಕಾಕ್ಷಿ ಪದ್ಮಾಂಬಿಕೆಯು ॥
ಕಂಡು ಧರಣೇಂದ್ರಗೆ ಪೇಳದ ಕೃತಿಯಲ್ಲದೆ ।
ಕೊಂಡಾಡಿ ಬಲ್ಲ ಕೋವಿದರು ॥ ೧೫೨ ॥

Colophon :—

ಅಂತು ಸಂಧಿ ೧ ಕ್ಕಂ ಪದನು ೧೩೩೧ ಕ್ಕಂ ಮಂಗಳ ಮಹಾ ಶ್ರೀ.—

(ವಿ-ವಿ.)—

ಸಮಗ್ರ. ಕಾಗದದ ಪ್ರತಿ. ಸ್ವಲ್ಪ ಶಿಥಿಲವಾಗಿದೆ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಅವನ್ನು ೯೩೬ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ಸಾಂಗತ್ಯದಲ್ಲಿ ಬರೆದಿದೆ. ಸಂಧಿ ೧೨ ಪದ್ಯಗಳು ೧೩೩೧. ಇದರಲ್ಲಿ ಕಲ್ಯಾಣಪುರದರಸನೂ, ಜೈನ ಶಾಸನ ಪಾರ್ಥಿವ ವರ್ಧನ ಚಂದ್ರನೂ, ಜೈನ ವಂಶಾನ್ವಯ ತಿಲಕನೂ, ಜೈನ ಮಾರ್ಗಾನಂದಪರನೂ ಆದ ಬಿಜ್ಜಳರಾಯನ ಚರಿತೆಯು ಉಕ್ತವಾಗಿದೆ. ಕಥೆ.—ಬಿಜ್ಜಳರಾಯನು ತನ್ನ ಜೋಯಿಸನಾದ ಮಾದಿರಾಜನ ಮಗಳು ಪದ್ಮಾವತಿಯನ್ನು ಮದುವೆಯಾಗಿ ಅವಳಣ್ಣನಾದ ಬಸವನನ್ನು ಸೇನಾಪತಿಯನ್ನಾಗಿ ಮಾಡಿದನು. ವೀರಶೈವ ಮತವನ್ನು ಪ್ರಚಾರವಮಾಡಿದಾ ಬಸವನು ಒಂದಾನೊಂದು ಕಾಲದಲ್ಲಿ ದೊರೆಗೆದುರಾ

ಗಲು ದೊರೆ ಅವನನ್ನು ಸೋಲಿಸಿದನು. ಬಸವನು ಓಡಿಹೋಗಿ ಮಡುವಿನಲ್ಲಿ ಬಿದ್ದನು. ದೊರೆ ಅವನನ್ನು ಹೊರಕ್ಕೆ ತೆಗೆಯಿಸಿ, ಅವನ ತಪ್ಪನ್ನು ಮನ್ನಿಸಿ ಮರಳಿ ಕೆಲಸವನ್ನು ಕೊಟ್ಟನು. ಬಸವನಾದರೆ ಮತ್ಸರಗೊಂಡವನಾಗಿ ರಾಜನನ್ನು ಕೊಲ್ಲಿಸಲು ಅನೇಕವಾಗಿ ಕೃತ್ರಕಗಳನ್ನೆಸಗಿ ವ್ಯರ್ಥಪ್ರಯತ್ನನಾದನು. ಕಡೆಗೆ ತಾನು ಕಳುಹಿಸಿದ ವಿಷದ ಮಾವಿನ ಹಣ್ಣನ್ನು ಮೂಸಿ ಬಿಜ್ಜಳನು ಸಾಯಲು ಬಸವನು ಹೆದರಿ ಓಡಿ ಹೋಗಿ ಕಡಲತಡಿಯ ವೃಷಭ ಪುರದಲ್ಲಿರುವ ಒಂದು ಭಾವಿಯಲ್ಲಿ ಮುಳುಗಿ ಸತ್ತನು. ಬಸವನು ಉಳುವೆನೆಂದು ಸತ್ತುದರಿಂದ ಆ ಊರಿಗೆ ಉಳುವೆಯೆಂದು ಹೆಸರಾಯಿತು. ಈ ಕಾವ್ಯವು ಬಹಳ ಸ್ವಾರಸ್ಯವುಳ್ಳುದಾಗಿದೆ. ಗ್ರಂಥದಾದಿಯಲ್ಲಿ ಆದಿಜಿನಸ್ತುತಿ ಇದೆ. ಇದನ್ನು ಕವಿ 'ಪರಮತಖಂಡನ (*) (*) (*) ಕರ್ಮಹರಕಾರಣ ಕಾವ್ಯ' ಎಂದು ಹೇಳಿದ್ದಾನೆ. ಬಿಜ್ಜಳರಾಯನು ಗತಿಸಿದ ಕಾಲವು ಇದರಲ್ಲಿ ಹೇಳಿದೆ. ಅದನ್ನು ತಾಳೆನೋಡುವಾಗ ಸರಿಬರುವುದಿಲ್ಲ.

ಕವಿ ಧರಣಿಪಂಡಿತನೆಂಬುವನು. ಈತನು ಜೈನಮತದವನು. ಇವನು ಈ ಗ್ರಂಥವಲ್ಲದೆ ವರಾಂಗ ನೃಪಚರಿತೆ (ಭಾ.ಷ.) ಯೆಂಬುದನ್ನೂ ವಿರಚಿಸಿರುವನು. ಈತನು ಭಾರದ್ವಾಜ ಗೋತ್ರಕ್ಕೆ ಸೇರಿದವನು. ಇವನ ಊರು ವಿಷ್ಣುವರ್ಧನಪುರವು. ತಂದೆ ಪದ್ಮಣ ಪಂಡಿತನು. ತಾತ (ಅಜ್ಜ) ನು ಧರಣಿ ಪಂಡಿತನೆಂಬುವನು. ಇವನು ಸುಮಾರು ಕ್ರಿ. ಶ. ೧೬೫೦ ರಲ್ಲಿ ಇದ್ದಿರಬಹುದೆಂದು ಕವಿಚರಿತೆಕಾರರು ಊಹಿಸುತ್ತಾರೆ.

No. 994. ಬಿಜ್ಜಳರಾಯನ ಚರಿತೆ by ಧರಣಿಪಂಡಿತ.

BIJJALARAYANA CARITE BY DHARAṆIPAṆḌITA.

Substance, paper. Size, 7-$\frac{15}{16}$ × 4$\frac{3}{4}$ inches. Pages, 228. Lines, 9—13 on a page. Extent, 2,200 granthas. Character, Kannada. Condition, much injured. Appearance, old. Mode of writing, not bad.

Begins on fol. 1*a*. The other work herein is :—(1) *Birudavaḷi*) (Sanskrit) 115*a*.

Complete.

Same work as that described above.

Date of transcription :—Wednesday the 9th day of the bright fortnight of the lunar month in the year Bahudhānya, Śaka year 1740 corresponding to 1818 A.D.

(ವಿ.ವಿ.)—

ಸಮಗ್ರ. ಕಾಗದದ ಪ್ರತಿ. ಅತ್ಯಂತ ಶಿಥಿಲವಾಗಿದೆ. ಲಿಪಿ ಸಾಮಾನ್ಯವಾಗಿದೆ. ಮುಂದಿನ ೯೯೩ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪುಸ್ತಕವು ಇದರ ಪ್ರತಿಕೆಯು; ಇದರಲ್ಲಿ ೩೦, ೩೩ ನೆಯ ಪತ್ರಗಳ ನಡುವೆ ೪೩ ನೆಯ ಪತ್ರವೂ, ೭೩, ೭೪ ರ ನಡುವೆ ೭೮ ನೆಯ ಪತ್ರವೂ ಇವೆ. ಇದರ ಕೊನೆಯಲ್ಲಿ "ಶಕ ೧೭೪೦ ಬಹುಧಾನ್ಯನಾಮ ಸಂವತ್ಸರ ಭಾದ್ರಪದ ಶುದ್ಧ ೯ ಬುಧವಾರದಲ್ಲಿ ಮುಗಿಯಿತು." ಎಂದು ಬರೆದಿದೆ. ಇದರೊಡನೆ ಬಿರುದಾವಳಿ (ಸಂಸ್ಕೃತದಲ್ಲಿ) ಇದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 995. ಬಿಜ್ಜಳರಾಯನ ಚರಿತೆ by ಧರಣಿ ಪಂಡಿತ.

BIJJAḶARAYANA CARITE BY DHARAṆI PANDITA.

Substance, paper. Size, 11¼ × 7-7/16 inches. Pages, 150. Lines, 16—24 on a page. Extent, 2,200 granthas. Character, Kannada. Condition, good. Appearance, old. Mode of writing, good.

Begins on Page 296 of the Ms. described under No. 490 *ante*.

Complete.

Same work as that described above.

(ಪಿ-ವಿ.)—

ಸಮಗ್ರ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಪ್ರಭುಲಿಂಗಲೀಲೆಯಿದೆ. ಅದು ೪೯೦ ನೆಯ ನಂಬರಿನಲ್ಲಿ ವರ್ಣಿತವಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 996. ಬಿಜ್ಜಳರಾಯನ ಚರಿತೆ by ಧರಣಿ ಪಂಡಿತ.

BIJJAḶARAYANA CARITE BY DHARAṆIPANDITA.

Substance, paper. Size, 10½ × 9¼ inches. Pages, 249. Lines, 20 on a page. Extent, 2,200 granthas. Character, Kannada. Condition, good. Appearance, new. Mode of writing, good.

Restored in 1925–26 from the Ms. described under No. 994 *ante*.

Begins on Page 1. The other work herein is :—*Birudāvaḷi* (Sanskrit) 250.
Complete.

(ಪಿ-ವಿ)—

ಸಮಗ್ರ. ಕಾಗದದ ಪ್ರತಿ. ಹಿಂದಣ ೯೯೪ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪುಸ್ತಕವು ಇದಕ್ಕೆ ಮಾತೃಕೆಯು. ಇದರೊಡನೆ ಬಿರುದಾವಳಿ (ಸಂಸ್ಕೃತ) ಇದೆ.

No. 997. ಭಾವಚಿಂತಾರತ್ನ, ಸಿದ್ಧಲಿಂಗ ಸ್ವಾಮಿಕೃತ ಟೀಕಾಸಹಿತ by ಮಲ್ಲಣಾರ್ಯ.

BHĀVACINTĀRATNA WITH TĪKĀ OF SIDDHALINGASWĀMI BY MALLAṆĀRYA.

Substance, paper. Size, 12⅞ × 7⅞ inches. Pages, 496. Lines, 21—24 on a page. Extent, 8,400 granthas. Character, Kannada. Condition, slightly injured. Appearance, not new. Mode of writing, not bad.

This is a copy of the Ms. described under Nos. 998*a*, *b* and 999.

Complete in 9 Prakaraṇās.

Describes the story of *Satyēndra Cōla*, a glorious prince of the Cōḷa country and a great devotee of God Śiva. *Rājasēkharavilāsa*, a campukavya of *Ṣaḍakṣara-kavi* also deals with the same story. The author was a Vīraśaiva by religion, and

a native of *Gubbi*. His date is about 1513 A.D. The commentary, accompanying this text, was written by Marisiddhalingadēśika, also called *Pattugambali Siddhalingasvāmi*, native of Brahmavāra. For further particulars regarding the work and the author see extracts given below.

The following lines together with the signature of Mr. C. P. Brown are found in the first folio of this Ms.

This was transcribed for me from a copy in the Mackenzie library at Madras. The original manuscript is on perishable native paper and fills three bulky volumes, containing 213 leaves or 426 octavo pages.

Date of completion of the transcription has been mentioned in the end of this Ms. with pencil as 23rd August 1844.

ಶ್ರೀ ಷಡ್ಗುಣೈಶ್ವರ್ಯ ಸಂಪತ್ಕರವನುಳ್ಳ, ಗುರು, ಮುಕ್ತಿ ಪ್ರದಾಯಕನಾದ ಬಸವ ಲಿಂಗಾಯನಮಃ ಬಕಾರವೆ ಗುರು, ಸಕಾರವೇ ಲಿಂಗ, ವಕಾರವೆ ಜಂಗಮ. ಇಂತು ಗುರುಲಿಂಗ ಜಂಗಮ ಸ್ವರೂಪನಾದ ಶ್ರೀ ಗುರುಲಿಂಗಕ್ಕೋಸ್ಕರನಮಃ = ನಮಸ್ಕಾರವು, ಎಂದು ಈ ಶಾಸ್ತ್ರದ ಪ್ರಥಮ = ಪ್ರಾರಂಭದಲ್ಲಿ ಆಚಾರ್ಯರ ಗುರು ನಮಸ್ಕಾರವ ಮಾಡಿ ಈ ಶಾಸ್ತ್ರವನುದ್ಧರಿಸಿದರಾದ ಕಾರಣ 'ತಸ್ಮೈ ಶ್ರೀ ಗುರವೇನಮಃ' ಎಂಬ ಶಬ್ದಕ್ಕರ್ಥ.

* * * * *

ಪಲ್ಲವ.—ತಳಿರ್ಪತ್ರ ಕುಡ್ಮಳ ಕುಸುಮ ಶಲಾ(ಟು) [ಪಳ] (ಫಲ) ಮಾಧುರ್ಯ ರಸವ ನೊಳಕೊಂಡು ಮಡನರಿದು ಕುಡಿಪಡೆವ ನಿಡಿವಳ್ಳಿಯಂತೆಸೆವ ಪುಸ್ತಕ ದೊಳಗಣ ಅಕ್ಷರ ಮಧ್ಯದಲ್ಲಿ ಅರ್ಥವಡಗಿರ್ದ ವಿಸ್ತರಿಸುವಹಾಂಗೆ ಮುಂದೆಸೆಡೆವ ವಸ್ತುಕ ವರ್ಣಕಾದಿಗಳ ಪೊಳಕೊಂಡು ಪಲ್ಲವಿಸಿ ಬೆಳಸುತ್ತಿರ್ದ ಕಾರಣ ಪಲ್ಲವನೆಂಬುದರ್ಥ.

ಸೂಚನೆ । ವಾರ್ಧಿಕಷಟ್ಪದಿ.

ಶ್ರೀ ವಿಮಲ ಗುಹನಮರಗುಂಡ ಮಲ್ಲೇಶ್ವರನ ।
ಸೇವಾ ನಿಮಿತ್ತದಿಂ ದಿಳೆಯೊಳೊಗೆದಾ ಪ್ರಣವ ।
ಜೀವ ಪಂಚಾಕ್ಷರಿಯ ಬಿತ್ತರಿಸಿದಂ ಕುಲಚ್ಛತ್ರಿಯಾಗಾನಂದದಿಂದೆ ।

ಟೀ ಕೆ॥—ಶ್ರೀ = ಈಶ್ವರಮಯವಾದ, ವಿಮಲ = ನಿತ್ಯತ್ವವನುಳ್ಳ, ಗುಹನೂ = ಷಣ್ಮುಖ ದೇವರು, ಅಮರಗುಂಡ ಮಲ್ಲೇಶ್ವರನ = ಅಮರಗುಂಡ ವೆಂಬ ಕ್ಷೇತ್ರವೇ ಸ್ಥಾನವಾದ ಮಲ್ಲಿಕಾರ್ಜುನನೆಂಬ ಲಿಂಗದ, ಸೇವಾನಿಮಿತ್ತದಿಂದ = ಮಣಿಹ ಕಾರಣವಾಗಿ ತಿರುಜ್ಞಾನ ಸಂಬಂಧಿಗಳೆಂಬಭಿದಾನದಿಂದ. ಇಳೆಯೊಳಗೆ = "ಇಳೆನಿಮ್ನೇ ಭೂಮಾವಾಚ" ಎಂದು ಭೂಮಿಯಲ್ಲಿ, "ಒಗೆ ಉತ್ಪತ್ತೌ [ಮಾಸ್ತೃಕ್ರು] (ವಸ್ತ್ರ) ಕ್ಷಾಲನೇಚ"—ಎಂದು ತಮ್ಮ ಸ್ವಲೀಲೆ...ದದಿಂದವತರಿಸಿ ಆ ಪ್ರಣವ ಪರಮೇಶ್ವರನು ಪಾರ್ವತಿ ದೇವಿಯವರಿಗೆ ಸಮುದ್ರದ ಬಡಬಾಗ್ನಿ ಮಂಟಪದಲ್ಲಿ ದ್ವಾದಶ ಪರಾರ್ಧಕೋಟಿ ಶ್ಲೋಕಂಗಳಿಂದ ನಿರೂಪಿಸಿದ ವೇದಾದಿ ಮೂಲವೇ ಪ್ರಾಣ ಕಳೆಯಾದ, ಪಂಚಾಕ್ಷರಿಯ ನಕಾರಾದಿ ಯಕಾರಾಂತ್ಯ ಮಾದೈದಕ್ಕರವನೆ ಕುಲಚ್ಛತ್ರಿಯೆಂಬ ಶಿವಶರಣರಿಗೆ, ಆನಂದದಿಂ = ಸಂತೋಷದಿಂದ, ಬಿತ್ತರಿಸಿದಂ = ವಿಸ್ತರಿಸಿದರೆಂಬುದರ್ಥ.

ಗುಹಂ—ಕರ್ತೃ, ವಿಸ್ತರಿಸಿದಂ—ಕ್ರಿಯೆ, ಮಿಕ್ಕುವು ಕರ್ಮ (?) ಪಂಚಾಕ್ಷರವ ತೆಗೆವುದೆ ಭಾವಾರ್ಥ.

End :—

ಅವರೆ ಕೊಂತ ಫಲ. ಅವರೆ ಬಳ್ಳಿಗೆ ಕಾವರವ ನೆಟ್ಟು ಚಪ್ಪರವ ಹಾಕಿ ಫಲವ ಬೆಳೆವರು. **ಅರ್ಥ. ಟೀಕೆ** :—ದ್ರವ್ಯವುಳ್ಳವಗೆ ಬಲುಪರಿತವಣೆ ॥ ೮೮ ॥ **ಹನ್ನೊಂದು** ॥ ೬೪ ॥

ಪದ ॥ ಇದು ಸಕಲ ಭಕ್ತಪದಪಂಕೇಜರೇಣುವು ।
ಸ್ತ್ರದ ಮಲ್ಲಿಕಾರ್ಜುನಾ ಚೇರ ಮಾಂಕಗೆಬಗೆ ।
ಸಿವ ಕಾವ್ಯ ಸತ್ಯೇಂದ್ರ ಚೋಳಕೃತಿ ಭಾವ ಚಿಂತಾರತ್ನವಮಳ ಕರ್ಣ ॥
ಹೃದಯ ಮಸ್ತಕವದನ ಸರ್ವಾಂಗ ಸೌಖ್ಯಕಾ ।
ಸ್ಪದವ ಖಿಳ ಸುಜನರ್ಗೆ ಪಂಚಾಕ್ಷರಿಯ ಮಹ ।
ತ್ವದ ಬೋಧೆಯಿಂದೋದಿ ದೊಡೆ ಕೇಳ್ದರಿಗಿಷ್ಟ ಸಿದ್ಧಿ ಸರ್ವರಿಗಪ್ಪುದು ॥

Colophon :

ಅಂತು ಪ್ರಕರಣ ಪ್ರಾರಂಭತ್ತಕ್ಕಂ ಪದ(ಂಗಳು) ೩೬೫ ಕ್ಕಂ ಮಂಗಳ ಮಹಾಶ್ರೀ.

(ಪಿ.ಪಿ.)

ಸಮಗ್ರ. ಸ್ವಲ್ಪ ಶಿಥಿಲ, ಲಿಪಿ ಸಾಮಾನ್ಯವಾದುದು. ಇದು ಇದರ ಮುಂದಣ ೯೯೭-A, ೯೯೭-B, ೯೯೯ ನಂಬರುಗಳಲ್ಲಿ ವರ್ಣಿತವಾಗಿರುವ ಪುಸ್ತಕಗಳ ಪ್ರತಿಕೆಯಾಗಿದೆ. ಇದರ ಕೊನೆಯಲ್ಲಿ ಆಂಗಲ ಭಾಷೆಯಲ್ಲಿ "Completed 23 August 1844" ಎಂದು ಸೀಸದ ಕಡ್ಡಿಯಿಂದ ಬರೆದಿದೆ.

ಇದು ಸಾರ್ಥಿಕ ಷಟ್ಪದಿಯಲ್ಲಿ ಬರೆದಿದೆ. ಸಂಧಿಗಳು ಸಂಧಿಗಳು ೯, ಪದ್ಯಗಳು ೩೬೫. ಇದರಲ್ಲಿ ಶಿವಭಕ್ತನಾದ ಸತ್ಯೇಂದ್ರ ಚೋಳನ ಕತೆಯು ಉಕ್ತವಾಗಿದೆ. ಇದೇ ಕತೆಯನ್ನು ಷಡಕ್ಷರ ಕವಿಯು ಚಂಪೂ ರೂಪದಿಂದ ರಾಜಶೇಖರ ವಿಲಾಸವೆಂಬ ಹೆಸರಿಟ್ಟು ಬರೆದಿದ್ದಾನೆ. ಈ ಗ್ರಂಥಕ್ಕೆ ಭಾವ ಚಿಂತಾರತ್ನವೆಂಬ ಹೆಸರನ್ನಿಡಲು ಕಾರಣವನ್ನು ಕವಿ 'ಕೃತಿಯ ಪಲ್ಲವ ತೊಡಗಿ ಪೂರ್ಣ ಮಪ್ಪನ್ನವಿ ಕೃತಿಯೊಳುತ್ಪ್ರೇಕ್ಷೆಯಿಲ್ಲದುದೊಂದು ಪದನಿಲ್ಲ ! ಕೃತಿಗದು ನಿಮಿತ್ತದಿಂ ಭಾವಚಿಂತಾರತ್ನ ಮೆಂಬಹೆಸರು' ಎಂಬ ಪದ್ಯ ಭಾಗದಲ್ಲಿ ಹೇಳಿದ್ದಾನೆ. 'ತ್ರಿಣಯನಣುಗಂ ತಿರುಜ್ಞಾನಿ ಸಂಬಂಧೀಶ । ನಣಿಯರದಿ ಜನಮಾತ್ರ ದಾರಣಂಗೈದ್ದ್ರ ಧಾರಿಣಿಯಲ್ಲಿ ತಿರುಪಾಟು ಪದಿನಾಱು ಸಾವಿರದ ನೊರೆಪ್ರತ ಕೊಲಚ್ಚಿಯಗೆ ॥ ಪ್ರಣವ ಪಂಚಾಕ್ಷರಿಯ ಮಹಿಮೆಯಂ ತಿಳಿಪೆಸ । ದ್ಗುಣಿಯಪ್ಪ ಸತ್ಯೇಂದ್ರ ಚೋಳ ಭೂಪನ ಕಥಾ । ಭಣಿತಿಯಂ ದ್ರಾವಿಡದೊಳೊರೆದುದಂ ಕನ್ನಡದಿ ಪೇಳ್ದನಾಪಸ ಸಜನರು.' ಎಂದು ಹೇಳುವುದರಿಂದ ಈ ಕತೆಯನ್ನು ತಮಿಳಿನಿಂದ ಕನ್ನಡಕ್ಕೆ ತಂದಂತಾಯಿತೆಂಬುದು ಗೊತ್ತಾಗುವುದು. ಇದನ್ನು ಕವಿ ತನ್ನ ಪೋಷಕ ಭಕ್ತನಾದ ಚೇರಮಾಂಕನಿಗೆ ಹೇಳಿದನು. ಕಥಾಗರ್ಭ:—'ಸತ್ಯೇಂದ್ರ ಚೋಳರಾಜನ ಮಗನು ಕುದುರೆಯ ಮೇಲೆ ಕುಳಿತು ಬೀದಿಯಲ್ಲಿ ಹೋಗುತ್ತಿರುವಾಗ (ಶಿವ ಭಕ್ತನಾದ ಒಬ್ಬಹುಡುಗನು ಕುದುರೆಯ ಮೇಲೆ ಕುಳಿತು ಬೀದಿಯಲ್ಲಿ ಹೋಗುತ್ತಿರುವಾಗ) ಶಿವಭಕ್ತನಾದ ಒಬ್ಬ ಹುಡುಗನು ಕುದುರೆಯ ಕಾಲಿಗೆ ಸಿಕ್ಕಿ ಸಾಯಲು, ರಾಜನು ತನ್ನ ಮಗನಿಗೆ ಮರಣದಂಡನೆಯನ್ನು ವಿಧಿಸಿ, ಮತ್ತೆಯೂ ಹರ ಭಕ್ತ ವಧೆಯನ್ನೇ ಮಾಡಿದಂತಾಯಿತೆಂದು ಬಗೆದು ತನ್ನ ಪ್ರಾಣವನ್ನೇ ತೆಗೆದುಕೊಂಡು ಶಿವನನ್ನು ಮೆಚ್ಚಿಸಿ ಸರ್ವರೊಡನೆ ಕೈಲಾಸಕ್ಕೆ ತೆರಳಿದನು'—ಎಂಬುದು. ಗ್ರಂಥದಾದಿಯಲ್ಲಿ ಭೋಗ ಮಲ್ಲೇಶ ಸ್ತುತಿಯಿದೆ. ಆ ಮೇಲೆ ಕವಿ ಶಿವ, ಸಿದ್ಧ ಮಲ್ಲಿಕಾರ್ಜುನ ಗುರು, ನಂದಿ, ಭೃಂಗಿ, ವೀರಭದ್ರ ಇವರನ್ನು ಸ್ತುತಿಯಿಸಿ, ಅಲ್ಲಮ ಪ್ರಭುರಾಯ, ಬಸವ, ಚೆನ್ನ ಬಸವ, ಪಂಡಿತ ತ್ರಯರ್—(ಶಿವ ಲೆಂಕಮಂಚಣ್ಣ, ಶ್ರೀಪತೀಶ್ವರದೇವ, ಮಲ್ಲಿಕಾರ್ಜುನ), ಸಿದ್ಧರಾಮ, ಇವರನ್ನು ನುತಿಸಿದ್ದಾನೆ. ಪೂರ್ವ ಕವಿಗಳಲ್ಲಿ ಪಾಲ್ಕುರಿಕೆ ಸೋಮ, ಕಾಳಿದಾಸ, ಬಾಣ, ಮಯೂರ, ಪದ್ಮರಸ ಇವರನ್ನು ಹೊಗಳಿದ್ದಾನೆ. ಈ ಗ್ರಂಥವು ಪ್ರೌಢವಾಗಿಯೂ ಮನೋಹರವಾಗಿಯೂ ಇದೆ.

ಕವಿ ಮಲ್ಲಣಾರ್ಯನೆಂಬುವನು. ವೀರಶೈವ ಮತದವನು. ಇವನ ಊರು ಗುಬ್ಬಿ. ಇವನು ತನ್ನ ಪರಂಪರೆಯನ್ನು ಈ ಗ್ರಂಥದಲ್ಲಿ ಹೀಗೆ ಹೇಳಿಕೊಂಡಿದ್ದಾನೆ.

‘ ಕರುಣಾಳು ಅಮರಗುಂಡದ ಮಲ್ಲಿಕಾರ್ಜುನಾ ।
ರ್ಯರ ನಿರೂಪದಿ ನಿಜ ಕುಲವೇರಿದ ಮಹಾ ।
ಗುರು ಭಕ್ತ ಸನ್ಮಯಾಂಬುರುಹ ದಿನನಾಥ ಗುಬ್ಬಿಯ ಮಲ್ಲಣಾರ್ಯರ ।
ತರುಣ ಗುರು ಭಕ್ತಾಖ್ಯ ಗರ್ಭಾಬ್ಧಿ ಚಂದ್ರಮಂ ।
ವರಬಸವ ಪುರಾಣದುರು ಮಲ್ಲಣಾರ್ಯನತಿ ।
ಹರಸಿದ್ಧಮಲ್ಲೇಶ ಗುರುಚರಣ ಸರಸಿಜಹೃದ್ಭ್ರಮಿಯೊಳ್ಪೆರೆಯಲೂ ।

ಅಮರಗುಂಡದ ಮಲ್ಲಿಕಾರ್ಜುನಾರ್ಯನು, ಅವನ ಶಿಷ್ಯನು ಗುರುಭಕ್ತನೆಂಬುವನು. ಅವನ ವಂಶದಲ್ಲಿ ಗುಬ್ಬಿಯ ಮಲ್ಲಣಾರ್ಯನು ಹುಟ್ಟಿದನು. ಅವನ ಮಗ ಗುರುಭಕ್ತನು. ಅವನ ಮಗ ಬಸವ ಪುರಾಣದ ಮಲ್ಲಣಾರ್ಯನು. ಇವನನ್ನು ಗುಬ್ಬಿಯ ಮಲ್ಲಣಾರ್ಯನೆಂದೂ ಹೇಳುವರು. ಇವನೇ ಕವಿ. ಇವನು ಬಸವ ಪುರಾಣವನ್ನು ಚೆನ್ನಾಗಿ ತಿಳಿದು ಕೊಂಡಿದ್ದನು. ಇವನ ಗುರು ಸಿದ್ಧ ಮಲ್ಲೇಶನು. ಕವಿಯ ಕಾಲವು :—

‘ ಬಾಣ ಗುಣವಾರ್ಧಿ ವಿಧು ಸಂದ ಶತವರ್ಷದಿಂ ।
ಕ್ಷೋಣಿಮಲ ವತ್ಸರಂ ಶ್ರೀಮುಖಂ ಕಾರ್ತಿಕದು ।
ರೇಣುವಹ ಶುದ್ಧ ಸಪ್ತಮಿ ಶುಕ್ರವಾರದಾ ಶ್ರವಣ ನಕ್ಷತ್ರದಲ್ಲಿ ॥
ಜಾಣನಾ ನಾಗಲಿಂಗಾ ಹ್ವಯಸುತಂ ಶಿವ ।
ಪ್ರಾಣ ಲಿಂಗಪ್ಪ ನಾತ್ಮಜ ಚೇರಮಯ್ಯಂಗ ।
ಶ್ರೇಣಿವೆಸೆ ಮಲ್ಲಣಾರ್ಯಂ ನಿರೂಪಿಸಿದನೀ ಭಾವ ಚಿಂತಾರತ್ನಮಂ ॥

ಶ್ರೀ ಮುಖಾಬ್ದದೊಳದು ಸಮಾಪ್ತಿಯಾಯಿತ್ತು ? ಎಂದು ಹೇಳಿದೆ ಯಾಗಿ ಶಕ ೧೪೩೫ (ಕ್ರಿ.ಶ. ೧೫೧೩) ಎಂದರೆ ೧೬ ನೆಯ ಶತಮಾನದ ಆದಿ ಭಾಗವೆಂಬುದು ಸ್ಪಷ್ಟವಾಗುವುದು.

ಈ ಗ್ರಂಥಕ್ಕೆ ಟೀಕೆಯನ್ನು ಬರೆದವನು ಮರಿಸಿದ್ಧಲಿಂಗ ದೇಶಿಕನೆಂಬುವನು. ಇವನು ಹೀಗೆ ಬರೆದು ಕೊಂಡಿದ್ದಾನೆ :—

ಕಂದ ॥ ‘ ವರಭಾವ ಚಿಂತಾರತ್ನಕೆ । (?)
ಬರೆದಂ ಮರಿಸಿದ್ಧಲಿಂಗ ದೇಶಿಕ ಟೀಕಂ ।
ಕರುಗಾಯ್ದೊಳ್ಳೋದಿ ಯರ್ಥದ ।
ಅರಿಯುವ ಬೆಚ್ಚವರು ಮತ್ತವರಡೆಗಿದು ಕೊಂಕಂ । (?)

ಈ ಪುಸ್ತಕದ ಮಾತೃಕೆಯ ಕೊನೆಯಲ್ಲಿ ಇದಕ್ಕೆ ಟೀಕೆಯನ್ನು ಬರೆದವನು ಪಟ್ಟಗಂಬಳ ಸಿದ್ಧ ಲಿಂಗ ಸ್ವಾಮಿಯೆಂದೂ, ಅವನ ಸ್ಥಳವು ಬ್ರಹ್ಮಾಪುರವೆಂದೂ ಹೇಳಿದೆ. ಇದನ್ನು ಇದರ ಮುಂದಣ ೯೯೯ ನೆಯ ನಂಬರಿನಲ್ಲಿ ನೋಡುವುದು. ಕವಿ ಚರಿತ್ರೆಯಲ್ಲಿ (ಸಂಪುಟ ೨, ಪುಟ ೫೩೨), ಅವನ ಕಾಲವು ಸುಮಾರು ಕ್ರಿ.ಶ. ೧೭೦೦ ಇರಬಹುದೆಂದು ಬರೆದಿದೆ.

No. 998-A ಭಾವ ಚಿಂತಾರತ್ನ ಸಿದ್ಧಲಿಂಗ ಸ್ವಾಮಿಕೃತ ಟೀಕಾ ಸಹಿತ by ಮಲ್ಲಣಾರ್ಯ-

BHĀVACINTĀRATNA, WITH TĪKA OF SIDDHALIṄGASVĀMI BY MALLANĀRYA.

Substance, paper. **Size**, 8¼ × 6 inches. Pages, 120. Lines, 18—21 on a page. **Extent**, 2,300 granthas. **Character**, Kannada. Condition, very much injured. Appearance, old. **Mode of writing, good.**

eaks off in the commentary of the 18th stanza of the 3rd Prakaraṇa.

Same work as that described above, wherein see for the beginning.

End :—

ಪರಶಿವನ ಧರ್ಮವೆ = ಸದಾಶಿವನಂತರಂಗದ ಸದ್ಧರ್ಮವೆ ॥ ವೃಷ ಭಾವತಾರದಿಂ = ವೃಷ ಭಾಕೃತಿಯಿಂದ । ಎರಡನೆ ಶಂಭುವೆನಿಸುವ ಬಣ್ಣೆನಿಂದ = ದ್ವಿತೀಯ ಶಿವನೆನಿಸುವ ಗುರುತ್ವದಿಂದೆ । ಬಂದು ‘ ಬಗು ಆಗವಲೇ ’ ಎಂದು ಮರ್ತ್ಯಲೋಕಕ್ಕವತರಿಸಿ । ಉರು = ಉನ್ನತವಾದ । ಯುಗ = ಮೂವತ್ತು, ನಾಲ್ಕು ಲಕ್ಷವು ಐವತ್ತಾರು ನೂರು ವರುಷ । ನಾಲ್ಕು ಪದಬಂಧರಿಸಿ [ನಿ] (ನಿಂದು) ಸದ್ಧರ್ಮದ ಚತುರ್ವಿಧ ಚರಣಂಗಳ ಲೋಕಕ್ಕೆ ಕಾಣಿಸಿ [ನಿ] (ನಿಂದು) ಮೆರೆದ = ಶೋಭಿಸಿದ । ಅಂತು = ಅದೇ ಪ್ರಕಾರದಲ್ಲಿ । ತ್ರೇತಾಯುಗ ಹದಿನೇಳು ಲಕ್ಷದ ಇಪ್ಪತ್ತೆಂಟು ಸಾವಿರ ವರುಷ ಮೂರು ಪಾದವ ಧರಿಸಿ [ನಿ] (ನಿಂದು) ಸದ್ಧರ್ಮದ ತ್ರಿವಿಧ ಚರಣಂಗಳ ಲೋಕಕ್ಕೆ ಕಾಣಿಸಿ । ಮೆರೆದ = ಶೋಭಿಸಿದ, ಅಂತು = ಅದೇ ಪ್ರಕಾರದಲ್ಲಿ । ದ್ವಾಪರ.

(ವಿ.ವಿ.)—

ಅಸಮಗ್ರ. ಅತ್ಯಂತ ಶಿಥಿಲ. ಲಿಪಿ ಸಾಮಾನ್ಯವಾಗಿದೆ. ಎರಡು ಪ್ರಕರಣಗಳು ಸಂಪೂರ್ಣವಾಗಿಯೂ, ಮೂರನೆಯ ಪ್ರಕರಣದ ೧೮ ನೆಯ ಪದ್ಯ ಮತ್ತು, ಅದರ ವ್ಯಾಖ್ಯಾನದ ಸ್ವಲ್ಪಭಾಗವೂ ಇವೆ.

ಹಿಂದೆ ವರ್ಣಿತವಾದ ಗ್ರಂಥದ ಪ್ರತಿಕೆಯಾಗಿದೆ.

No. 998-B ಭಾವ ಚಿಂತಾರತ್ನ, ಸಿದ್ಧಲಿಂಗ ಸ್ವಾಮಿಕೃತ ಟೀಕಾ ಸಹಿತ by ಮಲ್ಲಣಾರ್ಯ-

BHĀVACINTĀRATNA, WITH TĪKA OF SIDDHALIṄGASVĀMI BY MALLAṆĀRYA.

Substance, paper. Size, 8¼ × 6 inches. **Pages**, 152. Lines, 21 on a page. Extent, 3,100 granthas. Character, **Kannada**. Condition, much injured. Appearance, old. Mode of writing, good.

Incomplete.

Contains from the 25th stanza of the 3rd Prakaraṇa to the 30th stanza of the 6th Prakaraṇa.

Same work as that described above.

Beginning :—

....ವಿಲೋಚನನೆಯೊಂದು ಉತ್ಪಾದನಂ ಗೈಯ್ದುದಾಕೇ ಬಲವಂತದಂತೆ: ಕರಣಚತುಷ್ಟಯಂಗಳು = ವರ್ಧನವಾದ ಮನವಾದಿ ಕರಣಂಗಳು ಸಾಲ್ಕರ । ಅಗ್ಗಳಿಕೆಯು = ಹೆಚ್ಚಿಗೆಯು । ತೀರ್ಚ = “ ತೀರ್ಪದ ಶಾಂಗುಲ ನಿಷ್ಪೀಡಳೇ ” ಯೆಂದು ಕೆಡಿಸಿ । ಭೋಗ ಮೋಕ್ಷಂಗಳ = ಇಹದ ಪ್ರಸಾದ ಭೋಗ, ಪರದ ನಿಜ

ಮೋಕ್ಷಂಗಳ । ಅಲಘುಪದವಿಯು = ಪೂಜ್ಯವಾದ ಘನಲಿಂಗ ಪದವಿಯು ಪಡೆವರು = 'ಪಡೆ ಉಪಾರ್ಜನೇ ಬತೇಚ' ಯೆಂದು । ಉಪಾರ್ಜನಿಸಿ ಕೊಂಬರು ಯೆಂದು.

* * * * *

End :—

ನಡುವೆ ಬಡತನ ವಾಯ್ತು ನಿಮಗೆಂದು ಹಾಸ್ಯವುಂ ।
ನುಡಿವ ಮೊಲೆಗ[ಳ](ಳಗೆ) ನಡುವೆಂದುದೆಲೆಲೇ ಹೊನ್ನ ।
ಗೊಡವೆಂಬ ಬಗೆಯ ನರಿದರ್ಥವಿತ್ತರ್ಪಿಡಿದು ಕಸ್ತುರಿಯು ಕೆಸರಗೂಡಿ ।
ನಿಡುಗಲ್ಲ [ಹೆರದು] (ಹೇರಲದು) ಕೊರಲಾರವಾಗ [ಲ್ಲ] (ಲ್ಲ)-।
ಇಪ್ಪಡೆಗೊಂಬ ನಿಮ್ಮ ಕುಂದರಿಯಾರ್ಕೆ ಭಾಷೆಯುಂ ।
ಬಡವೆಂ[ದು] (ವು) [ಜರ] (ಜಂತೆ) ವಿರೆಂಬಂತೆ ನೆಪನಡುವಿನ ಬಲೆಯರು ಕಣ್ಗೆಸೆವಿದ್ದರು ॥

ಟಿ॥ ನಡುವೆ = ಮಧ್ಯದಲ್ಲಿ । ಬಡತನ ವಾಯ್ತು ನಿಮಗೆ = ನಿಮಗೆ ದರಿದ್ರ ಬಂದಿತ್ತು ಯೆಂದು । ಹಾಸ್ಯವುಂ ನುಡಿವ = 'ಹಾಸ್ಯ ಹಾಸ್ಯೇ' ಯೆಂದು ಹಾಸ್ಯವು ನುಡಿವ, 'ನುಡಿವಚನೇ' ಎಂದು ಹಾಸ್ಯವ ನಾಡುವ. ಮೊಲೆಗಳಗೆ = ಸ್ತನಗಳಗೆ ನಡುವೆಂದುದು = ಮಧ್ಯ ಹೇಳುವುದು । ಎಲೆಲೆ = [ಭೂ] (ಭೋ) ಸ್ತನಂಗಳೆ । ಪೊಂಗೊಡವೆಂಬ = ಸಾಲುವ ಕೊಡಲೊಲ್ಲವು ಯೆಂಬ। 'ಬಗೆ ಭಾವನೇ ಚಿತ್ತ್ರೇಚ' ಯೆಂದು ಭಾವನೆಯು । ಅರಿದು = 'ಅರಿಜ್ಞಾನೇ' ಯೆಂದು ತಿಳದು । ಅರ್ಥವಿತ್ತವರು = 'ಈ ಪ್ರದಾನೇ' ಯೆಂದು ಹಣವ ಕೊಟ್ಟವರು । ಪಿಡಿದು = 'ಪಿಡಿಗ್ರ ಹಣೇ, ಕರಿಷ್ಯಂಚ' ಯೆಂದು ಬಲ್ಪಿಂದ ಹಿಡಿದು ಕೊಂಡು । ಕಸ್ತುರಿಯು ಕೆಸರು ಗೂಡಿ = 'ಕೂಡು ಸಮ್ಮೇಳನೇ' ಯೆಂದು [ಕೂಗೆ] (ಕೋಳ್ಗ) ಸರಲ್ಲಿ ಹೂಗಿಸಿ । ನಿಡುಗಲ್ಲ ಹೇರಲು = 'ಹೇರು ಹೊರೆ ಶಿರೋಧಾರಣೇ' ಯೆಂದು ತಲೆಯಮೇಲೆ ಚಾಪಗಲ್ಲ ಹೊರಿಸಲು । ಅದು = ಆ ಹೊರೆಯು । ಕೊರಲಾರವಾಗಲು = ಪ್ರಾಣಕ್ಕೆ ಬರಲು । [ಇಷ್ಟ] (ಇಪ್ಪಡೆ) ಗೊಂಬ = [ಸಲಗಬ] (ಸಂಕಟ) ಗೊಂಬ । ನಿಮ್ಮ ಕುಂದರಿಯಾರ್ಕೆ = 'ಕುಂದು ಕ್ಷಯೇ ಪಕುರೋಗ ಭೇದೇಚ। ಯೆಂದು । 'ಅರಿಜ್ಞಾನೇ' ಯೆಂದು ನಿಮಗೆ ಬಂದಕೊರತೆಯು ತಿಳಯರಲಾ । ಭಾಷೆಯು ಬಡವು । 'ಭಾಷೆ ಪ್ರತಿಜ್ಞಾಯಾಂ' ಯೆಂದು, 'ಬಡುವಿಸರ್ಜನೇ' ಯೆಂದು ಕೊಟ್ಟನಂಬುಗೆಯು ತಪ್ಪಿವು ॥ (ಎಮ್ಮ =) ನಮ್ಮ ಜರೆವರಿ, '[ಜರೆ] (ಜಿಂತೆ) ಧಿಃಕಾರೇ ವೃದ್ಧ್ಯಾಚ' ಯೆಂದು ನಮ್ಮ ಧಿಃಕರಿಸುವರಿಯೆಂಬುದರ್ಥ । ಇದು ಉದ್ದೇಶ । ಇನ್ನು ಲಕ್ಷ್ಯಣ—ಮೊಲೆಸ್ತನಗಳು ಪೊಂಗೊಡ, ಚಿನ್ನ ಕುಂಭಕ್ಕೆ ಸರಿಯಾಗಿರ್ಪವು. ಅರ್ಥ ವಿತ್ತವರು ಪಿಡಿದು, ಹಣವ ಕೊಟ್ಟವರು ಕೈಯಲ್ಲಿ ಹಿಡಿದು ಕೊಂಡು, ಕಸ್ತುರಿಯು ಕೆಸರಕೂಡಿ, ಕುಂಕುಮ ಕಸ್ತುರಿ ಕರ್ಪೂರಗಳ್ಗ, ಕೆದಂಬವ ಧರಿಸಿ ।

(ವಿ. ವಿ.)—

ಅಸಮಗ್ರ. ೬೧ ರಿಂದ ೬೪ ರವರೆಗಿನ ನಾಲ್ಕು ಪತ್ರಗಳಿಲ್ಲ. ಅನಂತರದ ಪತ್ರಗಳು ೬೫—೮೭, ೧೧೩—೮೮, ೧೧೪—೧೪೦ ಈ ಕ್ರಮದಲ್ಲಿ ಜೋಡಿಸಿ ಬೈಂಡಾಗಿವೆ. ತಪ್ಪುಗಳಿವೆ. ಲಿಪಿ ಸಾಮಾನ್ಯವಾಗಿದೆ. ೩ ನೆಯ ಪ್ರಕರಣದ ೨೫ ನೆಯ ಪದ್ಯ ಭಾಗದಿಂದ ೬ ನೆಯ ಪ್ರಕರಣದ ೩೦ ನೆಯ ಪದ್ಯದವರೆಗಿದೆ. ಹಿಂದೆ ೯೯೭ ನೆಯ ನಂಬರಿನಲ್ಲಿ ವರ್ಣಿತವಾದ ಗ್ರಂಥಕ್ಕೆ ಇದೂ ಸಹ ಮಾತೃಕೆಯಾಗಿದೆ.

No. 999. ಭಾವ ಚಿಂತಾರತ್ನ ಸಿದ್ಧಲಿಂಗಸ್ವಾಮಿ ಕೃತಟೀಕಾಸಹಿತ by ಮಲ್ಲಣಾರ್ಯ-

BHĀVACINTĀRATNA, WITH TĪKA OF SIDDHALIṄGASVĀMI BY MALLANĀRYA.

Substance, paper. Size, 8¼ × 6 inches. Pages, 145. Lines, 20—22 on a page. Extent, 3,000 granthas. Character, Kannada. Condition, very much injured. Appearance, old. Mode of writing, not bad.

Incomplete.

Contains from the 31st stanza of the 6th Prakaraṇa to the end.

Same work as described under No. 997 wherein see for the end.

Beginning :—

......ಂದರಿಯರಿ | ಆ ಮೇಲೆ ಪ್ರಾಯಗಳಿದು ಪಾಠಾಳಿವ ನೋಡುವಿರಿ | ಭಾಷೆಯಂ ಬಿಡೆವು = ಬಿಡ ಭಾಷೆ ಯೊಡಗೂಡಿರ್ದೆವು | ಎಂಬಂತೆ = ಎಂಬುವ ಹಾಂಗೆ | 'ಎನೆ ಶೋಭಾಯಮಾನ'ಂದು ಶೋಭಿಸುವ | ನಡುವಿನಬಲೆಯರು = ಸಣ್ಣ ನಡುವಿನ ಸುಂದರಾಂಗಿಯರು | ಕಣ್ಗೆಸೆದಿರ್ದರು = ನಯನಕ್ಕೆ ಶೋಭಿಸುವರೆಂಬುದರ್ಥ | ಸ್ತನನಡುವಿನ ವರ್ಣನೆಯಂತೆಗೆವುದೆ ಭಾವಾರ್ಥ ॥ ಅಬಲೆಯರು | ಕ | ಯೆಸದಿರ್ದರು | ಕ್ರಿ | ವಿ | ಕ | ಬಡತನ ಜಾನ್ನವಾಡುವ, ತಿರುಕರ ಕಂಡರೆ ಹಾಸ್ಯವ ಮಾಡುವರು.

The scribe adds :—

ದುರ್ಮತಿ ಸಂವತ್ಸರದ ಶ್ರಾವಣ ಶುದ್ಧ ಸೋಮವಾರೇಕಾದಶಿ ಮೂಲನಕ್ಷತ್ರ, ಧನುರಾಶಿ, ವಿಷ್ಕಂಭ ಯೋಗ ತೈತಿಲಕರಣ ಪ್ರೊಂಭತ್ತಾಸಿನಲ್ಲಿದ್ದ ಅಮೃತಗಳಿಗೆ ಬೃಹಸ್ಪತಿ ಸತ್ಪವೆಳ್ಳಿಯದ ಸವಿತ್ರಿಕ ಯೆಂಬ ಪಂಚಾಂಗ ಪೂರ್ವಕದಲ್ಲಿ ಬ್ರಹ್ಮಪುರದ ಪಟ್ಟಗಂಬಳಿ ಶಿದ್ಧಲಿಂಗ ಸ್ವಾಮಿಯವರು ಮಾಡಿದ ಟಿಪ್ಪಣಿವ ಬರೆದು ಸಮಾಪ್ತಿಯ ಮಾಡಿದೆ. ಎನ್ನಲ್ಲಿ ಹಸ್ತ ದೋಷ ವಾಚಿಕ ದೋಷ ಪ್ರಂಟಾದಡೆ ಸಮಸ್ತ ಸದ್ಭಕ್ತ ಕರಣ ಜನಂಗಳು ನಿಮ್ಮ ಪುತ್ರನ ಮೇಲೆ ದಯವಿಟ್ಟು ತಿದ್ದಿಕೊಂಡು ಪರಿಣಾಮಿಸುವುದು.

ಚಿಂತಾರತ್ನದ ಟೀಕು ಸಮಾಪ್ತ. ಮಂಗಲ ಮಹಾ ಶ್ರೀ ಶ್ರೀ. ಶ್ರೀ. ಶಿವಮಸ್ತು | ಶೋಭನಮಸ್ತು | ಭದ್ರಮಸ್ತು | ಶ್ರೀ. ಶ್ರೀಶ್ರೀ. ಶ್ರೀ.

(ವಿ.ವಿ.)—

ಅಸಮಗ್ರ. ತಪ್ಪುಗಳಿವೆ. ಲಿಪಿ ಸಾಮಾನ್ಯವಾಗಿದೆ. ೨೧೩ ಎಂಬ ಸಂಖ್ಯೆಯಿಂದ ಗುರುತಿಸಿದ ಕೊನೆಯದಾದ ೭೩ ನೆಯ ಪತ್ರದಲ್ಲಿ ಒಂದೇ ಪುಟ ಬರೆದಿದೆ. ೬ ನೆಯ ಪ್ರಕರಣದ ೩೧ ನೆಯ ಪದ್ಯದಿಂದ ಅಂತ್ಯದವರೆಗಿನ ಭಾಗವಿದೆ.

ಹಿಂದೆ ೯೯೭ ನೆಯ ನಂಬರಿನ ವರ್ಣಿತವಾದ ಹಸ್ತಕದ ಮೂರನೆಯ ಭಾಗಕ್ಕೆ ಇದು ಸಮಾನ್ಯವಾಗಿದೆ.

No. 1000. ಭಾವ ಚಿಂತಾರತ್ನ, ಸಿದ್ಧಲಿಂಗ ಸ್ವಾಮಿ ಕೃತ ಟೀಕಾಸಹಿತ by ಮಲ್ಲಣಾರ್ಯ.

BHĀVACINTĀRATNA WITH ṬĪKA OF SIDDHALIṄGASVĀMI BY MALLAṆĀRYA.

Substance, paper. Size, $8\frac{1}{16} \times 5\frac{1}{16}$ inches. Pages, 8. Lines, 20 on a page. Extent, 160 granthas. Character, Kannada. Condition, injured. Appearance, old. Mode of writing, not bad.

Begins on fol. 25*a* of the Ms. described under No. 728. Contains 3rd Prakaraṇa. Incomplete.

Same work as that described under No. 998 *ante*.

(ವಿ-ವಿ.)—

ಅಸಮಗ್ರ. ಹುರಣೆಯು ಪ್ರಕರಣದಲ್ಲಿ ೧೯ ನೆಯ ಪದ್ಯದ ವ್ಯಾಖ್ಯಾನದ ಮಧ್ಯದಲ್ಲಿ ಆರಂಭಿಸಿ ೨೫ ನೆಯ ಪದ್ಯದ ವ್ಯಾಖ್ಯಾನದ ಸ್ವಲ್ಪಭಾಗದ ವರೆಗೆ ಇದೆ. ಕಾಗದದ ಪ್ರತಿ ಶಿಥಿಲವಾಗಿದೆ. ಲಿಪಿ ಸಾಮಾನ್ಯವಾದುದು ಇದರೊಡನೆ ಕಾಲಜ್ಞಾನ ಅಥವ ಚೆನ್ನ ಬಸವದೇವರು ಉಳ್ಳವೆಗೆ ಚಿತ್ತೈಸಿದ ಪ್ರಸ್ತಾಪದ ವಚನ, ಅಥವ ಚೆನ್ನ ಬಸವಾದಿ ಪ್ರಮಥ ರೈಕ್ಯಸ್ಥಲದ ವಚನ ವಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1001. ಭಾವ ಚಿಂತಾರತ್ನ, ಸಿದ್ಧಲಿಂಗ ಸ್ವಾಮಿಕೃತ ಟೀಕಾಸಹಿತ by ಮಲ್ಲಣಾರ್ಯ.

BHĀVACINTĀRATNA WITH TĪKA OF SIDDHALIṄGASVĀMI BY MALLAṆARYA.

Substance, paper. **Size**, 10-$\frac{7}{16}$ × 9-$\frac{7}{16}$ inches. **Pages**, 11. **Lines**, 20 on a page. **Extent**, 160 granthas. Character, **Kannada**. Condition, good. Appearance, new. **Mode of writing**, good.

Restored in 1925–26 from the Ms. described above (No. 1000).

Begins on Page 51 of the Ms. described under No. 729 *ante*.

Incomplete.

(ವಿ-ವಿ.)—

ಅಸಮಗ್ರ. ಇದು ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯು ಪ್ರತಿಕೆಯಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಕಾಲಜ್ಞಾನ ಅಥವ ಚೆನ್ನ ಬಸವದೇವರು ಉಳ್ಳವೆಗೆ ಚಿತ್ತೈಸಿದ ಪ್ರಸ್ತಾಪದ ವಚನವಿದೆ. ಅದು ೭೨೯ ನೆಯ ನಂಬರಿನಲ್ಲಿ ವರ್ಣಿತವಾಗಿದೆ.

No. 1002. ಭಾವ ಚಿಂತಾರತ್ನ ; ಸಿದ್ಧಲಿಂಗ ಸ್ವಾಮಿಕೃತ ಟೀಕಾ ಸಹಿತ by ಮಲ್ಲಣಾರ್ಯ.

BHĀVACINTĀRATNA WITH TĪKA OF SIDDHALIṄGASVĀMI BY MALLAṆARYA.

Substance, paper. Size, 10$\frac{7}{16}$ × 9$\frac{7}{16}$ inches. **Pages**, 198. **Lines**, 20 on a page. **Extent**, 2,300 granthas. **Character**, Kannada. Condition, good. Appearance, new. **Mode of writing**, not bad.

Restored in 1925–26 from the Ms. described under No. 998A *ante*.

Incomplete.

Contains up to the 18th stanza of the 3rd Prakarana.

(ವಿ-ವಿ.)—

ಅಸಮಗ್ರ. ಇದು ಇದರ ಹಿಂದಣ ೯೯೮ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪುಸ್ತಕದ ಪ್ರತಿಕೆಯು. ಕಾಗದದ ಪ್ರತಿ. ಲಿಪಿ ಸಾಮಾನ್ಯವಾಗಿದೆ.

No. 1003. ಭಾವ ಚಿಂತಾರತ್ನ by ಮಲ್ಲಣಾರ್ಯ-

BHAVACINTĀRATNA BY MALLAṆĀRYA.

Substance, paper. Size, 9½ × 6$\frac{9}{16}$ inches. Pages, 34. Lines, 17—20 on a page. Extent, 400 granthas. Character, Kannada. Condition, very much injured. Appearance, old. Mode of writing, not bad.

Begins on fol. 1*a* of the Ms. described under No. 788.

Incomplete.

Contains from the 19th stanza of the 7th Prakaraṇa to the end.

Same work as that described above.

(ವಿ-ವಿ.)—

ಅಸಮಗ್ರ. ೭ ನೆಯ ಸಂಧಿಯ ೧೯ ನೆಯ ಪದ್ಯದಿಂದ ಮುಂದಕ್ಕೆ ಪೂರ್ಣವಾಗಿದೆ. ಕೊನೆಯ ಎಂದರೆ ೯ ನೆಯ ಪ್ರಕರಣದ ಪತ್ರಗಳು ಅಸ್ತವ್ಯಸ್ತವಾಗಿವೆ. ಈ ಪುಸ್ತಕದಲ್ಲಿ ಪತ್ರಗಳು ೪೫—೫೬, ೬೦—೫೭, ೧, ೬೧, ೨—೮, ೧೦, ೯, ೧೧—೧೫ ಈ ಕ್ರಮದಲ್ಲಿ ಜೋಡಿಸಿ ಬೈಂಡಾಗಿದೆ. ಭಾವ ಚಿಂತಾ ರತ್ನದ ಭಾಗವು ೪೫—೫೬, ೬೦೫೭, ೬೧ ರ ಈ ಪತ್ರಗಳಲ್ಲಿದೆ. ಇದು ಅತ್ಯಂತ ಶಿಥಿಲವಾಗಿದೆ. ಈ ಪ್ರತಿಯಲ್ಲಿ ಭಾವ ಚಿಂತಾರತ್ನದ ಮೂಲಪಾತ್ರ ಇದೆ. ಇದರೊಡನೆ ಪೆವಣಿಗುತ್ತಿ, ಮುಂತಾದುವು ಇವೆ. ಆ ಬಗೆಗೆ ೭೮೮ ನೆಯ ನಂಬರನ್ನು ನೋಡುವುದು. ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಕವಿ ಗುಬ್ಬಿಯ ಮಲ್ಲಣಾರ್ಯನೆಂಬುವನು.

No. 1004. ಭಿಕ್ಷಾಟನ ಚರಿತೆ by ಗುರುಲಿಂಗ ವಿಭು-

BHIKṢĀṬANACARITE BY GURULIṄGAVIBHU.

Substance, paper. Size, 12$\frac{15}{16}$ × 7$\frac{15}{16}$ inches. Pages, 36. Lines, 20—23 on a page. Extent, 550 granthas. Character, Kannada. Condition, slightly injured. Appearance, old. Mode of writing, good.

Begins on page 267 of the Ms. described under No. 744 *ante*.

This is a copy of the Mackenzie Ms. described under the No. 1011; transcribed in 1844-45.

Complete in 3 sandhis.

A poem, written in Vārdhaka Ṣaṭpadi metre, describes the story of God Śiva who incarnated on earth as a beggar. A summary of the work is given below.

God Śiva plucked off with his nails the middle one among the five heads of Brahma as a punishment for not bowing to him. The bleeding head began to burn the whole world. It also appealed to Śiva to appease its burning hunger. Siva broke the skull into two and threw one half of it into the sea. He then incarnated himself as a beggar and began to seek alms from door to door with the other half of the skull. At this time sage Nārada came to him and told him that he had seen Lord Kṛṣṇa with each and every one of his sixteen thousand wives at

the same time. Whereupon Śiva started to Dvāraka to see this miracle and at the same time for finding a solution to fill his begging bowl. Lord Kṛṣṇa bore a hole into his own head from which blood in thick torrents began to pour into the bowl. Though it poured for a considerable time the bowl remained unfilled. Lord Śiva then told Śri Kṛṣṇa that the bowl will be filled only if blood pours into it from the battle-field at Kurukṣetra, after the battle between Kauravās and Pāṇḍavās. This battle will also be a means of getting rid-off the world of its existing abounding evils. After the battle, the bowl was filled only half. Afterwards Lord Śiva threw it up and asked it to take water from the great clouds and be contented with drinking that water. The author *Guruliṅgavibhu* was a Vīraśaiva by religion. He lived in 1550 A.D.

Beginning :—

ರಾ|| ಪ||

ಸೂಚನೆ || ಧರೆಯೊಳಗೆ ಗೋಕುಲಂ ಕೃಷ್ಣ ಪತಿನಾಲು ಸಾ ।
ವಿರಗೋಪ ಸತ್ರಿಯರು ರೊಳಹುದ ಪೋಲ್ವೆಂದು ಕೃತ ।
ಹರನು ದ್ವಾರಾವತಿಗೆ ಬಂದ ಭಿಕ್ಷಾಟನದ ಚರಿತವುಂ ಬಣ್ಣಿಸುವೆನು ||

ಶ್ರೀಮದಚ್ಯುತ ಮಂದಾಬು ಲೇಖಾಪತಂಗಸಭ ।
ರಾಹು ಸುರಗಂಗಾತರಂಗೋತ್ತಮಾಂಗ ನಗ ।
